ಭಾನುವಾರ, ಅಕ್ಟೋಬರ್ 6, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನಾದಮಯ

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಮನು ಬಾಕರ್ ಅವರು ಕೋಲ್ಕತ್ತದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ವಯೊಲಿನ್ ನುಡಿಸಿದರು



360+ SHOWROOMS 13 COUNTRIES

ಅತ್ಯುತ್ಕೃಷ್ಟ ಆಭರಣಗಳ ಅನುಭವವನ್ನು ಈಗ ಅನುಭವಿಸಿ

ಸರ್ಜಾಪುರ ರಸ್ತೆಯಲ್ಲಿ

ಇಂದು ಅದ್ದೂರಿ ಉದ್ಘಾಟನೆ

ಮಲಬಾರ್ ಗೋಲ್ಡ್ & ಡೈಮಂಡ್ಸ್

ಉದ್ಘಾಟನೆ
ಶ್ರೀನಿಧಿ ಶೆಟ್ಟಿ ರವರಿಂದ
ಸಂಜೆ 04:30 ಗಂಟೆಗೆ.

ಪಿ. ಎಲ್. ಆರ್ ಸ್ಕ್ವೇರ್ ಕೈಕೊಂಡ್ರಹಳ್ಳಿ, ಪೈ ಇಂಟರ್ನ್ಯಾಷನಲ್ ಹತ್ತಿರ, ಸರ್ಜಾಪುರ ರಸ್ತೆ, ಬೆಂಗಳೂರು | 9900915739

ಪ್ರತಿ ಖರೀದಿಯಲ್ಲಿ ಇನ್ನಷ್ಟು ಚಿನ್ನವನ್ನು ಪಡೆಯಿರಿ ₹50,000

ಪಡೆಯಿರಿ 200 mg ಚಿನ್ನದ ನಾಣ್ಯ ಚಿನ್ನಾಭರಣಗಳ ಮೇಲೆ

ಪಡೆಯಿರಿ 300 mg ಚಿನ್ನದ ನಾಣ್ಯ ಪ್ರಿಶಿಯಸ್, ಪೋಲ್ಕಿ ಮತ್ತು ಅನ್‌ಕಟ್ ಆಭರಣಗಳ ಮೇಲೆ

ಪಡೆಯಿರಿ 400 mg ಚಿನ್ನದ ನಾಣ್ಯ ವಜ್ರಾಭರಣಗಳ ಮೇಲೆ

ಈ ಕೊಡುಗೆಗಳು 3ನೇ ನವೆಂಬರ್, 2024 ರವರೆಗೆ ಮಾನ್ಯವಾಗಿರುತ್ತದೆ.

*ಷರತ್ತುಗಳು ಅನ್ವಯ

ಈ ದಂತೆರಾಸ್‌ಗೆ, ಮುಂಗಡವಾಗಿ 10% ರಿಂದ ಪಾವತಿಸುವ ಮೂಲಕ ಆಭರಣಗಳನ್ನು ಕಾಯ್ದಿರಿಸಿ.
ಚಾಲ್ತಿಯಲ್ಲಿರುವ ಬೆಲೆ ಅಥವಾ ಕಾಯ್ದಿರಿಸಿದ ಬೆಲೆ ಇದರಲ್ಲಿ ಕಡಿಮೆ ಇರುವ ಬೆಲೆಯಲ್ಲಿ ಆಭರಣಗಳನ್ನು ಖರೀದಿಸಿ.

THE RESPONSIBLE JEWELLER™

- ಸಂಪೂರ್ಣ ಪಾರದರ್ಶಕತೆ
- ಖಚಿತ ಜೀವನಪರ್ಯಂತ ಉಚಿತ ಮೇಯಿಂಟೆನೆನ್ಸ್
- 100% ಮೌಲ್ಯ ಚಿನ್ನದ ವಿನಿಮಯದಲ್ಲಿ
- 100% ಮೌಲ್ಯ ಡೈಮಂಡ್‌ನ ವಿನಿಮಯದಲ್ಲಿ
- ಪರೀಕ್ಷಿಸಲಾಗಿರುವ ಮತ್ತು ಪ್ರಮಾಣೀಕೃತ ವಜ್ರಗಳು
- ಬೈಬ್ಯಾಕ್ ಗ್ಯಾರಂಟಿ
- ಆಭರಣವು ಪೂರಕ ವಿಮೆಗೆ ಒಳಪಡುತ್ತದೆ
- 100% HUID ಅನುಸರಣೆಯ ಚಿನ್ನ
- ಜವಾಬ್ದಾರಿಯುತ ಮೂಲದ ಉತ್ಪನ್ನಗಳು
- ಕಾರ್ಮಿಕರಿಗೆ ನ್ಯಾಯಯುತ ಅಭ್ಯಾಸಗಳು
- ನ್ಯಾಯಯುತ ಬೆಲೆಯ ನೀತಿಗಳು

BUY ONLINE AT: malabargoldanddiamonds.com | INDIA | AUSTRALIA | CANADA | UK | USA | SINGAPORE | MALAYSIA | UAE | QATAR | KSA | OMAN | KUWAIT | BAHRAIN

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

3 BHK LUXURY FLATS FOR SALE
DREAMVILLE HOME

PROJECT BY PROMAX PROPERTIES
ISO 9001:2015 CERTIFIED TRADE MARK REGISTERED

DUSSEHRA FESTIVAL OFFER
Modular Kitchen & Iphone 16 Pro Max

READY TO STAY
WISH YOU HAPPY DUSSEHRA
Few Flats are Available

BBMP APPROVED
Amenities
RERA APPROVED
PRM/KA/ RERA/1251/446/PR/220622/005013

GYM | WalKing Track | Club House
Library | Kids Play area | Party Hall

SBI | ICICI Bank | AXIS BANK | HDFC BANK

CALL:8073977742 / 63645 88805
promaxdreamvillehome.com
No. 37 1st Cross, Patelmunishamappa Layout, ward No. 26 Kothanur Hennur Main Road, Bengaluru.77

REAL ESTATE BUYING

Sites

Anjanapura

WANTED BDA & BBMP SITES. Anjanapura, JP.Nagar,Banashankari 6th Stage, Vishweshwaraiah Layout. Any Measurements Immediate Settlement Genuine Sellers Contact: 9972223222, 9606632777

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement, genuine Sellers Contact:9902038118, 9449060605

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT. CONTACT: 9845062822, 8660751654

Kanakapura Road

WANTED SITE 30x40, 40x60, Anjanapura BDA, Banashankri 6th Stage, BCCHS Layout, Investment Purpose, Agent Excuse, Call: 9663454878.

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI, 9900268073 9448068073.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

"WANTED HOUSE Site, Flat BSK-6th Stage Nagarbhavi, Mallathahallli Vishveshwaraiah Layout 20x30,30x40, 40x60. "ABHILASHA CONSULTANT"- 9480565758"

"WANTED COMMERCIAL Vishveshwaraiah any Block, Nagarbhavi, MPM, ITI 50x80, 40x60 Genuine seller/ shortly Contact: 7259675150"

General

General

WANTED 5000 to 20000sft and above any extent Private Industries or Vacant Land and Bangalore Urban and Rural KIADB,KSSIDC Industry or Vacant Land out ratepurchase. Verna Developers,Barton Centre, MG Road, Bangalore. 9620253180/ 9353128035

Joint Development

East

WANTED JOINT Venture Lands 2-10 Acres. Any where in East or North Bengaluru. Owners/ Brokers. Contact: 9845046038

PRM/KA/RERA/1251/310/PR/150223/005721
DS-MAX SAMYAK
LUXURIOUS 2 & 3-BHK APARTMENTS

DS MAX ISO 9001:2015 COMPANY
DR. K V SATISH, CHAIRMAN

OFF MYSORE ROAD
Just 7 min. from Challaghatta Metro Station

2-BHK HOMES STARTS @ JUST
₹ 49.63 L*
BDA APPROVED | G + 14 FLOORS

*T & C Apply

8880 003 003
www.dsmaxproperties.com

MALLESWARAM
Greenleaf Bougainvillea
1500/1665 Sqft
3 BHK Apartment
For Sale
Contact: Greenleaf Realty
+91 8951 260026/080 23449427/28
website : www.greenleaf.in
RERA NO:PRM/KA/RERA/1251/309/PR/150922/005245

ನಾಡಿನ ಸಮಸ್ತ ಜನತೆಗೆ ನವರಾತ್ರಿಯ ಶುಭಾಶಯಗಳು
DC CONVERSION E KHATA
SITES FOR SALE
ಯಲಹಂಕ
ಬಾಗಲೂರು Circle to Budigere Road
• REVA University
• Delhi Public School
• Country Club
• Attached SEZ
~~3,800~~ 3,600 per sqft
ನವರಾತ್ರಿಯ ವಿಶೇಷ ಕೊಡುಗೆ
ಯಲಹಂಕ ಬಾಗಲೂರು
SEZ Road, Vidya Nagar Cross, Venkateswara Engg. College
UPCOMING BBMP LIMITS
~~4,200~~ 4,000 per sqft
ನಿರ್ಮಾಣಕ್ಕೆ ಸಿದ್ಧವಾಗಿದೆ ಬ್ಯಾಂಕ್ ಸಾಲ @ LIC HFL ICICI Bank
9880 149 159 | 9900 698 748

REQUIRED

Required Land 8000 to 15000 sqft anywhere in Bangalore City having minimum road width of 60 feet for PETROL BUNK - Rent / Company Lease for 20 years with rent between Rs.20/50. Building Tax will be paid by us.
Contact: 9845032519 / 99451 55688

RENTAL PROPERTIES

Accommodation Wanted

Commercial

ADELIE INTERNATIONAL SCHOOL: Looking forBuilt to Suit, Long-lease (Preferably North Bangalore) and also other regions of both Bangalore & Karnataka. Contact: Sumanth Narayan, Eduweft Services Pvt Ltd, Mobile: 9606353036 Email: info@Eduweft.com

Accommodation Available

Commercial

COMMERCIAL BUILDING available-BPO Office and any others for Rent, 1600 sqft 1st Floor and 1600sqft, 2nd Floor all amenities including at Goraguntepalya, Tumkur Road, Bengaluru. Mob-9448274566 / 8310105291

2,00,000 + Sqft Commercial Land Suitable For Warehouse, Office/ Entertainment Center Available Rent Bidadi Located Bangalore Mysore Road. Interested: 9972181837

BENKI NAWAB STREET, S P ROAD 250SQ FT 2nd FLOOR , 3rd FLOOR COMMERCIAL SPACE AVAILABLE ON RENT CONTACT 9900503980 WHATS APP 9885532271

EJIPURA ASHWINI Layout near Sony World, 1200sqft East Facing Open Plot for Rent, Rs. 60 per sqft. Contact : 9884491696

Flats

2 APARTMENTS for Rent at 'RJ BROOKE SQUARE" at Whitefield (near Ryan International School) Semi Furnished. 3 BHK on 2nd & 3rd Floor in C Block, 3182 sq. feet with two car parking space in the Basement and 4 BHK on 3rd Floor in 'B' Block, 3658 Sq. ft. with three car parking spaces in the Basement. Contact: 9448770410/ 9481840204.

2/3 BHK Evergreen Layout Kothanur Main Road Security Car Parking. Close To Hospitals, Market: 9845824977

BUILDERS ESSENTIAL

Roofing Materials

WE-FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology and Painting work. Call-9880916988

REAL ESTATE SELLING

Commercial Land

Kanakapura Road

"KANAKAPURA EXACT opp.Bus stand 3500 Sq.ft total area Commercial Site sale, Genuine Buyers Contact: 9902973903"

Commercial Building

Out-Station

COMMERCIAL BUILDINGS SALE on 3.5`Acres,on National Highway No.4 16KM`From Chittoor, Housing Restaurants of APSRTC Busses Moving towards Bangalore from`Tirupathi Brokers`Excuse Contact: Owner 9441303714.

Farm House/ Land/ Resorts

Out-Station

SALE 12ACRE'S Farm House Land With Good Returns Chamarajanagara Road Reasonable Price Contact: 8105565183

DH DECCAN HERALD Classifieds More value, more impact
ಪ್ರಜಾವಾಣಿ

REAL ESTATE

BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY

@ 2481/-*
FOR 15 WORDS

www.dhclassifieds.com
BOOK NOW
*Conditions apply
Book your ad with us now! For more details contact:
+91 9845114560 | +91 9901641752 | +91 9886213331
+91 9731810277 | +91 9900428036 | 080-45557163/164

DH DECCAN HERALD The Power of Good
Classifieds More value, more impact
ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
+91 9731810277 | +91 9886213331
+91 9845114560 | +91 9900428036
+91 9901641752 | 080- 45557163/164

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080-45557160/ 162/ 163/ 164/ 9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

REAL ESTATE SELLING

Sites

Anjanapura

BDA E-AUCTION East-South Corner Site No 902 for Sale at Further Extension of Anjanapura 11th Block Bannerghatta Rd 2645sqft Rs.14500/- Call:9448138640 9731125533

ANJANAPURA 10TH Block BDA 20x60 East facing site No.1045/A, 8,500/- Owner meeting (Agents Excuse) -9845059328

Bannerghatta Road

SALE 20000SFT East Facing Plot, A-Khatha, Clear titles suitable for Apartment, 43Feet Wide Road, 500Mtrs from Hulimavu Metro Station Bannerghatta Main Road @ Rs.5500/-Sft (Negotiable). Call Verna Developers,MG Road, BLR. 9916310226/ 9620253180.

Gnanabharathi

"AVAILABLE 30X50 West facing Site Shanthi Vidhya Layout Attached Bangalore University, Good location. 9845500019/ 7019314962"

J P Nagar

BDA SITE SALE Prime Property JP.Nagar 8th Phase 2nd Block 40x60, North Face, 60 Feet Road,Genuine Buyers only,Strictly Brokers Excuse. 9880605195.

Koramangala

"COMMERCIAL SITE Corner BDA Koramangala 4th Block ST Bed 900 Sqft 60'feet Road "Sri.Ganesh Estate"- 9845286505"

Kanakapura Road

"SALE SITES 30x40 East Rs.1.15 Crore, 30x40 West Rs.1.56 Crore, 40x60 Rs.2.40 Crore close to Doddakallasandra Metro Station. 9845286505"

SALE- GUBBALALA main road Jayanagar Co-operative Society 2nd Stage 30x40sft South facing Rs.9250/- nego. Near Kanakapura Road. Contact: 8197276607/ 9980034524

Kempegowda Layout

***NADAPRABHU* KEMPEGOWDA** LAYOUT 7th-Block F sector 50x80 W/F near,Nayara Petrol bunk.And VISHVESHWARAIH LAYOUT 2nd-Block 40x60 W/F ₹11,500/- sqft. Contact:9686469799

KEMPEGOWDA LAYOUT, COMMERCIAL BDA SITE FOR SALE 20x30, 30x40, 40x60, 50x80, Contact Kumar: 9945119449

Mysore

1.37 ACRE suitable for Public Utility construction SP Nagar Mysore Outright Sale. Brokers Excuse. 7483125243

Nagarabhavi

NAGARABAVI, MALLATHAHALLI village, ITI employees Co-operative Society 2 Nos.30x40 sites- 16,000/- Final, both South facing for Sale, Krishna- 9845059328

"NAGARABHAVI NEAR BDA Complex Opp. Annapoorneshwarinagar 30x45 North-facing BDA Site Sale, Immediate Registration. 9448432633"

Rajajinagar

SALE 30X40,SOUTH With Old House Rajajinagar 5th Block,Full Cheque Payment,9448508410 "Brokers Excuse"

R T Nagar

WANTED SITES -Rtnagar, Anandnagar, Sultanpalya, Kanakanagar .Ph. 9845575731

Sadashiva Nagar

40X60/50X80 SITES in Sadashivanagar Dollars Colony Kumarapark Cunnigham Road Jayamahal/ R.T.Nagar Sanjaynagar, For Buying and Selling Properties Call:Niti Estates The Real Estate Professionals 9900001973

Vishweshwariah Layout

SITE FOR sale 40*60 West facing BDA with 40feet road very good location Rs.10500 negotiable Vishweshwaraiah Layout 3rd Block full white money Contact: 7892059756

BDA SITE, No 2234, 40X60 WEST FACING, VISHVESHWARAIAH LAYOUT, 1ST BLOCK, Rs 12500/ SFT, Hemanth 9341226446 Shivakumar 9845875555

AVAILABLE 30X40 BDA Site 1st-Block Vishweshwaraiah Layout East Face Good Investment Only Genuine Buyers: 9844603127

"VISHVESWARAIAH LAYOUT 2nd Block 30x40 West facing Allottee Site 40 feet Road,next to corner for sale. Owner- 9731339599"

VISHWESHWARAIAH Lyt 7th Block 30x40 6th Block 40x60 Site Sale from owner, Genuine Buyer only Call:8105565183

"VISHVESHWARAIAH LAYOUT Wanted 20x30, 30x40,40x60, 50x80 for Immediate settlement genuine transaction "Anugraha Construction"- 9886294610"

"VISHVESHWARAIAH 1ST-BLOCK 50x80 North 40ft Road, parallel to 80ft Road near Shirckey circle. 9886908408"

"VISHVESHWARAIAH LAYOUT 6th Block near KLE Law College 50x80 North facing Site 80ft Road. 9448432633"

SMV 4BL 1244 West Near 100ft Road. SMV 6BL. North Near Main Road Owner: 9900224071

30X40 EAST FACE 40ft Road, 6th Block Axfard Opp & 20X30 Site Sale 60 Lack: 8310003509

Yeshwanthpur

SALE COMMERCIAL Site Tumkur Road, West facing, BDA 75x125, Near Orion Mall, Metro cash and carry. Facing 200 feet Road. 9448151537

Mysore

SITE FOR Sale, 100X80, North Facing, Adipampa Road, Mysore. Suitable for Complex, Hospital, Flats. 7829215486

Kodigehalli

BDA 60X40 Site 511 East Face NTI Ph2 Rajiv Gandhi Nagar Kodigehalli 6364712736

Banashankari

"BANASHANKARI 6TH-STAGE 1st Block BDA Site sale 40x60 North facing 30x40 East facing Contact: 9845146725/ 9741466369"

KANAKAPURA ROAD, Banashankari 6th Stage, 50x80 Site, And Concorde Napa Vally Villa For Sale: 9916817739

Magadi Road

SITE SALE 30x50 BEL Layout 2nd Stage, Baharat Nagar W/F. NPKL Layout 2nd Stage, 2nd Phase, I-Sector 40x44 N/W Corner BDA Complex Back Side: 9845366929

House

Frazer Town

NEW HOUSE for Sale. 2 BHK 950 sqft, #19, Bourdillon Road, Frazer Town near Hajee Ismail Sait Masjid. 9845797687, 6362064085.

Jayanagar

JAYNAGAR 4TH T block 40' Road suitable Apartment 44x130 14,87,00,000/-. 30x52, old house 4,38,00000/- 5th Block 40x60 8,88,00000/- 9731775536.

J P Nagar

J.P.NAGAR 5TH Phase BDA 30x40 South facing old house 3,00,00000/- & 6th Phase 20x43 West facing Ground & First floor house 1,60,00000/- negotiable: 9845059328

J.P.NAGAR 2ND phase 30x50 North, 3 unit House 4,50,00,000/-40x60 Two unit House 6,00,00,000/- 9731775536.

J.P.NAGAR EXCELLENT location Second Phase South 45x60, Third Phase West 40x60 Old House sale Murali -9845232711

SALE 30X40 J.P.Nagar 1st Phase East Facing on 40feet Road Contact: 9844134068 9066399102

Padmanabha Nagar

HOUSE AT Semi commercial Road, Opp Saint Anne's School, Padmanabhanagar, Blore, 3 Crores, 9844074721 9108928988

Wilson Garden

WILSON GARDEN BDA, 40' Road Residential 50x80 East facing Old house, Sale 25,000/- sft. 9731775536

Jakkur

MCECHS LAYOUT beautiful new luxurious house on 30x40, east facing G+3 4BHK with lift, semi-furnished, Ready to move for sale 3.35cr. Call 9535479091

Commerical

Basaveshwaranagar

COMMERCIAL SITE sale 40x60 south facing Basaveshwaranagar, Pavithra Paradise Circle. Immediate registration contact: 8310719986/ 9448061555.

Basavanagudi

COMMERCIAL LEASE (65 years). Corner 8000 sft. Builtup 18000 sft. Rental potential Rs 3 cr annually. Builders only whatsapp (message only) 99029-15651. Price Rs 15 cr.

Jayanagar

SALE COMMERCIAL 40x65 at Jayanagar 5th Block Corner on 80feet Road with old House Call:9844134068 9066399102

JAYANAGAR IV T block 40x60, 80' Road, near Central mall 40x60 East both Commercial old house Suraj Realtors -9845232711

J P Nagar

J.P.NAGAR 3RD Phase, Commercial near Mini Forest 60' Road, 42x75 Corner 5 floors Building, 12,00,00,000/- 9731775536.

Flat

Airport Road

SALE SENIOR Living 2 BHK New fully furnished New Airport Road Contact: 9845926300

Rajajinagar

PURVA BLUBELLE Adjacent to Magadi road Metro station Rajajinagar Centre of the City 3 Bedroom & Exclusive 5Bedroom Flats +servant room with all luxurious Amenities, Only few units for Sale. Contact: 9844027560

Uttarahalli

3/4 BHK New Luxurious Flat Sale, A khatha, Ready-move. 75L/ 1cr. Carparking, Cauvery. Vaasthu. 9844394444, 9019110623.

Indiranagar

3BHK FLAT 1st Floor 1625Sft South Facing 1Carpark Lift, Power Backup 24/7 Water Price 1.55Cr Only Brokers Excuse: 9945195134

General

South

RENTAL INCOME Investment Properties For Sale. Whatsapp Budget. Sarakki Homes, 9663676464

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

JOB OPPORTUNITIES

General

EARN MORE than Rs:50,000/- per month, Part/ Full time, Age above 30 Years, Call: 9343616020

Hotel

WELL KNOWN Business Hotel in Bengaluru WANTED Male Receptionist, House Men, Supervisor, Room Service Waiters. Contact: 9036228003

WANTED IMMEDIATELY ADMIN MANAGER, RESTAURANT MANAGER, WAITERS, COOKS, COOLJOINT INCHARGE. Good Salary. UNCLE's KITCHEN: 99000-54468

Marketing & Sales

WANTED: MALE Kannada English Hindi speaking 10/12th passed sales and marketing executives. Sheevoot International Pvt Ltd #8073107004

Teachers/ Professors

Dr. Sri. Sri. Sri. Shivakumara Mahaswamy College of Engineering & Polytechnic
(Affiliated to VTU, Belgaum & Approved by AICTE, New Delhi)

Byranayakanahalli, Nelamangala Taluk, Bangalore Rural District - 562 132
Email: recruitdrsmce2211@gmail.com Website: www.drsmce.org

WALK-IN INTERVIEW

Applications are invited for the post of Professors, Associate Professors and Asst. Professors in the following Disciplines...

- Computer Science & Engineering
- Information Science & Engineering
- Electronics & Communication Engineering
- Basic Science Department : Physics, Chemistry
- MBA (Marketing, Finance, HR)
- Physical Education Director
- Librarian and Asst. Librarian

Non Teaching Posts

- Accountants,
- FDA, SDA, Typists (Kannada & English)
- Wardens : Boys Hostel & Girls Hostel
- Drivers
- Foremen, Instructors and Attenders in the above departments

Qualification and Pay Scale: As per AICTE norms

Applicants are informed to bring the detailed CV & Original documents along with 2 set photocopy of the documents & 3 passport size photos. **Walk in Interview will be held on THURSDAY 10.10.2024 at 10am onwards.**

Note : For the post of Professor & Associate Professor, Only candidate having Ph.D are considered

Dr. H.D. Ramesh, Principal
98806 58861 / 77602 68213

Sri D.C. Venugopal
Chairman

515 ABW HIGH SCHOOL
Halasuru, Bangalore-08
REQUIRES
TEACHING / NON TEACHING STAFF ON CONTRACT BASIS
Kindly visit: http://515armyschool.co.in/ recruitment
For detailed advertisement or
Contact : 080-25307559

WANTED COMPUTER Science faculty for United PU College, Nagawara Main Road, Bengaluru-45. 7483254480, 9986017219, www.united college.edu.in

Wanted

WANTED MALE OFFICE ASSISTANT AND SECURITY GUARD for AVID NUTRITION OFFICE. Send your resume to: The Director, with Small Size Photo: No.25, Aradhya Complex, 100 feet Ring Road, BTM 2nd Stage, 1st phase, Bangalore-560076.

EDUCATIONAL

General

LEARN HOW to Make Money Online. 1-Month Live Online Course. Morning & Evening Batches Available. WhatsApp 9035518621 for more details.

OTHERS

For Sale

FOR SALE: Nursery Schoolitems, Benches, Joola, SlidesParallel Bar, Seesaw etc.Contact:- 8431782771,8660478045.

BUSINESS

Business Offers

Finance

WE ARE doing Unsecured Business loan from 1Crore and above. Home Loan, Mortgage Loan, commercial buildings purchase loan for Contractors-Schools & Colleges, Hospitals, Medical shops . OD - Term Loans for industries etc., from financial Institutions, Contact Mrs. Jyothi, 8971132289.

MATRIMONIAL

Brides Wanted

Muslim

UNORTHODOX MALAYALI Muslim Boy 29 Well Placed IIM graduate 5'10' Suitable Girls WhatsApp 9741450799

MUSLIM BOY 1990 /5'10' Doctor / UAE / cultured and Decent family is looking for a Match (080-69103114)

Telugu

TELEGU BOY 1993 Born 5'11' MBBS / MD is looking for a Suitable match (Contact) (080-69070619)

Grooms Wanted

Christian

GROOM WANTED
Parents looking for a suitable Groom, for a girl, born in March 1988, and 5' 2" in height, has completed her B.E. in Computer Science & M.S.
Contact:
8095339555
jcjohnch@gmail.com

PERSONAL

Change of Name

I, ADITYA M Benegal, S/o (Late) Shri Mohan Raghavrao Benegal R/o 304, Chitrapur Co-operative Housing Society, 15th Cross, Malleswaram, Bangalore-560055, shall henceforth be known as Aditya Mohan Benegal, affidavit no IN-KA18120590310785W dated 31-May-2024 sworn before notary Kundan Babu M.

I, PRAKASH P. S/o.Muthu R/a#678 23rd Cross Kumarswamy Layout 1st Stage, Bangalore 560078 declared that PRAKASH P and PRAKASH P.C both Name refer to one and the same person, i.e. myself only.And Now I have changed my Name to PRAKASH ACHAARY for all purposes. vide affidavit dated:3.10.2024 before Notary Hegde Ganapati Venkatraman Bangalore

I, MAMTA YADAV wholly renounce/ relinquish and abandon the use of my husband former name DEVENDRA SINGH, hereby assume from this date the name as DEVENDRA YADAV, Vide affidavit dated 05-10-2024 in front of notary K.V. Jagannath Reddy

I, B.M. GEETHA (BANGLE MADHUSUDAN GEETHA) W/o.K.P. Ramachandran R/a#258/32, 10th Cross, Wilson Garden Bangalore 560027 Have Changed My Name to GEETHA RAMACHANDRAN for all my future purpose. Vide affidavit dated:5.10.2024 sworn before Notary S.Jayanth, Bangalore.

I, SUMANGALA M G, W/o (Late) Shri Mohan Raghavrao Benegal R/o 304, Chitrapur Co-operative Housing Society, 15th Cross, Malleswaram, Bangalore-560055, shall henceforth be known as Sumangala Mangesh Golikeri, affidavit no IN-KA18121160597729W dated 31-May-2024 sworn before notary Kundan Babu M.

WEEKEND CORNER

ಕ್ಲಾಸಿಫೈಡ್ಸ್

Don't miss to explore one of the LARGEST & Most Stunning AQUARIUMS in BENGALURU

Daily: 4pm - 9pm | October & November 2024 | Call: 8904727123

ITI Ground, Next to Hanging Bridge, KR Puram, Bengaluru

DH Classifieds
DECCAN HERALD
More value, more impact

ಪ್ರಜಾವಾಣಿ

RECRUITMENT

BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY

@ 550/-*

PER SQCM

SINGLE / DOUBLE / MULTIPLE COLUMN

* Conditions apply

www.dhclassifieds.com

BOOK NOW

For more details contact:

+91 9901641752 | +91 9845114560
+91 9900428036 | +91 9731810277
+91 9886213331 | 080- 45557163/164

‘48 ಗಂಟೆಗಳಲ್ಲಿ ಕಿರುಚಿತ್ರ; ವಿನೂತನ ಪರಿಕಲ್ಪನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೈನ್ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಆಯೋಜಿಸಿದ್ದ ‘ಜೆಯು ಸಿನಿಮೇಟ್ಸ್ 2.0’ ಡಿಕೋಡಿಂಗ್ ಕಾರ್ಯಕ್ರಮಕ್ಕೆ ಚಲನಚಿತ್ರ ನಟಿ ಪ್ರಿಯಾಂಕಾ ಉಪೇಂದ್ರ ಅವರು ಶನಿವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ‘48 ಗಂಟೆಯೊಳಗೆ ಕಿರುಚಿತ್ರ ನಿರ್ಮಿಸುವುದು ವಿನೂತನ ಪರಿಕಲ್ಪನೆ. ಇದರಲ್ಲಿ ಸಾಕಷ್ಟು ಯೋಜನೆ, ಸೃಜನಶೀಲತೆ ಮತ್ತು ತಾಂತ್ರಿಕ ಅಂಶಗಳು ಪ್ರಮುಖ ಪಾತ್ರ ವಹಿಸುತ್ತವೆ’ ಎಂದರು.

ಜೈನ್ ವಿಶ್ವವಿದ್ಯಾಲಯದ ಸಹಕುಲಪತಿ ದಿನೇಶ್ ನೀಲಕಂಠ್ ಮಾತನಾಡಿ, ‘ನವರಸ ಪರಿಕಲ್ಪನೆ ಅಡಿಯಲ್ಲಿ ಕಿರುಚಿತ್ರ ಸ್ಪರ್ಧೆ ಆಯೋಜಿಸಲಾಗಿತ್ತು. ಒಂದು ಕಥೆ ಪ್ರೇಕ್ಷಕರ ಭಾವನೆಗಳನ್ನು ಜಾಗೃತಗೊಳಿಸುವುದರ ಜೊತೆಗೆ ಕಲ್ಪನಾಶಕ್ತಿಗೆ ಜೀವ ನೀಡಲಿದೆ. ಇದರಿಂದ, ಕಲಾವಿದರು ತಮ್ಮ ಪ್ರೇಕ್ಷಕರೊಂದಿಗೆ ಆಳವಾದ ಸಂಬಂಧ ಹೊಂದಬಹುದು. ವಿದ್ಯಾರ್ಥಿಗಳು ಚಲನಚಿತ್ರ ನಿರ್ಮಾಪಕರು, ಕಥೆಗಾರರು ಮತ್ತು ಚಲನಚಿತ್ರಕಾರರಾಗಲು ಸಿನಿಮೇಟ್ಸ್ ಒಂದು ಉತ್ತಮ ವೇದಿಕೆಯಾಗಿದೆ’ ಎಂದರು.

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾದ ಮುಖ್ಯಸ್ಥೆ ಭಾರ್ಗವಿ ಡಿ. ಹೆಮ್ಮಿಗೆ ಮಾತನಾಡಿ, ‘ಈ ಸ್ಪರ್ಧೆಯಲ್ಲಿ 40ಕ್ಕೂ ಹೆಚ್ಚು ಕಿರುಚಿತ್ರಗಳು ಪಾಲ್ಗೊಂಡಿದ್ದವು. ಅದರಲ್ಲಿ ವಿಐಟಿ ಚೆನ್ನೈನ ‘ಜೀವಂ’ ಕಿರುಚಿತ್ರ ಮೊದಲ ಸ್ಥಾನ ಪಡೆದರೆ, ಅಮೃತ ವಿಶ್ವವಿದ್ಯಾಪೀಠಂನ ‘ದಿ ಮರ್ಮುರರ್ಸ್ ಮಾಸ್ಕ್’ ಕಿರುಚಿತ್ರವು ದ್ವಿತೀಯ ಸ್ಥಾನ ಪಡೆಯಿತು’ ಎಂದು ಹೇಳಿದರು.

ನಗರದಲ್ಲಿ ಶನಿವಾರ ನಡೆದ ಸಿನಿಮೇಟ್ಸ್ ಕಾರ್ಯಕ್ರಮದಲ್ಲಿ ನಟಿ ಪ್ರಿಯಾಂಕಾ ಉಪೇಂದ್ರ ಅವರನ್ನು ಸನ್ಮಾನಿಸಲಾಯಿತು

ನಗರದ ವಿವಿಧೆಡೆ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧ ಪ್ರದೇಶಗಳಲ್ಲಿ ಶನಿವಾರ ರಾತ್ರಿ ಮಳೆ ಸುರಿದು, ಕೆಲವೆಡೆ ರಸ್ತೆಗಳು, ಅಂಡರ್‌ಪಾಸ್‌ಗಳು ಜಲಾವೃತಗೊಂಡಿದ್ದು ವಾಹನ ಸವಾರರು ಪರದಾಡುವಂತಾಯಿತು. ಹಲವು ಕಡೆಗಳಲ್ಲಿ ಮರಗಳು ಮುರಿದು ಬಿದ್ದಿದ್ದರಿಂದ ಸಂಚಾರಕ್ಕೆ ತೊಡಕುಂಟಾಯಿತು.

ತುಂತುರು ಮಳೆಯಿಂದ ಆರಂಭವಾಗಿ, ರಾತ್ರಿ 8ರ ಸುಮಾರಿಗೆ ಬಿರುಸಾಗಿ ಮಳೆ ಸುರಿಯಿತು. ವಿಜಯನಗರ, ರಾಜಾಜಿನಗರ, ಯಶವಂತಪುರ, ಮಲ್ಲೇಶ್ವರ, ಮೆಜೆಸ್ಟಿಕ್, ಹೆಬ್ಬಾಳ ಸುತ್ತಮುತ್ತ ಬಿರುಸಿನ ಮಳೆಯಾಯಿತು. ಹಳೇ ಮದ್ರಾಸ್ ರಸ್ತೆ, ವೀರಸಂದ್ರ ಜಂಕ್ಷನ್‌ನಲ್ಲಿ ರಸ್ತೆಯಲ್ಲಿ ಮಳೆ ನೀರು ನಿಂತು ಸಂಚಾರ ದಟ್ಟಣೆ ಉಂಟಾಯಿತು. ನೀರಿನಲ್ಲೇ ಹೆಬ್ಬಗೋಡಿ ಕಡೆಗೆ ವಾಹನ ಗಳು ನಿಧಾನಗತಿಯಲ್ಲಿ ಚಲಿಸುತ್ತಿದ್ದವು.

ಎಚ್.ಎಸ್.ಆರ್. ಲೇಔಟ್, ಚೋಳೂರು ಪಾಳ್ಯ, ಮಲ್ಲೇಶ್ವರ 8ನೇ ಮುಖ್ಯರಸ್ತೆ, ಜಯನಗರ, ಜೀವನ್‌ಬಿಮಾ ನಗರಗಳಲ್ಲಿ ಮರಗಳು ಮುರಿದು ಬಿದ್ದಿವೆ.

ಹಂಪಿನಗರ ವ್ಯಾಪ್ತಿಯಲ್ಲಿ 9 ಸೆಂ.ಮೀ, ಬಸವೇಶ್ವರನಗರ, ನಾಗಪುರ ವ್ಯಾಪ್ತಿಯಲ್ಲಿ 8 ಸೆಂ.ಮೀಗೂ ಅಧಿಕ ಮಳೆಯಾಯಿತು. ಮಾರುತಿನಗರ, ರಾಜಾಜಿನಗರ, ನಂದಿನಿಲೇಔಟ್ ಸುತ್ತಮುತ್ತ ಸುಮಾರು 5.50 ಸೆಂ.ಮೀ, ಎಚ್.ಎ.ಎಲ್ ವಿಮಾನ ನಿಲ್ದಾಣ ಮತ್ತು ನಾಯಂಡಹಳ್ಳಿ ವ್ಯಾಪ್ತಿಯಲ್ಲಿ 4 ಸೆಂ.ಮೀ, ದೊರೆಸಾನಿಪಾಳ್ಯ, ಮಾರತ್ತಹಳ್ಳಿ, ಕಾಟನ್‌ಪೇಟೆ, ಆರ್‌ಆರ್.ನಗರ ವಿ.ನಾಗೇನಹಳ್ಳಿ, ಚಾಮರಾಜಪೇಟೆಯಲ್ಲಿ 2 ರಿಂದ 3 ಸೆಂ.ಮೀ.ನಷ್ಟು ಮಳೆಯಾದ ವರದಿಯಾಗಿದೆ.

ನೀರು ತುಂಬಿದ್ದ ಮಡಿವಾಳ ಅಂಡರ್‌ಪಾಸ್‌ನಲ್ಲಿ ಸಂಚರಿಸಲು ವಾಹನ ಸವಾರರು ಹರಸಾಹಸಪಟ್ಟರು ಪ್ರಜಾವಾಣಿ ಚಿತ್ರ: ಎಸ್‌.ಕೆ. ದಿನೇಶ್

ಆನೇಕಲ್‌ನಲ್ಲಿ ಮಳೆ

ಆನೇಕಲ್: ತಾಲ್ಲೂಕಿನಾದ್ಯಂತ ಕಳೆದ ಎರಡು ದಿನಗಳಿಂದ ಸುರಿಯುತ್ತಿರುವ ಭಾರಿ ಮಳೆ ಶನಿವಾರವು ಮುಂದುವರೆದು, ರಸ್ತೆಗಳಲ್ಲಿ ನೀರು ತುಂಬಿಕೊಂಡು ಸಂಚರಿಸಲು ವಾಹನ ಸವಾರರು ಪರದಾಡಿದರು.

ರಾಷ್ಟ್ರೀಯ ಹೆದ್ದಾರಿಯಲ್ಲಿ ನೀರು ಹರಿದಿದ್ದರಿಂದ ರಸ್ತೆಯಲ್ಲಿ ದ್ವಿಚಕ್ರ ವಾಹನ ಸಂಚಾರ ಅಸ್ತವ್ಯಸ್ಥವಾಗಿದ್ದು, ಎರಡು ತಾಸಿಗೂ ಹೆಚ್ಚು ಕಾಲ ಸಾರ್ವಜನಿಕರು ಪರದಾಡುವಂತಾಯಿತು.

ಜೆಡಿಎಸ್: ಪ್ರಕಾಶ್ ಬೀರಪ್ಪ ಉಚ್ಚಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ಬೆಳಗಾವಿಯ ರಾಮದುರ್ಗ ವಿಧಾನಸಭಾ ಕ್ಷೇತ್ರ ದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಪ್ರಕಾಶ್ ಬೀರಪ್ಪ ಮುಧೋಳ್ ಅವರನ್ನು ಪಕ್ಷವು ಉಚ್ಚಾಟಿಸಿದೆ.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರು, ‘ಪ್ರಕಾಶ್ ವಿರುದ್ಧ ಪಕ್ಷ ವಿರೋಧಿ ಚಟುವಟಿಕೆ ಮತ್ತು ಪೊಲೀಸರ ಹೆಸರಿನಲ್ಲಿ ಜನರನ್ನು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ ಎಂಬ ದೂರುಗಳು ಬಂದಿದ್ದವು. ಅವನ್ನು ಪರಿಶೀಲಿಸಿ ಪಕ್ಷದಿಂದ ಉಚ್ಚಾಟಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ’ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. ಬಿ/ಟಿಆರ್‌ಡಿ/29/2024-25/ಓಟಿ/18
ದಿನಾಂಕ : 30-09-2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಚಿಕ್ಕಬಾಣಾವರ - ಹಾಸನ, ಬೆಂಗಳೂರು - ಎಲಿಯೂರು ಮತ್ತು ಯಲಹಂಕ - ಧರ್ಮವರಂ ಸೆಕ್ಷನ್‌ಗಳಲ್ಲಿ ಎರಡು ವರ್ಷಗಳ ಅವಧಿಗೆ ಟ್ರ್ಯಾಕ್ಷನ್ ಸಬ್‌ಸ್ಟೇಷನ್‌ಗಳ ಮ್ಯಾನಿಂಗ್, ಡಾಟಾ ಎಂಟ್ರಿ ಆಪರೇಷನ್, ಆಫೀಸ್ ಅಸಿಸ್ಟೆನ್ಸ್, ತರಬೇತಿ ಶಾಲೆಯ ಹೌಸ್‌ಕೀಪಿಂಗ್, ಸೆಕ್ಟರ್ ಸ್ಪೆಷಲಿಸ್ಟ್ ಮತ್ತು ಟ್ರ್ಯಾಕ್ಷನ್ ವಿದ್ಯುತ್ ನಿಯಂತ್ರಕರಿಗೆ ಸಹಾಯ ನೀಡುವುದಕ್ಕಾಗಿ ಸಿಬ್ಬಂದಿಗಳ ನೇಮಕಾತಿಯ ಹೊರಗುತ್ತಿಗೆ.	ರೂ. 4,99,55,950.41

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 24-10-2024 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ / ಟ್ರ್ಯಾಕ್ಷನ್ ಡಿಸ್ಟ್ರಿಬ್ಯೂಷನ್ / ಬೆಂಗಳೂರು

ಪಿಯುಬಿ/478/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25

South Western Railway - SWR SWRRLY SWRRLY

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. 45/2024 ದಿನಾಂಕ : 12-09-2024 ಗೆ ತಿದ್ದುಪಡಿ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಐಟಂನ ಸರಬರಾಜಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಟೆಂಡರ್ ಸಂ.	ಸಂಕ್ಷಿಪ್ತ ವಿವರಣೆ	ಪ್ರಮಾಣ
1	ಎಲ್8236671ಬಿ	ಆರ್‌ಡಿಎಸ್‌ಓ ನಿರ್ದಿಷ್ಟತೆ ಸಂ. ಆರ್‌ಡಿಎಸ್‌ಓ/ಪಿಇ/ಎಸ್‌ಪಿಇಸಿ/ಟಿಎಲ್/0095 (ಪರಿಷ್ಕೃತ3) - 2019 ಗೆ ಅನುಸಾರವಾಗಿ ರೈಲ್ವೆ ಪ್ರಯಾಣಿಕರ ಬಳಕೆಗಾಗಿ 2 ವರ್ಷಗಳ ವಾರಂಟಿಯೊಂದಿಗೆ ಸೆಮಿ ಔಟ್‌ಡೋರ್ ಅಪ್ಲಿಕೇಶನ್‌ಗಾಗಿ ಹೆವಿ ಡ್ಯೂಟಿ ರಿವರ್ಸಿಬಲ್ ಟೈಪ್ ಎಸ್ಕಲೇಟರ್‌ನ ಸರಬರಾಜು - ವಿನ್ಯಾಸ, ತಯಾರಿಕೆ, ಸರಬರಾಜು, ಸ್ಥಾಪನೆ, ಪರೀಕ್ಷಿಸುವುದು, ಕಾರ್ಯಾರಂಭಗೊಳಿಸುವುದು ಮತ್ತು ನಿರ್ವಹಣೆ. ಸರಬರಾಜಿಗಿಂತಲೂ ಮುಂಚಿತವಾಗಿ ಅಗತ್ಯವಾದ ರೈಟ್ಸ್ / ಆರ್‌ಡಿಎಸ್‌ಓ ಪರಿಶೀಲನಾ ಪ್ರಮಾಣಪತ್ರಗಳನ್ನು ಸಲ್ಲಿಸಬೇಕು ಮತ್ತು ಸಂಬಂಧಿಸಿದ ಶುಲ್ಕಗಳನ್ನು ಗುತ್ತಿಗೆದಾರರೇ ಭರಿಸಬೇಕು. ಆರ್‌ಡಿಎಸ್‌ಓ ನಿಂದ ಪ್ರೊಟೋಟೈಪ್‌ನ ಪರೀಕ್ಷೆಯ ವೆಚ್ಚವನ್ನು ಗುತ್ತಿಗೆದಾರರೇ ಭರಿಸಬೇಕು (ಸಿಎಎಂಸಿ ಜೊತೆಗೆ).	23 ಸಂಖ್ಯೆ

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 28-10-2024 ರಂದು 10:30 ಗಂಟೆಯವರೆಗೆ

ಹೆಚ್ಚಿನ ವಿವರಗಳಿಗೆ www.ireps.gov.in ಗೆ ಲಾಗ್‌ಆನ್ ಮಾಡಿ.

ಪಿಯುಬಿ/485/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25 ಹಿರಿಯ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು

South Western Railway - SWR southwesternrailway_swr SWRRLY southwesternrailway SWRRLY

PUBLIC NOTICE

This is to inform the general public that my client intends to purchase the immovable properties mentioned and described in the schedule below from, **Shri. Khaleel Ur Rehman Shariff**, son of Late Abdul Rehman and **Smt. Salma Tharanum**, wife of Shri. Khaleel Ur Rehman Shariff (“**Owners**”). The Owners represent that they are the absolute owners of the Schedule Properties and the same is free from all encumbrance, mortgage, charge, lien or litigation and they have not entered into any sort of agreement/MOU/Deeds etc., for transfer of the Schedule Property. Any person/s having any objection, claim, right, title and/or interest with respect to the Schedule Properties or any part or portion thereof by way of sale, agreement of sale, conveyance, gift (*hiba*), acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/objection(s)/demand(s) with the undersigned supported by documentary evidence **within Fifteen (15) days** from the date of publication of this Notice failing which, my client shall proceed with the above-mentioned transaction as though there are no claim(s)/objection(s)/demand(s) to the proposed transaction.

SCHEDULE

All that piece and parcel of the below mentioned properties situated at Thammashettihalli Village and Shivapura Village, Kasaba Hobli, Doddaballapura Taluk, Bengaluru Urban District :

Sl. No.	Sy. No.	Extent in Acres & Guntas	Village	Boundaries: East by	West by	North by	South by
1.	14/3	02-37	Thammashetti halli	Property bearing Sy. No. 15	Property bearing Sy. No. 14/2	Property bearing Sy. No. 14/4 & Sy. No.109/3 of Shivapura Village.	Property bearing Sy No. 14/1
2.	109/3	00-07	Shivapura	Property bearing Sy. No. 109/4	Property bearing Sy. No.109/2	Road	Property bearing Sy. No. 14/3 of Thammashetti halli.

Place : Bengaluru
Date: 05-10-2024

Vinay K. S., Advocate,
Vinay Kademane & Associates
307, 3rd Floor, Prestige Centre Point, No.7/49, Edward Road, Bengaluru-01 Ph.: 080 22863885 email: vinay@vinaykademane.in

ಸತ್ಯಮೇವ ಜಯತೆ

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ
ಭಾರತ ಸರ್ಕಾರ

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ

ಘೋಷಣೆ

ಸನ್ 2024-25ನೇ ಸಾಲಿನ ಎಸ್‌ಸಿ ಮತ್ತು ಇನ್ನಿತರರ ಮೆಟ್ರಿಕ್-ಪೂರ್ವ ಸ್ಕಾಲರ್‌ಶಿಪ್ ಯೋಜನೆ

ಅಡಿಯಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಇನ್ನಿತರ ಸೌಲಭ್ಯವಂಚಿತ ಸಮೂಹಗಳ ಶಾಲಾ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್‌ಗಳು

ಅರ್ಹತೆ	ವ್ಯಾಪ್ತಿ	ಹಕ್ಕು
ಅಂಶ-1: ವಿದ್ಯಾರ್ಥಿಯು ಎಸ್‌ಸಿ ಪ್ರವರ್ಗಕ್ಕೆ ಸೇರಿರಬೇಕು; ಪಾಲಕರ/ಪೋಷಕರ ವಾರ್ಷಿಕ ಆದಾಯ ರೂ. 2.5 ಲಕ್ಷ ಮೀರಿರಬಾರದು	ಅಂಗೀಕೃತ ಶಾಲೆಗಳಲ್ಲಿ 9 ಮತ್ತು 10ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳು; ರಾಜ್ಯ ಸರ್ಕಾರ/ಕೇಂದ್ರಾಡಳಿತ ಪ್ರದೇಶಗಳಿಂದ ಅರ್ಜಿ ಸ್ವೀಕಾರ ಮತ್ತು ಪರಿಶೀಲನೆ; ಕಡುಬಡವ ಕುಟುಂಬಗಳು ಕೂಡ ಒಳಗೊಳ್ಳುತ್ತವೆ	ವಾರ್ಷಿಕ ರೂ. 3500 ರಿಂದ ರೂ. 7000 ವರೆಗಿನ ಶೈಕ್ಷಣಿಕ ಭತ್ಯೆ; ದಿವ್ಯಾಂಗ (ವಿಶೇಷಚೇತನ) ವಿದ್ಯಾರ್ಥಿಗಳಿಗೆ 10% ಹೆಚ್ಚುವರಿ ಭತ್ಯೆ
ಅಂಶ-2: ಶುಚಿಗೊಳಿಸುವಿಕೆ ಮತ್ತು ಆರೋಗ್ಯ ಅಪಾಯಕ್ಕೆ ಈಡಾಗಬಹುದಾದ ವೃತ್ತಿಗಳಲ್ಲಿ ತೊಡಗಿಕೊಂಡಿರುವ ಪಾಲಕರ/ಪೋಷಕರ ವಿದ್ಯಾರ್ಥಿಗಳು; ಯಾವುದೇ ಆದಾಯ ಮಿತಿ ಇರುವುದಿಲ್ಲ	ಅಂಗೀಕೃತ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳು; ರಾಜ್ಯ ಸರ್ಕಾರ/ಕೇಂದ್ರಾಡಳಿತ ಪ್ರದೇಶಗಳಿಂದ ಅರ್ಜಿ ಸ್ವೀಕಾರ ಮತ್ತು ಪರಿಶೀಲನೆ; ಕಡುಬಡವ ಕುಟುಂಬಗಳು ಕೂಡ ಒಳಗೊಳ್ಳುತ್ತವೆ	ವಾರ್ಷಿಕ ರೂ. 3500 ರಿಂದ ರೂ. 8000 ವರೆಗಿನ ಶೈಕ್ಷಣಿಕ ಭತ್ಯೆ; ದಿವ್ಯಾಂಗ (ವಿಶೇಷಚೇತನ) ವಿದ್ಯಾರ್ಥಿಗಳಿಗೆ 10% ಹೆಚ್ಚುವರಿ ಭತ್ಯೆ

- ವಿದ್ಯಾರ್ಥಿಗಳು ತಮ್ಮ ರಾಜ್ಯಕ್ಕೆ ಸಂಬಂಧಿತ ಸ್ಕಾಲರ್‌ಶಿಪ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸುವುದು.
- ವಿದ್ಯಾರ್ಥಿಗಳು ಕಡ್ಡಾಯವಾಗಿ ಒಂದು ಅಧಿಕೃತ ಮೊಬೈಲ್ ಸಂಖ್ಯೆ, ಆಧಾರ್ ಸಂಖ್ಯೆ (ಯುಐಡಿ), ಆಧಾರ್ ಸೀಡೆಡ್ ಬ್ಯಾಂಕ್ ಖಾತೆ, ಆದಾಯ ಪ್ರಮಾಣಪತ್ರ ಮತ್ತು ಜಾತಿ ಪ್ರಮಾಣಪತ್ರ ಹೊಂದಿರಬೇಕು.

ಕೂಡಲೇ ಅರ್ಜಿ ಸಲ್ಲಿಸಿರಿ

- ಯೋಜನೆಯ ಮಾರ್ಗಸೂಚಿಗಳು ಮತ್ತು ಅರ್ಹತಾ ಮಾನದಂಡ ವಿವರಗಳು ಕೆಳಗಿನ ಲಿಂಕ್‌ನಲ್ಲಿ ಲಭ್ಯವಿರುತ್ತವೆ http://socialjustice.gov.in/schemes/23

cbc38101/11/0022/2425

‘ಪಂ.ರಾಜ್ ಇಲಾಖೆಯ ದುರವಸ್ಥೆಗೆ ಸಾಕ್ಷಿ’

ಪ್ರಜಾವಾಣಿ ವಾರ್ತೆ

ಬಿ.ಕೆ. ಚಂದ್ರಶೇಖರ್

ಬೆಂಗಳೂರು: ‘ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ರಾಜ್ಯವು ದೇಶದಲ್ಲೇ ಮುಂಚೂಣಿಯಲ್ಲಿದ್ದರೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು 15ನೇ ಹಣಕಾಸು ಆಯೋಗದ ಅನುದಾನಕ್ಕೆ ಪೂರಕ ದಾಖಲೆ ಸಲ್ಲಿಸಲು ವಿಳಂಬ ಮಾಡಿರುವುದು ಇಲಾಖೆಯ ದುರವಸ್ಥೆಗೆ ಸಾಕ್ಷಿ’ ಎಂದು ಕಾಂಗ್ರೆಸ್ ಮುಖಂಡ ಪ್ರೊ.ಬಿ.ಕೆ. ಚಂದ್ರಶೇಖರ್ ಹೇಳಿದ್ದಾರೆ.

‘ಪ್ರಜಾವಾಣಿ’ಯ ಗುರುವಾರದ ಸಂಚಿಕೆಯಲ್ಲಿ ‘ಪಂಚಾಯಿತಿಗಳಿಗೆ ಅನುದಾನದ ಸಂಕಟ’ ಶೀರ್ಷಿಕೆಯಡಿ ಪ್ರಕಟವಾದ ವರದಿ ಕುರಿತು ಪ್ರತಿಕ್ರಿಯಿಸಿರುವ ಅವರು, ‘15ನೇ ಹಣಕಾಸು ಆಯೋಗದ ಶಿಫಾರಸಿನಂತೆ ಹಂಚಿಕೆಯಾದ ಅನುದಾನವನ್ನು ಸಕಾಲಕ್ಕೆ ಪಡೆದುಕೊಳ್ಳಲು ವಿಫಲವಾಗಿರುವುದು ಆಕ್ಷೇಪಾರ್ಹ. ರಾಜ್ಯದ ಪಂಚತಂತ್ರ 2.0 ತಂತ್ರಾಂಶವನ್ನು ಕೇಂದ್ರದ ಪೋರ್ಟಲ್ ಜೊತೆ ಸಂಯೋಜನೆ ಮಾಡಲು ಆರು ತಿಂಗಳು ಬೇಕಿತ್ತೆ? ಈ ವೈಫಲ್ಯಕ್ಕೆ ವಿವರಣೆ ನೀಡುವವರು ಯಾರು? ಇಲಾಖೆಯ ಅಧಿಕಾರಿಗಳ ಅಸಡ್ಡೆ ಅಥವಾ ಉದಾಸೀನವೆ ಕಾರಣವೆ’ ಎಂದು ಪ್ರಶ್ನಿಸಿದ್ದಾರೆ.

‘ರಾಜ್ಯದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅಸ್ತಿತ್ವಕ್ಕೆ ತರುವ ಹಿಂದಿನ ಸರ್ಕಾರಗಳ ಪ್ರಯತ್ನದಲ್ಲಿ ಸಕ್ರಿಯವಾಗಿ ನಾನು ಭಾಗಿಯಾಗಿದ್ದೆ. ಇಲಾಖೆಯ ಈ ಗಂಭೀರ ವೈಫಲ್ಯವು ತೀವ್ರ ಅಸಮಾಧಾನ ಮೂಡಿಸಿದೆ. ಹಲವು ರಾಜ್ಯಗಳು ಈಗಾಗಲೇ ಮೊದಲ ಕಂತಿನ ಅನುದಾನ ಪಡೆದಿದ್ದು, ಕೆಲವು ರಾಜ್ಯಗಳಿಗೆ ಎರಡನೇ ಕಂತಿನ ಅನುದಾನವೂ ಬಿಡುಗಡೆಯಾಗಿದೆ. ರಾಜ್ಯಕ್ಕೆ ಮೊದಲ ಕಂತಿನ ಅನುದಾನವೂ ಬಂದಿಲ್ಲ ಎಂಬುದು ರಾಜ್ಯಕ್ಕೆ ಆಭಾಸ ತಂದಿದೆ’ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

MISSING

Ramesh H

Height 5.7 ft, Eyes brown, Hair black and white. Wearing blue shirt and black pant

If you find this person please call

8105594560/8105020467

Reward Rs.10,000/-

ತಮ್ಮೂರಿನತ್ತ ಹೊರಟ ಸಿಬ್ಬಂದಿ ● ಅ.10ಕ್ಕೆ ಸಭೆ ಕರೆದ ಸಚಿವ

ನಾಳೆಯಿಂದ ಜಿ.ಪಂ ಎದುರು ಮುಷ್ಕರ

ಪ್ರಜಾವಾಣಿ ವಾರ್ತೆ

ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಗ್ರಾ.ಪಂ ಅಧಿಕಾರಿಗಳು, ನೌಕರರು ಮತ್ತು ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರವೂ ಪ್ರತಿಭಟನೆ ನಡೆಸಿದರು. ಪ್ರಜಾವಾಣಿ ಚಿತ್ರ

ಬೆಂಗಳೂರು: ಅಧಿಕಾರಿಗಳಿಂದ ಸ್ಪಷ್ಟ ಭರವಸೆ ಸಿಗದ ಕಾರಣ, ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಗ್ರಾಮ ಪಂಚಾಯಿತಿ ಅಧಿಕಾರಿಗಳು, ನೌಕರರು ಮತ್ತು ಸದಸ್ಯರು, ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಸುತ್ತಿದ್ದ ಮುಷ್ಕರವನ್ನು ಶನಿವಾರ ಸ್ಥಗಿತಗೊಳಿಸಿ, ರಾಜ್ಯದ 31 ಜಿಲ್ಲಾ ಪಂಚಾಯಿತಿ ಕಚೇರಿಗಳ ಎದುರು ಸೋಮವಾರದಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ನಿರ್ಧರಿಸಿದರು.

ಜಿಟಿಜಿಟಿ ಮಳೆಯ ನಡುವೆಯೂ ಧರಣಿಯಲ್ಲಿ ಪಾಲ್ಗೊಂಡಿದ್ದ ಗ್ರಾಮ ಪಂಚಾಯಿತಿ ಅಧಿಕಾರಿಗಳು, ನೌಕರರ ಮತ್ತು ಸದಸ್ಯರನ್ನು ಪಂಚಾಯತ್ ರಾಜ್ ಆಯುಕ್ತಾಲಯದ ಉಪ ನಿರ್ದೇಶಕ ಎಂ.ಚಂದ್ರಪ್ಪ ಅವರು ಭೇಟಿ ಮಾಡಿ ಮನವಿ ಸ್ವೀಕರಿಸಿದರು.

ಒಕ್ಕೂಟದ ಅಧ್ಯಕ್ಷ ರಾಜು ವಾರದ ‘ಅ. 10ರಂದು ಬೆಂಗಳೂರಿನಲ್ಲಿ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಸಭೆ ಕರೆದಿದ್ದಾರೆ. ಅಲ್ಲಿಯವರೆಗೂ ಜಿಲ್ಲಾ ಕೇಂದ್ರದಲ್ಲಿ ಮುಷ್ಕರ ನಡೆಯಲಿದೆ. ಹೋರಾಟದ ನೇತೃತ್ವ ವಹಿಸಿರುವವರು ಮಾತ್ರ 10ರಂದು ಸಭೆಯಲ್ಲಿ ಭಾಗವಹಿಸುತ್ತಾರೆ. ಉಳಿದವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿರುತ್ತಾರೆ’ ಎಂದರು.

ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾ ಮಹದೇವನ್ ಅವರು, ಹೋರಾಟದ ನೇತೃತ್ವದ ವಹಿಸಿದ್ದವರ ಜೊತೆ ಶುಕ್ರವಾರ ನಡೆಸಿದ ಸಭೆ ಫಲಪ್ರದವಾಗಿರಲಿಲ್ಲ. ಹಾಗಾಗಿ ನೌಕರರು ಶನಿವಾರವೂ ಮುಷ್ಕರ ಮುಂದುವರಿಸಿದ್ದರು.

ಲಾಭದ ಕನವರಿಕೆ ಆಹಾರ ಕಲಬೆರಕೆ

ಒಂದನೇ ಪುಟದಿಂದ

ಪಡಿತರ ವ್ಯವಸ್ಥೆಯಡಿ ಫಲಾನುಭವಿಗಳಿಗೆ ಉಚಿತವಾಗಿ ಸಿಗುವ ಅಕ್ಕಿಯನ್ನು ಖರೀದಿಸಿ ಮರು ಮಾರಾಟ ಮಾಡುವ ದೊಡ್ಡ ಜಾಲವೇ ಸಕ್ರಿಯವಾಗಿದೆ. ₹ 10ರಿಂದ ₹ 15ಕ್ಕೆ ಒಂದು ಕೆ.ಜಿ. ಅಕ್ಕಿ ಖರೀದಿಸಿ, ಪಾಲಿಶ್ ಮಾಡಿ ಅದನ್ನು ಪ್ಯಾಕ್ ಮಾಡಿ, ಸಾಗಿಸುವ ಜಾಲ ಬಹುತೇಕ ಎಲ್ಲಾ ನಗರಗಳಲ್ಲಿದೆ.

ಗ್ರಾಮ, ನಗರ ಪ್ರದೇಶಗಳಲ್ಲಿ ಪಡಿತರ ಅಕ್ಕಿ ಖರೀದಿಸಲಾಗುತ್ತದೆ. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ರೈತರಿಗಾಗಿಯೇ ಇರುವ 'ನೋಂದಣಿಯಾಗದ ಡೀಲರ್' (ಅನ್ ರಿಜಿಸ್ಟರ್ಡ್ ಡೀಲರ್) ಎಂಬ ಹೆಸರಿನ ಬಿಲ್ ಪಡೆಯುವ (ಇದಕ್ಕಾಗಿ ನಿಗದಿಯಾಗಿರುವ ಅತ್ಯಂತ ಕಡಿಮೆ ಶುಲ್ಕವನ್ನು ಭರಿಸಲಾಗುತ್ತದೆ) ಮೂಲಕ ಅಕ್ರಮ ಅಕ್ಕಿಗೆ 'ಅಧಿಕೃತತೆಯ' ಮುದ್ರೆ ಪಡೆದು ಲಾರಿಗಳಲ್ಲಿ ತುಂಬಿ ಸಾಗಿಸಿ ಲಾಭ ಮಾಡಿಕೊಳ್ಳಲಾಗುತ್ತದೆ.

ಇಂಥ ಅಕ್ಕಿ ಮಹಾರಾಷ್ಟ್ರ ಮತ್ತಿತರ ರಾಜ್ಯಗಳಿಂದ ಮತ್ತೆ ಕೇಂದ್ರ ಸರ್ಕಾರದ ಗೋದಾಮು ಸೇರಿ, ಅಲ್ಲಿಂದ ಆಯಾ ರಾಜ್ಯಗಳಿಗೆ ತಲುಪಿ ಮತ್ತೆ ಪಡಿತರ ವ್ಯವಸ್ಥೆಯಡಿ ಮತ್ತೆ ಪೂರೈಕೆಯಾಗುತ್ತದೆ.

ಇನ್ನು, ಸ್ಥಳೀಯವಾಗಿಯೇ ಇರುವ ಕೆಲವು ಅಕ್ಕಿ ಗಿರಣಿಗಳಲ್ಲಿ, ಈ ರೀತಿ ಅಕ್ರಮವಾಗಿ ಖರೀದಿಸಲಾದ ಪಡಿತರ ಅಕ್ಕಿಗೆ ಪಾಲಿಶ್ ಮಾಡಿ, ಅಧಿಕ ದರದ ಅಕ್ಕಿಯಲ್ಲಿ ಬೆರೆಸುವ ದಂಧೆ ನಡೆಯುತ್ತದೆ. ಇದೇ ಅಕ್ಕಿಯನ್ನು ಕೆಲವು ಕಡೆ ದೋಸೆ ಹಿಟ್ಟು ಮಾಡಲೂ ಬಳಸಲಾಗುತ್ತಿದೆ. ಗೋಧಿಯಿಂದ ಸಿದ್ಧವಾಗುವ ರವೆಯಲ್ಲಿ ಇಂಥ ಅಕ್ಕಿಯ ರವೆಯನ್ನು ಬೆರೆಸಿ ಮಾರಾಟ ಮಾಡುವ ಮೂಲಕವೂ ಲಾಭ ಮಾಡಿಕೊಳ್ಳಲಾಗುತ್ತಿದೆ. ಗೋಧಿ ರವೆಯಲ್ಲಿ ಬೆರೆಸಲಾದ ಅಕ್ಕಿ ರವೆಯ ವ್ಯತ್ಯಾಸ ಅರಿಯಲೂ ಆಗದು ಎಂಬ ಕಾರಣಕ್ಕೆ ಇಂಥ ಕಲಬೆರಕೆ ನಡೆಯುತ್ತಲೇ ಇದೆ.

ಪರಿಶೀಲನೆ, ಸಮೀಕ್ಷೆ: ಆಹಾರದಲ್ಲಿ ಕಲಬೆರಕೆ ಆಗಿದೆಯೇ ಎಂಬುದನ್ನು ಪತ್ತೆ ಮಾಡಲು ಆರೋಗ್ಯ ಇಲಾಖೆ ಅಧೀನದಲ್ಲಿರುವ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯ ಸಿಬ್ಬಂದಿಯು ಹೋಟೆಲ್‌ಗಳಿಗೆ ದಿಢೀರ್ ಭೇಟಿ ನೀಡಿ, ಪ್ರತಿ ತಿಂಗಳೂ ಆಹಾರದ 30 ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಬೇಕು ಎಂಬ ನಿಯಮವಿದೆ.

ಈ ಸಮೀಕ್ಷೆಗಳಲ್ಲಿ 25 ಸಾಮಾನ್ಯ ಹಾಗೂ 5 ಕಾನೂನುಬದ್ಧ ಸಮೀಕ್ಷೆಗಳಿದ್ದು, ಸಾಮಾನ್ಯ ಸಮೀಕ್ಷೆಯ ವೇಳೆ ಕಲಬೆರಕೆ ಪತ್ತೆಯಾದರೆ ನೋಟಿಸ್ ನೀಡಿ, ದಂಡ ವಸೂಲಿ ಮಾಡಿ ಸುಧಾರಣೆಗೆ ಅವಕಾಶ ನೀಡಲಾಗುತ್ತದೆ. ಆಗಲೂ ತಪ್ಪು ತಿದ್ದಿಕೊಳ್ಳದಿದ್ದಲ್ಲಿ ಕಾನೂನುಬದ್ಧ ಸಮೀಕ್ಷೆ ನಡೆಸಿ, ಕಲಬೆರಕೆ ಪತ್ತೆಯಾದರೆ ಪ್ರಕರಣ ದಾಖಲಿಸಲಾಗುತ್ತದೆ. ಆಹಾರ ಸಮೀಕ್ಷೆ ನಡೆಸಿ ಪ್ರಯೋಗಾಲಯಕ್ಕೆ ಪರೀಕ್ಷೆಗೆ ಕಳುಹಿಸಿದಾಗ ಹಾನಿಕಾರಕ ಅಂಶಗಳು ಪತ್ತೆಯಾದರೆ ಎಫ್‌ಎಸ್‌ಎಸ್‌ಎಐ ನ್ಯಾಯಾಲಯದ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗುತ್ತದೆ. ಗರಿಷ್ಠ ₹ 5 ಲಕ್ಷ ದಂಡ ಹಾಗೂ ಕನಿಷ್ಠ 6 ತಿಂಗಳಿಂದ ಜೀವಾವಧಿವರೆಗೆ ಜೈಲು ಶಿಕ್ಷೆ ಇದೆ. ಕಳಪೆ ಗುಣಮಟ್ಟ ಇದ್ದರೆ ಹೆಚ್ಚುವರಿ ಜಿಲ್ಲಾಧಿಕಾರಿ ನ್ಯಾಯಾಲಯ ಬರುತ್ತದೆ. ಇಲ್ಲಿ ದಂಡವನ್ನು ಮಾತ್ರ ವಿಧಿಸಲು ಅವಕಾಶ ಇದೆ.

ವರದಿ ಸಲ್ಲಿಕೆ ವಿಳಂಬ: ಆಹಾರದ ಮಾದರಿಗಳನ್ನು ಸಂಗ್ರಹಿಸಿದ ಅಧಿಕಾರಿಗಳು ಪ್ರಯೋಗಾಲಯಗಳಿಗೆ ಕಳುಹಿಸಿ ವರದಿ ಪಡೆಯಲು ಕನಿಷ್ಠ 1 ತಿಂಗಳು ಕಾಯಬೇಕಿದೆ. ಆಹಾರ ಕಲಬೆರಕೆ, ರಾಸಾಯನಿಕ ಪತ್ತೆ ಹಚ್ಚುವುದು ಆಹಾರ ಸುರಕ್ಷತಾ ಅಧಿಕಾರಿಗಳಿಗೆ ಸವಾಲಾಗಿದೆ.

ಕಂದಾಯ ವಿಭಾಗಕ್ಕೆ ಒಂದರಂತೆ ರಾಜ್ಯದಲ್ಲಿ ನಾಲ್ಕು ಪ್ರಯೋಗಾಲಯಗಳಿವೆ. ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಕಲಬುರಗಿ ವ್ಯಾಪ್ತಿಯಲ್ಲಿ ಇವುಗಳನ್ನು ಸ್ಥಾಪಿಸಲಾಗಿದೆ. ಬೆಂಗಳೂರು ಪ್ರಯೋಗಾಲಯದ ವ್ಯಾಪ್ತಿಗೆ 12 ಜಿಲ್ಲೆಗಳು ಒಳಪಟ್ಟಿವೆ. ಎಲ್ಲ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಿ ಸಕಾಲಕ್ಕೆ ವರದಿ ಪಡೆಯುವುದು ಅಸಾಧ್ಯವಾಗಿದೆ ಎನ್ನುವುದು ಅಧಿಕಾರಿಗಳ ಅಭಿಪ್ರಾಯ.

1955ರಿಂದ 2011ರವರೆಗೆ ಆಹಾರ ಕಲಬೆರಕೆ ತಡೆ ಕಾಯ್ದೆ ಜಾರಿಯಲ್ಲಿತ್ತು. 2011ರಿಂದ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ ಜಾರಿಗೆ ಬಂದಿದೆ. ಇದರಲ್ಲಿ ಕಲಬೆರಕೆ ಮಾತ್ರವಲ್ಲ ಆಹಾರದ ಸುರಕ್ಷತೆಯನ್ನು ಖಾತರಿಪಡಿಸಲಾಗುತ್ತದೆ. ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ಇದರ ಅನುಷ್ಠಾನದ ಜವಾಬ್ದಾರಿ ನೋಡಿಕೊಳ್ಳುತ್ತದೆ. ಸ್ಥಳೀಯ ಆಡಳಿತ, ಇಲಾಖೆಯ ಅಧಿಕಾರಿಗಳು ಸಮರ್ಪಕ ಅನುಷ್ಠಾನಕ್ಕೆ ಆದ್ಯತೆ ನೀಡಿದಲ್ಲಿ ಆಹಾರದಲ್ಲಿ ಕಲಬೆರಕೆ ನಿಯಂತ್ರಣ ಕಷ್ಟಸಾಧ್ಯವೇನಲ್ಲ.

ಮಾಹಿತಿ: ವಿವಿಧ ಬ್ಯೂರೊಗಳಿಂದ

ರಾಜ್ಯದಲ್ಲೂ ಆಹಾರ ಪದಾರ್ಥಗಳ ಗುಣಮಟ್ಟ ಪರೀಕ್ಷೆ ಕಡ್ಡಾಯಗೊಳಿಸಲಾಗಿದೆ. ಗುಣ ಮಟ್ಟದ ಪದಾರ್ಥಗಳ ಖರೀದಿಗೆ ಜನಜಾಗೃತಿ ಮೂಡಿಸಲಾಗುತ್ತಿದೆ.
ಕೆ.ಎಚ್. ಮುನಿಯಪ್ಪ, ಆಹಾರ ಸಚಿವ

'ಶುದ್ಧ' ಹೆಸರಿನಲ್ಲಿ ಅಶುದ್ಧ ನೀರು!

ಅನೇಕ ಕಡೆ ನದಿ ನೀರನ್ನು ಶುದ್ಧೀಕರಿಸಿ ಪೂರೈಕೆಯಾಗುತ್ತಿದ್ದರೂ ಜನರು ಶುದ್ಧ ಕುಡಿಯುವ ನೀರಿಗಾಗಿ ಇನ್ನೂ ಖಾಸಗಿ ನೀರಿನ ಘಟಕಗಳನ್ನು ಆಶ್ರಯಿಸುವುದು ತಪ್ಪಿಲ್ಲ. ಆದರೆ, ಅಂಥ ಬಹುಪಾಲು ಶುದ್ಧ ನೀರಿನ ಘಟಕಗಳಲ್ಲಿನ ನೀರು ಹೆಸರಿಗಷ್ಟೇ ಶುದ್ಧವಾಗಿರುತ್ತದೆ ಎನ್ನುವ ಆರೋಪವಿದೆ. ನಿಗದಿತ ಮಾನದಂಡಗಳನ್ನು ಪಾಲಿಸದ ಖಾಸಗಿ ಘಟಕಗಳು ಪೂರೈಸುವ ಬಾಟಲಿ ನೀರನ್ನೇ ಸಭೆ-ಸಮಾರಂಭಗಳಲ್ಲಿ ಜನ ಬಳಕೆ ಮಾಡುತ್ತಿದ್ದಾರೆ.

ಮೊದಲು ಅನುಮತಿ ಪಡೆಯದೇ ಕೇವಲ ಲಕ್ಷ ಖರ್ಚು ಮಾಡಿ ನಿರ್ಮಾಣವಾದ ಅನಧಿಕೃತ ನೀರಿನ ಘಟಕಗಳ ಮೇಲೆ ದಾಳಿ ನಡೆಯುತ್ತಿತ್ತು. ಆದರೆ, ಇತ್ತೀಚೆಗೆ ಜಿಲ್ಲಾಧಿಕಾರಿ ನೇತೃತ್ವದ ಸಲಹಾ ಸಮಿತಿ ಸಭೆ ನಡೆಯದಿದ್ದರಿಂದ ಅಂತಹ ದಾಳಿಗಳು ನಿಂತು ಹೋಗಿವೆ.

ಆಹಾರ ಸುರಕ್ಷತಾ ಮಾನದಂಡಗಳನ್ನು ಅನುಸರಿಸಿದರೆ ಒಂದು ಘಟಕ ನಿರ್ಮಾಣಕ್ಕೆ ₹ 40 ಲಕ್ಷ ವೆಚ್ಚವಾಗುತ್ತದೆ. ಆದರೆ, ಮಾನದಂಡ ಅನುಸರಿಸದೇ ರಾಜ್ಯದಾದ್ಯಂತ ಶುದ್ಧ ನೀರಿನ ಘಟಕಗಳು ನಾಯಿಕೊಡೆಗಳಂತೆ ತಲೆ ಎತ್ತುತ್ತಿದ್ದು, ಕೇವಲ ₹ 1.5 ಲಕ್ಷದಿಂದ ₹ 2 ಲಕ್ಷ ವೆಚ್ಚದ ಬಂಡವಾಳದಲ್ಲಿ ಆರಂಭವಾಗುತ್ತಿವೆ.

'ಕಪ್ಪು ಬಂಗಾರ'ಕ್ಕೂ ಕಲಬೆರಕೆಯ ಬಾಧೆ

ಕರಾವಳಿ ಹಾಗೂ ಮಲೆನಾಡು ಭಾಗದಲ್ಲಿ 'ಕಪ್ಪು ಬಂಗಾರ' ಎಂದೇ ಪ್ರಸಿದ್ಧವಾಗಿರುವ ಕಾಳುಮೆಣಸು ಕೂಡ ಕಲಬೆರಕೆ ಆಗುತ್ತಿದೆ. ಉತ್ತಮ ಧಾರಣೆ ಇದ್ದ ಸಂದರ್ಭದಲ್ಲಿ ವಿಯೆಟ್ನಾಂ, ಬ್ರೆಝಿಲ್‌ನಿಂದ ಆಮದು ಮಾಡಿಕೊಂಡ ಕಳಪೆ ಗುಣಮಟ್ಟದ ಕಾಳುಮೆಣಸನ್ನು ಇಲ್ಲಿನ ಕಾಳುಮೆಣಸಿನೊಂದಿಗೆ ಸೇರಿಸಿ ಮಾರಾಟ ಮಾಡಲಾಗುತ್ತದೆ. ಅಲ್ಲದೆ, ಹತ್ತಿ ಬೀಜ, ಪರಂಗಿ ಬೀಜವನ್ನು ಸೇರಿಸಿ ಪ್ರಮಾಣವನ್ನು ಜಾಸ್ತಿ ಮಾಡಿ ಮಾರಾಟ ಮಾಡುವ ಜಾಲವೂ ಇದೆ.

ಸಾಂಬಾರ ಪದಾರ್ಥಗಳಲ್ಲಿ ಒಂದಾದ ಕಾಳುಮೆಣಸಿನ ಪುಡಿಗೂ ಬೇಡಿಕೆ ಹೆಚ್ಚಾಗಿದೆ. ಕಾಳುಮೆಣಸನ್ನು ಬೇರ್ಪಡಿಸಿದ ಬಳಿಕ ಉಳಿಯುವ ಗೊಂಚಲ ಕಡ್ಡಿಗೂ ಬೇಡಿಕೆ ಇದ್ದು, ದಂಧೆಯಲ್ಲಿ ತೊಡಗಿರುವವರು ಕಾಳು ಮೆಣಸಿನ ಜತೆಗೆ ಕಡ್ಡಿಯನ್ನೂ ಖರೀದಿಸುತ್ತಾರೆ. ಕಾಳುಮೆಣಸನ್ನು ಪುಡಿ ಮಾಡಿ ಮಾರಾಟ ಮಾಡುವವರು ಈ ಗೊಂಚಲ ಕಡ್ಡಿಯನ್ನೂ ಪುಡಿ ಮಾಡಿ ಅದಕ್ಕೆ ಸ್ವಲ್ಪ ಪ್ರಮಾಣದಲ್ಲಿ ಕಾಳುಮೆಣಸನ್ನು ಸೇರಿಸುತ್ತಾರೆ. ಇಂಥ ಪುಡಿಗಳು ಖಾರ ಇಲ್ಲದೆ ಇದ್ದರೂ ಅವುಗಳಲ್ಲಿ ಕಾಳುಮೆಣಸಿನಂತೆ ಘಮ ಇರುತ್ತದೆ. ಮೇಲ್ನೋಟಕ್ಕೆ ಗೊತ್ತಾಗದೆ ಇದ್ದರೂ ರುಚಿಯಲ್ಲಿ ಪತ್ತೆ ಮಾಡಬಹುದು.

ಅಡಿಕೆಗೂ ಕಲಬೆರಕೆಯ ಸೋಂಕು

ಮಲೆನಾಡು ಮಾತ್ರವಲ್ಲದೇ ಬಯಲು ಸೀಮೆಯ ಆರ್ಥಿಕ ಜೀವನಾಡಿಯಾಗಿ ಬದಲಾಗಿರುವ ಅಡಿಕೆಗೂ ಕಲಬೆರಕೆಯ ಕಳಂಕ ಹತ್ತಿದೆ. ಈ ಮೊದಲು ಅಡಿಕೆಯನ್ನು ಹೆಚ್ಚಾಗಿ ಬೆಳೆಗಾರರೇ ಸಂಸ್ಕರಿಸಿ ಮಾರಾಟಕ್ಕೆ ತರುತ್ತಿದ್ದರು. ಈಚೆಗೆ ಮಧ್ಯವರ್ತಿಗಳಿಗೆ ಕೇಣಿ ಕೊಡುವ ಪರಿಪಾಠ ಹೆಚ್ಚಾಗಿದೆ. ಕೆಲವು ಕೇಣಿದಾರರು ಕಳಪೆ ಅಡಿಕೆಗೆ ರಾಸಾಯನಿಕ ಬಣ್ಣ, ಪಾಲಿಶ್ ಹಾಕಿ ಒಳ್ಳೆ ಅಡಿಕೆಯೊಂದಿಗೆ ಮಿಶ್ರಣ ಮಾಡುತ್ತಿದ್ದಾರೆ. ಇದು ಸಮಸ್ಯೆಯ ಮೂಲ.

'ಪೈಪೋಟಿ ಹಾಗೂ ಆಸೆಗೆ ಬಿದ್ದು ಕೇಣಿದಾರರು ಕ್ವಿಂಟಲ್ ಹಸಿ ಅಡಿಕೆಗೆ 13ರಿಂದ 13.5 ಕೆ.ಜಿ ಒಣ ಅಡಿಕೆ ಕೊಡುವುದಾಗಿ ಬೆಳೆಗಾರರೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತಿದ್ದಾರೆ. ಆದರೆ, ಅಷ್ಟೊಂದು ಕೊಡಲು ಸಾಧ್ಯವಿಲ್ಲ. ವೈಜ್ಞಾನಿಕವಾಗಿ 11 ಕೆ.ಜಿ. ಅಡಿಕೆ ಮಾತ್ರ ಕೊಡಬಹುದು. ಆ ನಷ್ಟ ತಪ್ಪಿಸಿಕೊಳ್ಳಲು ಕೆಲವರು ಕಳಪೆ ಅಡಿಕೆ (ಸೆಕೆಂಡ್ಸ್) ಮಿಶ್ರಣ ಮಾಡಿ ಬೆಳೆಗಾರರಿಗೆ ಕೊಡುತ್ತಿದ್ದಾರೆ. ಹೀಗೆ ಮಿಶ್ರಣ ಆದ ಅಡಿಕೆ ಸಹಕಾರ ಸಂಸ್ಥೆಗಳು ಹಾಗೂ ವರ್ತಕರಿಗೆ ಮಾರಾಟ ಮಾಡಲಾಗುತ್ತಿದೆ. ಆ ಅಡಿಕೆ ಕಳುಹಿಸಿದರೆ ಪಾನ್ ಮಸಾಲ ಕಂಪೆನಿಗಳು ತಿರಸ್ಕರಿಸುತ್ತಿವೆ' ಎಂದು ಮ್ಯಾಮ್ಕೋಸ್ ವ್ಯವಸ್ಥಾಪಕ ನಿರ್ದೇಶಕ ಶ್ರೀಕಾಂತ್ ಬರುವೆ ಹೇಳುತ್ತಾರೆ.

ಮೀನು ಕೆಡದಂತೆ ಫಾರ್ಮಲಿನ್ ಬಳಕೆ?

ಮೀನು ಬೇಗ ಕೊಳೆಯುವ ಪದಾರ್ಥ. ಮಂಜುಗಡ್ಡೆಯಲ್ಲಿ ಹಾಕಿದರೂ ಒಂದೆರಡು ದಿನಗಳಲ್ಲಿ ಅದು ಕೊಳೆಯಲಾರಂಭಿಸುತ್ತದೆ. ಇದನ್ನು ತಪ್ಪಿಸಲು ಕೆಲವರು ಮೀನನ್ನು ಫಾರ್ಮಲಿನ್ ದ್ರಾವಣದಲ್ಲಿ ಅದ್ದಿ ಮಾರಾಟ ಮಾಡುವುದು ಪತ್ತೆಯಾಗಿದೆ. ಈ ಬಗ್ಗೆ ವ್ಯಾಪಕ ದೂರುಗಳು ಬರುತ್ತಿದ್ದಂತೆಯೇ ಕೊಚ್ಚಿಯಲ್ಲಿರುವ ಕೇಂದ್ರೀಯ ಮೀನುಗಾರಿಕಾ ತಂತ್ರಜ್ಞಾನ ಸಂಸ್ಥೆ (ಸಿಐಎಫ್‌ಟಿ) ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿದ್ದ ಮೀನುಗಳನ್ನು ಬೇರೆ ಬೇರೆ ಕಡೆಗಳಲ್ಲಿ ಸಂಗ್ರಹಿಸಿ ಪರಿಶೀಲನೆಗೆ ಒಳಪಡಿಸಿತ್ತು. ಆಗ ಅವುಗಳಲ್ಲಿ ಫಾರ್ಮಲಿನ್ ಅಂಶ ಇರುವುದು ಪತ್ತೆಯಾಗಿದೆ. ಒಂದು ರಾಜ್ಯದಿಂದ ಬೇರೆ ರಾಜ್ಯಕ್ಕೆ ಸಾಗಿಸಿ ಮಾರಾಟ ಮಾಡುವ ಮೀನುಗಳಲ್ಲಿ ಈ ರಾಸಾಯನಿಕ ಹೆಚ್ಚಾಗಿ ಪತ್ತೆಯಾಗಿದೆ.

ಮೀನು ಕೆಡದಂತೆ ಫಾರ್ಮಲಿನ್ ಬಳಸಿದರೂ ಅದು ಕ್ರಮೇಣ ಶಕ್ತಿಗುಂದುತ್ತದೆ. ಆದರೂ ಅದರ ಅಂಶವನ್ನು ಸಂಪೂರ್ಣ ತೆಗೆಯಲು ಸಾಧ್ಯವಿಲ್ಲ. ಇದು ಮೂತ್ರಕೋಶಕ್ಕೆ ಹಾನಿ ಉಂಟುಮಾಡುತ್ತದೆ. ಎಫ್‌ಎಸ್‌ಎಸ್‌ಎಐ ಗುಣಮಟ್ಟದ ಪ್ರಕಾರ ಆಹಾರ ಪದಾರ್ಥಗಳಲ್ಲಿ ಫಾರ್ಮಲಿನ್ ಬಳಕೆಗೆ ಅನುಮತಿಯೇ ಇಲ್ಲ.

ಕೊಬ್ಬರಿ ಎಣ್ಣೆಯಲ್ಲಿ 'ಪ್ಯಾರಾಫಿನ್'

ರಾಜ್ಯದ ಕರಾವಳಿ ಮತ್ತಿತರ ಕಡೆ ಅಡುಗೆಗೆ ಕೊಬ್ಬರಿ ಎಣ್ಣೆಯನ್ನೇ ಪ್ರಮುಖವಾಗಿ ಬಳಸುತ್ತಾರೆ. ಇಲ್ಲಿ ತೆಂಗು ಪ್ರಮುಖ ಬೆಳೆಯಾದ್ದರಿಂದ ತೆಂಗಿನ ಎಣ್ಣೆ ತಯಾರಿಸುವ ಮಿಲ್‌ಗಳೂ ಸಾಕಷ್ಟಿವೆ. ಮಂಗಳೂರು, ಉಡುಪಿ, ಧರ್ಮಸ್ಥಳಕ್ಕೆ ಬರುವ ಪ್ರವಾಸಿಗರು ಹೆದ್ದಾರಿಯಂಚಿನಲ್ಲಿ 'ಶುದ್ಧ ಕೊಬ್ಬರಿ ಎಣ್ಣೆ ಸಿಗುತ್ತದೆ' ಎಂಬ ಬೋರ್ಡ್ ನೋಡಿ, ಖರೀದಿಸಿಕೊಂಡು ಹೋಗುತ್ತಾರೆ. ಜನರ ಗಮನವನ್ನು ತಕ್ಷಣಕ್ಕೆ ಸೆಳೆಯುವಂತೆ ಇಂತಹ ಅಂಗಡಿಗಳ ಎದುರು ಹಳದಿ ಬಣ್ಣದ ಕ್ಯಾನ್‌ಗಳನ್ನು ರಾಶಿಗಟ್ಟಲೆ ಕಟ್ಟಿ ತೂಗು ಹಾಕಲಾಗಿರುತ್ತದೆ.

ಇಲ್ಲಿನ ಬಹುತೇಕ ಮಿಲ್‌ಗಳಲ್ಲಿ ಶುದ್ಧವಾದ ಕೊಬ್ಬರಿ ಎಣ್ಣೆಯೇ ಸಿಗುತ್ತದೆ. ಆದರೆ, ಕರಾವಳಿ ಭಾಗದ ಶುದ್ಧ ಕೊಬ್ಬರಿ ಎಣ್ಣೆ ಬ್ರ್ಯಾಂಡ್ ಬಳಸಿಕೊಂಡು ಪೆಟ್ರೋಲಿಯಂ ತ್ಯಾಜ್ಯ (ಪ್ಯಾರಾಫಿನ್) ಸೇರಿಸಿರುವ ನಕಲಿ ಕೊಬ್ಬರಿ ಎಣ್ಣೆ ಮಾರಾಟ ಜಾಲವೂ ಇತ್ತೀಚಿನ ವರ್ಷಗಳಲ್ಲಿ ಸಕ್ರಿಯವಾಗಿದೆ. ಅದು ಕರಾವಳಿಯ ಗಡಿ ದಾಟಿಕೊಂಡು ಹೊರ ಜಿಲ್ಲೆ, ಹೊರರಾಜ್ಯಗಳಿಗೂ ಪೂರೈಕೆಯಾಗುತ್ತಿದೆ. ಹೀಗಾಗಿ ಇತ್ತೀಚಿನ ವರ್ಷಗಳಲ್ಲಿ ಹೆದ್ದಾರಿ ಬದಿಯಲ್ಲಿ ನಾಯಿಕೊಡೆಗಳಂತೆ ತಲೆ ಎತ್ತುತ್ತಿರುವ ಶುದ್ಧ ಕೊಬ್ಬರಿ ಎಣ್ಣೆ ಮಾರಾಟ ಅಂಗಡಿಗಳತ್ತ ಜನರು ಸಂಶಯದಿಂದ ನೋಡುವಂತಾಗಿದೆ. 'ಪ್ರವಾಸಿಗರು ಎಣ್ಣೆಯ ವಾಸನೆಯನ್ನಷ್ಟೇ ನೋಡುತ್ತಾರೆ. ಎಣ್ಣೆಯನ್ನು ಹಳದಿ ಬಣ್ಣದ ಕ್ಯಾನ್‌ಗಳಲ್ಲಿ ತುಂಬಿಸಿಟ್ಟಿರುವುದರಿಂದ ಅದರ ನೈಜ ಬಣ್ಣ ಪರೀಕ್ಷಿಸಲೂ ಆಗುವುದಿಲ್ಲ. ಒಂದು ಕೆ.ಜಿ ಕೊಬ್ಬರಿಗೆ ಸದ್ಯ ₹150ರಿಂದ ₹160ರವರೆಗೆ ದರ ಇದೆ, ಹೀಗಿರುವಾಗ ಒಂದು ಲೀಟರ್ ಶುದ್ಧ ಕೊಬ್ಬರಿ ಎಣ್ಣೆ ಹೇಗೆ ₹175 ರಿಂದ ₹180 ದರದಲ್ಲಿ ಸಿಗುತ್ತದೆ' ಎಂದು ಪ್ರಶ್ನಿಸುತ್ತಾರೆ ಧರ್ಮಸ್ಥಳ ಸಮೀಪದ ಕೊಕ್ಕಡದ ತೆಂಗು ಬೆಳೆಗಾರರೊಬ್ಬರು.

ರಾಗಿಗೆ ರೆಡ್ ಆಕ್ಸೈಡ್ ಬೆರಕೆ

ರಾಜ್ಯದ ಹಲವಡೆ ಬೆಳೆಯುವ ರಾಗಿಯು ಆಕರ್ಷಕವಾಗಿ ಕಾಣಲು ಕೃತಕ ಬಣ್ಣ ಲೇಪನ ಮಾಡಲಾಗುತ್ತಿದೆ. ಮಳೆಯ ಏರಿಳಿತ, ಸರಿಯಾದ ಸಂದರ್ಭಕ್ಕೆ ಕಟಾವು ಮಾಡದಿದ್ದಾಗ ಕೆಂಪುರಾಗಿ ಬಣ್ಣ ಕಡುಕೆಂಪಾಗಿ ಇರುವುದಿಲ್ಲ. ದಾಸ್ತಾನು ಇಟ್ಟ ಸಂದರ್ಭದಲ್ಲಿ ಫಂಗಸ್ ಅಂಟಿದಾಗಲೂ ರಾಗಿಯನ್ನು ಖರೀದಿಸಲು ಗ್ರಾಹಕರು ಹಿಂದೇಟು ಹಾಕುತ್ತಾರೆ. ಇಂತಹ ಸಂದರ್ಭದಲ್ಲಿ ರಾಗಿಗೆ ಕೃತಕ ಬಣ್ಣವಾಗಿ 'ರೆಡ್ ಆಕ್ಸೈಡ್' ಬಳಸಲಾಗುತ್ತದೆ. ರಾಗಿ ಹೊಳೆಯುವಂತೆ ಮಾಡಲು ಮೇಣವನ್ನು ಉಪಯೋಗಿಸಲಾಗುತ್ತಿದೆ ಎನ್ನುವ ಆರೋಪ ಇದೆ.

ಮೆಣಸಿನಕಾಯಿ ಕೆಂಪಾಗಿ ಕಾಣುವಂತೆ ಮಾಡಲು ಸಹ 'ರೆಡ್ ಆಕ್ಸೈಡ್' ಬಳಸಲಾಗುತ್ತದೆ. ಕಾರದಪುಡಿಯಲ್ಲಿ ಇಟ್ಟಿಗೆ ಪುಡಿ, ರಾಸಾಯನಿಕಗಳನ್ನು ಬೆರಸಲಾಗುತ್ತದೆ. ತೊಗರಿ ಬೇಳೆಯನ್ನು ಆಕಾರ್ಷಕವಾಗಿ ಕಾಣುವಂತೆ ಮಾಡಲು 'ಮೆಟಾನಿಯನ್ ಎಲ್ಲೊ' ರಾಸಾಯನಿಕ ಉಪಯೋಗಿಸಲಾಗುತ್ತದೆ.

ನಿಲ್ಲದ ಕೃತಕ ಬಣ್ಣದ ಬಳಕೆ

ಗೋಬಿ ಮಂಚೂರಿ, ಕಾಟನ್ ಕ್ಯಾಂಡಿ ಹಾಗೂ ಕಬಾಬ್ ತಯಾರಿಕೆಯಲ್ಲಿ ಕೃತಕ ಬಣ್ಣ ಬಳಕೆಯನ್ನು ನಿಷೇಧಿಸಿದರೂ ಸಂಪೂರ್ಣವಾಗಿ ತಡೆಯಲು ಸಾಧ್ಯವಾಗುತ್ತಿಲ್ಲ. ಆಹಾರ ಸುರಕ್ಷತಾ ಅಧಿಕಾರಿಗಳ ದಾಳಿ, ದಂಡ ಪ್ರಯೋಗಕ್ಕೂ ತಿನಿಸು ವ್ಯಾಪಾರಿಗಳು ಬಗ್ಗಿಲ್ಲ. ಆಹಾರದ ರುಚಿಯನ್ನು ಹೆಚ್ಚಿಸುವ ಈ ರಾಸಾಯನಿಕವನ್ನು ಬಣ್ಣ ರಹಿತವಾಗಿ ಬಳಸಲಾಗುತ್ತಿದೆ.

ಈ ತಿನಿಸುಗಳಲ್ಲಿ ಸನ್‌ಸೆಟ್ ಯೆಲ್ಲೋ, ಕಾರ್ಮೋಸಿನ್, ಟೆಟ್ರಾಜಿನ್ ಹಾಗೂ ರೋಡಮೈನ್ ಬಿ ಎಂಬ ರಾಸಾಯನಿಕಗಳನ್ನು ಬಳಕೆ ಮಾಡಲಾಗುತ್ತಿತ್ತು. ಇದೇ ರಾಸಾಯನಿಕಗಳು ಬಿಳಿ ಬಣ್ಣದಲ್ಲಿ ಬಳಕೆಯಾಗುತ್ತಿರುವ ಬಗ್ಗೆ ಅನುಮಾನಗಳು ವ್ಯಕ್ತವಾಗಿವೆ. ಹೋಟೆಲ್, ರೆಸ್ಟೋರೆಂಟ್ ಸೇರಿ ಹಲವೆಡೆ ವಾಸನೆರಹಿತ ರುಚಿವರ್ಧಕ 'ಚೈನಾಸಾಲ್ಟ್' (ಮಾನೋ ಸೋಡೋ ಗ್ಲುಟಮೇಟ್) ಹೆಚ್ಚಾಗಿ ಬಳಕೆಯಾಗುತ್ತಿದೆ. ಬೇಳೆ ಕಾಳು, ಮಾಂಸದಲ್ಲಿ ಇದನ್ನು ಬೆರೆಸಿದಾಗ ರುಚಿಯನ್ನು ಹೆಚ್ಚಿಸುತ್ತದೆ ಮತ್ತು ಈ ರುಚಿಗೆ ಮತ್ತೆ ಮತ್ತೆ ತಿನ್ನುವಂತೆ ಪ್ರೇರೇಪಿಸುತ್ತದೆ.

ಚಹ, ಕಾಫಿ ಪುಡಿಗೆ ಮರದ ಹೊಟ್ಟು

ಬಳಕೆ ಮಾಡಿದ ಚಹದ ಪುಡಿಗೆ ಹೊಸ ರೂಪವನ್ನು ನೀಡಿ ಮತ್ತೆ ಮಾರಾಟ ಮಾಡುವ ಜಾಲ ಸಕ್ರಿಯವಾಗಿದೆ. ಹೋಟೆಲ್‌ಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಬಳಕೆ ಮಾಡಿದ ಚಹದ ಪುಡಿಯನ್ನು ಒಣಗಿಸಲಾಗುತ್ತದೆ. ಇದಕ್ಕೆ ಮರದ ಹೊಟ್ಟು, ಹುಣಸೆ ಹಣ್ಣಿನ ಬೀಜ ಹಾಗೂ ಬಣ್ಣದ ಎಲೆಗಳ ಪುಡಿಗಳನ್ನು ಸೇರಿಸಿ ಕೃತಕ ಬಣ್ಣ ಮಿಶ್ರಣ ಮಾಡಲಾಗುತ್ತದೆ. ಇದನ್ನು ಪ್ಯಾಕೆಟ್ ರೂಪದಲ್ಲಿ ಮರಳಿ ಮಾರುಕಟ್ಟೆಗೆ ತರಲಾಗುತ್ತದೆ. ಸಾಮಾನ್ಯವಾಗಿ ಇದನ್ನು ಹಳ್ಳಿಗಳಲ್ಲಿ ಸಂಚಾರಿ ವಾಹನಗಳಲ್ಲಿ ಮಾರಾಟ ಮಾಡಲಾಗುತ್ತದೆ. ಕಾಫಿ ಪುಡಿಗೂ ಮರದ ಹೊಟ್ಟು, ಮಣ್ಣನ್ನು ಕಲಬೆರಕೆ ಮಾಡಿ ಮಾರಾಟ ಮಾಡಲಾಗುತ್ತಿದೆ.

ಸುರಕ್ಷತಾ ಅಧಿಕಾರಿ ಹುದ್ದೆ ಖಾಲಿ

ಆಹಾರ ಸುರಕ್ಷತಾ ಅಧಿಕಾರಿಗಳು ಆಹಾರ ಗುಣಮಟ್ಟ, ಶುದ್ಧತೆಯ ಬಗ್ಗೆ ನಿರಂತರ ನಿಗಾ ವಹಿಸಬೇಕು. ಮಾದರಿ ಸಂಗ್ರಹಿಸಿ ಪರೀಕ್ಷೆಗೆ ಕಳಿಸಬೇಕು. ಆದರೆ, ಬಹುತೇಕ ಜಿಲ್ಲೆಗಳಲ್ಲಿ ಆಹಾರ ಸುರಕ್ಷತಾ ಅಧಿಕಾರಿ ಹುದ್ದೆಗಳು ಖಾಲಿ ಇರುವುದರಿಂದ ಈ ಕಾರ್ಯಕ್ಕೆ ಹಿನ್ನಡೆಯಾಗಿದೆ.

ಆಹಾರ ಉತ್ಪನ್ನ ತಯಾರಿಕೆಗೆ ಪರವಾನಗಿ ನೀಡುವ ಅಧಿಕಾರ ಜಿಲ್ಲಾ ಅಂಕಿತ ಅಧಿಕಾರಿಗೆ ಇದೆ. ಆಹಾರ ಸುರಕ್ಷತಾ ಅಧಿಕಾರಿ ಹುದ್ದೆ ಖಾಲಿ ಇರುವುದರಿಂದ ಅವರ ಹೆಚ್ಚುವರಿ ಜವಾಬ್ದಾರಿಯೂ ಜಿಲ್ಲಾ ಅಂಕಿತ ಅಧಿಕಾರಿಯ ಹೆಗಲೇರಿದೆ. ತಾಲ್ಲೂಕು ಮಟ್ಟದ ಹುದ್ದೆಗಳು ಖಾಲಿ ಇರುವುದರಿಂದ ಪರವಾನಗಿ ನವೀಕರಣವೂ ವಿಳಂಬವಾಗುತ್ತಿದೆ.

'ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಎಲ್ಲ ತಾಲ್ಲೂಕುಗಳ ಆಹಾರ ಸುರಕ್ಷತಾ ಅಧಿಕಾರಿ ಹುದ್ದೆಗಳು ಖಾಲಿ ಇವೆ. ಜಿಲ್ಲಾ ಮಟ್ಟದ ಒಬ್ಬರು ಅಧಿಕಾರಿ (ಅಂಕಿತ ಅಧಿಕಾರಿ) ಇದ್ದು, ಅವರಿಗೆ ದಕ್ಷಿಣ ಕನ್ನಡದ ಜೊತೆಗೆ ಉಡುಪಿ ಜಿಲ್ಲೆಯ ಹೆಚ್ಚುವರಿ ಜವಾಬ್ದಾರಿ ನೀಡಲಾಗಿದೆ. ಕನಿಷ್ಠ 5 ತಾಲ್ಲೂಕುಗಳಲ್ಲಿ ಆಹಾರ ಸುರಕ್ಷತಾ ಅಧಿಕಾರಿ ಹುದ್ದೆ ಭರ್ತಿ ಮಾಡುವಂತೆ ರಾಜ್ಯ ಆಹಾರ ಸುರಕ್ಷತಾ ಆಯುಕ್ತರಿಗೆ 10ಕ್ಕೂ ಹೆಚ್ಚು ಬಾರಿ ಪತ್ರ ಬರೆದು ವಿನಂತಿಸಲಾಗಿದೆ' ಎಂದು ದಕ್ಷಿಣ ಕನ್ನಡ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಚ್.ಆರ್. ತಿಮ್ಮಯ್ಯ ಪ್ರತಿಕ್ರಿಯಿಸಿದರು.

ಚಿಕ್ಕಮಗಳೂರು ಜಿಲ್ಲೆಯಲ್ಲಿ 7 ಮಂಜೂರಾತಿ ಹುದ್ದೆಗಳಿದ್ದು, ಒಬ್ಬರೇ ಕಾರ್ಯ ನಿರ್ವಹಿಸುತ್ತಿದ್ದಾರೆ. ಬೆಳಗಾವಿ ಜಿಲ್ಲೆಯ 15 ಮಂಜೂರಾತಿ ಹುದ್ದೆಗಳಲ್ಲಿ 10 ಖಾಲಿ ಇವೆ. ಹೊಸ ತಾಲ್ಲೂಕುಗಳಲ್ಲಿ ಈ ಹುದ್ದೆಯನ್ನು ಇನ್ನೂ ಸೃಜಿಸಿಲ್ಲ.

ಹಾಲು, ಎಣ್ಣೆ, ಬೆಣ್ಣೆಯಲ್ಲಿ 'ವಿಷ'

ಅಡುಗೆ ಎಣ್ಣೆ, ಹಾಲು, ಬೆಣ್ಣೆ, ತುಪ್ಪ, ಜೇನು ತುಪ್ಪದಲ್ಲಿ ಕಲಬೆರಕೆ ಮಾಫಿಯಾ ಬೃಹತ್ ಮಟ್ಟದಲ್ಲಿ ಬೆಳೆದಿದೆ.

ಬಹುತೇಕ ನೆರೆ ರಾಜ್ಯಗಳ ಖಾಸಗಿ ಡೇರಿಗಳು 30ಕ್ಕೂ ಅಧಿಕ ಬ್ರ್ಯಾಂಡ್ ಹೆಸರಿನಲ್ಲಿ ರಾಜ್ಯದಲ್ಲಿ ಹಾಲು ಮಾರಾಟ ಮಾಡುತ್ತಿವೆ. ಅಷ್ಟು ದೂರದಿಂದ ಬರುವ ಹಾಲು ಹಾಳಾಗುವುದನ್ನು ತಪ್ಪಿಸಲು ಹೈಡ್ರೋಜನ್ ಪೆರಾಕ್ಸೈಡ್, ವಾಷಿಂಗ್ ಸೋಡಾ, ಕಾಸ್ಟಿಕ್ ಸೋಡಾ ಬೆರೆಸಲಾಗುತ್ತದೆ. ಹೆಚ್ಚಿನವರು ಎಫ್‌ಎಸ್‌ಎಸ್‌ಎಐ ಮಾನದಂಡ ಅನುಸರಿಸುತ್ತಿಲ್ಲವೆಂದು ಹಾಲು ಒಕ್ಕೂಟಗಳು ದೂರುತ್ತಿವೆ. ಕೆಎಂಎಫ್ ಈ ಹಿಂದೆ ನಡೆಸಿದ್ದ ಅಧ್ಯಯನವೊಂದರಲ್ಲಿ ಖಾಸಗಿ ಡೇರಿಗಳು ಹಾಲಿನ ಗುಣಮಟ್ಟ ಕಾಪಾಡಿಕೊಳ್ಳದಿರುವುದು ಕಂಡುಬಂದಿತ್ತು.

ರಿಸಿಮಾಲ್ಡೆಕ್ಸ್ ಮಾಲ್ಟೊಡೆಕ್ಸ್ಟ್ರಿನ್ (RISIMALDEX-MALTODEXTRIN) ಎಂಬ ಪುಡಿ, ಯೂರಿಯಾ, ಸೋಯಾಪುಡಿ, ಹಿಟ್ಟು, ಗೆಣಸಿನಪುಡಿಯನ್ನು ಹಾಲಿಗೆ ಬೆರೆಸುತ್ತಿರುವುದೂ ಪತ್ತೆಯಾಗಿದೆ.

ಹಾಲು ಒಕ್ಕೂಟದ ಸಂಘಗಳಲ್ಲಿ ತಿರಸ್ಕೃತಗೊಳ್ಳುವ ಗುಣಮಟ್ಟವಿಲ್ಲದ ಹಾಲನ್ನು ಖಾಸಗಿ ಡೇರಿಗಳು ಖರೀದಿಸುತ್ತವೆ. ಹಾಲಿನ ಒಕ್ಕೂಟಕ್ಕಿಂತ ಹೆಚ್ಚಿನ ದರ ಸಿಗುತ್ತದೆ ಎಂದು ಕೆಲ ಹೈನುಗಾರರು ಖಾಸಗಿ ಡೇರಿಗೆ ಹಾಲು ಹಾಕುತ್ತಾರೆ ಎನ್ನುವ ಆರೋಪವಿದೆ.

'ಇತ್ತೀಚೆಗೆ ಕೋಲಾರ ಜಿಲ್ಲೆಯ ಮಾಲೂರಿನಲ್ಲಿ ಕಂಪನಿಯೊಂದರ ತುಪ್ಪದ ಮಳಿಗೆ ಮೇಲೆ ದಾಳಿ ನಡೆಸಿ ಬೆಂಗಳೂರಿನ ಪಬ್ಲಿಕ್ ಹೆಲ್ತ್ ಇನ್‌ಸ್ಟಿಟ್ಯೂಟ್ (ಪಿಎಚ್‌ಐ) ಪ್ರಯೋಗಾಲಯದಲ್ಲಿ ಮಾದರಿ ಪರೀಕ್ಷಿಸಿದಾಗ ತುಪ್ಪ ಅಸುರಕ್ಷಿತ ಎಂಬ ವರದಿ ಬಂದಿದೆ. ಜೇನುತುಪ್ಪವನ್ನೂ ಪರೀಕ್ಷೆಗೆ ಒಳಪಡಿಸಿದ್ದು, ಗುಣಮಟ್ಟವಿಲ್ಲ ಎಂಬ ವರದಿ ಬಂದಿದೆ' ಎಂದು ಹೇಳುತ್ತಾರೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯ ಕೋಲಾರ ಜಿಲ್ಲಾ ಅಂಕಿತ ಅಧಿಕಾರಿ ಡಾ.ರಾಕೇಶ್ ಸಿ.

ಅಡುಗೆ ಎಣ್ಣೆಯಲ್ಲಿ ಅಧಿಕ ಕಲಬೆರಕೆ: ಕಾರ್ಖಾನೆ, ಮಿಲ್, ಸಣ್ಣಪುಟ್ಟ ಘಟಕಗಳಲ್ಲಿ ಪ್ಯಾಕ್ ಆಗಿ ಮಾರುಕಟ್ಟೆಗೆ ಬರುವ ಹಾಗೂ ಮಾರುಕಟ್ಟೆಯಲ್ಲಿ ಚಿಲ್ಲರೆಯಾಗಿ ಸಿಗುವ ಅಡುಗೆ ಎಣ್ಣೆಯು ಶೇ 50ರಿಂದ 80ರಷ್ಟು ಕಲಬೆರಕೆಯಿಂದ ಕೂಡಿರುವ ಬಗ್ಗೆ ವಿಜ್ಞಾನಿಗಳು, ಆಹಾರ ತಜ್ಞರು ಹಾಗೂ ವೈದ್ಯರು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಪೆಟ್ರೋಲಿಯಂ ಉಪ ಉತ್ಪನ್ನ 'ಮಿನರಲ್ ಆಯಿಲ್' (ವೈಟ್ ಆಯಿಲ್ ಅಥವಾ ಪ್ಯಾರಾಪಿನ್ ಆಯಿಲ್) ಅನ್ನು ಅಡುಗೆ ಎಣ್ಣೆಗೆ ಬೆರೆಸಲಾಗುತ್ತದೆ. ಜಾನುವಾರುಗಳ ಕೊಬ್ಬಿನಿಂದ ತೆಗೆದ ಎಣ್ಣೆಯನ್ನು ಸೇರಿಸಿ ಮಾರಾಟ ಮಾಡುತ್ತಿರುವ ದಂಧೆಯೂ ನಡೆಯುತ್ತಿದೆ.

ಬೆಲ್ಲಕ್ಕೆ ರಾಸಾಯನಿಕ ಮಿಶ್ರಣ

ಕಪ್ಪು ಬಣ್ಣದಲ್ಲಿರುವ ಸಾವಯವ ಬೆಲ್ಲ ಮಾತ್ರ ಬಳಕೆಗೆ ಯೋಗ್ಯ. ಬಿಳಿ ಮತ್ತು ಕೆಂಪು ಬಣ್ಣದ ಬೆಲ್ಲ ನಿಶ್ಚಿತವಾಗಿ ಕಲಬೆರಕೆಯೇ ಆಗಿರುತ್ತದೆ. ಮಾರುಕಟ್ಟೆಯಲ್ಲಿ ಕಪ್ಪು ಬೆಲ್ಲಕ್ಕಿಂತ ಬಿಳಿ ಬಣ್ಣಕ್ಕೆ ಹೆಚ್ಚು ಬೇಡಿಕೆ ಇರುವುದರಿಂದ ಆಲೆಮನೆಗಳಲ್ಲಿಯೇ ರಾಸಾಯನಿಕ ಬೆರಸಿದ ಬೆಲ್ಲ ತಯಾರಿಕೆಯಾಗುತ್ತಿದೆ.

'ಬೆಲ್ಲಕ್ಕೆ ಸಾಮಾನ್ಯವಾಗಿ ಹೈಡ್ರೋಸಲ್ಫೇಟ್ ರಾಸಾಯನಿಕ ಪದಾರ್ಥ ಬಳಸಲಾಗುತ್ತಿದೆ. ಸಕ್ಕರೆ ಕಾರ್ಖಾನೆಗಳಲ್ಲಿ ಸಿಗುವ ಕಳಪೆ ಗುಣಮಟ್ಟದ ಹಾಗೂ ಬಳಕೆಗೆ ಯೋಗ್ಯವಲ್ಲದ ಸಕ್ಕರೆಯನ್ನು ಬೆಲ್ಲಕ್ಕೆ ಮಿಶ್ರಣ ಮಾಡಲಾಗುತ್ತದೆ. ಆಗ ಬೆಲ್ಲ ಆಕರ್ಷಕ ಬಣ್ಣ ಪಡೆದುಕೊಳ್ಳುತ್ತದೆ. ಕೆಲವು ಆಲೆಮನೆಗಳಲ್ಲಿ ವಿಷಕಾರಕ ಅಂಶಗಳನ್ನು ಬಳಸಿ ಬೆಲ್ಲ ತಯಾರಿಸಿ ಮಾರುಕಟ್ಟೆಗೆ ಬಿಡಲಾಗುತ್ತಿದೆ. ಕಲಬೆರಕೆಗೆ ಸಂಬಂಧಿಸಿದಂತೆ ದೂರು ದಾಖಲಾದರೂ ಅಧಿಕಾರಿಗಳು ಕಾನೂನು ಕ್ರಮ ಕೈಗೊಳ್ಳುತ್ತಿಲ್ಲ. ವಿಷಕಾರಿ ಬೆಲ್ಲಕ್ಕೆ ಸೃಷ್ಟಿಯಾಗಿರುವ ಮಾರುಕಟ್ಟೆಗೆ ಕಡಿವಾಣ ಹಾಕುವ ಮೂಲಕ ರೈತರಿಗೆ ಆಗುವ ನಷ್ಟ ತಪ್ಪಿಸಬೇಕು' ಎನ್ನುತ್ತಾರೆ ಮಂಡ್ಯ ಬೆಲ್ಲ ರೈತ ಉತ್ಪಾದಕರ ಕಂಪನಿಯ ಅಧ್ಯಕ್ಷ ಕಾರಸವಾಡಿ ಮಹದೇವ.

ಗುಂಡಣ್ಣ

25 ವರ್ಷಗಳ ಹಿಂದೆ

ಬುಧವಾರ, 6-10-1999

● **ದೇಶಾದ್ಯಂತ ಇಂದು ಮತ ಎಣಿಕೆಗೆ ವ್ಯಾಪಕ ಸಿದ್ಧತೆ**

ನವದೆಹಲಿ, ಅ. 5 (ಯುಎನ್‌ಐ)– ರಾಷ್ಟ್ರಾದ್ಯಂತ 5 ಹಂತಗಳಲ್ಲಿ ನಡೆದ ಲೋಕಸಭೆ ಹಾಗೂ 5 ರಾಜ್ಯಗಳ ವಿಧಾನಸಭೆ ಚುನಾವಣೆಯ ಮತ ಎಣಿಕೆಗೆ ವ್ಯಾಪಕ ಸಿದ್ಧತೆ ಮಾಡಲಾಗಿದ್ದು, ನಾಳೆ ಮಧ್ಯಾಹ್ನದ ವೇಳೆಗೆ ಫಲಿತಾಂಶ ಹೊರ ಬರಲು ಪ್ರಾರಂಭವಾಗಲಿದೆ.

ವಿದ್ಯುನ್ಮಾನ ಮತಯಂತ್ರ ಬಳಸಿದ್ದ 17 ರಾಜ್ಯಗಳ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಒಟ್ಟು 45 ಲೋಕಸಭಾ ಕ್ಷೇತ್ರಗಳ ಫಲಿತಾಂಶ ಉಳಿದ ಕ್ಷೇತ್ರಗಳಿಗಿಂತ ಮುಂಚಿತವಾಗಿ ಪ್ರಕಟವಾಗಲಿದೆ. ನಾಳೆ ಸಂಜೆ ಐದು ಗಂಟೆಯೊಳಗೆ ಈ 45 ಲೋಕಸಭಾ ಕ್ಷೇತ್ರಗಳ ಫಲಿತಾಂಶ ತಿಳಿದುಬರಲಿದೆ.

50 ವರ್ಷಗಳ ಹಿಂದೆ

ಭಾನುವಾರ, 6-10-1974

● **ರೈಲ್ವೆ ನಿಲ್ದಾಣಗಳ ಮೇಲೆ ಮುತ್ತಿಗೆ; ಗೋಲಿಬಾರ್ ಮತ್ತೆ 4 ಸಾವು; ಕರ್ಫ್ಯೂ**

ಪಟನಾ, ಅ. 5– ಬಿಹಾರ ಬಂದ್‌ನ ಕೊನೆಯ ದಿನವಾದ ಇಂದು ಇಲ್ಲಿ ಹಿಂಸಾಚಾರ ಸಿಡಿದೆದ್ದು, ಪೊಲೀಸರ ಗೋಲಿಬಾರ್‌ಗೆ ಕನಿಷ್ಠಪಕ್ಷ ನಾಲ್ವರಾದರೂ ಸತ್ತು 60 ಜನ ಗಾಯಗೊಂಡರು.

ರಾಜಧಾನಿ ಸೇರಿದಂತೆ ಮತ್ತಿತರ ನಾಲ್ಕು ನಗರಗಳಲ್ಲಿ ಕರ್ಫ್ಯೂ ವಿಧಿಸಲಾಗಿದೆ. ಅನೇಕ ಪೊಲೀಸರೂ ಗಾಯಗೊಂಡರೆಂದೂ ಅಧಿಕೃತ ವರದಿಗಳು ತಿಳಿಸಿವೆ.

ಪಟನಾದಲ್ಲಿ ದೊಂಬಿ ಎದ್ದ ಜನರು ರೈಲ್ವೆ ನಿಲ್ದಾಣಕ್ಕೆ ಮುತ್ತಿಗೆ ಹಾಕಿದ್ದರಿಂದ ಪೊಲೀಸರು ಗೋಲಿಬಾರ್ ಮಾಡಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಅಕ್ಟೋಬರ್ 06, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಿನ ಶುಕ್ಲ ಚತುರ್ಥಿ ಗಂ. 58-33 ನಕ್ಷತ್ರ: ವಿಶಾಖಾ ಗಂ. 24-11 ಯೋಗ: ವಿಷ್ಕಂಭ ಗಂ. 6-08 ಕರಣ: ಗರ ಗಂ. 7-50, ಕನ್ಯಾ ಮಾಸದ 19 ನೇ ದಿನ, ಮಳೆನಕ್ಷತ್ರ: ಹಸ್ತ 3.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-24 ಸೂರ್ಯಾಸ್ತ : 06-13
ಮುಸ್ಲಿಂ ದಿನಾಂಕ : 02 ರಬಿಯುಸ್ಸಾನಿ ದಿನ ವಿಶೇಷ : ನವರಾತ್ರಿಯ ನಾಲ್ಕನೇ ದಿನ
ಅದೃಷ್ಟ ಸಂಖ್ಯೆ : 5, 11

ಮೇಷ: ವೃತ್ತಿಕ್ಷೇತ್ರದ ಸೂಕ್ಷ್ಮಾತಿ ಸೂಕ್ಷ್ಮ ವಿಷಯಗಳನ್ನು ಹಿಡಿತಕ್ಕೆ ತೆಗೆದುಕೊಂಡು ಉತ್ಸಾಹದಿಂದ ಕಾರ್ಯ ಪ್ರವೃತ್ತರಾಗುವಿರಿ. ಕೆಲಸದಲ್ಲಿ ತೊಡಕು ತಾಪತ್ರಯವನ್ನುಂಟುಮಾಡುವ ಶತ್ರುಗಳ ಪ್ರಯತ್ನ ವಿಫಲವಾಗುವುದು.

ವೃಷಭ: ಗುರುವಿನ ಮಾರ್ಗದರ್ಶನದಂತೆ ನಡೆಯುವ ಈ ದಿನದ ನಿಮ್ಮ ಕೆಲಸದಲ್ಲಿ ಸರ್ವತೋಮುಖವಾದ ಅಭಿವೃದ್ಧಿಯನ್ನು ಹೊಂದುವಿರಿ. ಆದಾಯ ಮತ್ತು ತೆರಿಗೆ ಅಧಿಕಾರಿಗಳಿಗೆ ದಿಢೀರ್ ವರ್ಗಾವಣೆಯಾಗುವ ಸಂಭವವಿದೆ.

ಮಿಥುನ: ಕಲಾವಿದರಿಗೆ ಹಾಗೂ ನಟ ನಟಿಯರಿಗೆ ಉತ್ತಮ ಅವಕಾಶಗಳು ಒದಗಿ ಬರುವುದು. ಔಷಧಿಗಳು ಅಡ್ಡ ಪರಿಣಾಮ ಬೀರುವಂತಾಗಬಹುದು. ಆದ್ದರಿಂದಲೇ ವೈದ್ಯರ ಸಲಹೆ ಇಲ್ಲದೆ ಔಷಧಿಗಳನ್ನು ಸೇವಿಸಬೇಡಿ.

ಕರ್ಕಾಟಕ: ಕೊಟ್ಟಂತಹ ಮಾತನ್ನು ಕಳೆದುಕೊಳ್ಳಬೇಕಾದಂತಹ ಪರಿಸ್ಥಿತಿ ಎದುರಾಗಬಹುದು. ಪದವಿ ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಹೆಚ್ಚಿನ ಪರಿಶ್ರಮ ಪಡಬೇಕಾಗುತ್ತದೆ. ವೃತ್ತಿ ಜೀವನದಲ್ಲಿ ಉತ್ತಮ ಸುಧಾರಣೆ ಕಂಡುಬರಲಿದೆ.

ಸಿಂಹ: ಮುಂದಿನ ಕೆಲಸ ಹಾಗೂ ವೃತ್ತಿ ಜೀವನದ ಬಗ್ಗೆ ಗಂಭೀರ ಆಲೋಚನೆ ಮಾಡುವುದು ಬಹಳ ಮುಖ್ಯವಾಗಿದೆ. ಗೃಹ ಕೃತ್ಯದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವಿರಿ. ಅತಿಯಾದ ಆಲಸ್ಯ ನಿಮ್ಮನ್ನು ಕಾಡಲಿದೆ.

ಕನ್ಯಾ: ತುಂಬಾ ಆತ್ಮೀಯರಂತೆ ಮುಖವಾಡ ಹೊಂದಿರುವ ನಿಮ್ಮ ಅಕ್ಕ-ಪಕ್ಕದ ಹಿತಶತ್ರುಗಳ ಬಣ್ಣ ನಿಮ್ಮೆದುರು ಬಯಲಾಗಲಿದೆ. ನಿಮ್ಮ ಸೋಲನ್ನು ಬಯಸುವವರ ಸಂಖ್ಯೆಯು ಇಳಿಮುಖವನ್ನು ಹೊಂದುವುದು.

ತುಲಾ: ಕೌಟುಂಬಿಕ ಸಮಸ್ಯೆಗಳಿಗೆ ಎದುರುತ್ತರ ನೀಡದಿರುವುದು ಅತ್ಯುನ್ನತ ಪರಿಹಾರವೆಂದು ಅನುಭವಕ್ಕೆ ಬರುತ್ತದೆ. ರಿಯಾಯಿತಿ ಮಾರಾಟಗಳಿಂದ ಮೋಸ ಹೋಗುವ ಸಾಧ್ಯತೆಗಳಿವೆ. ಆರೋಗ್ಯದ ಬಗ್ಗೆ ಗಮನ ಕೊಡಿ.

ವೃಶ್ಚಿಕ: ನ್ಯಾಯಾಲಯದ ಮೆಟ್ಟಿಲೇರಿದ ಸಮಸ್ಯೆಗಳನ್ನು ರಾಜಿ ಒಪ್ಪಂದದ ಮೂಲಕ ಬಗೆಹರಿಸಿಕೊಳ್ಳಬಹುದು. ಪತ್ರಿಕೆ ಮತ್ತು ಕೆಲವು ಖಾಸಗಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವವರಿಗೆ ಕೆಲಸದ ಅಸ್ಥಿರತೆ ಕಾಡಬಹುದು.

ಧನು: ಕೆಲಸ-ಕಾರ್ಯವನ್ನು ಜಾಣ್ಮೆಯಿಂದ ಸೂಕ್ಷ್ಮವಾಗಿ ನಿರ್ವಹಿಸುವಂತಹಾ ಬುದ್ಧಿವಂತಿಕೆಯನ್ನು ತೋರುವಿರಿ. ಶ್ರೀನಿವಾಸನ ಸೇವೆಯಿಂದ ವ್ಯಾಪಾರದಲ್ಲಿ ಉತ್ತಮ ಲಾಭವಿರುವುದು. ಶೀತಬಾಧೆ ಎದುರಾಗಬಹುದು.

ಮಕರ: ಪುಣ್ಯಸಂಪಾದನೆಗಾಗಿ ತಾಯಿಯೊಂದಿಗೆ ತೀರ್ಥಯಾತ್ರೆ ಕೈಗೊಳ್ಳುವ ನಿಮ್ಮ ಆಸೆ ಈಡೇರುವ ಲಕ್ಷಣಗಳು ಕಂಡುಬರುವುದು. ಅಭಿವೃದ್ಧಿಗೆ ಬೇಕಾದ ಅದ್ಭುತ ಅವಕಾಶವು ದೇವರ ಆಶೀರ್ವಾದದಿಂದ ನಿಮ್ಮ ಪಾಲಿಗೆ ಸಿಗಲಿದೆ.

ಕುಂಭ: ನಿಮ್ಮ ಫಲಕಾರಿ ಯೋಚನಾಲಹರಿಗಳನ್ನು ಕಂಡ ವ್ಯವಹಾರದ ಪಾಲುದಾರರು ನಿಮ್ಮ ಮಾತಿನಂತೆಯೇ ನಡೆಯುವರು. ಆರಕ್ಷಕ ವರ್ಗದವರಿಗೆ ಅಥವಾ ರಕ್ಷಣಾ ಕಾರ್ಮಿಕರಿಗೆ ರಾತ್ರಿ ಪಾಳಿ ಪ್ರಾರಂಭವಾಗಬಹುದು.

ಮೀನ: ಹಣದ ವಿಚಾರದಲ್ಲಿ ಖರ್ಚು-ವೆಚ್ಚಗಳ ಬಾಬ್ತು ಜಾಗ್ರತೆ ಇರಲಿ ಮತ್ತು ಆರ್ಥಿಕ ಸ್ಥಿತಿಯು ಕೊಂಚ ಸುಧಾರಿಸಲಿದೆ. ವಿದ್ಯಾರ್ಥಿಗಳಿಗೆ ತಮ್ಮ ಶೈಕ್ಷಣಿಕ ವಿಚಾರದಲ್ಲಿ ಮರೆಯಲಾಗದ ಕಹಿ ಘಟನೆಯೊಂದು ನಡೆಯಬಹುದು.

ಪದಬಂಧ 5824

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಮಳೆಗಾಗಿ ಮಾಡುವ ಪ್ರಾರ್ಥನೆ (5)
4.ಬೇರೆ ಬೇರೆ ಜಾತಿಗಳು ಬೆರೆಯುವಿಕೆ (5)
5.ರಾಜ ಸಭೆಯಿದು (3)
7.ಈ ರೀತಿ ಕುಗ್ಗು (3)
9.ಕಸಿ ಮಾಡಿದ್ದಕ್ಕೇ ಈ ತಳಮಳ! (4)
11.ಕೊನೆಗೆ ಸರ ತಿರುಗಿಸಿದಾಗ ಸುರಿದ ಜೊಲ್ಲು (4)
12.ಮಾಲು ತರುವಾಗ ತಲೆಗೆ ಸುತ್ತಿಕೊಂಡಿರುವ ಬಟ್ಟೆ (3)
14.ಸಂತನಿಂದ ಮುಂದುವರೆದ ವಂಶ (3)
17.ಹಾರ ಕೊನೆಗಿಟ್ಟು ಜಡೆ ಹೆಣೆಯುವಿಕೆ! (5)
18.ಮನುಷ್ಯನ ಶಕ್ತಿಗೆ ಮೀರಿದುದು (5)

ಮೇಲಿಂದ ಕೆಳಕ್ಕೆ
1.ಬವಣೆ ಪಟ್ಟು ಬೆಳೆದ ಧಾನ್ಯ! (3)
2.ಒಳ್ಳೆಯ ಅವಕಾಶ (3)
3.ನಡುವೆ ದಾರ ತಿರುಗಿಸಿ ಪೇಚಾಡು! (4)
6.ವರನಿದ್ದಾಗ ಸ್ಥಿರವಲ್ಲದುದು ಕಾಣುತ್ತದೆ (3)
7.ಗಾಳಿಯನ್ನು ಮೂಗಿನಿಂದ ಒಳಗೆಳೆದು ಹೊರಬಿಡುವ ಕ್ರಿಯೆ (3)
8.ಉತ್ಸವದ ಸಮಯದಲ್ಲಿ ಪರಸ್ಪರ ಎರಚುವ ರಂಗು (3)
10.ಸ್ಥಾಪಿತವಾದ ತತ್ವ (3)
13.ಬದಲಾಯಿಸಿದ ವೇಷ (4)
15.ಯಕ್ಷಗಾನದಲ್ಲಿ ಕಥಾನಕ (3)
16.ಕಾಯಿಸಿದ ಲೋಹ ದ್ರವ್ಯವನ್ನು ಅಚ್ಚಿಗೆ ಎರೆಯುವಿಕೆ (3)



5823ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆಡುಂಬೊಲ 3.ಏಕಾಗ್ರತೆ 5.ಪಕಳೆ 7.ಅವಶ್ಯ 9.ಕಲಹ 11.ನಮೂದು 13.ಸುದಿನ 16.ನಿಕಷ 19.ಕತಿಪಯ 20.ಹಕೀಕತ್ತು

ಮೇಲಿಂದ ಕೆಳಕ್ಕೆ:
1.ಆಲಾಪ 2.ಲಗ್ಗೆ 3.ಏಕಮೇವ 4.ತೆವಡೆ 6.ಕಲಿಲ 7.ಅಜ್ಞಾನ 8.ಶ್ಯನ 10.ಹಸು 12.ಮೂಷಕ 14.ದಿಗ್ವಿಜಯ 15.ಉಲೂಕ 17.ಷರತ್ತು 18.ದೇಹ

ಸುಡೊಕು 6209

	5	3	1			4		
6				5				8
	4		8				6	
4			5		9			1
	2			4			5	
3		5	2		8		4	6
5	7					8		9
		1	4	8	5			
	8			7			3	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6208 ಸುಡೊಕು

5	7	6	8	3	1	9	4	2
9	8	2	4	5	6	7	3	1
3	4	1	2	7	9	8	5	6
4	1	7	5	6	8	3	2	9
6	5	9	3	2	7	1	8	4
8	2	3	9	1	4	5	6	7
1	6	5	7	8	2	4	9	3
7	9	8	6	4	3	2	1	5
2	3	4	1	9	5	6	7	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನಾರಿಹಳ್ಳ ಜಲಾಶಯ, ದರೋಜಿ ಕರೆ ಭರ್ತಿ; ತುಂಬಿಹರಿದ ಚೆಕ್‌ಡ್ಯಾಂಗಳು

ಬಳ್ಳಾರಿಯಲ್ಲಿ ಮಳೆ ಆರ್ಭಟ

ಪ್ರಜಾವಾಣಿ ವಾರ್ತೆ

ಕೂಲಿ ಕಾರ್ಮಿಕರನ್ನು ಕರೆದೊಯ್ಯುತ್ತಿದ್ದ ಗೂಡ್ಸ್ ವಾಹನ ವಿಜಯನಗರ ಜಿಲ್ಲೆಯ ಕಾನಹೊಸಹಳ್ಳಿ ಹೋಬಳಿ ಸಮೀಪದ ಕೆಂಚಮಲ್ಲನಹಳ್ಳಿ ಬಳಿಯ ಹಳ್ಳದಲ್ಲಿ ಕೊಚ್ಚಿಹೋಯಿತು

ಬಳ್ಳಾರಿ: ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಶುಕ್ರವಾರ ರಾತ್ರಿಯಿಂದ ಶನಿವಾರ ನಸುಕಿನವರೆಗೆ ಭಾರಿ ಮಳೆಯಾಗಿದೆ. ಕೆರೆ ಕಟ್ಟೆಗಳು ತುಂಬಿ ಹರಿದರೆ, ಹಲವು ಕಡೆ ಹಾನಿಯೂ ಆಗಿದೆ.

ಎರಡೂ ಜಿಲ್ಲೆಗಳಲ್ಲಿ ಮನೆಗಳು, ಮರಗಳು, ವಿದ್ಯುತ್ ಕಂಬಗಳು ಬಿದ್ದಿವೆ. ಬೆಳೆ ಹಾನಿಯಾಗಿದೆ. ವಿಜಯನಗರ ಜಿಲ್ಲೆಯಲ್ಲಿ 18 ಮನೆಗಳಿಗೆ ಹಾನಿಯಾಗಿದೆ. ಕಾನೋಹೊಸಳ್ಳಿ ಹೋಬಳಿಯೊಂದರಲ್ಲೇ 14 ಪ್ರಕರಣ ವರದಿಯಾಗಿವೆ. ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 9 ಮನೆಗಳಿಗೆ ಹಾನಿಯಾಗಿದೆ.

ಬಳ್ಳಾರಿ ಜಿಲ್ಲೆ ಅಸುಂಡಿ ಗ್ರಾಮದ ರಸ್ತೆಗಳು ಜಲಾವೃತ್ತಗೊಂಡಿತ್ತು. ನಾರಿಹಳ್ಳ ಜಲಾಶಯ, ದರೋಜಿ ಕರೆ ತುಂಬಿತ್ತು. ಬಳ್ಳಾರಿಯ ಶಂಕರಬಂಡೆ ಎಂಬಲ್ಲಿ ರಭಸವಾಗಿ ಹರಿಯುತ್ತಿದ್ದ ಹೊಳೆಯಲ್ಲೇ ಕಾರು ಚಲಾಯಿಸಲು ಹೋಗಿ ಕೊಚ್ಚಿ ಹೋಗಿದ್ದ ವ್ಯಕ್ತಿಯೊಬ್ಬರು ಮರದಲ್ಲಿ ಸಿಲುಕಿಕೊಂಡಿದ್ದರು. ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಅವರು ಮೃತಪಟ್ಟಿದ್ದಾರೆ.

ಕೂಲಿ ಕಾರ್ಮಿಕರನ್ನು ಕರೆದೊಯ್ಯುತ್ತಿದ್ದ ಗೂಡ್ಸ್ ವಾಹನ ವಿಜಯನಗರ ಜಿಲ್ಲೆಯ ಕಾನಹೊಸಹಳ್ಳಿ ಹೋಬಳಿ ಕೇಂದ್ರದ ಸಮೀಪದ ಕೆಂಚಮಲ್ಲನ ಹಳ್ಳಿಯ ಹಳ್ಳದಲ್ಲಿ ಕೊಚ್ಚಿಹೋಯಿತು. ಅದೃಷ್ಟವಾಷತ್ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ.

ಬಳ್ಳಾರಿ ಜಿಲ್ಲೆಯಲ್ಲಿ 3.75 ಸೆಂ.ಮೀ ಮಳೆ ಸುರಿದಿದೆ. ಸಂಡೂರಿನ ಯಶವಂತ ನಗರದಲ್ಲಿ ಅತಿಹೆಚ್ಚು 15 ಸೆಂ.ಮೀ ಮಳೆಯಾಗಿದೆ. ವಿಜಯನಗರ ಜಿಲ್ಲೆಯಲ್ಲಿ 2.62 ಸೆಂ.ಮೀ ಮಳೆಯಾಗಿದೆ.

ನಾಯಕನಹಟ್ಟಿಯಲ್ಲಿ ದಾಖಲೆ ಮಳೆ (ನಾಯಕನಹಟ್ಟಿ, ಚಿತ್ರದುರ್ಗ): ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿಯಲ್ಲಿ ಶುಕ್ರವಾರ ತಡರಾತ್ರಿ ದಾಖಲೆಯ 13 ಸೆಂ.ಮೀ. ಮಳೆ ಸುರಿದಿದೆ. ರಾತ್ರಿ 9 ರಿಂದ ಬೆಳಿಗ್ಗೆ 6.30ರವರೆಗೂ ನಿರಂತರ ಗುಡುಗು, ಸಿಡಿಲಿನ ಆರ್ಭಟದೊಂದಿಗೆ ವರ್ಷಧಾರೆಯಾಗಿದೆ.

ಸುತ್ತಮುತ್ತಲಿನ ಗ್ರಾಮಗಳಲ್ಲಿನ ಹಳ್ಳ ಕೊಳ್ಳಗಳು, ಚೆಕ್‌ಡ್ಯಾಂಗಳು ತುಂಬಿವೆ. ಕೆರೆಗಳಿಗೆ ಅಪಾರ ಪ್ರಮಾಣದ ನೀರು ಹರಿಯುತ್ತಿದೆ. ನಾಯಕನಹಟ್ಟಿಸಮೀಪದ ಕುದಾಪುರ ಐಐಎಸ್‌ಸಿ ವಿಜ್ಞಾನ ಕ್ಯಾಂಪಸ್‌ನಲ್ಲಿರುವ ಚಿಕ್ಕಕೆರೆಗಳು ಇದೇ ಮೊದಲ ಬಾರಿಗೆ ಕೋಡಿ ಬಿದ್ದಿವೆ.

ಮೊಳಕಾಲ್ಮುರಿನಲ್ಲಿ 7.26 ಸೆಂ.ಮೀ, ರಾಯಾಪುರ 6.20 ಸೆಂ.ಮೀ, ಬಿಜಿ ಕೆರೆ 3.44 ಸೆಂ.ಮೀ, ರಾಂಪುರ 7.01 ಸೆಂ.ಮೀ ಹಾಗೂ ದೇವಸಮುದ್ರದಲ್ಲಿ 8.93 ಸೆಂ.ಮೀ ಮಳೆ ದಾಖಲಾಗಿದೆ. ಹಿರಿಯೂರು ತಾಲ್ಲೂಕಿನ ಧರ್ಮಪುರದಲ್ಲೂ ಉತ್ತಮ ಮಳೆ ಬಿದ್ದಿದೆ.

3 ದಿನ ರಾಜ್ಯದ ಅರ್ಧ ಭಾಗದಲ್ಲಿ ಭಾರಿ ಮಳೆ

ಬೆಂಗಳೂರು: ರಾಜ್ಯದ ಅರ್ಧ ಭಾಗದಷ್ಟು ಜಿಲ್ಲೆಗಳಲ್ಲಿ ಮೂರು ದಿನ ಗುಡುಗು ಸಹಿತ ಭಾರಿ ಮಳೆಯಾಗುವ ಸಂಭವವಿದ್ದು, ಹವಾಮಾನ ಇಲಾಖೆ ಹಲವು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಿದೆ.

ಕರಾವಳಿಯ ಎಲ್ಲ ಜಿಲ್ಲೆಗಳು ಮತ್ತು ದಕ್ಷಿಣ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ಅಕ್ಟೋಬರ್ 6 ರಿಂದ 8ರವರೆಗೆ ಭಾರಿ ಮಳೆಯಾಗುವ ಸಾಧ್ಯತೆ ಇದೆ ಇಲಾಖೆ ಮುನ್ಸೂಚನೆ ನೀಡಿದೆ.

ಭಾನುವಾರದಂದು ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ವಿಜಯನಗರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಗುಡುಗು ಸಹಿತ ಭಾರಿ ಮಳೆ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ ಜಿಲ್ಲೆಗಳ ಹಲವೆಡೆ ಗುಡುಗುಸಹಿತ ಸಾಧಾರಣ ಮಳೆಯಾಗುವ ಸಂಭವವಿದೆ. ಸೋಮವಾರ ಮತ್ತು ಮಂಗಳವಾರವೂ ಭಾರಿ ಮಳೆ ಮುಂದುವರಿಯುವ ಸಾಧ್ಯತೆ ಇರುವುದಾಗಿ ಇಲಾಖೆ ಮುನ್ಸೂಚನೆ ನೀಡಿದೆ.

‘ನಾಯಕನಹಟ್ಟಿಯಲ್ಲಿ 2005ರ ಜುಲೈ 15 ರಂದು 11.02 ಸೆಂ.ಮೀ ಮಳೆ ಸುರಿದಿತ್ತು. ಶುಕ್ರವಾರ ರಾತ್ರಿ 12.96 ಸೆಂ.ಮೀ ಮಳೆ ಬಿದ್ದಿರುವುದು ಹೊಸ ದಾಖಲೆ’ ಎಂದು ಕೃಷಿ ಇಲಾಖೆ ಅಧಿಕಾರಿ ಎನ್.ಹೇಮಂತ್ ನಾಯ್ಕ ತಿಳಿಸಿದ್ದಾರೆ.

ವೃದ್ಧ ಸಾವು: ವಾರದಿಂದ ಸುರಿಯುತ್ತಿರುವ ಮಳೆಯಿಂದಾಗಿ ದಾವಣಗೆರೆ ಜಿಲ್ಲೆ ಸಂತೇಬೆನ್ನೂರಿನ ಮನೆಯೊಂದರ ಗೋಡೆ ಕುಸಿದು ವೃದ್ಧರೊಬ್ಬರು ಶನಿವಾರ ಮೃತಪಟ್ಟಿದ್ದಾರೆ. ಕುಳಗಟ್ಟೆ ಬಸವರಾಜಪ್ಪ (81) ಸಾವಿಗೀಡಾದವರು.

ಮೈಸೂರು ಭಾಗದಲ್ಲಿ ಧಾರಾಕಾರ ಮಳೆ (ಮೈಸೂರು): ಮೈಸೂರು ಭಾಗದ ಮೈಸೂರು, ಕೊಡಗು ಮತ್ತು ಮಂಡ್ಯದ ಹಲವೆಡೆ ಶುಕ್ರವಾರ ರಾತ್ರಿ ಶುರುವಾದ ಮಳೆ ಶನಿವಾರವೂ ಮುಂದುವರಿಯಿತು. ಕೆಲವೆಡೆ ಗುಡುಗು ಸಿಡಿಲಿನಿಂದ ಕೂಡಿದ ಧಾರಾಕಾರ ಮಳೆ ಸುರಿಯಿತು. ಮನೆಗಳಿಗೆ ನೀರು ನುಗ್ಗಿತು. ಬೆಳೆಗಳಿಗೂ ಹಾನಿಯಾಯಿತು.

ಚಾಮರಾಜನಗರ ಜಿಲ್ಲೆಯ ಹಲವೆಡೆ ಹೊಲ, ಗದ್ದೆಗಳು ಜಲಾವೃತವಾಗಿವೆ. ಕಾಲುವೆ, ಕಟ್ಟೆಯತ್ತ ನೀರು ಹರಿಯುತ್ತಿದೆ. ಕೊಳ್ಳೇಗಾಲ ತಾಲ್ಲೂಕಿನ ಹಲವೆಡೆ ಮನೆಗಳಿಗೆ ನೀರು ನುಗ್ಗಿದೆ.

ಮೈಸೂರು ಜಿಲ್ಲೆಯ ಹುಣಸೂರು, ಎಚ್.ಡಿ. ಕೋಟೆ, ತಿ.ನರಸೀಪುರ, ಧರ್ಮಾಪುರ, ಹಂಪಾಪುರ, ಜಯಪುರ ಭಾಗದಲ್ಲಿ ಉತ್ತಮ ಮಳೆಯಾಗಿದ್ದು, ತಿ.ನರಸೀಪುರ ಪಟ್ಟಣದ ವಿವೇಕಾನಂದ ನಗರದ ಕೆಲವು ಮನೆಗಳಿಗೆ ನೀರು ನುಗ್ಗಿತು. ಮೈಸೂರು ನಗರದಲ್ಲಿ ಸಂಜೆಯಿಂದ ಬಿದ್ದ ಜೋರು ಮಳೆಯಿಂದಾಗಿ, ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅಡ್ಡಿಯಾಯಿತು. ಕೆಲವೆಡೆ ವಿದ್ಯುತ್ ದೀಪಾಲಂಕಾರವಿರಲಿಲ್ಲ.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಪಟ್ಟಣ ಸೇರಿದಂತೆ ವಿವಿಧೆಡೆ ಮಧ್ಯಾಹ್ನ ಅರ್ಧ ತಾಸಿಗೂ ಹೆಚ್ಚು ಕಾಲ ಜೋರು ಮಳೆ ಸುರಿಯಿತು. ಪಟ್ಟಣದಲ್ಲಿ ನಡೆಯುತ್ತಿರುವ ದಸರಾ ಉತ್ಸವದ ವಸ್ತುಪ್ರದರ್ಶನದ ಆವರಣದಲ್ಲಿ ಅವ್ಯವಸ್ಥೆ ಉಂಟಾಯಿತು. ಕೊಡಗು ಜಿಲ್ಲೆಯ ನಾಪೋಕ್ಲು ಭಾಗದಲ್ಲಿ ಸಿಡಿಲು ಅಬ್ಬರ ಜೋರಾಗಿತ್ತು, ಮಡಿಕೇರಿ ನಗರದಲ್ಲೂ ಭಾರಿ ಗುಡುಗು, ಸಿಡಿಲು ಬಂದರೂ ಮಳೆ ಹೆಚ್ಚು ಸುರಿಯಲಿಲ್ಲ.

ಮಣ್ಣಿನಡಿ ಸಿಲುಕಿದ್ದ ವ್ಯಕ್ತಿಯ ರಕ್ಷಣೆ

ಕೊಪ್ಪಳ: ಜಿಲ್ಲೆಯಲ್ಲಿ ಶುಕ್ರವಾರ ರಾತ್ರಿ ಹಾಗೂ ಶನಿವಾರ ಬೆಳಗಿನ ಭಾರಿ ಮಳೆ ಸುರಿದಿದೆ. ಗಂಗಾವತಿ ತಾಲ್ಲೂಕಿನ ಢಾಣಾಪುರ ಗ್ರಾಮದಲ್ಲಿ ಏಕಾಏಕಿ ಮಣ್ಣಿನ ಮನೆ ಕುಸಿದು, ಅದರ ಅಡಿಯಲ್ಲಿ ಸಿಲುಕಿದ್ದ ವ್ಯಕ್ತಿಯನ್ನು ಗ್ರಾಮಸ್ಥರು ರಕ್ಷಿಸಿದ್ದಾರೆ.

ಮಣ್ಣಿನ ಮನೆಯಲ್ಲಿ ಅಕ್ಕ ಹಾಗೂ ತಮ್ಮ ಮಾತ್ರ ವಾಸವಿದ್ದರು. ಬೆಳಗಿನ ಜಾವ ಅಕ್ಕ ಮನೆಯಿಂದ ಹೊರಬಂದು ಕೆಲಸ ಮಾಡುತ್ತಿದ್ದರು. 45 ವರ್ಷದ ಪ್ರಕಾಶ ಶೆಟ್ಟಿ ಅವರು ಚಾರ್ಜ್‌ಗೆ ಇಟ್ಟಿದ್ದ ಮೊಬೈಲ್ ತರಲು ಒಳಗಡೆ ಹೋಗಿದ್ದಾಗ ಮನೆ ಚಾವಣಿ ಕುಸಿದು ಅವರ ಮೇಲೆ ಬಿದ್ದಿದೆ. ದೇಹದ ಮುಕ್ಕಾಲು ಭಾಗ ಮಣ್ಣಿನಲ್ಲಿ ಹೂತು ಹೋಗಿತ್ತು. ತಕ್ಷಣವೇ ಅಕ್ಕ-ಪಕ್ಕದವರು ಬಂದು ರಕ್ಷಿಸಿ, ಗಂಗಾವತಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಪ್ರಕಾಶ ಅವರ ಬೆನ್ನು, ಕಾಲಿನ ಭಾಗಕ್ಕೆ ತೀವ್ರ ಪೆಟ್ಟಾಗಿದೆ ಎಂದು ಪ್ರತ್ಯಕ್ಷದರ್ಶಿಗಳು ‘ಪ್ರಜಾವಾಣಿ’ಗೆ ತಿಳಿಸಿದರು.

ಕುಷ್ಟಗಿ ತಾಲ್ಲೂಕಿನ ಬಚಿನಾಳ ಗ್ರಾಮದಲ್ಲಿ ಭಾರಿ ಗಾಳಿ ಹಾಗೂ ಮಳೆಗೆ ಮೆಣಸಿನಕಾಯಿ ಗಿಡಗಳು, ಕಲ್ಲಂಗಡಿ ಬೆಳೆ ಹಾಳಾಗಿದೆ. ಕಾರಟಗಿಯಲ್ಲಿ 8.56 ಸೆಂ.ಮೀ., ಗಂಗಾವತಿಯಲ್ಲಿ 5.74 ಸೆಂ.ಮೀ. ಮಳೆಯಾಗಿದೆ.

ಕೊಚ್ಚಿನ್ ವಿಮಾನ ನಿಲ್ದಾಣಕ್ಕೆ ಮೆರಗು ತಂದ ಕನ್ನಡಿಗ

ಕುಟುಂಬದ ಮೌಲ್ಯ ಮತ್ತು ವೃತ್ತಿಪರ ವಿಜಯಗಳನ್ನು ಎತ್ತಿ ಹಿಡಿದ ಐಎಎಸ್ ಅಧಿಕಾರಿ ಎಸ್. ಸುಹಾಸ್

ಕೊಚ್ಚಿನ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

ಕರ್ನಾಟಕದಲ್ಲಿ ಹುಟ್ಟಿ ಕೇರಳ ಕೇಡರ್‌ನಲ್ಲಿ ಸೇವೆ ಸಲ್ಲಿಸುತ್ತಿರುವ ಅಚ್ಚ ಕನ್ನಡಿಗ ಐಎಎಸ್ ಅಧಿಕಾರಿ ಎಸ್. ಸುಹಾಸ್, ಅವರ ನವ ನವೀನ ಆಲೋಚನೆಗಳ ಮೂಲಕ ದೇವರ ನಾಡು ಕೇರಳದಲ್ಲಿ ಗಮನಾರ್ಹ ಪ್ರಭಾವ ಮತ್ತು ಸಾಧನೆ ಮಾಡಿದ್ದಾರೆ. ಸುಹಾಸ್ ಅವರ ಸಮರ್ಪಣಾ ಮನೋಭಾವ, ಪ್ರತಿಭೆ ಮತ್ತು ಅಸಾಧಾರಣ ಕಾರ್ಯಕ್ಷಮತೆ ಅವರಿಗೆ ಗೌರವ ತಂದುಕೊಟ್ಟಿದೆ.

ಅವರ ಗಮನಾರ್ಹ ಪ್ರಗತಿಗೆ ಕಾರಣ, ಅವರು ಸಲ್ಲಿಸುತ್ತಿರುವ ಸೇವಾ ಕ್ಷೇತ್ರದಲ್ಲಿ ಅತ್ಯಾಧುನಿಕತೆ ತಂದಿರುವುದು. ಜತೆಯಲ್ಲಿ ಸಮಸ್ಯೆಗೆ ತಕ್ಕ ಸೂಕ್ತ ಪರಿಹಾರಗಳನ್ನು ಅನುಷ್ಠಾನಗೊಳಿಸಿ, ಸಂಸ್ಕೃತಿಯನ್ನು ಎತ್ತಿಹಿಡಿದು ಪೋಷಿಸಿದ್ದಾರೆ. ಜಟಿಲ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಿ, ಅದಕ್ಕೆ ಸೂಕ್ತ ಪರಿಹಾರ ಕಂಡುಕೊಂಡು ಅತ್ಯುತ್ತಮ ಫಲಿತಾಂಶಗಳನ್ನು ನೀಡಿದ್ದಾರೆ. ಅವರ ಸಾಧನೆಗಳಂತೂ ಅದ್ವಿತೀಯ ಹಾಗೂ ಅಮೂಲ್ಯ. ಇದು ಅವರ ತವರು ನಾಡಿಗೆ ಅಪಾರ ಹೆಮ್ಮೆಯನ್ನು ತಂದುಕೊಟ್ಟಿದೆ.

ಪ್ರಗತಿ ಮತ್ತು ಅಭಿವೃದ್ಧಿಗೆ ಚಾಲನೆ ನೀಡುವಲ್ಲಿ ಸುಹಾಸ್ ಅವರ ಕ್ರಿಯಾತ್ಮಕ ನಾಯಕತ್ವದ ಗುಣ, ಸಾಮರ್ಥ್ಯ ಹಾಗೂ ಪ್ರದರ್ಶನ ನೆರೆಯ ಮಲೆಯಾಳ ರಾಜ್ಯದಲ್ಲಿ ಕಂಡುಬರುತ್ತದೆ. ಸಾಮಾಜಿಕ ಮತ್ತು ಆಡಳಿತ ವಲಯದಲ್ಲಂತೂ ತಮ್ಮ ನವೀನ ಅಲೋಚನೆಗಳನ್ನು ಕಾರ್ಯಗತ ಗೊಳಿಸಿರುವ ಕನ್ನಡಿಗ ಸುಹಾಸ್ ಅವರು ಕ್ಲಿಷ್ಟ ವಾತಾವರಣದಲ್ಲಿ ತಮ್ಮ ಪ್ರತಿಭೆ ಮೆರೆದಿದ್ದಾರೆ. ಐಎಎಸ್ ಅಧಿಕಾರಿಯಾದ ಸುಹಾಸ್ ಅವರ ಪ್ರತಿಭೆಗೆ ತಕ್ಕಂತೆ ಸೇವೆ ಸಲ್ಲಿಸುವ ಅವಕಾಶ ದೊರೆತಿರುವುದು ಅದ್ಭುತ.

ಆಡಳಿತ ವ್ಯವಸ್ಥೆಯ ಆಳಕ್ಕಿಳಿದು ಅಮೋಘ ಯಶಸ್ಸನ್ನು ಕಂಡಿರುವ ಅಪರೂಪದ ವ್ಯಕ್ತಿ ಶಿವಣ್ಣ ಸುಹಾಸ್, ಮಂಡ್ಯ ಜಿಲ್ಲೆಯವರು. ತಾನು ಹುಟ್ಟಿ, ಬೆಳೆದ ನಾಡಿನ ಸಂಸ್ಕೃತಿ ಮತ್ತು ಪರಂಪರೆ ಬಗ್ಗೆ ಅಪಾರ ಗೌರವ ಹಾಗೂ ಹೆಮ್ಮೆ ಹೊಂದಿರುವ ಸುಹಾಸ್, ಭಾರತೀಯ ಆಡಳಿತ ಸೇವೆಯಲ್ಲಿ ಕಾರ್ಯ ನಿರ್ವಹಿಸಲು ದೊರೆತ ಮೊಟ್ಟ ಮೊದಲ ರಾಜ್ಯವೇ ಕೇರಳ. ಸೇವೆಗೆ ಸೇರಿ ಜವಾಬ್ದಾರಿ ವಹಿಸಿಕೊಂಡ ಆರಂಭ ದಿನದಿಂದ ಕ್ರಮ ಅನುಸಾರ ಹೊಸ ತಂತ್ರಜ್ಞಾನದ ಆವಿಷ್ಕಾರಗಳನ್ನು ಅಳವಡಿಸಿದ್ದಲ್ಲದೇ ಆಡಳಿತಾತ್ಮಕ ವಿಧಾನಗಳಲ್ಲಿ ಪರಿಷ್ಕಾರ ತಂದಿದ್ದಾರೆ.

ಸಾಂಪ್ರದಾಯಿಕ ಕುಟುಂಬ: ಮಂಡ್ಯ ಜಿಲ್ಲೆಯ ಸಾಂಪ್ರದಾಯಿಕ ಹಾಗೂ ಗೌರವಾನ್ವಿತ ಕುಟುಂಬದಲ್ಲಿ ಜನಿಸಿದ ಸುಹಾಸ್ ಅವರ ತಂದೆ ಸಿ.ಕೆ. ಶಿವಣ್ಣ, ಭಾರತೀಯ ಅರಣ್ಯ ಸೇವೆಯ (ಐಎಫ್‌ಎಸ್) ನಿವೃತ್ತ ಅಧಿಕಾರಿ. ತಾಯಿ ಶ್ರೀಮತಿ ಶುಭಾ ಶಿವಣ್ಣ ನಿಷ್ಠಾವಂತ ಗೃಹಿಣಿ. ತಂಗಿ ಶ್ರುತ ಎಂಎನ್‌ಸಿ ಕಂಪೆನಿಯ ಉದ್ಯೋಗಿ.

ಕೊಚ್ಚಿನ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಒಳಾಂಗಣ

ಧರ್ಮಪತ್ನಿ ಡಾ. ವೈಷ್ಣವಿ. ನಿವೃತ್ತ ಆಡಳಿತ ಸೇವಾ ಅಧಿಕಾರಿ ರಾಮೇಗೌಡ ಅವರ ಪುತ್ರಿ. ಸುಹಾಸ್ ಮತ್ತು ವೈಷ್ಣವಿ ದಂಪತಿಯ ಮುದ್ದಿನ ಮಗಳು ಐದು ವರ್ಷದ ನೈರಾ.

ಮಂಡ್ಯ ಜಿಲ್ಲೆಯ ಪ್ರಗತಿಪರ ಕೃಷಿ ಕುಟುಂಬದಲ್ಲಿ ಬೆಳೆದ ಸುಹಾಸ್ ಅವರ ಕುಟುಂಬಕ್ಕೆ ಚಿಕ್ಕರಸಿನಕೆರೆ ಕಾಲಭೈರವೇಶ್ವರ ಅವರ ಆರಾಧಕ ದೈವ. ಆಧ್ಯಾತ್ಮಿಕತೆ ಮತ್ತು ಸಂಸ್ಕಾರವನ್ನು ಮೈಗೂಡಿಸಿಕೊಂಡಿರುವ ಅವರು ಕುಟುಂಬದ ಮೌಲ್ಯಗಳನ್ನು ಎತ್ತಿಹಿಡಿದಿದ್ದಾರೆ. ಇಂತಹ ಹಿನ್ನೆಲೆಯ ಸುಹಾಸ್ ತಮ್ಮ ವೃತ್ತಿ ಜೀವನದ ನಿರೀಕ್ಷೆಗಳ ಹೊರತಾಗಿಯೂ, ತನ್ನದೇ ಆದ ಮಾರ್ಗವನ್ನು ರೂಪಿಸಿಕೊಂಡವರು.

ಸುಹಾಸ್ ಅವರು ಕಠಿಣಾತೀತ ಸ್ಪರ್ಧಾತ್ಮಕ ಪರೀಕ್ಷೆಗಳೊಂದಾದ ಯುಪಿಎಸ್‌ಸಿ ಪರೀಕ್ಷೆ ಕಷ್ಟಪಟ್ಟು ಓದಿ ಮೊದಲ ಪ್ರಯತ್ನದಲ್ಲೇ ತೇರ್ಗಡೆಯಾದರು. ಐಎಎಸ್ ಪರೀಕ್ಷೆಯಲ್ಲಿ ಉತ್ತಮ ರ‍್ಯಾಂಕ್ ಗಳಿಸಿದ್ದರಿಂದ ಕೇರಳ ಕೇಡರ್‌ಗೆ ಸೇವೆ ಸಲ್ಲಿಸುವ ಅವಕಾಶ ಒದಗಿಬಂತು.

ಆಡಳಿತ ಸೇವೆಯಲ್ಲಿ ಛಾಪು ಮೂಡಿಸಿದ ಸುಹಾಸ್: ಆಡಳಿತದಲ್ಲಿ ತಂತ್ರಜ್ಞಾನವನ್ನು ಬಳಸಿಕೊಳ್ಳುವಲ್ಲಿ ಹೆಚ್ಚು ಒತ್ತು ನೀಡುವ ಮೂಲಕ ಪರಿಣಾಮಕಾರಿ ಆಡಳಿತ ಸೇವೆಯಲ್ಲಿ ತಮ್ಮ ಛಾಪನ್ನು ಮೂಡಿಸಿದ ಸುಹಾಸ್, ಆಡಳಿತದಲ್ಲಿ ವಿಶಿಷ್ಟ ವಿಧಾನ ಅನುಸರಿಸಿದ್ದಕ್ಕಾಗಿ ಕೇರಳ ರಾಜ್ಯದಲ್ಲಿ ಬೇಗನೆ ಹೆಸರು ವಾಸಿಯಾದರು. ಎರ್ನಾಕುಲಂನ ಅಸಿಸ್ಟೆಂಟ್ ಕಲೆಕ್ಟರ್ ಆಗಿ ಶುರುವಾದ ಆಡಳಿತಾತ್ಮಕ ಪಯಣದಲ್ಲಿ ಬಹಳ ಬೇಗ ಯಶಸ್ಸನ್ನು ಕಂಡರು.

ಆ ರಾಜ್ಯದಲ್ಲಿದ್ದ ಆಧುನಿಕ ತಂತ್ರಜ್ಞಾನ ಪ್ರಗತಿಗಳನ್ನು ಮತ್ತು ಪರಿಷ್ಕರಿಸಿದ ವಿಧಾನಗಳನ್ನು ಸುಹಾಸ್ ಅವರು ಪರಿಚಯಿಸುವ ಮೂಲಕ ಸಾರ್ವಜನಿಕ ಸೇವೆಯಲ್ಲಿ ಅವರಿಗಿರುವ ದೂರದೃಷ್ಟಿಯನ್ನು ಸರ್ಕಾರ ಗುರುತಿಸಿತು. ಸುಹಾಸ್ ಅವರ ಅತ್ಯುತ್ತಮ ಕೊಡುಗೆಯನ್ನು ಗುರುತಿಸಿದ ಕೇರಳ ಸರ್ಕಾರ ‘ಕೊಚ್ಚಿ ಸ್ಮಾರ್ಟ್ ಸಿಟಿ’ ಉಪಕ್ರಮಕ್ಕಾಗಿ ನೀಡುವ ಪ್ರತಿಷ್ಠಿತ ‘ಅತ್ಯುತ್ತಮ ಯೋಜನಾ ಅಧಿಕಾರಿ’ಪ್ರಶಸ್ತಿ ನೀಡಿ ಗೌರವಿಸಿತು.

ಶೂನ್ಯ ಡ್ರಾಪ್‌ಔಟ್ ವಯನಾಡ್: ವಯನಾಡು ಜಿಲ್ಲೆಯ ಬುಡಕಟ್ಟು ಜನಾಂಗದಲ್ಲಿ ಶೈಕ್ಷಣಿಕ ಸಾಲಿನ ಮಧ್ಯಭಾಗದಲ್ಲಿ ಶಾಲೆ ಬಿಟ್ಟ ವಿದ್ಯಾರ್ಥಿಗಳ ಸಂಖ್ಯೆಯನ್ನು ಶೂನ್ಯವಾಗಿಸುವ ಉದ್ದೇಶದಿಂದ ‘ಶೂನ್ಯ ಡ್ರಾಪ್‌ಔಟ್ ವಯನಾಡ್’ ಕಾರ್ಯಕ್ರಮ ಪ್ರಾರಂಭಿಸಿದರು. ಸುಹಾಸ್ ಅವರು ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಶಾಲೆಬಿಟ್ಟ ವಿದ್ಯಾರ್ಥಿಗಳನ್ನು ವೈಯಕ್ತಿಕವಾಗಿ ಕೊಚ್ಚಿ ಮೆಟ್ರೊ ರೈಲಿನಲ್ಲಿ ಕರೆದೊಯ್ಯುವ ಮೂಲಕ ಶೇ.75 ರಷ್ಟು ಬುಡಕಟ್ಟು ಮಕ್ಕಳನ್ನು ಶಿಕ್ಷಣ ವ್ಯವಸ್ಥೆಗೆ ಮರು ಸಂಘಟಿಸಿದರು.

ಆಲಪ್ಪುಳ, ವಯನಾಡು ಮತ್ತು ಎರ್ನಾಕುಲಂ ಜಿಲ್ಲೆಗಳ ಕಲೆಕ್ಟರ್ ಆಗಿ ಸೇವೆ ಸಲ್ಲಿಸಿದ ಸುಹಾಸ್, ಆಲಪ್ಪುಳದ ಜಿಲ್ಲಾ ಕಲೆಕ್ಟರ್ ಆಗಿದ್ದ ಅವಧಿಯಲ್ಲಿ ಜಿಲ್ಲೆಯ ಸರ್ಕಾರಿ ಶಾಲೆಯೊಂದಕ್ಕೆ ಭೇಟಿ ನೀಡಿ ಶಾಲೆಗಳಲ್ಲಿ ಗುಣಮಟ್ಟದ ಮಧ್ಯಾಹ್ನ ಊಟ (ಮಿಡ್-ಡೇ ಮೀಲ್)ದ ಅವಶ್ಯಕತೆ ಬಗ್ಗೆ ಮನವರಿಕೆ ಮಾಡಿಕೊಟ್ಟು ಜನರ ಮನಗೆದ್ದರು.

ಕ್ಲೀನ್ ಎರ್ನಾಕುಲಂ: ಎರ್ನಾಕುಲಂನ ಜಿಲ್ಲಾಧಿಕಾರಿಯಾದ ಸಂದರ್ಭದಲ್ಲಿ ಸುಹಾಸ್ ಅವರು ಬಹಳಷ್ಟು ಸವಾಲುಗಳನ್ನು ಎದುರಿಸಬೇಕಾಯಿತು. ಕರಾವಳಿ ಸವೆತ, ವಿನಾಶಕಾರಿ ಸಮುದ್ರ ಅಲೆಗಳ ಹೊಡೆತ. ಇದರ ಜತೆಯಲ್ಲಿ ಕೋವಿಡ್-19 ಸಾಂಕ್ರಾಮಿಕ ಪರಿಸ್ಥಿತಿ ಒದಗಿಬಂದಿತ್ತು. ಇದೆಲ್ಲದರ ನಡುವೆಯೂ ಸಾರ್ವಜನಿಕರ ಕಲ್ಯಾಣದ ಬಗ್ಗೆ ಇದ್ದ ಕಾಳಜಿ ಮಾತ್ರ ಕೊಂಚವೂ ಕಡಿಮೆಯಾಗಿರಲಿಲ್ಲ. ‘ಅಪರೇಷನ್ ಬ್ರೇಕ್‌ಥ್ರೂ’ ಜಾರಿಗೆ ತಂದು, ನೀರಿನ ಅಡಚಣೆಯ ವಿರುದ್ಧ ಹೋರಾಡಿದರು. ‘ಕ್ಲೀನ್ ಎರ್ನಾಕುಲಂ’ ಅನುಷ್ಠಾನಕ್ಕೆ ತರುವ ಮೂಲಕ ತ್ಯಾಜ್ಯ ನಿರ್ವಹಣೆ ಮಾಡಿ ಚಾಣಾಕ್ಷತನ ಮೆರೆದರು.

ಕೋವಿಡ್ ಸಾಂಕ್ರಾಮಿಕದಲ್ಲಿ ಜಿಲ್ಲೆಯಲ್ಲಿ ‘ಆಕ್ಸಿಜನ್ ವಾರ್ ರೂಂ’ ಹಾಗೂ ‘ರೋಗಿ ಲಿಫ್ಟ್ ಕೇರ್’ ಉಪಕ್ರಮ ಅಳವಡಿಸಿ ಸಮಸ್ಯೆಗೆ ಪರಿಹಾರ ಕಂಡುಹಿಡಿದರು. ಇದು ರಾಷ್ಟ್ರ ಮಟ್ಟದಲ್ಲಿ ಗುರುತಿಸಲ್ಪಟ್ಟಿತು. ಸಾಂಕ್ರಾಮಿಕ ರೋಗದ ವಿರುದ್ಧದ ಹೋರಾಟದಲ್ಲಿ ಎರ್ನಾಕುಲಂ ಅನ್ನು ಇಡೀ ದೇಶಕ್ಕೆ ಮಾದರಿ ಜಿಲ್ಲೆ ಮಾಡಿದರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಯಶಸ್ಸಿನ ಹಾದಿಯಲ್ಲಿ ಸಿಐಎಎಲ್: ಪ್ರವಾಹ ಪರಿಸ್ಥಿತಿ ಮತ್ತು ಕೋವಿಡ್-19 ಸಾಂಕ್ರಾಮಿಕವನ್ನು ಪರಿಣಾಮ ಎದುರಿಸಿ ಆಗಷ್ಟೇ ಹೊರಬಂದಿದ್ದ ಸುಹಾಸ್ ಅವರು ಕೊಚ್ಚಿನ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ (ಸಿಐಎಎಲ್)ದ ವ್ಯವಸ್ಥಾಪಕ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಳ್ಳಬೇಕಾಗಿ ಬಂತು. ಅಭಿವೃದ್ಧಿ ಕುಂಠಿತ ಸ್ಥಿತಿಯಲ್ಲಿದ್ದ ಸಿಐಎಎಲ್, ಎಲ್ಲ ರಂಗಗಳಲ್ಲೂ ಗಣನೀಯ ನಷ್ಟ ಅನುಭವಿಸುತ್ತಿತ್ತು. ಅಂತಹ ದಿನಗಳಲ್ಲಿ ಮಹತ್ವದ ಜವಾಬ್ದಾರಿ ವಹಿಸಿಕೊಂಡು ಕಂಪನಿಗೆ ಗಮನಾರ್ಹ ತಿರುವು ತಂದುಕೊಟ್ಟರು. ಪರಿಣಾಮಕಾರಿ ನೀತಿಗಳನ್ನು ಜಾರಿಗೆ ತಂದು ಕಂಪನಿಗೆ ಸ್ಥಿರತೆ ತರುವಲ್ಲಿ ಯಶಸ್ವಿಯಾದರು ಹಾಗೂ ಸಿಐಎಎಲ್ ಅನ್ನು ಅಭಿವೃದ್ಧಿ ಮುಂಚೂಣಿಗೆ ಕೊಂಡೊಯ್ದರು.

ಕೊರೋನಾ ಸಾಂಕ್ರಾಮಿಕ ಪ್ರಭಾವ ಸಿಐಎಎಲ್ ಮೇಲೆ ಆಗಿದ್ದರಿಂದ ಜಾಗತಿಕ ಪ್ರಯಾಣಿಕರ ಸಂಖ್ಯೆಯ ಪ್ರಮಾಣದಲ್ಲಿ ಭಾರಿ ಕುಸಿತ ಉಂಟಾಯಿತು. ಪ್ರಯಾಣಿಕರ ದಟ್ಟಣೆ ಇಳಿಕೆಯಿಂದ 2020-21ರ ಆರ್ಥಿಕ ವರ್ಷದಲ್ಲಿ ಸಿಐಎಎಲ್ ₹85 ಕೋಟಿ ನಷ್ಟ ಅನುಭವಿಸಬೇಕಾಯಿತು. ಸುಹಾಸ್ ಅವರ ದೂರದೃಷ್ಟಿ ಹಾಗೂ ಅವರ ತಂಡದ ಶ್ರಮದಿಂದ ಈ ಸವಾಲನ್ನು ಎದುರಿಸಿ ಯಶಸ್ವಿಯಾಗಿ ಸಿಐಎಎಲ್ ಹೊರಬರಲು ಸಾಧ್ಯವಾಯಿತು. ಸುರಕ್ಷಿತ ಮತ್ತು ಪ್ರಯಾಣಿಕ ಸ್ನೇಹಿ ಕಾರ್ಯಾಚರಣೆಗಳನ್ನು 'ಮಿಷನ್ ಸೇಫ್‌ಗಾರ್ಡ್' ಯೋಜನೆ ಮೂಲಕ ವಿಮಾನ ನಿಲ್ದಾಣದಲ್ಲಿ ಅನುಷ್ಠಾನಗೊಳಿಸಿದ್ದರಿಂದ ಏರ್‌ಪೋರ್ಟ್ ಕೌನ್ಸಿಲ್ ಇಂಟರ್ನ್ಯಾಷನಲ್ (ACI)ನ ಪ್ರತಿಷ್ಠಿತ ‘ಏರ್‌ಪೋರ್ಟ್ ಸೇವಾ ಗುಣಮಟ್ಟ ಪ್ರಶಸ್ತಿ-2022’ಗೆ ಸಿಐಎಎಲ್ ಭಾಜನವಾಗಲು ಸಾಧ್ಯವಾಯಿತು. 2021-22ರ ಹಣಕಾಸು ವರ್ಷದಲ್ಲಿ ಸುರಕ್ಷಿತ, ಸುಭದ್ರ ಮತ್ತು ಪ್ರಯಾಣಿಕ ಸ್ನೇಹಿ ಕಾರ್ಯಾಚರಣೆಗಳನ್ನು ಜಾರಿಗೆ ತಂದಿದ್ದರಿಂದ ಸಿಐಎಎಲ್ ಮರಳಿ ಸುಸ್ಥಿತಿಗೆ ತಲುಪಿ, ₹37 ಕೋಟಿ ಲಾಭ ಗಳಿಸಲು ಕಾರಣವಾಯಿತು. ಕೋವಿಡ್ ನಂತರದ ಅವಧಿಯಲ್ಲಿ ಲಾಭ ಗಳಿಸಿದ ಪ್ರಥಮ ಭಾರತೀಯ ವಿಮಾನ ನಿಲ್ದಾಣ ಎಂಬ ಹೆಗ್ಗಳಿಕೆಗೂ ಪಾತ್ರವಾಯಿತು.

ಇದು ಇಷ್ಟಕ್ಕೆ ನಿಲ್ಲದೇ ವಿಮಾನ ನಿಲ್ದಾಣದ ಏರುಮುಖ ಸ್ಥಿತಿ 2022-23ರಲ್ಲೂ ಮುಂದುವರಿದು, ಒಟ್ಟು ₹521.50 ಕೋಟಿ ಲಾಭ ಗಳಿಸಿತು. ನಿವ್ವಳ ಲಾಭ ₹267 ಕೋಟಿಯ ದಾಖಲೆ ನಿರ್ಮಿಸಿದ ಸಿಐಎಎಲ್ 2023-24ನೇ ಆರ್ಥಿಕ ಸಾಲಿನಲ್ಲಿ ಒಟ್ಟು ₹1,014.21 ಕೋಟಿ ಆದಾಯ ಗಳಿಸಿ ಮೈಲುಗಲ್ಲನ್ನೇ ನಿರ್ಮಿಸಿದೆ. ಈ ಅವಧಿಯಲ್ಲಿ ಸಿಐಎಎಲ್‌ನ ತೆರಿಗೆ ಮುನ್ನ ಲಾಭ ₹552.37 ಕೋಟಿಯಾದರೆ, ತೆರಿಗೆ ನಂತರ ನಿವ್ವಳ ಲಾಭ ₹412.58 ಕೋಟಿ ದಾಖಲಿಸಿದೆ. ಷೇರುದಾರರಿಗೆ ಶೇ.45 ರಷ್ಟು ಲಾಭಾಂಶವನ್ನೂ ನೀಡಿದೆ.

ಏಳು ಮೆಗಾ ಯೋಜನೆಗಳು: ಅಕ್ಟೋಬರ್ 2, 2023 ರಂದು, ವಿಮಾನ ನಿಲ್ದಾಣವು 7 ಮೆಗಾ ಯೋಜನೆಗಳನ್ನು ಅನಾವರಣಗೊಳಿಸಿ ಮೂಲಸೌಕರ್ಯ, ಅಭಿವೃದ್ಧಿ, ಮತ್ತು ನವೀಕರಣದ ಹೊಸ ಶಕೆಯನ್ನು ಮುಂದುವರಿಸಿದೆ. ಅವುಗಳಲ್ಲಿ 5 ಯೋಜನೆಗಳು ಆಮದು ಕಾರ್ಗೋ ಟರ್ಮಿನಲ್, ನವೀಕರಿಸಿದ ವಿಮಾನ ನಿಲ್ದಾಣದ ತುರ್ತು ಸೇವೆಗಳು, ಆಂತರಿಕ ಡಿಜಿಯಾತ್ರಾ ಸಾಫ್ಟ್‌ವೇರ್, 0484 ಏರೋ ಲಾಂಜ್ ಮತ್ತು ಪರಿಧಿಯ ಒಳನುಗ್ಗುವಿಕೆ ಪತ್ತೆ ವ್ಯವಸ್ಥೆ (PIDS)ಯೋಜನೆಗಳು ಉದ್ಘಾಟನೆಗೊಂಡ ಕೇವಲ 10 ತಿಂಗಳೊಳಗೆ ಕಾರ್ಯಾರಂಭಗೊಂಡಿವೆ. ಪ್ರಸ್ತುತ, ಅಂತಾರಾಷ್ಟ್ರೀಯ ಟರ್ಮಿನಲ್ (T3) ವಿಸ್ತರಣೆ ಮತ್ತು ಗಾಲ್ಫ್ ಪ್ರವಾಸೋದ್ಯಮ ಉಪಕ್ರಮದಂತಹ ಯೋಜನೆ ಕಾರ್ಯಗಳು ಪ್ರಗತಿಯಲ್ಲಿವೆ. ಈ ಎಲ್ಲ ಯೋಜನೆಗಳು ಸಿಐಎಎಲ್ ಅನ್ನು ಅಭಿವೃದ್ಧಿಯ ಪಥದತ್ತ ಕೊಂಡೊಯ್ಯಲಿರುವುದು ಮಾತ್ರವಲ್ಲದೆ, ಭಾರತದ ಅತ್ಯುತ್ತಮ ಏರ್‌ಪೋರ್ಟ್‌ಗಳಲ್ಲಿ ಒಂದಾಗಿಸಲಿದೆ ಎಂದು ವ್ಯವಸ್ಥಾಪಕ ನಿರ್ದೇಶಕ ಎಸ್. ಸುಹಾಸ್ ನುಡಿದಿದ್ದಾರೆ.

ನೂತನ ವಿಮಾನ ಮಾರ್ಗಗಳು: ವೈವಿಧ್ಯಮಯ ಆದಾಯದ ಸ್ಟ್ರೀಮ್‌ಗಳ ಅನ್ವೇಷಣೆಯಲ್ಲಿರುವ CIAL ಏರೋ-ಅಲ್ಲದ ಆದಾಯದ ಮೂಲಗಳ ಮೇಲೆ ಕೇಂದ್ರೀಕರಿಸಿದೆ. ಕಂಪನಿಯ ನೂತನ 5-ಸ್ಟಾರ್ ಹೋಟೆಲ್, TAJ CIAL ಅನ್ನು ಪ್ರತಿಷ್ಠಿತ IHCL-ತಾಜ್ ಗ್ರೂಪ್ ನಿರ್ವಹಿಸುತ್ತದೆ. ಈ ನವೆಂಬರ್‌ನಲ್ಲಿ ಉದ್ಘಾಟನೆಗೊಳ್ಳಲಿದೆ. ಐಷಾರಾಮಿ ಸಾರಿಗೆ ಸೌಕ ರ್ಯಗಳು ಒದ ಗಿಸುವ ಕಾರ್ಯವೂ ನಿರ್ಮಾಣ ಹಂತದಲ್ಲಿದೆ. ಇದರ ಜತೆಯಲ್ಲಿ ಹೊಸ ಅಂತಾರಾಷ್ಟ್ರೀಯ ಮಾರ್ಗಗಳನ್ನು ಪರಿಚಯಿಸುವ ಹಾಗೂ ವಿವಿಧ ಸ್ಥಳಗಳಿಗೆ ಸಂಪರ್ಕಗಳನ್ನು ಕಲ್ಪಿಸುವ ಮೂಲಕ ವಿಮಾನ ಪ್ರಯಾಣದ ಆಯ್ಕೆಗಳನ್ನು ವಿಸ್ತರಿಸಲು ಸಿಐಎಎಲ್ ಪ್ರಯತ್ನಿಸುತ್ತಿದೆ.

ಅದರ ಭಾಗವಾಗಿ ಕೊಚ್ಚಿನ್‌ನಿಂದ ವಿಯೆಟ್ ಜೆಟ್ ಮೂಲಕ ವಿಯಾಟ್ನಾಂಗೆ ನೇರ ವಿಮಾನ ಪ್ರಾರಂಭಿಸಲಿದೆ. ಥಾಯ್ ಏರ್ವೇಸ್ ಮತ್ತು ಥಾಯ್ ಲಯನ್ ಏರ್ ಮೂಲಕ ಬ್ಯಾಂಕಾಕ್‌ಗೆ ಹೊಸ ಸೇವೆಗಳನ್ನು ಪ್ರಾರಂಭಿಸುವ ಮೂಲಕ ಪ್ರವಾಸೋದ್ಯಮ ಮತ್ತು ವ್ಯಾಪಾರವನ್ನು ಉತ್ತೇಜನಕ್ಕೆ ಆದ್ಯತೆ ನೀಡಿದೆ. ಮುಂದಿನ ದಿನಗಳಲ್ಲಿ CIAL ತನ್ನ ಮಾರ್ಗ ಜಾಲಕ್ಕೆ ಯುರೋಪಿಯನ್ ವಲಯಗಳನ್ನು ಸೇರಿಸುವ ಅವಕಾಶಗಳತ್ತ ದೃಷ್ಟಿ ಹರಿಸಿದೆ. ಯುರೋಪ್‌ಗೆ ನೇರ ವಿಮಾನಗಳನ್ನು ಹಾರಾಟ ಮಾಡುವ ಯೋಜನೆಯಲ್ಲಿದೆ.

ಸಿಐಎಎಲ್ ಅಧ್ಯಕ್ಷರು, ಕೇರಳ ಮುಖ್ಯಮಂತ್ರಿ ಸೇರಿದಂತೆ ಸರ್ಕಾರ ಹಾಗೂ ಸಿಐಎಎಲ್ ನಿರ್ದೇಶಕರ ಮಂಡಳಿಯೊಂದಿಗೆ ಉತ್ತಮ ಸಮನ್ವಯದ ಮೂಲಕ ಸುಹಾಸ್ ವಿಮಾನ ನಿಲ್ದಾಣವನ್ನು ಪ್ರಗತಿಗಾಗಿ ಎಲ್ಲ ಹಂತಗಳಲ್ಲೂ ಮಾರ್ಗದರ್ಶನ ಮಾಡಿ ಮೆಚ್ಚುಗೆ ಗಳಿಸಿದ್ದಾರೆ.

ಎಸ್. ಸುಹಾಸ್
ಸಿಐಎಎಲ್, ವ್ಯವಸ್ಥಾಪಕ ನಿರ್ದೇಶಕ

ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ಸಮಿತಿ ಶಿಫಾರಸು

ನಕ್ಸಲ್ ಪ್ರಕರಣಗಳಿಗೆ ವಿಶೇಷ ನ್ಯಾಯಾಲಯ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಶರಣಾಗತರಾದ ನಕ್ಸಲರ ಮೇಲೆ ದಾಖಲಾಗಿರುವ ಪ್ರಕರಣಗಳ ತ್ವರಿತ ವಿಚಾರಣೆಗೆ ವಿಶೇಷ ನ್ಯಾಯಾಲಯ ಸ್ಥಾಪಿಸಲು 'ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ಸಮಿತಿ' ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಪಶ್ಚಿಮಘಟ್ಟ ಸೇರಿದಂತೆ ರಾಜ್ಯದ ಹಲವೆಡೆ ಎಡಪಂಥೀಯ ತೀವ್ರಗಾಮಿ ಸಂಘಟನೆ ಚಟುವಟಿಕೆಗಳು ಸಕ್ರಿಯವಾಗಿದ್ದಾಗ, ಸ್ಥಳೀಯ ಯುವಜನರು ಸಂಘಟನೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸೇರ್ಪಡೆಯಾಗಿದ್ದರು. ನಿರುದ್ಯೋಗ, ಅಸಮಾನತೆ, ಮೂಲಸೌಕರ್ಯಗಳ ಅಭಿವೃದ್ಧಿ ಕಲ್ಪಿಸದ ಆಡಳಿತದ ಧೋರಣೆಗಳ ವಿರುದ್ಧ ಆಕ್ರೋಶಗೊಂಡಿದ್ದ ಯುವಕರ ಸಂಘಟಿಸಿ, ಚಳವಳಿ ಕಟ್ಟಲು ನಕ್ಸಲರು ಮುಂದಾಗಿದ್ದರು.

ಚಳವಳಿ ಹತ್ತಿಕ್ಕಲು ರಚಿಸಲಾಗಿದ್ದ ನಕ್ಸಲ್ ನಿಗ್ರಹ ಪಡೆಯು ಅರಣ್ಯ ಪ್ರದೇಶದಲ್ಲಿ ಕಾರ್ಯಾಚರಣೆ ತೀವ್ರಗೊಳಿಸಿತ್ತು. ಕೆಲ ನಕ್ಸಲರ ಹತ್ಯೆಯನ್ನೂ ಮಾಡಿತ್ತು. ಇದೇ ಸಮಯದಲ್ಲಿ ರಾಜ್ಯ ಸರ್ಕಾರ ನಕ್ಸಲ್ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದವರ ಶರಣಾಗತಿಗೆ ಅವಕಾಶ ಮಾಡಿಕೊಟ್ಟಿತ್ತು. ಶರಣಾಗತರಾದವರಿಗೆ 2015ರಲ್ಲಿ ವಿಶೇಷ ಪ್ಯಾಕೇಜ್ ಘೋಷಿಸಿತ್ತು.

ಇತ್ಯರ್ಥವಾಗದ ಹಲವು ಪ್ರಕರಣ: ಭೂಗತರಾಗಿದ್ದ 15 ನಕ್ಸಲರು, ಸರ್ಕಾರ ಶರಣಾಗತಿ ಪ್ಯಾಕೇಜ್ ಘೋಷಿಸಿದ ನಂತರ ಶರಣಾಗಿದ್ದರು. ಅವರಲ್ಲಿ 14 ಮಂದಿ ಜಾಮೀನಿನ ಮೇಲೆ ಹೊರಗೆ ಬಂದಿದ್ದಾರೆ. ಒಬ್ಬ ಮಹಿಳೆ ಜೈಲಿನಲ್ಲೇ ಇದ್ದಾರೆ. ಒಂದು ದಶಕವಾದರೂ ಅವರಿಗೆ ಜಾಮೀನು ದೊರೆತಿಲ್ಲ. ಪ್ರಕರಣಗಳ ವಿಚಾರಣೆಯೂ ಪೂರ್ಣಗೊಂಡಿಲ್ಲ. ಜಾಮೀನಿನ ಮೇಲೆ ಹೊರಗೆ ಬಂದ ಕೆಲವರ ಮೇಲಿದ್ದ ಪ್ರಕರಣಗಳು ಖುಲಾಸೆಯಾಗಿದ್ದರೆ, ಇನ್ನೂ ಹಲವರ ಮೇಲಿನ ಪ್ರಕರಣಗಳ ವಿಚಾರಣೆ ವಿವಿಧ ನ್ಯಾಯಾಲಯಗಳಲ್ಲಿ ನಡೆಯುತ್ತಿವೆ.

'ನಕ್ಸಲ್ ಚಟುವಟಿಕೆಗಳು ತೀವ್ರವಾಗಿದ್ದಾಗ ಹಲವರ ಮೇಲೆ ಪ್ರಕರಣ ದಾಖಲಾಗಿದ್ದವು. ದಶಕ ಕಳೆದರೂ ಇತ್ಯರ್ಥವಾಗಿಲ್ಲ. ಇಂದಿಗೂ ನ್ಯಾಯಾಲಯಗಳಿಗೆ ಅಲೆದಾಡುತ್ತಿದ್ದಾರೆ. ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಿಲ್ಲ. ಹಾಗಾಗಿ, ವಿಶೇಷ ನ್ಯಾಯಾಲಯ ಸ್ಥಾಪನೆ ಅಗತ್ಯ' ಎನ್ನುತ್ತಾರೆ ವಕೀಲ ಕೆ.ಪಿ.ಶ್ರೀಪಾಲ್.

> **ಸಶಸ್ತ್ರ ಕ್ರಾಂತಿ ಮಾರ್ಗ ತ್ಯಜಿಸಿ, ಕಾನೂನಿನ ವ್ಯಾಪ್ತಿಯಲ್ಲಿ ಹೋರಾಟ ನಡೆಸಲು ಭೂಗತ ಮಾವೋವಾದಿಗಳಿಗೆ ಮನವರಿಕೆ ಮಾಡುತ್ತಿದ್ದೇವೆ**
> **ಬಂಜಗೆರೆ ಜಯಪ್ರಕಾಶ್,** ಸದಸ್ಯ
> ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ಸಮಿತಿ

> **ಪ್ರಕರಣಗಳು ತ್ವರಿತವಾಗಿ ಇತ್ಯರ್ಥವಾದಾಗ ಮಾತ್ರ ನಕ್ಸಲರಿಗೆ ನೀಡುವ ನೆರವು ಪ್ರಯೋಜನವಾಗುತ್ತದೆ. ಇಲ್ಲದಿದ್ದರೆ ಪ್ರಯತ್ನ ಫಲ ನೀಡದು**
> **ಕೆ.ಪಿ. ಶ್ರೀಪಾಲ್,** ಸದಸ್ಯ
> ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ಸಮಿತಿ

ದಶಕ ಕಳೆದರೂ ದೊರೆತಿಲ್ಲ ಪ್ಯಾಕೇಜ್!

ಶರಣಾಗತರಾದ ನಕ್ಸಲರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸರ್ಕಾರ ವಿಶೇಷ ಪ್ಯಾಕೇಜ್ ಘೋಷಿಸಿತ್ತು. ನಕ್ಸಲ್ ಚಳವಳಿಯಲ್ಲಿದ್ದ ರಾಜ್ಯದವರು, ಹೊರ ರಾಜ್ಯದವರ ಅವರ ಚಟುವಟಿಕೆ, ಮೊಕದ್ದಮೆಗಳ ಆಧಾರದಲ್ಲಿ ಮೂರು ವರ್ಗಗಳಾಗಿ ವಿಂಗಡಿಸಿ, ₹2 ಲಕ್ಷದಿಂದ ₹5 ಲಕ್ಷದವರೆಗೆ ನಗದು, ಕೃಷಿ ಮಾಡಲು ಬಯಸುವವರಿಗೆ ತಲಾ ಎರಡು ಎಕರೆ ಜಮೀನು, ವಿವಿಧ ವೃತ್ತಿಪರ ತರಬೇತಿ ಪಡೆಯಲು ಬಯಸುವವರಿಗೆ ಒಂದು ವರ್ಷದವರೆಗೆ ಪ್ರತಿ ತಿಂಗಳು ತಲಾ ₹5,000 ನೆರವು ನಿಗದಿ ಮಾಡಿತ್ತು.

ಅಂದು ಮೊದಲ ಕಂತು ನೀಡಿದ್ದ ಸರ್ಕಾರ ಉಳಿದದ್ದನ್ನು ಈವರೆಗೆ ಪಾವತಿಸಿಲ್ಲ. ಕೆಲವರಿಗೆ ಜಮೀನು ಮಂಜೂರಾದರೂ ಅರಣ್ಯ ಕಾಯ್ದೆ, ಭೂ ಮಂಜೂರಾತಿ ಮತ್ತಿತರ ಕಾರಣಗಳಿಂದ ಭೂ ಒಡೆತನವೂ ಸಿಕ್ಕಿಲ್ಲ.

ವರ್ಗ	ಹಿಂದಿನ ಪರಿಹಾರ	ಪರಿಷ್ಕೃತ ಮೊತ್ತ (ಲಕ್ಷಗಳಲ್ಲಿ)
ವರ್ಗ 'ಎ'	5	7.5
ವರ್ಗ 'ಬಿ'	3	5
ವರ್ಗ 'ಸಿ'	2	3

ನಗದು ನೆರವು ಹೆಚ್ಚಳ

ಪ್ರಮುಖ ನಕ್ಸಲರ ಹತ್ಯೆಯಾಗಿ, ಕೆಲವರು ಶರಣಾಗತರಾಗಿದ್ದರೂ, ರಾಜ್ಯದಲ್ಲಿ ನಕ್ಸಲ್ ಚಟುವಟಿಕೆ ಸಂಪೂರ್ಣ ಸ್ಥಗಿತವಾಗಿಲ್ಲ. ಇನ್ನೂ ಭೂಗತರಾಗಿರುವವರಿಗೆ ಶರಣಾಗಲು ರಾಜ್ಯ ಸರ್ಕಾರ ಮತ್ತೆ ಅವಕಾಶ ಮಾಡಿಕೊಟ್ಟಿದೆ. ಶರಣಾಗತಿ ಮತ್ತು ಪುನರ್ವಸತಿ ಯೋಜನೆಯನ್ನೂ ಪರಿಷ್ಕರಿಸಿದೆ. ಸ್ವಾವಲಂಬಿ ಬದುಕಿಗಾಗಿ ವೃತ್ತಿಪರ ತರಬೇತಿ ಪಡೆಯಲು ಇದ್ದ ಒಂದು ವರ್ಷದ ಮಿತಿಯನ್ನು ಎರಡು ವರ್ಷಗಳಿಗೆ ವಿಸ್ತರಿಸಿದೆ. ನಗದು ನೆರವನ್ನೂ ಹೆಚ್ಚಿಸಿದೆ.

ರಾಜ್ಯೋತ್ಸವ ಪ್ರಶಸ್ತಿ ತಜ್ಞರ ಸಲಹಾ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಸಾಲಿನ 'ರಾಜ್ಯೋತ್ಸವ ಪ್ರಶಸ್ತಿ'ಗೆ ವಿವಿಧ ಕ್ಷೇತ್ರಗಳ ಸಾಧಕರ ಆಯ್ಕೆಗೆ ಸಂಬಂಧಿಸಿದಂತೆ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಅಧ್ಯಕ್ಷತೆಯಲ್ಲಿ 48 ಸದಸ್ಯರನ್ನೊಳಗೊಂಡ ಸಲಹಾ ಸಮಿತಿಯನ್ನು ರಚಿಸಲಾಗಿದೆ.

ಈ ಸಮಿತಿಯು ಸಾಹಿತ್ಯ, ವೈದ್ಯಕೀಯ, ಕೃಷಿ, ಸಮಾಜಸೇವೆ, ಚಲನಚಿತ್ರ, ಕ್ರೀಡೆ ಸೇರಿ ವಿವಿಧ ಕ್ಷೇತ್ರಗಳ ತಜ್ಞರನ್ನು ಒಳಗೊಂಡಿದೆ. ವಿವಿಧ ಅಕಾಡೆಮಿ ಹಾಗೂ ಪ್ರಾಧಿಕಾರಗಳ ಪ್ರತಿನಿಧಿಗಳು ಸಮಿತಿಯ ಪದನಿಮಿತ್ತ ಸದಸ್ಯರಾಗಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿದ್ದಾರೆ.

ಕರ್ನಾಟಕ ರಾಜ್ಯೋತ್ಸವದ 69ನೇ ವರ್ಷಾಚರಣೆ ಅಂಗವಾಗಿ ಈ ಬಾರಿ 69 ಸಾಧಕರಿಗೆ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿ ನೀಡಲಿದೆ. ಪ್ರಶಸ್ತಿಯು ತಲಾ ₹5 ಲಕ್ಷ ನಗದು ಹಾಗೂ 25 ಗ್ರಾಂ. ಚಿನ್ನದ ಪದಕ ಒಳಗೊಂಡಿರಲಿದೆ.

ವೀರಣ್ಣ ರಾಜೂರಗೆ 'ರಮಣಶ್ರೀ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ವೀರಣ್ಣ ರಾಜೂರ

ಬೆಂಗಳೂರು: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಹಾಗೂ ರಮಣಶ್ರೀ ಪ್ರತಿಷ್ಠಾನ ನೀಡುವ 2024ನೇ ಸಾಲಿನ 'ರಮಣಶ್ರೀ ಶರಣ ಪ್ರಶಸ್ತಿ'ಗಳು ಘೋಷಣೆಯಾಗಿವೆ.

'ರಮಣಶ್ರೀ ಶರಣ ಜೀವಮಾನ ಸಾಧನೆ ಪ್ರಶಸ್ತಿ'ಗೆ ಧಾರವಾಡದ ಸಾಹಿತಿ ವೀರಣ್ಣ ರಾಜೂರ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯು ₹50 ಸಾವಿರ ನಗದು ಮತ್ತು ಫಲಕವನ್ನು ಒಳಗೊಂಡಿದೆ.

'ರಮಣಶ್ರೀ ಶರಣ ಹಿರಿಯ ಶ್ರೀ': ಶರಣ ಸಾಹಿತ್ಯ ಅಧ್ಯಯನ ಮತ್ತು ಸಂಶೋಧನೆಗೆ ಬೆಂಗಳೂರಿನ ಎಚ್.ಎಸ್. ಸಿದ್ಧಗಂಗಪ್ಪ ಮತ್ತು ಅಕ್ಕಲ ಕೋಟೆಯ ಗುರುಲಿಂಗಪ್ಪ ಧಬಾಲೆ, ಆಧುನಿಕ ವಚನ ರಚನೆಗೆ ಮೈಸೂರಿನ ಸಿ.ಪಿ.ಸಿದ್ಧಾಶ್ರಮ ಮತ್ತು ಹಾಸನದ ಸುಶೀಲಾ ಸೋಮಶೇಖರ್, ವಚನ ಸಂಗೀತಕ್ಕೆ ಬೆಂಗಳೂರಿನ ಎಂ.ಎಸ್. ಶೀಲಾ ಹಾಗೂ ಎಂ.ಪಿ. ತ್ಯಾಗರಾಜ್ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯು ತಲಾ ₹40 ಸಾವಿರ ನಗದು ಒಳಗೊಂಡಿದೆ.

ರಮಣಶ್ರೀ ಶರಣ ಉತ್ತೇಜನ ಪ್ರಶಸ್ತಿ: ಶರಣ ಸಾಹಿತ್ಯ ಅಧ್ಯಯನ ಮತ್ತು ಸಂಶೋಧನೆಗೆ ಗದಗ ಜಿಲ್ಲೆಯ ಅಂದಾಪುರದ ವೀರಣ್ಣ ಅರವಟಗಿಮಠ, ಆಧುನಿಕ ವಚನ ರಚನೆಗೆ ಉಡುಪಿ ಜಿಲ್ಲೆಯ ಕಾತ್ಯಾಯಿನಿ ಕುಂಜಿಬೆಟ್ಟು, ವಚನ ಸಂಗೀತಕ್ಕೆ ಬೆಂಗಳೂರಿನ ರಂಜನಿ ವಾಸುಕಿ ಹಾಗೂ ರಾಯಚೂರಿನ ವಡವಾಟಿ ಶಾರದಾ ಭರತ್ ಆಯ್ಕೆಯಾಗಿದ್ದಾರೆ. ಶರಣ ಸಂಸ್ಕೃತಿ ಪ್ರಸಾರ ಸೇವಾ ಸಂಸ್ಥೆ [illegible] ಎಚ್.ಎಸ್., 'ರಮಣಶ್ರೀ ಪ್ರೋತ್ಸಾಹ ಪುರಸ್ಕಾರ'ಕ್ಕೆ ಬೆಂಗಳೂರಿನ ಸಂಗಮೇಶ್ ಉಪಾಸೆ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯು ತಲಾ ₹20 ಸಾವಿರ ನಗದು ಒಳಗೊಂಡಿದೆ.

ಅ. 18 ರಂದು ಬೆಂಗಳೂರಿನ ರಮಣಶ್ರೀ ಹೋಟೆಲ್‌ನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಎಸ್. ಷಡಕ್ಷರಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ.ಸೋಮಶೇಖರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕವಿಗೋಷ್ಠಿ: ಪಾಲ್ಗೊಳ್ಳದಿರಲು ಆರಿಫ್ ನಿರ್ಧಾರ

ಮೈಸೂರು: 'ಈ ಬಾರಿಯ ದಸರಾ ಪ್ರಧಾನ (ಸಮೃದ್ಧ) ಕವಿಗೋಷ್ಠಿಯಲ್ಲಿ ನಾನು ಭಾಗವಹಿಸುತ್ತಿಲ್ಲ. ಆಮಂತ್ರಣ ಪತ್ರಿಕೆ ನೋಡಿದ ಮೇಲೆ ಈ ನಿರ್ಧಾರಕ್ಕೆ ಬಂದಿರುವೆ' ಎಂದು ಕವಿ, ಅನುವಾದಕ ಆರಿಫ್ ರಾಜಾ ಹೇಳಿದ್ದಾರೆ.

ಕರ್ನಾಟಕ ಸರ್ಕಾರದ ಸಚಿವಾಲಯ (ಭದ್ರತೆಗಳು)
ಆರ್ಥಿಕ ಇಲಾಖೆ
ವಿಧಾನಸೌಧ, ಬೆಂಗಳೂರು.

1. ಒಟ್ಟು ಮೊತ್ತ: ರೂ.4000 ಕೋಟಿ (ರೂ.2000 ಕೋಟಿ–08 ವರ್ಷಗಳ ಅಧಿಕಾರಾವಧಿ) ಮತ್ತು (ರೂ.2000 ಕೋಟಿ–09 ವರ್ಷಗಳ ಅಧಿಕಾರಾವಧಿ).
2. ವಿತರಿಸುವ ವಿಧಾನ: ಹರಾಜು PDO, RBI, ಮುಂಬೈ (ಕೋಟೆ) ಮೂಲಕ.
3. ಹರಾಜಿನ ದಿನಾಂಕ : ಅಕ್ಟೋಬರ್ 08, 2024.

ಕರ್ನಾಟಕ ಸರ್ಕಾರವು ಮೇಲಿನ ಭದ್ರತೆಗಳಿಗೆ ಚಂದಾದಾರಿಕೆಗಳನ್ನು ಆಹ್ವಾನಿಸುತ್ತದೆ. ಅಧಿಸೂಚನೆಯ ಪ್ರತಿಗಳು ಮತ್ತು ಅರ್ಜಿ ನಮೂನೆಗಳನ್ನು ಪಿಡಿಒ, ಆರ್‌ಬಿಐ, ಬೆಂಗಳೂರು ಇವರಿಂದ ಪಡೆಯಬಹುದು. ಚಿಲ್ಲರೆ ಹೂಡಿಕೆದಾರರ ಭಾಗವಹಿಸುವಿಕೆಯನ್ನು ಉತ್ತೇಜಿಸಲು RBI ನಿಂದ ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯವನ್ನು ಪರಿಚಯಿಸಲಾಗಿದೆ. ಮಾರಾಟದ ಅಧಿಸೂಚಿತ ಮೊತ್ತದ 10% ವರೆಗಿನ ಸರ್ಕಾರಿ ಸ್ಟಾಕ್ ಅನ್ನು ಅರ್ಹ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಹಂಚಲಾಗುತ್ತದೆ. ಮಾದರಿ ಟೆಂಡರ್ ನಮೂನೆಗಳು ಮತ್ತು ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯದ ಪರಿಷ್ಕೃತ ಯೋಜನೆ **www.rbi.org.in** ವೆಬ್‌ಸೈಟ್ ನಲ್ಲಿ ಲಭ್ಯವಿದೆ.

ಸಹಿ/– (ಡಾ. ಪಿ. ಸಿ. ಜಾಫರ್)
ಸರ್ಕಾರದ ಕಾರ್ಯದರ್ಶಿ
(ಆಯವ್ಯಯ & ಸಂಪನ್ಮೂಲ), ಆರ್ಥಿಕ ಇಲಾಖೆ
DIPR/CP/RO/2342/2024-25

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ಪರಿಸರ ಭವನ, ನಂ.49, ಚರ್ಚ್ ರಸ್ತೆ, ಬೆಂಗಳೂರು–560001
ದೂರವಾಣಿ : 080–25581383, ಫ್ಯಾಕ್ಸ್ : 080–25586321

ಸಂಖ್ಯೆ: CEL/CEO-3/XVFC/2023-24/procure ದಿನಾಂಕ: 30.09.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಮುಖ್ಯ ಪರಿಸರ ಅಧಿಕಾರಿಗಳು–3 (ಖರೀದಿದಾರರು), ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಇವರಿಂದ ಅರ್ಹ ಸರಬರಾಜುದಾರರಿಂದ ಮಂಡಳಿಯ ಕೇಂದ್ರ ಪರಿಸರ ಪ್ರಯೋಗಾಲಯ–1 ಮತ್ತು ಪ್ರಾದೇಶಿಕ ಕಛೇರಿಗಳು ಬೆಂಗಳೂರು ಇಲ್ಲಿಗೆ ಪ್ರಯೋಗಾಲಯ ಮತ್ತು ಫೀಲ್ಡ ಉಪಕರಣಗಳ ಪೂರೈಕೆಗೆ ಟೆಂಡರ್‌ಗಳನ್ನು ಕರೆದಿದ್ದು ಕರ್ನಾಟಕ KPP Portal [https://kppp.karnataka.gov.in.]ನಲ್ಲಿ ವಿವರಗಳು ಕೆಳಕಂಡಂತಿವೆ KSPCB/2024-25/IND0013, KSPCB/2024-25/IND0015, KSPCB/2024-25/IND0014, KSPCB/2024-25/IND0010, KSPCB/2024-25/IND0016, KSPCB/2024-25/IND0012, KSPCB/2024-25/IND0021,KSPCB/2024-25/IND0019, KSPCB/2024-25/IND0017,KSPCB/2024-25/IND0011, KSPCB/2024-25/IND0018. ಟೆಂಡರ್‌ನ್ನು portal ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: 12th and 15th October.2024 (till evening 4:00 pm). ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: https://kppp.karnataka.gov.in. ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಸಹಿ/– ಮುಖ್ಯ ಪರಿಸರ ಅಧಿಕಾರಿ–3
ಕರಾಮಾನಿಮಂ
ವಾ.ಸಾ.ಸಂ.ಇ/ವಾಪ್ರ/2396/ಆಕಾರ್/2024–25

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಒಂದು ಸ್ವಾಯುತ್ತ ಸಂಸ್ಥೆ)
ನಿರ್ದೇಶಕರು ಹಾಗೂ ಡೀನ್ ರವರ ಕಛೇರಿ, ಕೋಟೆ, ಕೆ.ಆರ್. ರಸ್ತೆ, ಬೆಂಗಳೂರು–560002.
ದೂರವಾಣಿ : 080–26700810, ಟೆಲಿ ಫ್ಯಾಕ್ಸ್: 080–26704342 ಇ–ಮೇಲ್: director_bmcri@yahoo.co.in

ಸಂಖ್ಯೆ: ಬೆಂವೈವಿಸಂಸಂ/ಸರಬ(2)/12/2024–25 ದಿನಾಂಕ: 05–10–2024

ಇ–ಟೆಂಡರ್ ಅಧಿಸೂಚನೆ

ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಕಾಯಿದೆ 1999 ರ ಪ್ರಕಾರ **ಈ ಸಂಸ್ಥೆಯ ಅಧೀನದ ವಿಕ್ಟೋರಿಯಾ ಆಸ್ಪತ್ರೆಯ ಮೈಕ್ರೋ ಬಯಾಲಜಿ ವಿಭಾಗದ IDRDL Lab ಗೆ ಅಗತ್ಯವಿರುವ Maldi TOF ಉಪಕರಣ ಖರೀದಿಗೆ** ಇ–ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ನಿಂದ **ದಿನಾಂಕ: 07.10.2024** ರಿಂದ ಡೌನ್ ಲೋಡ್ ಮಾಡಬಹುದು ಮತ್ತು ಇ–ಪ್ರೊಕ್ಯೂರ್ ಮೆಂಟ್ ವೆಬ್ ಸೈಟ್ ಮೂಲಕ ಟೆಂಡರ್ ಗಳನ್ನೂ ಸಲ್ಲಿಸಲು ಕೊನೆಯ **ದಿನಾಂಕ: 22.10.2024 ಸಂಜೆ 5.00 ರವರೆಗೆ** ಇ.ಎಂ.ಡಿ. ಯೊಂದಿಗೆ ಸಲ್ಲಿಸದ ಟೆಂಡರ್ ಗಳನ್ನು ತಿರಸ್ಕರಿಸಲಾಗುತ್ತದೆ.

ಹೆಚ್ಚಿನ ವಿವರಗಳಿಗಾಗಿ **ನಿರ್ದೇಶಕರು ಹಾಗೂ ಡೀನ್, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು** ಇವರನ್ನು ಸಂಪರ್ಕಿಸಬಹುದು.

ಸಹಿ/– ನಿರ್ದೇಶಕರು ಹಾಗೂ ಡೀನ್,
ಬೆಂವೈವಿಸಂಸಂ, ಬೆಂಗಳೂರು.
ವಾಸಾಸಂಇ/ವಾ.ಪ್ರ/2383/ಅಡ್ವರ್ಟೋರ್/2024–25

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
ಕಾಮಗಾರಿ ಇಲಾಖೆ ಹುಬ್ಬಳ್ಳಿ.

ಸಂ:ವಾಕರಸಾಸಂ:ಕಾನಿಅ:ನಕ್ಷೆ:ಹು:480:2024–25 ದಿನಾಂಕ: 05–10–2024

ಟೆಂಡರ ಪ್ರಕಟಣೆ

KPPP Portal ಪದ್ಧತಿಯಲ್ಲಿ ಕೆ.ಪಿ.ಡಬ್ಲೂ.ಡಿ / ಸಿ.ಪಿ.ಡಬ್ಲೂ.ಡಿ / ಎಂ.ಇ.ಎಸ್ ನಲ್ಲಿ ನೋಂದಾಯಿತ ಅರ್ಹತೆಯುಳ್ಳ ಸಿವಿಲ್ ಗುತ್ತಿಗೆದಾರರಿಂದ ದ್ವಿ–ಲಕೋಟೆ ಆಧಾರದ ಮೇಲೆ ಈ ಕೆಳಕಂಡ ಕಾಮಗಾರಿಗಳಿಗೆ KPPP Portal ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರಗಳನ್ನು ಆಹ್ವಾನಿಸಲಾಗಿದೆ. ಈ ಕೆಳಕಂಡ ಕಾಮಗಾರಿಗಳಿಗೆ KPPP Portal ನಲ್ಲಿ ದಿನಾಂಕ: 05.10.2024ರಂದು ಬಿಡುಗಡೆಯಾಗಿರುವಂತೆ ಅರ್ಹ ದರ್ಜೆ 3 ಹಾಗೂ ಮೇಲ್ಪಟ್ಟ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **http://kppp.karnataka.gov.in** ನಲ್ಲಿ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಯಾವುದೇ ತಿದ್ದುಪಡಿ / ದಿನಾಂಕಗಳಲ್ಲಿನ ಬದಲಾವಣೆಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್ ನಲ್ಲಿ ಮಾತ್ರ ಪ್ರಕಟಿಸಲಾಗುವುದು, ಈ ಕುರಿತು ಪತ್ಯೇಕ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಕಾಮಗಾರಿಯ ಹೆಸರು: **ಗದಗ ಬಸ್ ಘಟಕದ ಮುಂಭಾಗದಲ್ಲಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸುವುದು.** ಕಾಮಗಾರಿ ಇಂಡೆಂಟ್ ಸಂಖ್ಯೆ: **NWKRTC/2024-25/BD/WORK_INDENT33.** ಟೆಂಡರಿಗೆ ಇಟ್ಟ ಅಂದಾಜು ಮೊತ್ತ (ರೂ. ಗಳಲ್ಲಿ): **ರೂ. 1,24,80,500/–** ಮುಂಗಡ ಠೇವಣಿ ಹಣ (ರೂ.ಗಳಲ್ಲಿ): **ರೂ. 2,00,000/–.** ಟೆಂಡರ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **19.10.2024, ಸಮಯ: 16.00 ಘಂಟೆ.**

ಹೆಚ್ಚಿನ ವಿವರಗಳಿಗೆ **ಸಹಾಯವಾಣಿ (help desk) 91–8046010000, 91–8068948777, 0836–2332383 ಗೆ ಸಂಪರ್ಕಿಸಬಹುದಾಗಿದೆ.**

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು,
ವಾಕರಸಾಸಂಸ್ಥೆ, ಕಾಮಗಾರಿ ಇಲಾಖೆ,
ಕೇಂದ್ರ ಕಛೇರಿ, ಹುಬ್ಬಳ್ಳಿ.
ವಾಸಾಸಂಇ/ಧಾರವಾಡ/474/ಅಡ್ವರ್ಟೋರ್/2024–25

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಕಾಮಗಾರಿ ವಿಭಾಗ ಬೆಳಗಾವಿ.
ಸಂ: ವಾಕರಸಾ/ಕಾನಿಅ/ಬೆವಿ/ನಕ್ಷೆ/432/2024–25 ದಿನಾಂಕ:05/10/2024
ಕೆ.ಪಿ.ಪಿ.ಪಿ ಪೋರ್ಟಲ್ ಟೆಂಡರ್ ಪ್ರಕಟಣೆ ಸಂ: 01/2024–25
(Through Gok Karnataka Public Procurement Portal www.kppp.karnataka.gov.in)

ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ/ಕೇಂದ್ರ ಲೋಕೋಪಯೋಗಿ ಇಲಾಖೆ, ಎಂ.ಇ.ಎಸ್ ಗಳಲ್ಲಿ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ Gok Karnataka Public Procurement Portal ಮುಖಾಂತರ ಟೆಂಡರ್ ಅಹ್ವಾನಿಸಲಾಗಿದೆ. ಟೆಂಡರ್ ಶೆಡ್ಯೂಲ್‌ನ ವಿವರಗಳಿಗಾಗಿ www.kppp.karnataka.gov.in ವೆಬ್‌ಸೈಟ್‌ಗೆ ಲಾಗ್‌ಆನ್ ಮಾಡಿ ಪಡೆದುಕೊಳ್ಳಬಹುದು.

ಕ್ರ. ಸಂ:1:ಟೆಂಡರ್ ಪ್ರಕಟಣೆ ಸಂಖ್ಯೆ:01: ಕಾಮಗಾರಿಯ ಹೆಸರು:ಬೆಳಗಾವಿ ಬಸ್ ಘಟಕ–02 ರ ಮುಂಭಾಗದಲ್ಲಿ ಖಾಲಿ ನಿವೇಶನದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಿಸುವುದು., ಟೆಂಡರ್ ಆಧಾರ:ದ್ವಿ ಲಕೋಟೆ,ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):166=10, ಮುಂಗಡ ಠೇವಣಿ ಮೊತ್ತ (ರೂ.ಗಳಲ್ಲಿ):2,49,150=00, ಗುತ್ತಿಗೆದಾರರ ದರ್ಜೆ:ದರ್ಜೆ– 3 ಮತ್ತು ಮೇಲ್ಪಟ್ಟು, ಭರ್ತಿಮಾಡಿದ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ:19/10/2024.

ಇನ್ನುಳಿದ ವಿವರಗಳನ್ನು ವಿವರವಾದ ಟೆಂಡರ್ ಪ್ರಕಟಣೆಯಲ್ಲಿರುವಂತೆ ಖಚಿತ ಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸತಕ್ಕದ್ದು. ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದಾಗಿದೆ ಮತ್ತು ಈ ಕಛೇರಿ ದೂರವಾಣಿ ಸಂ. 0831–2451475 ಗೆ ಸಂಪರ್ಕಿಸ ಬಹುದಾಗಿದೆ ಹಾಗೂ ಸಹಾಯವಾಣಿ (help desk): +91-8046010000 and +91-8068948777 ಸಂಪರ್ಕಿಸಬಹುದಾಗಿದೆ. ಯಾವುದೇ ತಿದ್ದುಪಡಿ ಮತ್ತು ದಿನಾಂಕಗಳಲ್ಲಿನ ಮುಂದೂಡಿಕೆಗಳಿದ್ದಲ್ಲಿ Gok Karnataka Public Procurement Portal ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ವಾಕರಸಾ ಸಂಸ್ಥೆ, ಕಾಮಗಾರಿ ವಿಭಾಗ, ಬೆಳಗಾವಿ.
DIPR/BGM/RO-NO-941/MCA/2024-25

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ರಾಜ್ಯ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-UO4010KA2002SGC030438)

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಕೆಪಿಪಿ–ಪೋರ್ಟಲ್ ಮೂಲಕ ಮಾತ್ರ)

ಬೆ.ವಿ.ಕಂ ವಿಚಾರಣಾ ಸಂಖ್ಯೆ: BESCOM/2024-25/SE0180/CALL-2 ದಿನಾಂಕ: **05.10.2024**ರ **ಅನುಸಾರ ಬೆಂಗಳೂರಿನ ರಾಜಾಜಿನಗರದ ಡಾಸ್ ನಿಯಂತ್ರಣ ಕೇಂದ್ರದಲ್ಲಿ ಅಳವಡಿಸಲಾಗಿರುವ ಜುನಿಪೆರ್ ಕಂಪನಿಯ ನಾಲ್ಕು ಫೈರ್‌ವಾಲ್‌ಗಳನ್ನು ಒಂದು ವರ್ಷದ ಅವಧಿಗೆ ನಿರ್ವಹಣೆ ಮಾಡಲು ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸುತ್ತಿದೆ.**

ಬಿಡ್ ದಾಖಲೆಗಳು ದಿನಾಂಕ: **07.10.2024** ರಂದು ಮಧ್ಯಾಹ್ನ **16:00** ಗಂಟೆಯಿಂದ ಲಭ್ಯವಿರುತ್ತದೆ. ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **14.10.2024** ರ ಮಧ್ಯಾಹ್ನ **16:00** ಗಂಟೆ. ಬಿಡ್‌ಗಳನ್ನು ದಿನಾಂಕ: **16.10.2024** ರಂದು ಬೆಳಿಗ್ಗೆ **11:00** ಗಂಟೆಗೆ ತೆರೆಯಲಾಗುವುದು. ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ **https://kppp.karnataka.gov.in** ಮೂಲಕ ಪಡೆಯಬಹುದು. ಮಾಹಿತಿಗಾಗಿ ಕೆಪಿಪಿ ಸಹಾಯವಾಣಿ: **+91–80–46010000, +91–80–68948777** ಅಥವಾ ಇಮೇಲ್: support@eprochelpdesk.com ಸಂಪರ್ಕಿಸಬಹುದು.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile App ಅನ್ನು, ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/–
ಪ್ರಧಾನ ವ್ಯವಸ್ಥಾಪಕರು (ಡಾಸ್)
ಬೆವಿಕಂ

LIC – ಲೈಫ್ ಇನ್ಶೂರೆನ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ / भारतीय जीवन बीमा निगम / LIFE INSURANCE CORPORATION OF INDIA
MYSORE DIVISION

LIC of India, Divisional Office,
Mysore - Bangalore Road, Bannimantap, Mysore - 570 015
email: os.mysore@licindia.com,
Ph: 0821-2498494

Empanelment of Suppliers / Manufactures / Service Providers : - Applications are invited for Empanelment of Suppliers / Manufactures / Service Providers for the following services.

Supply of :

1. **Furniture & Office Equipments including electrical fitting**
2. **Printed Stationery / Forms / Books / Registers as per our format**
3. **Continuous Stationery both blank and pre-printed.**
4. **Continuous Stationery with security printing registration**
5. **Office files / Plastic files / Tape files**
6. **Table Stationery**
7. **Envelopes as per our format**
8. **Bituminized envelopes / Dockets**
9. **Rubber stamps / Visiting Cards / ID cards**
10. **Signboards / Name Boards / Name Plates**
11. **Computer Consumables**
12. **Courier Services / Security Services / House Keeping / Pest Control Services etc.,**

Interested firms / Dealers / Suppliers / Service providers may collect the prescribed application form from the OS department at the above office, by depositing cash of 236/- (non refundable) at cash counter towards Registration fee or by enclosing DD/Bankers cheque in the name of LIC of India, payable at Mysore along with application available on our website **www.licindia.in.** Application duly completed with all documents are to be submitted in a closed cover superscribed "Application for empanelment of ________and should be sent to the address "THE MANAGER (E&OS) LIC OF INDIA, DIVISIONAL OFFICE, JEEVAN PRAKASH, Mysore - Bangalore Road, Bannimantap, Mysore-570015. Application should reach at the above mentioned address on or before 05.11.2024 at 16.00 hrs. Applications received other than the prescribed format will not be entertained. If vendor is applying for more than one category of service, the vendor has to submit application separately for each category along with fee of 236/- for each application. Please note that the competent Authority reserve the right to enlist or reject the application of Supplier / Manufacture / Service Provider / Dealer.

You may also log on to our website **www.licindia.in** tender links for details.

Date: 04.10.2024 **Sd/-**
Senior Divisional Manager

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ KEONICS ISO 9001 : 2008
BANGALORE – THE IT CAPITAL OF INDIA
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
2ನೇ ಮಹಡಿ, ಟಿಟಿಎಂಸಿ, 'ಎ' ಬ್ಲಾಕ್, ಬಿಎಂಟಿಸಿ ಕಾಂಪ್ಲೆಕ್ಸ್, ಶಾಂತಿನಗರ, ಕೆ.ಹೆಚ್. ರಸ್ತೆ, ಬೆಂಗಳೂರು–560027. ದೂ: 080–22225645, ಫ್ಯಾಕ್ಸ್: 080–22232652,

ಸಂಖ್ಯೆ: KSEDCL/ITS-ROC/CON/2024-25 ದಿನಾಂಕ: 06.10.2024

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಮೆ: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್), 1. i. ಡಿಜಿಟಲ್ ಮಾರ್ಕೆಟ್ ಪ್ಲೇಸ್ ಪ್ಲಾಟ್‌ಫಾರ್ಮ್‌ನ ವಿನ್ಯಾಸ, ಅಭಿವೃದ್ಧಿ, ಅನುಷ್ಠಾನ ಮತ್ತು ನಿರ್ವಹಣೆ ii ಮೂಲಸೌಕರ್ಯ ಆಸ್ತಿಗಳು ಮತ್ತು ತರಬೇತಿ ನಿರ್ವಹಣಾ ಪ್ಲಾಟ್‌ಫಾರ್ಮ್‌ನ ವಿನ್ಯಾಸ, ಅಭಿವೃದ್ಧಿ, ಅನುಷ್ಠಾನ ಮತ್ತು ನಿರ್ವಹಣೆ (e-commerce platform), 2. RFP for ICT Consulting Service Providers, 3. RFP for ICT Services firms, ಸಂಸ್ಥೆಗಳನ್ನು ಆಯ್ಕೆ ಮಾಡಲು 30 ದಿನಗಳ ಅವಧಿಗೆ ಓಪನ್ ಇ–ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡುದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **http://kppp.karnataka.gov.in** ನಲ್ಲಿ ವಿವರವನ್ನು ಪಡೆಯಬಹುದು. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **05–11–2024 ರಂದು ಸಂಜೆ 04.30 ಗಂಟೆಯವರೆಗೆ,** ಹೆಚ್ಚಿನ ಮಾಹಿತಿಗಾಗಿ ಕಿಯೋನಿಕ್ಸ್ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ: 080 2222 5645)

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ವಿವರ
1	KEONICS/2024-25/ SE0097	i. ಡಿಜಿಟಲ್ ಮಾರ್ಕೆಟ್ ಪ್ಲೇಸ್ ಪ್ಲಾಟ್‌ಫಾರ್ಮ್‌ನ ವಿನ್ಯಾಸ, ಅಭಿವೃದ್ಧಿ, ಅನುಷ್ಠಾನ ಮತ್ತು ನಿರ್ವಹಣೆ (e-commerce platform) ii. ಮೂಲಸೌಕರ್ಯ ಆಸ್ತಿಗಳು ಮತ್ತು ತರಬೇತಿ ನಿರ್ವಹಣಾ ಪ್ಲಾಟ್‌ಫಾರ್ಮ್‌ನ ವಿನ್ಯಾಸ, ಅಭಿವೃದ್ಧಿ, ಅನುಷ್ಠಾನ ಮತ್ತು ನಿರ್ವಹಣೆ
2	KEONICS/2024-25/ SE0098	RFP for ICT Consulting Service Providers.
3	KEONICS/2024-25/ SE0099	RFP for ICT Services firms.

DIPR/CP/BCPL/2392/2024-25 ಸಹಿ/– ನಿರ್ದೇಶಕರು (ಹಣಕಾಸು)

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ಸಂ.49, 4 & 5ನೇ ಮಹಡಿ, ಪೂರ್ವ ವಿಭಾಗ ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560001. ಪೋನ್ ಸಂ. 080-22265383 ವೆಬ್‌ಸೈಟ್: www.kiadb.in ಇ–ಮೇಲ್: cdoce2@kiadb.in or jdtp@kiadb.in

ಸಂ.ಐಎಡಿಬಿ/ಇಎನ್‌ಜಿಜಿ/ಇಐಎ/ಇಟಿಎನ್‌ಡಿ–ಇಸಿ–12/269/2024–25 ದಿನಾಂಕ: 05–10–2024

ಪರಿಸರ ವಿಮೋಚನ ಪತ್ರ (ಇಸಿ) ಪಡೆಯಲು ಸಲಹಾ ಸೇವೆಗಳನ್ನು ಒದಗಿಸಲು ಟೆಂಡರ್ ಆಹ್ವಾನ ಪ್ರಕಟಣೆ
(ಜಿಒಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಧಾರವಾಡ ಜಿಲ್ಲೆ ಮತ್ತು ತಾಲ್ಲೂಕು, ಮುಮ್ಮಿಗಟ್ಟಿ ಗ್ರಾಮದ ಒಟ್ಟು 326.64 ಎಕರೆ ವಿಸ್ತೀರ್ಣದಲ್ಲಿ ಅಭಿವೃದ್ಧಿಪಡಿಸುತ್ತಿರುವ ಮುಮ್ಮಿಗಟ್ಟಿ ಕೈಗಾರಿಕಾ ಕೈಗಾರಿಕಾ ಪ್ರದೇಶ ಹಂತ–2ಕ್ಕೆ ರಾಜ್ಯ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರ (ಎಸ್‌ಇಐಎಎ)/ಕೇಂದ್ರ ಪರಿಸರ ಅರಣ್ಯ ಹವಮಾನ ಬದಲಾವಣೆ ಸಚಿವಾಲಯ (ಎಮ್.ಒ.ಇ.ಎಫ್&ಸಿ.ಸಿ) ಯಿಂದ ಪರಿಸರ ವಿಮೋಚನಾ (ಎನ್‌ವಿರಾನ್‌ಮೆಂಟ್ ಕ್ಲಿಯರೆನ್ಸ್) ಪತ್ರವನ್ನು ಪಡೆಯಲು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ)ಯಿಂದ ಸ್ಥಾಪನ ಸಮ್ಮತಿ ಪತ್ರ (ಸಿ.ಎಫ್.ಇ) ಪಡೆಯಲು ಮತ್ತು ಅರ್ಧ ವಾರ್ಷಿಕ ಅನುಸರಣಾ ವರದಿಯನ್ನು ತಯಾರಿಸಿ 3 ವರ್ಷಗಳವರೆಗೆ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸುವುದು, ಇಐಎ ವರದಿ, ಎಸ್‌ಐಎಸ್ ಅಧ್ಯಯನಗಳು ಮತ್ತು ಇತ್ಯಾದಿಯನ್ನು ಸಿದ್ಧಪಡಿಸಲು ಸಲಹಾ ಸೇವೆಗಳನ್ನು ಒದಗಿಸಲು ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಅನ್ನು ಅಹ್ವಾನಿಸಿದೆ. NABET, 7(C) ಪರಿಸರ ಮತ್ತು ಅರಣ್ಯ ಸಚಿವಾಲಯ, ನವದೆಹಲಿ ಇವರ ಮಾನ್ಯತೆ ಪಡೆದ ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗಿರುವ ಸಂಸ್ಥೆಗಳು/ಸಲಹೆಗಾರರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಟೆಂಡರ್ ದಿನಾಂಕಗಳು ಕೆಳಕಂಡಂತಿರುವುದು: **ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ:** 25–10–2024 ಸಂಜೆ 5.00 ಗಂಟೆಯವರೆಗೆ.

ಸಹಿ/– ಮುಖ್ಯ ಅಭಿಯಂತರರು–2
ಕೆ.ಐ.ಎ.ಡಿ.ಬಿ, ಬೆಂಗಳೂರು
DIPR/CP/RO2387/AAPL/2023-24

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ An ISO-9001:2015 & 14001:2015 Company
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಶ್ರೀಗಂಧ ನಗರ: ಅಂಚೆ ಪೆಟ್ಟಿಗೆ ಸಂ.5531, ಬೆಂಗಳೂರು–ಪುಣೆ ಹೆದ್ದಾರಿ, ಬೆಂಗಳೂರು–560 055.
ದೂರವಾಣಿ: 080–22164879, 22164886, ಜಾಲತಾಣ: www.mysoresandal.org ಇ-ಮೇಲ್: **ksdl.dgmmtls@gmail.com**
ದಿನಾಂಕ: 05.10.2024

ಟೆಂಡರ್ ಪ್ರಕಟಣೆ

ಕೆಎಸ್&ಡಿಎಲ್ ಸಂಸ್ಥೆಗೆ ಈ ಕೆಳಕಂಡ ಸರಕು/ಸೇವೆ/ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಖರೀದಿಗಳ ಪೋರ್ಟಲ್ ಜಾಲತಾಣ (**https://kppp.karnataka.gov.in**)ದ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್ ಹೆಸರು	ಸಂಖ್ಯೆ	ಪ್ರಕಟಣೆ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	KSDL/2024-25/ IND0452	ಫಾರೆವರ್ ಶೈನ್ 68829 (Forever shine 68829) ಖರೀದಿ	3600 ಕೆ.ಜಿ.	03-10-2024	14-10-2024
2	KSDL/2024-25/ IND0453	ವೇವ್ ಡಿಯೋ ಸೋಪ್‌ನ ಸುಗಂಧ ದ್ರವ್ಯ (ಕಾರ್ಲಾ 69230/ಸಮಾನ)(Carla 69230/Equivalent) ದ ಖರೀದಿ	2750 ಕೆ.ಜಿ.	04-10-2024	14-10-2024

ಯಾವುದೇ ಹೆಚ್ಚಿನ ವಿಚಾರಣೆ/ಸ್ಪಷ್ಟೀಕರಣಕ್ಕೆ ಕೆಳಕಂಡ ಸಹಿದಾರರನ್ನು ಸಂಪರ್ಕಿಸಬಹುದು.

ಸಹಿ/–
ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಾಮಗ್ರಿ)

ಆಯುಕ್ತರ ಕಛೇರಿ
ಮಹಾನಗರಪಾಲಿಕೆ, ಬಳ್ಳಾರಿ
ದೂರವಾಣಿ ಸಂಖ್ಯೆ : 08392–273479 /278168
ಫ್ಯಾಕ್ಸ್ : 08392–273477
ವೆಬ್‌ಸೈಟ್ : www.bellarycity.gov.in
ಇ–ಮೇಲ್: bellarycommissioner@yahoo.co.in
ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ–583101

ಸಂ:ಮನಪಾಬ/ಆಶಾ/ ಸಂಸ್ಕರಣ ಘಟಕ/01/2024–25 ದಿನಾಂಕ:– 5.10.2024

ಟೆಂಡರ್ ಪ್ರಕಟಣೆ

ಬಳ್ಳಾರಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಪಾಲಿಕೆಯ ಎಸ್.ಬಿ.ಎಮ್ ಅನುದಾನದಡಿಯಲ್ಲಿ Supply, Installation, Commissioning and maintenance of machines for ballari city corporations Solid Waste composting plant ಟೆಂಡರ್ ಕರೆಯಲಾಗಿದ್ದು, ಅರ್ಹ ಏಜೆನ್ಸಿ/ಸರಬರಾಜುದಾರರಿಗೆ ಈ ಕೆಳಕಂಡ ದಿನಾಂಕದೊಳಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಕ್ರ.ಸಂ	ವಿಷಯ	ದಿನಾಂಕ	ಸಮಯ
1	ಇಂಡೆಂಟ್ ಸಂಖ್ಯೆ:–DMA/2024-25/ IND3671		
2	ಟೆಂಡರ್ ಸ್ಪಷ್ಟೀಕರಣಕ್ಕೆ/Querieಗೆ ಕೊನೆಯ ದಿನಾಂಕ	15/10/2024	4.00 PM
3	ಟೆಂಡರ್ ಪೂರ್ವಭಾವಿ ಸಭೆ ದಿನಾಂಕ	18/10/2024	ಮಹಾನಗರಪಾಲಿಕೆಯ ಸಭಾಂಗಣದಲ್ಲಿ ಸಮಯ: 11.00 AM
4	ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ	05/11/2024	4.00 PM ಗಂಟೆವರೆಗೆ
5	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	06/11/2024	4.30 PM ನಂತರ
6	ಆರ್ಥಿಕ ಬಿಡ್ ತರೆಯುವ ದಿನಾಂಕ	08/11/2024	4.30 PM ನಂತರ

ಸದರಿ ಟೆಂಡರ್‌ನ್ನು ಆನ್‌ಲೈನ್ ಮುಖಾಂತರ ಡೌನ್‌ಲೋಡ್ ಮಾಡಿ ಕೊಳ್ಳಬಹುದಾಗಿದೆ. ಟೆಂಡರ್‌ನ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ: 08392-273477/9620095318/ ವೆಬ್‌ಸೈಟ್ http://kppp.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿದೆ.

ತಮ್ಮ ವಿಶ್ವಾಸಿ
ಆಯುಕ್ತರು, ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.
ದೂರವಾಣಿ ಸಂಖ್ಯೆ: 080-22265383. email: cdoce2@kiadb.in, Website: www.kiadb.in

ಸಂಖ್ಯೆ: ಐಎಡಿಬಿ/ಇಎನ್‌ಜಿಜಿ/ಇಪಿಟಿಎನ್‌ಡಿ–ಇಪಿ–10/1096/2024–25 ದಿನಾಂಕ:05.10.2024

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಯೋಜನಾ ನಿರ್ವಹಣಾ ಸೇವೆಗಳಿಗಾಗಿ (ಪಿಎಂಸಿ)
(ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗೆ ಯೋಜನಾ ನಿರ್ವಹಣಾ ಸೇವೆಗಳಿಗಾಗಿ (ಪಿಎಂಸಿ) ಕ್ವಾಲಿಟಿ ಬೇಸ್ಡ್ ಕನ್ಸಲ್ಟನ್ಸಿ ಸಿಸ್ಟಮ್ (ಕ್ಯೂಬಿಸಿಎಸ್) ಅಡಿಯಲ್ಲಿ ಅರ್ಹ ಸಲಹಾ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ದ್ವಿಲಕೋಟೆ ಪದ್ಧತಿಯಡಿಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ. **ರಾಯಚೂರು ಜಿಲ್ಲೆಯ ರಾಯಚೂರು ಗ್ರೋತ್ ಸೆಂಟರ್ ಕೈಗಾರಿಕಾ ಪ್ರದೇಶದಲ್ಲಿರುವ ರಸ್ತೆಯಲ್ಲಿ ಡಾಂಬರೀಕರಣ ಮತ್ತು ಆರ್‌ಸಿಸಿ ಡ್ರೈನ್‌ಗಳ ನಿರ್ಮಾಣ ಸೇರಿದಂತೆ ರಸ್ತೆಯನ್ನು ಮೇಲ್ದರ್ಜೆಗೇರಿಸುವ ಕಾಮಗಾರಿಗಾಗಿ ಪಿಎಂಸಿ ಸೇವೆಗಳನ್ನು ಒದಗಿಸುವುದು (2ನೇ ಕರೆ).**

ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **19.10.2024ರ ಸಂಜೆ 4.00 ಗಂಟೆಯವರೆಗೆ.**

ಟೆಂಡರ್‌ದಾರರು ಬಿಡ್ಡಿಂಗ್ ದಾಖಲೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–2
ವಾಸಾಸಂಇ/ವಾಪ್ರ/ಜಿಎ/2382/2024–25

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಿನ್ ಸಂಖ್ಯೆ: U04010KA2002SGC030436

ಸಂಖ್ಯೆ: ಗುವಿಸಕಂನಿ/ಅಅ(ವಿ)(ಖರೀದಿ)/ಕಾನಿಇಂ/ಸಕಾನಿಇಂ/2024–25/34299–303 ದಿನಾಂಕ:03.10.2024

:: ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮುಖಾಂತರ) ::

ಪಿಸಿ–1390: ಗು.ವಿ.ಸ.ಕಂ.ನಿ. ದ ವಿವರಣೆಯಂತೆ ಎಲ್.ಟಿ ಪಾಲಿಯೋಲಿಫಿನ್ ಹೀಟ್ ಶ್ರಿಂಕೇಬಲ್ ಟ್ಯೂಬ್ ಇನ್ಸೂಲೆಷನ್ ಕವರ್ಡ್ ಎ.ಸಿ.ಎಸ್.ಆರ್. ರ್‍ಯಾಬಿಟ್ ಕಂಡಕ್ಟರ್ ತಯಾರಿಕೆ ಮತ್ತು ಪೂರೈಕೆ ಮಾಡುವುದು.

ದಿನಾಂಕ: ಕೆಪಿಪಿಪಿ ಪೋರ್ಟಲ್ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ: 04.10.2024 ರಂದು ಅಥವಾ ನಂತರ. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **04.11.2024 @ 17:30** ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **06.11.2024 @ 11:00** ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ: **07.11.2024 @ 11:00** ಗಂಟೆಗೆ.

ಟೆಂಡರ್ ಮೊತ್ತ: **ರೂ. 1399.33 ಲಕ್ಷ.**

ಬಿಡ್ಡುದಾರರ ಅರ್ಹತೆ ವಿವರ: ಟೆಂಡರ್ ದಸ್ತಾವೇಜು, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಅಧೀಕ್ಷಕ ಅಭಿಯಂತರರು (ವಿ), ಖರೀದಿ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ–585 102. ಮೊ.ಸಂ: 94484 99997. ಅಂತರ್ಜಾಲತಾಣದ ವಿಳಾಸ: **https://kppp.karnataka.gov.in.**

ಸಹಿ/– ಅಧೀಕ್ಷಕ ಅಭಿಯಂತರರು (ವಿ).,
ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/493/ಕೆ.ಎಸ್.ಎಂ.ಸಿ.&ಎ/2024–25

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಇರುವಕ್ಕಿ, ಶಿವಮೊಗ್ಗ
ಆಸ್ತಿ ಅಧಿಕಾರಿಯವರ ಕಛೇರಿ, ಇರುವಕ್ಕಿ ಆನಂದಪುರ – 577 412,
ಸಾಗರ ತಾಲ್ಲೂಕು ಶಿವಮೊಗ್ಗ ಜಿಲ್ಲೆ
ದೂರವಾಣಿ : 9480838979 ಇ–ಮೇಲ್ :eo@uahs.edu.in
ಸಂಖ್ಯೆ:ಕೆಶಿನಾಕೃತೋವಿವಿ(ಇ)/ಆಅ/ಉಖಅ/12/2024-25
ದಿನಾಂಕ : 01.10.2024

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಇರುವಕ್ಕಿಗೆ ಅವಶ್ಯವಿರುವ ಲ್ಯಾಪ್‌ಟಾಪ್‌ಗಳನ್ನು ಸರಬರಾಜು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಜಿ–3 ನಿಬಂಧನೆಗೊಳಪಟ್ಟಂತೆ ನೋಂದಯಿಸಲ್ಪಟ್ಟ ಆಸಕ್ತಿಯುಳ್ಳ ಅರ್ಹ ಕಂಪನಿಗಳಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನೋಟಿಫಿಕೇಷನ್, ಶೆಡ್ಯೂಲ್ ಹಾಗೂ ಟೆಂಡರ್‌ನ ವಿವರಗಳು ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ

ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ : (1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : **23.10.2024 ಸಮಯ ಸಂಜೆ 4.00 ಗಂಟೆಯವರೆಗೆ.** (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **24.10.2024 ಸಮಯ ಸಂಜೆ 4.30 ಗಂಟೆಗೆ.**(3) ಹಣಕಾಸು ಬಿಡ್ ತೆರೆಯುವ ದಿನಾಂಕ : **26.10.2024 ಸಮಯ ಬೆಳಿಗ್ಗೆ 10.00 ಗಂಟೆಗೆ.**

ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಭಾಗವಹಿಸಲು ಯೂಸರ್ ಐಡಿ ಮತ್ತು ಪಾಸ್‌ವರ್ಡ ಪಡೆದುಕೊಳ್ಳಬೇಕು ಹೆಚ್ಚಿನ ವಿವರಗಳಿಗಾಗಿ ಇ–ಪೋರ್ಟಲ್ ವೆಬ್‌ಸೈಟ್ ಇ–ಮೇಲ್@ **hphelpdesk.blr@intarvo.com** ಅಥವಾ ಸಹಾಯವಾಣಿ ಸಂಖ್ಯೆ:**91-8046010000** ಕೆಲಸದ ಎಲ್ಲಾ ದಿವಸಗಳಲ್ಲೂ ಮತ್ತು ಉಗ್ರಾಣ ಖರೀದಿ ಅಧಿಕಾರಿ, ಕೇಂದ್ರ ಉಗ್ರಾಣ, ಕೆಶಿನಾಕೃತೋವಿವಿ, ಇರುವಕ್ಕಿ, ಆನಂದಪುರ –577412, ಸಾಗರ ತಾಲ್ಲೂಕು, ಶಿವಮೊಗ್ಗ ಇವರನ್ನು ಸಂಪರ್ಕಿಸಬಹುದು.

ಸಹಿ/– ಆಸ್ತಿ ಅಧಿಕಾರಿಗಳು
ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಇರುವಕ್ಕಿ, ಶಿವಮೊಗ್ಗ
ವಾ.ಸಾ.ಸಂ.ಇ./ಶಿ/ನಂ 23-10 ಝೇಂಕಾರ್/2024-25

ನನ್ನ ಹೆಂಡತಿ ಯಾವತ್ತೂ ರಾಜಕೀಯಕ್ಕೆ ಬಂದವಳಲ್ಲ, ಅವಳನ್ನೂ ಬೀದಿಗೆ ತಂದಿದ್ದಾರೆ: ಸಿದ್ದರಾಮಯ್ಯ ಆಕ್ರೋಶ

‘ರಾಜೀನಾಮೆ ಪ್ರಸ್ತಾಪದಿಂದ ಬೇಸರ’

ಪ್ರಜಾವಾಣಿ ವಾರ್ತೆ

ಮಾನ್ವಿ (ರಾಯಚೂರು ಜಿಲ್ಲೆ): ‘ಹಿಂದುಳಿದ ಸಮಾಜದವನು ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿದ್ದನ್ನು ಸಹಿಸಿಕೊಳ್ಳಲಾಗದೇ ರಾಜೀನಾಮೆ ಕೊಡಿ ಎಂದು ನಿತ್ಯ ಕಾಡುತ್ತಿದ್ದಾರೆ. ಇದರಿಂದ ನನಗೂ ಬೇಸರವಾಗಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮಾನ್ವಿಯಲ್ಲಿ ಶನಿವಾರ ನಡೆದ ಕಾಂಗ್ರೆಸ್ ಸ್ವಾಭಿಮಾನಿ ಸಮಾವೇಶದಲ್ಲಿ ಮಾತನಾಡಿದ ಅವರು ‘ನಾನು ಯಾವುದೇ ತಪ್ಪು ಮಾಡದಿದ್ದರೂ ಕಪ್ಪುಚುಕ್ಕೆ ಇಟ್ಟು, ರಾಜಕೀಯವಾಗಿ ಹಣಿಯಲು ಮುಂದಾಗಿದ್ದಾರೆ. ಕುರಿ ಕಾಯೋನ ಮಗ ಎರಡನೇ ಬಾರಿ ಮುಖ್ಯಮಂತ್ರಿ ಆಗಿದ್ದನ್ನು ಇವರಿಗೆ ಸಹಿಸಿಕೊಳ್ಳಲಾಗುತ್ತಿಲ್ಲ’ ಎಂದು ಭಾವುಕರಾಗಿ ನುಡಿದರು.

‘ನನ್ನ ಹೆಂಡತಿ ಯಾವತ್ತೂ ರಾಜಕೀಯಕ್ಕೆ ಬಂದವಳಲ್ಲ. ಅವಳನ್ನೂ ಬೀದಿಗೆ ತಂದಿದ್ದಾರೆ. ಇದು ನ್ಯಾಯನಾ? ಇದನ್ನು ನೀವು ಒಪ್ಪಿಕೊಳ್ಳುತ್ತೀರಾ’ ಎಂದು ಸಭಿಕರನ್ನು ಪ್ರಶ್ನಿಸಿದ ಸಿದ್ದರಾಮಯ್ಯ, ‘ಅಂಬೇಡ್ಕರ್ ಆಶಯದಂತೆ ನಾನು ಬಡವರಿಗೆ ಆರ್ಥಿಕ, ಸಾಮಾಜಿಕವಾಗಿ ಶಕ್ತಿ ತುಂಬಿ ಸ್ವಾಭಿಮಾನದಿಂದ ಬದುಕುವಂತೆ ಮಾಡಿದ್ದು ಬಿಜೆಪಿ, ಜೆಡಿಎಸ್‌ನವರಿಗೆ ತಪ್ಪಾಗಿ ಕಾಣಿಸುತ್ತಿದೆ. ಐದು ಗ್ಯಾರಂಟಿಗಳನ್ನು ಕೊಟ್ಟಿದ್ದು ತಪ್ಪಾ?’ ಎಂದು ತಮ್ಮ ಭಾಷಣದುದ್ದಕ್ಕೂ ಬಿಜೆಪಿ ಹಾಗೂ ಜೆಡಿಎಸ್ ಮುಖಂಡರ ವಿರುದ್ಧ ವಾಗ್ದಾಳಿ ನಡೆಸಿದರು.

ರಾಯಚೂರು ಜಿಲ್ಲೆಯ ಮಾನ್ವಿಯಲ್ಲಿ ಶನಿವಾರ ನಡೆದ ಕಾಂಗ್ರೆಸ್ ಸ್ವಾಭಿಮಾನಿ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜನರಿಗೆ ಕೈಮುಗಿದರು. ಶಾಸಕ ಹಂಪಯ್ಯ ನಾಯಕ, ಸಚಿವರಾದ ಎನ್‌.ಎಸ್‌.ಬೋಸರಾಜು, ಶಿವರಾಜ ತಂಗಡಗಿ, ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಬಸನಗೌಡ ತುರುವಿಹಾಳ, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್ ಹಾಜರಿದ್ದರು — ಪ್ರಜಾವಾಣಿ ಚಿತ್ರ

‘ನಾನು ಬಡವರ ಪರ ಕೆಲಸ ಮಾಡುತ್ತಿರುವುದಕ್ಕೆ ಬಿಜೆಪಿ, ಜೆಡಿಎಸ್‌ನವರಿಗೆ ಹೊಟ್ಟೆ ಉರಿಯುತ್ತಿದೆ. ನನ್ನನ್ನು ರಾಜಕೀಯವಾಗಿ ಹಣಿಯಬೇಕು ಎಂದು ಸುಳ್ಳು ಆರೋಪ ಮಾಡುತ್ತಿದ್ದಾರೆ. ಇವರ ಬೆದರಿಕೆಗಳಿಗೆ ನಾನು ಜಗ್ಗುವುದಿಲ್ಲ. ನಾನು ಯಾವುದೇ ತಪ್ಪು ಮಾಡಿಲ್ಲ. ಹೆದರಿ ಓಡಿ ಹೋಗುವುದಿಲ್ಲ. ಆತ್ಮಸಾಕ್ಷಿಗೆ ಅನುಗುಣವಾಗಿ ಕೆಲಸ ಮಾಡುತ್ತಿದ್ದೇನೆ. ನಿಮ್ಮ ಆಶೀರ್ವಾದ ನನ್ನ ಮೇಲೆ ಯಾವಾಗಲೂ ಹೀಗೆಯೇ ಇರಲಿ. ನಿಮಗೋಸ್ಕರ ನನ್ನ ಹೋರಾಟ ಮುಂದುವರಿಸುತ್ತೇನೆ’ ಎಂದರು.

‘ನಾನು ಮಾಡುತ್ತಿರುವ ಜನಪರ ಕೆಲಸಗಳನ್ನು ನೋಡಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಬಿಜೆಪಿ ರಾಷ್ಟ್ರೀಯ ಸಂಸದೀಯ ಮಂಡಳಿ ಸದಸ್ಯ ಯಡಿಯೂರಪ್ಪ, ಅವರ ಮಗ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ಹಾಗೂ ಕೇಂದ್ರ ಸಚಿವ ಕುಮಾರಸ್ವಾಮಿ ಅವರಿಗೆ ಹೊಟ್ಟೆ ಉರಿಯುತ್ತಿದೆ’ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

‘2018ರಲ್ಲಿ ಮುಖ್ಯಮಂತ್ರಿಯಾದ ಕುಮಾರಸ್ವಾಮಿ ಒಂದು ವರ್ಷ ಎರಡು ತಿಂಗಳು ಏನೂ ಕೆಲಸ ಮಾಡಲಿಲ್ಲ. ಕೊಟ್ಟ ಕುದುರೆಯನ್ನು ಏರಲಾಗದವನು ವೀರನೂ ಅಲ್ಲ, ಶೂರನೂ ಅಲ್ಲ. ನಂತರ 17 ಶಾಸಕರನ್ನು ಖರೀದಿಸಿ ಸರ್ಕಾರ ರಚಿಸಿ ಮೂರೂವರೆ ವರ್ಷ ಆಡಳಿತ ನಡೆಸಿದ ಯಡಿಯೂರಪ್ಪ, ಬೊಮ್ಮಾಯಿ ರಾಜ್ಯವನ್ನು ಲೂಟಿ ಹೊಡೆದರು. ರಾಜ್ಯವನ್ನು ದಿವಾಳಿ ಮಾಡಿದ ಬಿಜೆಪಿಯವರನ್ನು 2023ರ ಚುನಾವಣೆಯಲ್ಲಿ ಜನ ಸೋಲಿಸಿದರು’ ಎಂದು ಟೀಕಿಸಿದರು.

‘ಬಿಜೆಪಿಯುವರು ಬಡವರ, ದಲಿತರ, ಹಿಂದುಳಿದವರ, ಅಲ್ಪಸಂಖ್ಯಾತರ, ಮಹಿಳೆಯರ ವಿರೋಧಿಗಳಾಗಿದ್ದಾರೆ. ಬಿಜೆಪಿಯವರಿಗೆ ತಕ್ಕ ಉತ್ತರ ಕೊಡಬೇಕು ಎಂಬ ಕಾರಣಕ್ಕೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಸ್ವಾಭಿಮಾನಿ ಸಮಾವೇಶ ಹಮ್ಮಿಕೊಂಡಿದ್ದೇವೆ. ಬಿಜೆಪಿಗೆ ನೀವೇ ತಕ್ಕ ಪಾಠ ಕಲಿಸಬೇಕು’ ಎಂದು ಕೋರಿದರು.

‘ಹೈಕಮಾಂಡ್ ಜತೆ ಚರ್ಚಿಸಿ ಒಳ ಮೀಸಲಾತಿ ಜಾರಿ’

ರಾಯಚೂರು: ‘ಒಳ ಮೀಸಲಾತಿ ವಿಷಯದಲ್ಲಿ ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಳ್ಳಲಾಗದು. ಇದು ಇಡೀ ರಾಜ್ಯಕ್ಕೆ ಸಂಬಂಧಿಸಿದ್ದಾಗಿರುವ ಕಾರಣ ಪಕ್ಷದ ಹೈಕಮಾಂಡ್ ಜತೆ ಚರ್ಚಿಸಿದ ನಂತರವೇ ತೀರ್ಮಾನ ಕೈಗೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ಈಗಾಗಲೇ ಕಾಂತರಾಜು ಆಯೋಗದ ವರದಿ ಸ್ವೀಕರಿಸಲಾಗಿದೆ. ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು. ವರದಿಯಲ್ಲಿ ಸಣ್ಣ ಪುಟ್ಟ ದೋಷಗಳಿದ್ದರೆ ಅದನ್ನು ಸರಿಪಡಿಸುವ ಬಗ್ಗೆಯೂ ಪರಿಶೀಲಿಸಲಾಗುವುದು’ ಎಂದು ಅವರು ಶನಿವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

‘ವಿರೋಧ ಪಕ್ಷದವರು ನನ್ನ ವಿರುದ್ಧ ಸುಳ್ಳು ಆರೋಪ ಮಾಡಿ ರಾಜೀನಾಮೆ ಕೇಳುತ್ತಿದ್ದಾರೆ. ಅವರು ಕೇಳಿದ ತಕ್ಷಣ ರಾಜೀನಾಮೆ ಕೊಡಲು ಸಾಧ್ಯವಿಲ್ಲ. ಮುಡಾ ಪ್ರಕರಣದ ವಸ್ತುಸ್ಥಿತಿಯನ್ನು ಜನರ ಮುಂದಿಡುವ ಕೆಲಸ ಮಾಡುತ್ತೇನೆ’ ಎಂದು ತಿಳಿಸಿದರು.

‘ನನ್ನ ರಾಜೀನಾಮೆ ಕೇಳುವ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರ ವಿರುದ್ಧವೂ ಜಮೀನು ಖರೀದಿ ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ಆಗಿದೆ. ಹೀಗಾಗಿ ಅವರು ಮೊದಲು ರಾಜೀನಾಮೆ ನೀಡಲಿ’ ಎಂದರು.

‘ತುಂಗಭದ್ರಾ ಜಲಾಶಯ 133 ಟಿಎಂಸಿ ಅಡಿ ನೀರು ಸಂಗ್ರಹ ಸಾಮರ್ಥ್ಯ ಹೊಂದಿದೆ. ಪ್ರಸ್ತುತ 102 ಟಿಎಂಸಿ ಅಡಿ ನೀರು ಸಂಗ್ರಹವಿದೆ. 30 ಟಿಎಂಸಿ ಅಡಿ ನೀರು ಸಂಗ್ರಹಗೊಳ್ಳುವಷ್ಟು ಹೂಳು ತುಂಬಿರುವುದರಿಂದ ಕೆಳಭಾಗದ ರೈತರಿಗೆ ನೀರು ಬಿಡಲು ಸಾಧ್ಯವಾಗುತ್ತಿಲ್ಲ. ಸರ್ಕಾರ ಕಾಲುವೆ ಕೆಳಭಾಗದ ರೈತರಿಗೆ ನೀರು ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಲಿದೆ’ ಎಂದು ಭರವಸೆ ನೀಡಿದರು.

‘ಮುಂದಿನ ಸಿ.ಎಂ ಪರಮೇಶ್ವರ...’: ಕಾರ್ಯಕರ್ತ ಘೋಷಣೆ!

ಹುಬ್ಬಳ್ಳಿ: ‘ಮುಂದಿನ ಸಿಎಂ ಜಿ.ಪರಮೇಶ್ವರ..’ ಎಂದು ಕಾಂಗ್ರೆಸ್ ಕಾರ್ಯಕರ್ತರೊಬ್ಬರು ಘೋಷಣೆ ಕೂಗಿದ ಘಟನೆಯು ಇಲ್ಲಿನ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಶನಿವಾರ ನಡೆಯಿತು.

ಗೃಹ ಸಚಿವ ಜಿ.ಪರಮೇಶ್ವರ್ ಅವರು ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತಿದ್ದ ವೇಳೆ, ಮೊದಲಿಗೆ ಕಾರ್ಯಕರ್ತರು ಕಾಂಗ್ರೆಸ್ ಪಕ್ಷಕ್ಕೆ ಜಯವಾಗಲಿ... ಸಚಿವ ಪರಮೇಶ್ವರ್ ಅವರಿಗೆ ಜಯವಾಗಲಿ.. ಎಂದು ಘೋಷಣೆ ಕೂಗಿದರು.

ಈ ಮಧ್ಯೆ ಕಾರ್ಯಕರ್ತರೊಬ್ಬರು, ‘ಮುಂದಿನ ಸಿಎಂ ಪರಮೇಶ್ವರ್ ಅವರಿಗೆ... ಎಂದು ಘೋಷಣೆ ಕೂಗಿದರು. ಆಗ ಸಚಿವ ಪರಮೇಶ್ವರ್, ‘ಸುಮ್ಮನಿರಿ, ಮಾಧ್ಯಮದವರು ಇದ್ದಾರೆ’ ಎಂದು ತಿಳಿಸಿದರು.

ದೋಷಾರೋಪಪಟ್ಟಿ: ನ್ಯೂನತೆ ಪಟ್ಟಿ ಮಾಡಿದ ವಕೀಲರು

ಪ್ರಜಾವಾಣಿ ವಾರ್ತೆ

ದರ್ಶನ್

ಬೆಂಗಳೂರು: ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ, ನಟ ದರ್ಶನ್ ಅವರ ಜಾಮೀನು ಅರ್ಜಿಯ ವಿಚಾರಣೆಯನ್ನು 57ನೇ ಸಿಸಿಎಚ್ ನ್ಯಾಯಾಲಯವು ಅಕ್ಟೋಬರ್ 8ಕ್ಕೆ ಮುಂದೂಡಿತು.

ದರ್ಶನ್ ಪರ ವಕೀಲ ಸಿ.ವಿ.ನಾಗೇಶ್ ಅವರು ಶನಿವಾರ ವಾದ ಮಂಡಿಸಿದರು. ವಾದ ಆಲಿಸಿದ ನ್ಯಾಯಾಧೀಶರು, ವಿಚಾರಣೆಯನ್ನು ಮುಂದೂಡಿದರು.

‘ಜೂನ್ 8ರಂದು ರೇಣುಕಸ್ವಾಮಿ ಸಾವು ಸಂಭವಿಸಿದೆ. ಜೂನ್ 11ರಂದು ಮರಣೋತ್ತರ ಪರೀಕ್ಷೆ ನಡೆದಿದೆ. ಈ ವಿಳಂಬಕ್ಕೆ ಕಾರಣವನ್ನು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಿಲ್ಲ. ದೋಷಾರೋಪ ಪಟ್ಟಿಯಲ್ಲಿ ಹಲವು ಲೋಪದೋಷಗಳಿವೆ. ಇದೊಂದು ಕಳಪೆ ತನಿಖೆಯಾಗಿದ್ದು, ಪೊಲೀಸರು ನಾಟಕ ಮಾಡಿದ್ದಾರೆ’ ಎಂದು ನಾಗೇಶ್ ವಾದಿಸಿದರು.

‘ಮೃತದೇಹವನ್ನು ಕೋಲ್ಡ್ ಸ್ಟೋರೇಜ್‌ನಲ್ಲಿ ಇಟ್ಟಿದ್ದರಿಂದ ಸಾವಿನ ಸಮಯವನ್ನು ಅಂದಾಜಿಸಲು ಸಾಧ್ಯವಾಗಿಲ್ಲ ಎಂಬುದಾಗಿ ವೈದ್ಯರು ನೀಡಿದ್ದ ಮರಣೋತ್ತರ ಪರೀಕ್ಷಾ ವರದಿಯಲ್ಲಿ ತಿಳಿಸಲಾಗಿದೆ. ಆದರೆ, ತನಿಖಾಧಿಕಾರಿಗಳು ಫೋಟೊ ನೋಡಿ ಸಾವಿನ ಸಮಯವನ್ನು ಉಲ್ಲೇಖಿಸಿದ್ದಾರೆ. ಇದು ಸರಿಯಾದ ಕ್ರಮವಲ್ಲ’ ಎಂದರು.

‘ದರ್ಶನ್ ಮನೆಯಲ್ಲಿ ₹37.5 ಲಕ್ಷ ಜಪ್ತಿ ಮಾಡಿಕೊಳ್ಳಲಾಗಿತ್ತು ಎಂದು ವಿವರಿಸಲಾಗಿದೆ. ಆ ಹಣವನ್ನು ಕೊಲೆ ಪ್ರಕರಣ ಮುಚ್ಚಿ ಹಾಕಲು ಬಳಸಿದ್ದರು ಎಂದು ಹೇಳಿದ್ದಾರೆ. ಆದರೆ, ಆ ಹಣ ದರ್ಶನ್ ಅವರಿಗೆ ಮೇ 2ರಂದೇ ಬಂದಿತ್ತು. ಮೋಹನ್ ರಾಜ್ ತಮ್ಮ ಪುತ್ರಿಯ ಅಲ್ಬಂ ಸಾಂಗ್‌ಗೆಂದು ದರ್ಶನ್‌ರಿಂದ ಫೆಬ್ರುವರಿಯಲ್ಲಿ ಸಾಲ ಪಡೆದಿದ್ದರು. ಅದನ್ನು ವಾಪಸು ನೀಡಿದ್ದರು. ಸಾಕ್ಷಿಗಳಿಗೆ ಕೊಡಲೆಂದೇ ಹಣ ಸಂಗ್ರಹಿಸಿಟ್ಟಿದ್ದರು ಎನ್ನಲು ಹೇಗೆ ಸಾಧ್ಯ’ ಎಂದರು

‘ರಾತ್ರಿ ವೇಳೆ ಹೇಳಿಕೆ ದಾಖಲಿಸುವ ಅಭ್ಯಾಸ’

‘ಜೂನ್ 18, 19ರಂದು ಸ್ವ–ಇಚ್ಛಾ ಹೇಳಿಕೆ ಪಡೆದಿದ್ದು, ಎರಡು ಹೇಳಿಕೆಗಳ ಅಂಶಗಳು ವ್ಯತಿರಿಕ್ತವಾಗಿವೆ. ಪೊಲೀಸರಿಗೆ ರಾತ್ರಿ ವೇಳೆ ಹೇಳಿಕೆ ದಾಖಲಿಸುವ ಅಭ್ಯಾಸವಿದೆ’ ಎಂದು ನಾಗೇಶ್ ಹೇಳಿದರು.

‘ರಿಮ್ಯಾಂಡ್ ಅರ್ಜಿಯಲ್ಲಿ ಕೆಲವು ಸಾಕ್ಷಿಗಳ ಹೆಸರಿಲ್ಲ. ಕರೆ ವಿವರ ಆಧಾರದ ಮೇರೆಗೆ ಒಳಸಂಚು ಎಂದು ಬಿಂಬಿಸಲಾಗಿದೆ. ಆದರೆ, ಪವಿತ್ರಾ ಹಾಗೂ ದರ್ಶನ್ ಇಬ್ಬರೂ ಸ್ನೇಹಿತರು. ಜ.1ರಿಂದ ಜೂನ್ 9ವರೆಗೆ 342 ಬಾರಿ ಕರೆ ಮಾಡಿದ್ದಾರೆ. ಕರೆ ಆಧಾರದಲ್ಲಿ ಕೊಲೆ ಸಂಚು ರೂಪಿಸಲಾಗಿದೆ ಎಂದು ತನಿಖಾಧಿಕಾರಿಗಳು ನಿರ್ಧರಿಸಿದಂತಿದೆ. ಸ್ಟೋನಿ ಬ್ರೂಕ್ ರೆಸ್ಟೋರೆಂಟ್‌ನಲ್ಲಿ ಕುಳಿತು ಊಟ ಮಾಡಿದರೂ ಸಂಚು ಎಂದು ಭಾವಿಸಬಹುದಾ’ ಎಂದು ವಕೀಲರು ಪ್ರಶ್ನಿಸಿದರು.

ಮುಡಾ: ದಾಖಲೆ ನೀಡಲು ಹೈರಾಣು

ಪ್ರಜಾವಾಣಿ ವಾರ್ತೆ

ಮೈಸೂರು: ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ನೇತೃತ್ವದ ಏಕಸದಸ್ಯ ವಿಚಾರಣಾ ಸಮಿತಿ ಹಾಗೂ ಲೋಕಾಯುಕ್ತ ಪೊಲೀಸರು ಮುಡಾ ಪ್ರಕರಣವನ್ನು ಪ್ರತ್ಯೇಕವಾಗಿ ತನಿಖೆ ನಡೆಸುತ್ತಿದ್ದು, ಅವುಗಳಿಗೆ ಪೂರಕ ದಾಖಲೆಗಳನ್ನು ಒದಗಿಸುವಲ್ಲಿ ಮುಡಾ ಸಿಬ್ಬಂದಿ ಹೈರಾಣಾಗಿದ್ದಾರೆ.

ಮುಡಾದಲ್ಲಿ 50:50 ಅನುಪಾತದಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ತನಿಖೆಗೆ ರಾಜ್ಯ ಸರ್ಕಾರವು ಇದೇ ವರ್ಷ ಜುಲೈ 14ರಂದು ಏಕಸದಸ್ಯ ವಿಚಾರಣಾ ಸಮಿತಿಯನ್ನು ನೇಮಿಸಿತ್ತು. ನಿವೃತ್ತ ನ್ಯಾಯಮೂರ್ತಿಗಳು ಈಗಾಗಲೇ ಹಲವು ಬಾರಿ ಮುಡಾ ಕಚೇರಿಗೆ ಬಂದು ಹೋಗಿದ್ದಾರೆ. ಆಯೋಗಕ್ಕೆ ಸುಮಾರು 8 ಲಕ್ಷ ಪುಟಗಳಷ್ಟು ದಾಖಲೆಗಳ ಪ್ರತಿಗಳು ಅವಶ್ಯವಿದೆ ಎನ್ನಲಾಗಿದ್ದು, ಅವೆಲ್ಲವನ್ನೂ ಜೆರಾಕ್ಸ್ ಮಾಡಿ, ದೃಢೀಕರಿಸಿ ನಂತರ ಆಯೋಗದ ಬಳಕೆಗೆ ನೀಡಲಾಗುತ್ತಿದೆ. ಮುಡಾದಲ್ಲಿ ಈಗಾಗಲೇ 9 ಜೆರಾಕ್ಸ್ ಯಂತ್ರಗಳಿದ್ದು, ಅದರೊಟ್ಟಿಗೆ ಹೆಚ್ಚುವರಿಯಾಗಿಯೂ ಯಂತ್ರಗಳನ್ನು ಖರೀದಿಸಲಾಗಿದೆ.

ಮತ್ತೊಂದೆಡೆ ಲೋಕಾಯುಕ್ತ ಪೊಲೀಸರ ಒಂದು ತಂಡವು ಮುಡಾದಲ್ಲಿ ಕೆಲವು ದಿನಗಳಿಂದ ಬೀಡು ಬಿಟ್ಟಿದ್ದು, ದಾಖಲೆಗಳನ್ನು ಜಾಲಾಡುತ್ತಿದೆ.

> **ಮುಖ್ಯಮಂತ್ರಿಯವರ ಪತ್ನಿಗೆ ನಿವೇಶನಗಳನ್ನು ಕೊಟ್ಟಿದ್ದು ಮುಡಾ. ಹೀಗಾಗಿ ಅದು ಅಕ್ರಮವೋ ಸಕ್ರಮವೋ ಎಂಬುದನ್ನು ಅಲ್ಲಿನ ಅಧಿಕಾರಿಗಳೇ ಹೇಳಬೇಕು**
> **ಕೆ. ವೆಂಕಟೇಶ್**
> ಪಶುಸಂಗೋಪನಾ ಸಚಿವ

> **ತಮ್ಮ ನಿವೇಶನಗಳಿಗೂ ಸಂಚಕಾರ ಬರಬಹುದು ಎಂಬ ಭಯ ಜಿ.ಟಿ.ದೇವೇಗೌಡ ಅವರನ್ನು ಕಾಡುತ್ತಿರಬಹುದು. ಹಾಗಾಗಿಯೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ನಿಂತಿದ್ದಾರೆ**
> **ಎನ್. ರವಿಕುಮಾರ್**
> ವಿಧಾನಪರಿಷತ್ತಿನ ಬಿಜೆಪಿ ಸದಸ್ಯ

ಮುಂದುವರಿದ ಕಡತ ಪರಿಶೀಲನೆ: ಮುಡಾ ಕಚೇರಿಯಲ್ಲಿ ಶನಿವಾರ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಕಡತಗಳ ಪರಿಶೀಲನೆ ಕಾರ್ಯ ಮುಂದುವರಿಸಿದರು.

ಬೆಳಿಗ್ಗೆ ಮುಡಾ ಕಚೇರಿಗೆ ಬಂದ ಅಧಿಕಾರಿಗಳ ತಂಡವು ಸಂಜೆವರೆಗೆ ಕೆಸರೆ ಗ್ರಾಮದ ಸರ್ವೆ ಸಂಖ್ಯೆ 464 ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ಬದಲಿ ನಿವೇಶನಗಳ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಕಲೆಹಾಕಿತು. ಯಾವ ಸಭೆಯಲ್ಲಿ ಬದಲಿ ನಿವೇಶನ ಹಂಚಿಕೆಗೆ ನಿರ್ಧಾರ ಕೈಕೊಳ್ಳಲಾಗಿತ್ತು? ಸಭೆಯ ನಡಾವಳಿಗಳೇನು? ಯಾರೆಲ್ಲ ಪಾಲ್ಗೊಂಡಿದ್ದರು ಎಂಬ ಮಾಹಿತಿ ಸಂಗ್ರಹಿಸಿದರು. ಸಭೆಯದ್ದು ಎನ್ನಲಾದ ಧ್ವನಿ ಮುದ್ರಣ ಮಾದರಿಯನ್ನೂ ತಂಡ ಪಡೆದುಕೊಂಡಿತು ಎಂದು ಮೂಲಗಳು ತಿಳಿಸಿವೆ.

ಪಾರ್ವತಿ ಅವರಿಗೆ ವಿಜಯನಗರ ಮೂರನೇ ಹಂತದಲ್ಲಿ ನೀಡಿದ್ದ ವಿವಿಧ ಅಳತೆಯ, ಒಟ್ಟು 38 ಸಾವಿರ ಚದರ ಅಡಿ ನಿವೇಶನಗಳ ಮಹಜರು ಕಾರ್ಯವನ್ನು ಶುಕ್ರವಾರವಷ್ಟೇ ಲೋಕಾಯುಕ್ತ ಅಧಿಕಾರಿಗಳು ಕೈಗೊಂಡು, ಅದರ ವರದಿಯನ್ನು ದಾಖಲಿಸಿಕೊಂಡಿದ್ದರು.

‘ಅಕ್ರಮ ನಿವೇಶನ ವಾಪಸ್ ಮಾಡದಿದ್ದರೆ, ಸರ್ಕಾರದ ವಶಕ್ಕೆ’

ಮೈಸೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ನಿವೇಶನಗಳನ್ನು ವಾಪಸ್ ಕೊಟ್ಟಿದ್ದಾರೆ. ಮುಡಾದಿಂದ ಕಾನೂನುಬಾಹಿರವಾಗಿ ನಿವೇಶನ ಪಡೆದಿರುವ ಎಲ್ಲರೂ ಅದೇ ರೀತಿ ವಾಪಸ್ ಕೊಟ್ಟರೆ ಗೌರವ. ಇಲ್ಲದಿದ್ದರೆ, ಸರ್ಕಾರ ರಚಿಸಿರುವ ಸಮಿತಿಯ ವರದಿ ಆಧರಿಸಿ ಅವುಗಳನ್ನು ಹಿಂಪಡೆಯಲಾಗುವುದು’ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ಚಲುವರಾಯ ಸ್ವಾಮಿ

ಇಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಮುಡಾದಲ್ಲಿ ಶೇ 50:50 ಅನುಪಾತದಲ್ಲಿ ನಿವೇಶನಗಳ ಹಂಚಿಕೆ ಕಾನೂನು ಪ್ರಕಾರವಾಗಿ ನಡೆದಿಲ್ಲ. ಪರಿಹಾರ ಪಡೆದವರಿಗೆ ಒಂದು ನಿವೇಶನ, ಪಡೆಯದೇ ಇದ್ದವರಿಗೆ ಹೆಚ್ಚು ನಿವೇಶನ ಕೊಡಬೇಕೆಂಬ ನಿಯಮವಿದೆ. ಈ ಬಗ್ಗೆ ಗೊಂದಲಗಳಿವೆ’ ಎಂದರು.

‘ಶಾಸಕ ಜಿ.ಟಿ. ದೇವೇಗೌಡರ ಹೆಸರಿನಲ್ಲಿಯೂ ನಿವೇಶನವಿದ್ದು, ಆ ಕಾರಣಕ್ಕೆ ಅವರು ಸಿದ್ದರಾಮಯ್ಯ ಪರ ಮಾತನಾಡಿದ್ದಾರೆ’ ಎಂಬ ಆರೋಪದ ಬಗ್ಗೆ ಪ್ರತಿಕ್ರಿಯಿಸಿ, ‘ಮುಡಾದಲ್ಲಿ ಅವರದ್ದು ಮಾತ್ರವಲ್ಲ, ಬೇಕಾದಷ್ಟು ಜನರ ಬೇನಾಮಿ ನಿವೇಶನಗಳಿವೆ. ಅವರೇ ವಾಪಸ್ ಕೊಡುತ್ತಾರೆಯೇ ಇಲ್ಲವೇ ಸರ್ಕಾರವೇ ವಾಪಸ್ ಪಡೆದುಕೊಳ್ಳಬೇಕೇ ನೋಡೋಣ’ ಎಂದರು.

‘ನಾನು ಮುಖ್ಯಮಂತ್ರಿ ಹುದ್ದೆ ರೇಸ್‌ನಲ್ಲಿ ಇಲ್ಲ. ಸದ್ಯ ಆ ಕುರ್ಚಿ ಖಾಲಿಯೂ ಇಲ್ಲ. ಎಲ್ಲರೂ ಸಿದ್ದರಾಮಯ್ಯ ಜೊತೆಗಿದ್ದೇವೆ. ಸಿದ್ದರಾಮಯ್ಯ–ಡಿ.ಕೆ. ಶಿವಕುಮಾರ್ ಜೋಡೆತ್ತಿನಂತೆ ಸರ್ಕಾರ ಮುನ್ನಡೆಸುತ್ತಿದ್ದಾರೆ’ ಎಂದರು.

‘ಲೋಕಾಯುಕ್ತ ಪೊಲೀಸರು ನ್ಯಾಯಸಮ್ಮತ ತನಿಖೆ ನಡೆಸಲಿದ್ದು, ಸಿದ್ದರಾಮಯ್ಯ ನಿರ್ದೋಷಿ ಎಂದು ವರದಿ ಬರುವ ವಿಶ್ವಾಸವಿದೆ’ ಎಂದರು.

ಜಾನುವಾರುಗಳಿಗೆ ವಿಮೆ: ‘ಜಾನುವಾರುಗಳಿಗೂ ವಿಮೆ ಕಲ್ಪಿಸುವ ಯೋಜನೆಯ ಕುರಿತು ಪಶು ಸಂಗೋಪನೆ ಸಚಿವರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಚರ್ಚಿಸುವೆ’ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ಇಲ್ಲಿನ ಜೆ.ಕೆ. ಮೈದಾನದಲ್ಲಿ ಶನಿವಾರ ರೈತ ದಸರಾ ಉದ್ಘಾಟಿಸಿ ಅವರು ಮಾತನಾಡಿ, ‘ಕೆಲವು ಹಳ್ಳಿಕಾರ್ ತಳಿಯ ಹಸುಗಳು ₹8–10 ಲಕ್ಷ ಮೌಲ್ಯ ಹೊಂದಿದ್ದು, ಅವು ಸತ್ತಾಗ ರೈತರಿಗೆ ಭಾರಿ ನಷ್ಟವಾಗುತ್ತದೆ. ಹೀಗಾಗಿ ಅವುಗಳಿಗೂ ವಿಮೆಯ ಅಗತ್ಯವಿದೆ’ ಎಂದರು.

ಗಣೇಶನ ಮೆರವಣಿಗೆ... ದಾವಣಗೆರೆಯ ಸಾರ್ವಜನಿಕ ಹಿಂದೂ ಮಹಾಗಣಪತಿ ಟ್ರಸ್ಟ್‌ನಿಂದ ಶನಿವಾರ ನಗರದ ಜಯದೇವ ವೃತ್ತದಲ್ಲಿ ನಡೆದ ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆಯಲ್ಲಿ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ: ಸತೀಶ್ ಬಡಿಗೇರ

ಹೈಕಮಾಂಡ್ ಆಗಿಂದಾಗ್ಗೆ ವರದಿ ತರಿಸಿಕೊಳ್ಳುತ್ತದೆ- ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ರಾಜಕೀಯ ಬೆಳವಣಿಗೆ ಕುರಿತು ಹೈಕಮಾಂಡ್ ಆಗಿಂದಾಗ್ಗೆ ವರದಿ ತರಿಸಿಕೊಳ್ಳುತ್ತದೆ. ಸುಮ್ಮನೆ ಕೂರುವುದಿಲ್ಲ. ನಾವು ವರದಿ ಕಳುಹಿಸಲಿದ್ದು, ಇದಕ್ಕಾಗಿ ಪ್ರತ್ಯೇಕ ತಂಡ ಇದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸಚಿವ ಸತೀಶ ಜಾರಕಿಹೊಳಿಯವರಿಂದ ಖರ್ಗೆ ಭೇಟಿ, ಮುಖ್ಯಮಂತ್ರಿ ಬದಲಾವಣೆ ವದಂತಿ ಕುರಿತ ಪ್ರಶ್ನೆಗೆ ಅವರು, ‘ನಮ್ಮ (ಕಾಂಗ್ರೆಸ್) ನಾಯಕರು ನಮ್ಮ ಪಕ್ಷದ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರನ್ನಲ್ಲದೆ ಇನ್ಯಾರನ್ನು ಭೇಟಿ ಮಾಡಬೇಕು. ಅದಕ್ಕೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯ ಇಲ್ಲ. ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಯಾವುದೇ ಚರ್ಚೆ ಇಲ್ಲ’ ಎಂದು ಪುನರುಚ್ಚರಿಸಿದರು.

‘ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ರಾಜ್ಯಕ್ಕೆ ಬರುತ್ತಿರುವ ಬಗ್ಗೆ ನನಗೆ ಯಾವುದೇ ಮಾಹಿತಿ ಬಂದಿಲ್ಲ. ನಾನು ದೆಹಲಿಗೆ ಹೋಗುವ ಉದ್ದೇಶವೂ ಇಲ್ಲ’ ಎಂದರು.

‘ಗುಪ್ತ ಸಭೆ ಮಾಡಿ, ದೆಹಲಿಗೆ ಭೇಟಿ ನೀಡುವುದು ಯಾವ ಸಂದೇಶ ರವಾನಿಸುತ್ತದೆ’ ಎಂದು ಕೇಳಿದಾಗ, ‘ಹೈಕಮಾಂಡ್ ನಾಯಕರನ್ನು ಸಚಿವರು, ಶಾಸಕರು ಭೇಟಿ ಮಾಡುವುದು ಸ್ವಾಭಾವಿಕ’ ಎಂದು ಅವರು ಹೇಳಿದರು.

‘ಜಾತಿ ಗಣತಿ: ಪಕ್ಷದ ನೀತಿ ಮುಖ್ಯ’

‘ಜಾತಿ ಗಣತಿ ವಿಚಾರದಲ್ಲಿ ವೈಯಕ್ತಿಕ ಅಭಿಪ್ರಾಯವೇ ಬೇರೆ, ಪಕ್ಷದ ಅಧ್ಯಕ್ಷನಾಗಿ ಅಭಿಪ್ರಾಯವೇ ಬೇರೆ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.



ಡಿ.ಕೆ. ಶಿವಕುಮಾರ್

ಮುಂದಿನ ಸಚಿವ ಸಂಪುಟದಲ್ಲಿ ಜಾತಿ ಗಣತಿ ವಿಚಾರ ಚರ್ಚೆ ನಡೆಸುವ ಬಗ್ಗೆ ಕೇಳಿದಾಗ, ‘ಈ ವಿಚಾರದಲ್ಲಿ ಪಕ್ಷದ ನೀತಿಯಂತೆ ನಾವು ನಡೆಯಬೇಕಿದೆ. ಪಕ್ಷದ ನೀತಿಯನ್ನು ನಾನೊಬ್ಬನೇ ತೀರ್ಮಾನಿಸಲು ಆಗುವುದಿಲ್ಲ. ಇಡೀ ಪಕ್ಷ ಹಾಗೂ ವರಿಷ್ಠರು ತೀರ್ಮಾನಿಸುತ್ತಾರೆ. ರಾಹುಲ್ ಗಾಂಧಿ ನಮಗೆ ನಿರ್ದಿಷ್ಟ ನಿರ್ದೇಶನ ನೀಡಿದ್ದು, ಪಕ್ಷದ ಪ್ರಣಾಳಿಕೆಯಲ್ಲಿ ಕೆಲವು ವಿಚಾರ ಪ್ರಸ್ತಾಪವಾಗಿವೆ. ಎಲ್ಲವನ್ನೂ ಗಮನದಲ್ಲಿಟ್ಟು ತೀರ್ಮಾನಿಸಲಾಗುವುದು’ ಎಂದರು.

‘ಸತ್ಯಶೋಧನಾ ಸಮಿತಿ ವರದಿ: ಶೀಘ್ರ ಚರ್ಚೆ’

ಬೆಂಗಳೂರು: ‘ಲೋಕಸಭೆ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳ ಸೋಲು– ಗೆಲುವಿನ ಪರಾಮರ್ಶೆಗೆ ರಚಿಸಿರುವ ಸತ್ಯಶೋಧನಾ ಸಮಿತಿ ನೀಡುವ ವರದಿಯ ಕುರಿತು ಶೀಘ್ರ ಚರ್ಚಿಸುತ್ತೇವೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು. ಹಾಸನ, ಮಂಡ್ಯ, ಮೈಸೂರು, ಕೊಡಗು ಜಿಲ್ಲೆಗಳ ಪ್ರವಾಸ ಮಾಡಿ ವಿ.ಆರ್. ಸುದರ್ಶನ್ ನೇತೃತ್ವದ ಸಮಿತಿಯು ತನ್ನ ವರದಿಯನ್ನು ಶಿವಕುಮಾರ್ ಅವರಿಗೆ ಶನಿವಾರ ಸಲ್ಲಿಸಿತು.

ಈ ವೇಳೆ ಮಾತನಾಡಿದ ಶಿವಕುಮಾರ್, ‘ಸುದರ್ಶನ್ ನೇತೃತ್ವದ ಸಮಿತಿ ನೀಡಿರುವ ಮತ್ತು ರಾಜ್ಯದ ಇತರ ವಲಯಗಳ ಸಮಿತಿಗಳು ಸಲ್ಲಿಸುವ ವರದಿಯನ್ನು ಸೇರಿಸಿ ಒಟ್ಟಿಗೆ ಚರ್ಚಿಸುತ್ತೇವೆ’ ಎಂದರು.

‘ಎಐಸಿಸಿಯೂ ಇಂತಹ ಸಮಿತಿ ಕಳುಹಿಸಿತ್ತಲ್ಲವೇ?’ ಎಂಬ ಪ್ರಶ್ನೆಗೆ,‘ಅವರು ಪಕ್ಷದ ಕೇಂದ್ರ ಕಚೇರಿಗೆ ಬಂದಿದ್ದರು. ನಾವು ರಚಿಸಿರುವ ಸಮಿತಿ ಎಲ್ಲ ಜಿಲ್ಲೆಗಳಲ್ಲಿ ಪ್ರವಾಸ ಮಾಡಿದೆ. ವಾರದೊಳಗೆ ವರದಿ ಸಲ್ಲಿಸಲು ಇತರ ಸಮಿತಿಗಳಿಗೂ ಸೂಚಿಸಿದ್ದೇನೆ’ ಎಂದರು.

ನಿಗಮ –ಮಂಡಳಿ ನೇಮಕ ವಿಳಂಬಕ್ಕೆ ಅಸಮಾಧಾನ ವ್ಯಕ್ತವಾಗುತ್ತಿರುವ ಬಗ್ಗೆ ಕೇಳಿದಾಗ, ‘ನೇಮಕ ಪ್ರಕ್ರಿಯೆಗೆ ನಾವು ಸಮಿತಿ ರಚಿಸಿದ್ದು, ಶಾಸಕರು ಸೇರಿ ಮುಖಂಡರ ಜತೆ ಚರ್ಚಿಸಲಾಗುವುದು. ಮುಂದಿನ ವಾರ ನೇಮಕ ಪಟ್ಟಿ ಅಂತಿಮ ಆಗಲಿದೆ’ ಎಂದರು.

ಟ್ರಕ್ ಟ್ರಮಿನಲ್ ಪ್ರಕರಣ: ತನಿಖೆ ಚುರುಕು

ಎಇಇ ಬಂಧಿಸಿದ ಸಿಐಡಿ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್ ನಿಯಮಿತದಲ್ಲಿ (ಡಿಡಿಯುಟಿಟಿಎಲ್) ನಡೆದಿದ್ದ ₹47.10 ಕೋಟಿ ಅಕ್ರಮ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಐಡಿ ಪೊಲೀಸರು, ಮತ್ತೊಬ್ಬ ಆರೋಪಿಯನ್ನು ಬಂಧಿಸಿದ್ದಾರೆ.

ಪಂಚಾಯತ್‌ರಾಜ್ ಇಲಾಖೆಯ ಮಾಗಡಿ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಚರಣ್ ಕುಮಾರ್ ಬಂಧಿತ ಆರೋಪಿ. ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ ನಾಲ್ಕಕ್ಕೆ ಏರಿಕೆಯಾಗಿದೆ.

‘ಶುಕ್ರವಾರ ರಾತ್ರಿ ಆರೋಪಿಯನ್ನು ಬಂಧಿಸಿದ್ದು, ವಿಚಾರಣೆ ನಡೆಸಲಾಯಿತು. ವೈದ್ಯಕೀಯ ಪರೀಕ್ಷೆ ಬಳಿಕ ಶನಿವಾರ ಕೋರ್ಟ್‌ಗೆ ಹಾಜರು ಪಡಿಸಲಾಯಿತು. ಕೋರ್ಟ್ ಆರೋಪಿಗೆ 14 ದಿನ ನ್ಯಾಯಾಂಗ ಬಂಧನ ವಿಧಿಸಿದೆ’ ಎಂದು ಮೂಲಗಳು ತಿಳಿಸಿವೆ.

‘ಜಲಸಂಪನ್ಮೂಲ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಚರಣ್ ಕುಮಾರ್ ಅವರನ್ನು ನಿಯೋಜನೆ ಮೇರೆಗೆ ಡಿಡಿಯುಟಿಟಿಎಲ್‌ಗೆ ವರ್ಗಾವಣೆ ಮಾಡಲಾಗಿತ್ತು. ಕಾಮಗಾರಿ ನಡೆಯದಿದ್ದರೂ, 300ಕ್ಕೂ ಕಾಮಗಾರಿ ಪೂರ್ಣಗೊಂಡಿದ್ದಾಗಿ ಚರಣ್‌ಕುಮಾರ್ ದೃಢೀಕರಿಸಿದ್ದರು’ ಎಂದು ಸಿಐಡಿ ಪೊಲೀಸರು ತಿಳಿಸಿದರು.

‘ಹಿರಿಯ ಅಧಿಕಾರಿಗಳು ಹಾಗೂ ರಾಜಕೀಯ ಮುಖಂಡರ ಒತ್ತಡಕ್ಕೆ ಒಳಗಾಗಿ ದೃಢೀಕರಣ ಪತ್ರ ನೀಡಿದ್ದೆ ಎಂಬುದಾಗಿ ಆರೋಪಿ ವಿಚಾರಣೆ ವೇಳೆ ಹೇಳಿಕೆ ನೀಡಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಇದೇ ಪ್ರಕರಣದಲ್ಲಿ ಬಂಧಿತರಾಗಿದ್ದ ಟರ್ಮಿನಲ್‌ನ ಮಾಜಿ ಅಧ್ಯಕ್ಷ, ವಿಧಾನ ಪರಿಷತ್ ಬಿಜೆಪಿಯ ಮಾಜಿ ಸದಸ್ಯ ಡಿ.ಎಸ್.ವೀರಯ್ಯ ಜಾಮೀನಿನ ಮೇಲೆ ಬಿಡುಗಡೆ ಆಗಿದ್ದಾರೆ. ಮಾಜಿ ವ್ಯವಸ್ಥಾಪಕ ನಿರ್ದೇಶಕ ಎಸ್.ಶಂಕರಪ್ಪ ಹಾಗೂ ಅವರ ಸಹೋದರ, ರಾಮನಗರ ಜಿಲ್ಲೆ ಮಾಯಾಗನಹಳ್ಳಿಯ ನಿವಾಸಿ ಎಂ.ಎಸ್. ಹೊನ್ನಪ್ಪ ಅವರೂ ನ್ಯಾಯಾಂಗ ಬಂಧನದಲ್ಲಿದ್ದಾರೆ. ಮೂವರು ಗುತ್ತಿಗೆದಾರರು ನಿರೀಕ್ಷಣಾ ಜಾಮೀನು ಪಡೆದುಕೊಂಡಿದ್ದಾರೆ. ತನಿಖೆ ಮುಂದುವರಿಸಲಾಗಿದೆ.

ಪಿಜಿ ನೀಟ್: ನೋಂದಣಿ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ (ಪಿಜಿ ನೀಟ್) ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಳ್ಳಲು ಅ.7ರ ಮಧ್ಯಾಹ್ನ 2ರವರೆಗೆ ಅವಕಾಶ ನೀಡಲಾಗಿದೆ.

ಈವರೆಗೆ ನೋಂದಣಿ ಮಾಡದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿ, ಶುಲ್ಕ ಪಾವತಿಸುವ ಮೂಲಕ ಪ್ರಕ್ರಿಯೆ ಪೂರ್ಣಗೊಳಿಸಬಹುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ಈಗಾಗಲೇ ನೋಂದಣಿ ಮಾಡಿಕೊಂಡು ಅರ್ಜಿ ಸಲ್ಲಿಸಿ, ಶುಲ್ಕ ಪಾವತಿಸಿರುವ ಅಭ್ಯರ್ಥಿಗಳು ಅ.7ರ ಸಂಜೆ 6ರವರೆಗೆ ಅರ್ಜಿಯ ವಿವರಗಳ ತಿದ್ದುಪಡಿಗೆ ಅವಕಾಶ ನೀಡಲಾಗಿದೆ. ಶುಲ್ಕ ಪಾವತಿಸದವರು ಶುಲ್ಕ ಪಾವತಿಸಿ, ತಿದ್ದುಪಡಿ ಮಾಡಿಸಬಹುದು.

ಕೆಇಎ ಕಚೇರಿಯಲ್ಲಿ ಅ.7ರಿಂದ 18ರವರೆಗೆ ಮೂಲ ದಾಖಲೆಗಳ ಪರಿಶೀಲನೆ ನಡೆಯಲಿದೆ. ಅಭ್ಯರ್ಥಿಗಳು ಖುದ್ದು ಹಾಜರಾಗಬೇಕು. ಈ ಪ್ರಕ್ರಿಯೆ ಮುಗಿಸದವರು ಸೀಟು ಹಂಚಿಕೆ ಪ್ರಕ್ರಿಯೆಗೆ ಅರ್ಹರಾಗುವುದಿಲ್ಲ ಎಂದು ಮಾಹಿತಿ ನೀಡಿದ್ದಾರೆ.

ಲೋಕಸಭೆ ಚುನಾವಣೆಯಲ್ಲಿ ದುಷ್ಮನ್ ಆಗಿದ್ದವರೇ ಸಹಕಾರ ಕ್ಷೇತ್ರದಲ್ಲಿ ದೋಸ್ತಿಗಳು

ರಾಜಕೀಯ ಧ್ರುವೀಕರಣಕ್ಕೆ ಕಾರಣವಾದ ‘ಬಿಡಿಸಿಸಿ’

• ಸಂತೋಷ ಈ. ಚಿನಗುಡಿ

ಬೆಳಗಾವಿ: ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿಗೆ (ಬಿಡಿಸಿಸಿ) ರಮೇಶ ಕತ್ತಿ ರಾಜೀನಾಮೆ ನೀಡುವ ಮೂಲಕ, ಜಿಲ್ಲೆಯ ರಾಜಕಾರಣದಲ್ಲಿ ಮತ್ತೊಮ್ಮೆ ಧ್ರುವೀಕರಣ ಆರಂಭವಾಗಿದೆ. ಲೋಕಸಭಾ ಚುನಾವಣೆಯಲ್ಲಿ ಬದ್ಧ ವೈರಿಗಳಾಗಿದ್ದವರು ಈಗ ದೋಸ್ತಿ ಆಗಿದ್ದರೆ; ಆಗ ಗೆಳೆಯರಾಗಿದ್ದವರು ಈಗ ವಿರೋಧಿಗಳು.

ಚಿಕ್ಕೋಡಿ ಲೋಕಸಭಾ ಕ್ಷೇತ್ರದ ಟಿಕೆಟ್‌ಗೆ ಅಣ್ಣಾಸಾಹೇಬ ಜೊಲ್ಲೆ ಹಾಗೂ ರಮೇಶ ಕತ್ತಿ ಪೈಪೋಟಿ ನಡೆಸಿದ್ದರು. ಇದೇ ಕ್ಷೇತ್ರದಿಂದ ಇಬ್ಬರೂ ಒಂದೊಂದು ಬಾರಿ ಸಂಸದರಾಗಿದ್ದಾರೆ. ಬಿಜೆಪಿ ಅಣ್ಣಾಸಾಹೇಬ ಅವರಿಗೆ ಅವಕಾಶ ನೀಡಿತು. ಮುನಿಸಿಕೊಂಡ ರಮೇಶ ಕತ್ತಿ ಪ್ರಚಾರದಿಂದ ದೂರ ಉಳಿದರು. ಪರೋಕ್ಷವಾಗಿ ಕಾಂಗ್ರೆಸ್ ಅಭ್ಯರ್ಥಿ, ಸಚಿವ ಸತೀಶ ಜಾರಕಿಹೊಳಿ ಅವರ ಪುತ್ರಿ ಪ್ರಿಯಾಂಕಾ ಗೆಲುವಿಗೆ ಕಾರಣವಾದರು ಎಂಬುದು ಅಣ್ಣಾಸಾಹೇಬ ಮನಸ್ತಾಪ.

‘ನನ್ನನ್ನು ಸೋಲಿಸಿದವರು ಹೇಗೆ ಅಧಿಕಾರದಲ್ಲಿ ಇರುತ್ತಾರೋ ನೋಡುತ್ತೇನೆ’ ಎಂದು ಅಣ್ಣಾಸಾಹೇಬ ಆಗ ಬಹಿರಂಗವಾಗಿ ತೊಡೆ ತಟ್ಟಿದ್ದರು. ಹೈ ಕಮಾಂಡ್‌ಗೂ ದೂರು ಸಲ್ಲಿಸಿದ್ದರು.

ರಮೇಶ ಕತ್ತಿ

ಅಣ್ಣಾಸಾಹೇಬ

ರಮೇಶ ಜಾರಕಿಹೊಳಿ

ಲಕ್ಷ್ಮಣ ಸವದಿ

‘ಲೋಕಸಭೆ ರಾಜಕಾರಣದ ಸೇಡನ್ನು ಅಣ್ಣಾಸಾಹೇಬ ಸಹಕಾರ ಕ್ಷೇತ್ರದಲ್ಲಿ ತೀರಿಸಿಕೊಂಡಿದ್ದಾರೆ. ‘ಸಂಗನಮತ’ ಮಾಡಿಕೊಂಡು ರಮೇಶ ಕತ್ತಿ ಅವರನ್ನು ಅಧ್ಯಕ್ಷ ಸ್ಥಾನದಿಂದ ಇಳಿಸಿದ್ದಾರೆ’ ಎಂಬುದು ಧುರೀಣರ ವಿಶ್ಲೇಷಣೆ.

ಆಗ ದುಷ್ಮನ್, ಈಗ ದೋಸ್ತ್: ಚಿಕ್ಕೋಡಿಯಲ್ಲಿ ಕಾಂಗ್ರೆಸ್‌ನಿಂದ ಪ್ರಿಯಾಂಕಾ ಜಾರಕಿಹೊಳಿ ಕಣಕ್ಕಿಳಿದ ಕಾರಣ, ಶಾಸಕರಾದ ರಮೇಶ ಜಾರಕಿಹೊಳಿ ಹಾಗೂ ಬಾಲಚಂದ್ರ ಜಾರಕಿಹೊಳಿ ಬಿಜೆಪಿ ಅಭ್ಯರ್ಥಿ ಪರ ಪ್ರಚಾರಕ್ಕೇ ಬರಲಿಲ್ಲ.

‘ಇವರು ಪಕ್ಷಕ್ಕೆ ಹಾನಿ ಮಾಡಿ ಕುಟುಂಬ ಬೆಳೆಸಿದ್ದಾರೆ’ ಎಂದು ಅಣ್ಣಾಸಾಹೇಬ ದೂರಿದ್ದರು. ಅದಕ್ಕೂ ಮುನ್ನ ನಡೆದ ವಿಧಾನಸಭೆ ಚುನಾವಣೆಯಲ್ಲೂ ಶಶಿಕಲಾ ಜೊಲ್ಲೆ ಅವರಿಗೆ ಟಿಕೆಟ್ ತಪ್ಪಿಸಲು ರಮೇಶ ಜಾರಕಿಹೊಳಿ ಯತ್ನಿಸಿದ್ದರು ಎಂಬುದು ಅಣ್ಣಾಸಾಹೇಬ ಆರೋಪ. ಇದೇ ವಿಚಾರ ಎರಡೂ ಕುಟುಂಬಗಳ ಮಧ್ಯೆ ರಾಜಕೀಯ ವೈರತ್ವ ಬೆಳೆಸಿತ್ತು.

ಆದರೆ, ಈಗ ರಮೇಶ ಕತ್ತಿ ಅವರನ್ನು ಕೆಳಗಿಳಿಸಲು ಅದೇ ಅಣ್ಣಾಸಾಹೇಬ ಹಾಗೂ ಜಾರಕಿಹೊಳಿ ಸಹೋದರರು ಒಂದಾದರು.

‘ಚಿಕ್ಕೋಡಿ, ನಿಪ್ಪಾಣಿ ಭಾಗದಲ್ಲಿ ಹೊಸ ಸದಸ್ಯರ ನೇಮಕದ ಬಗ್ಗೆ ಭಿನ್ನಾಭಿಪ್ರಾಯ ಎದ್ದವು. ಅದನ್ನು ಸರಿಪಡಿಸಿ ಎಂದು ಹಿರಿಯರಿಗೆ ಹೇಳಿದ್ದೆ. ಅವರು ಏನೂ ಮಾಡಲಿಲ್ಲ. ಬೇಸರವಾಗಿ ನಾನು ರಾಜೀನಾಮೆ ಕೊಟ್ಟಿದ್ದೇನೆ. ನನ್ನನ್ನು ಕಿತ್ತೊಗೆಯುವ ತಾಕತ್ತು ಯಾರಿಗೂ ಇಲ್ಲ’ ಎಂದು ರಮೇಶ ಕತ್ತಿ ಪ್ರತಿಕ್ರಿಯಿಸಿದ್ದಾರೆ.

ಹೊಸ ಸದಸ್ಯರ ನೇಮಕಕ್ಕೆ ಅಣ್ಣಾಸಾಹೇಬ, ಲಕ್ಷ್ಮಣ ಸವದಿ, ರಮೇಶ ಜಾರಕಿಹೊಳಿ, ಬಾಲಚಂದ್ರ ಜಾರಕಿಹೊಳಿ ಸೇರಿ ಕೆಲ ನಿರ್ದೇಶಕರೂ ಪಟ್ಟು ಹಿಡಿದಿದ್ದಾರೆ. ಆದರೆ, ಸಚಿವ ಸತೀಶ ಜಾರಕಿಹೊಳಿ, ಪ್ರಭಾಕರ ಕೋರೆ ಅವರಂಥ ಹಿರಿಯ ನಾಯಕರು ಸಿದ್ಧರಿಲ್ಲ ಎಂದು ಮೂಲಗಳು ತಿಳಿಸಿವೆ.

‘ಸಚಿವ ಸ್ಥಾನದಷ್ಟೇ ಪ್ರಬಲ ಈ ಹುದ್ದೆ’

ಬಿಡಿಸಿಸಿ ಬ್ಯಾಂಕ್ ಸದ್ಯ ₹7,894.96 ಕೋಟಿ ಠೇವಣಿ, ₹7,894.96 ಕೋಟಿ ದುಡಿಯುವ ಬಂಡವಾಳ ಹೊಂದಿದೆ. ₹5,230.74 ಕೋಟಿ ಸಾಲ ನೀಡಿದೆ. 40 ಲಕ್ಷ ರೈತರು ಇದನ್ನೇ ಅವಲಂಬಿಸಿದ್ದಾರೆ. ರಾಜ್ಯದ ಅತಿ ದೊಡ್ಡ ಬ್ಯಾಂಕ್ ಆಗಿದೆ. ಈ ಬ್ಯಾಂಕ್ ಅಧ್ಯಕ್ಷ ಗಾದಿ ಯಾವುದೇ ಸಚಿವ ಸ್ಥಾನಕ್ಕೂ ಕಮ್ಮಿ ಇಲ್ಲ ಎನ್ನುವುದು ಜನಜನಿತ.

ಅಣ್ಣಾಸಾಹೇಬ ಜೊಲ್ಲೆಗೆ ಅಧ್ಯಕ್ಷ ಪಟ್ಟ?

ಅಕ್ಟೋಬರ್ 8ರಂದು ಬಿಡಿಸಿಸಿ ಬ್ಯಾಂಕ್ ನೂತನ ಅಧ್ಯಕ್ಷರ ಆಯ್ಕೆ ನಡೆಯಲಿದೆ. ಹಿರಿಯರಾದ ಶಾಸಕ ಲಕ್ಷ್ಮಣ ಸವದಿ ನೇತೃತ್ವ ವಹಿಸಲಿದ್ದಾರೆ. ಅಧ್ಯಕ್ಷ ಸ್ಥಾನಕ್ಕೆ ಅಣ್ಣಾಸಾಹೇಬ ಅವರನ್ನೇ ಬಹುಪಾಲು ನಿರ್ದೇಶಕರು ಬೆಂಬಲಿಸಿದ್ದಾರೆ.

41 ವರ್ಷಗಳಿಂದ ನಿರ್ದೇಶಕರಾಗಿರುವ ರಮೇಶ ಕತ್ತಿ, ಆರು ಬಾರಿ ಅಧ್ಯಕ್ಷರಾಗಿದ್ದಾರೆ. ದಶಕಗಳಿಂದಲೂ ಈ ಬ್ಯಾಂಕ್ ಕತ್ತಿ ಕುಟುಂಬದ ಹಿಡಿತದಲ್ಲೇ ಇತ್ತು. ಆ ಸ್ಥಾನಕ್ಕೆ ಈಗ ಅಣ್ಣಾಸಾಹೇಬ ಪಟ್ಟು ಹಿಡಿದಿದ್ದಾರೆ ಎನ್ನುತ್ತವೆ ಮೂಲಗಳು.

ರಾಜ್ಯ ಪಠ್ಯಕ್ರಮ ಬೋಧನೆ ಕಡ್ಡಾಯ; ಮತ್ತೆ ಸುತ್ತೋಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಪಠ್ಯಕ್ರಮ ಬೋಧನೆಗೆ ಅನುಮತಿ ಪಡೆದ ಖಾಸಗಿ ಶಾಲೆಗಳು ರಾಜ್ಯ ಪಠ್ಯಕ್ರಮ ಹಾಗೂ ಪಠ್ಯಪುಸ್ತಕಗಳನ್ನೇ ಅನುಸರಿಸಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಮತ್ತೊಮ್ಮೆ ಸುತ್ತೋಲೆ ಹೊರಡಿಸಿದೆ.

ಕರ್ನಾಟಕ ಶಿಕ್ಷಣ ಕಾಯ್ದೆ ಪ್ರಕಾರ ರಾಜ್ಯ ಪಠ್ಯಕ್ರಮಕ್ಕೆ ಅನುಮತಿ ಪಡೆದ, ಮಾನ್ಯತೆ ನವೀಕರಣಕ್ಕೆ ಅರ್ಜಿ ಸಲ್ಲಿಸಿದ ಎಲ್ಲ ಶಾಲೆಗಳೂ ರಾಜ್ಯ ಪಠ್ಯಕ್ರಮ ಹೊರತುಪಡಿಸಿ ಇತರೆ ಯಾವುದೇ ಪಠ್ಯಕ್ರಮ, ಪಠ್ಯಪುಸ್ತಕ ಅನುಸರಿಸುವಂತಿಲ್ಲ, ಹಾಗೆ ಮಾಡಿದರೆ ಅಂತಹ ಶಾಲೆಗಳ ಮಾನ್ಯತೆ ರದ್ದುಪಡಿಸಲಾಗುವುದು ಎಂದು ಇಲಾಖೆಯ ಆಯುಕ್ತರು ಹೇಳಿದ್ದಾರೆ.

ಕೆಲ ಶಾಲೆಗಳು ಖಾಸಗಿ ಪ್ರಕಾಶಕರಿಂದ ಪಠ್ಯಪುಸ್ತಕ ಖರೀದಿಸುತ್ತಿವೆ. ಕೇಂದ್ರ ಪಠ್ಯಕ್ರಮ ಬೋಧಿಸುತ್ತಿವೆ ಎಂಬ ದೂರುಗಳಿವೆ. ಎಲ್ಲ ಶಾಲೆಗಳು 1ರಿಂದ 10ನೇ ತರಗತಿಯವರೆಗಿನ ವಿದ್ಯಾರ್ಥಿಗಳ ಮಾಹಿತಿಯನ್ನು ಕಡ್ಡಾಯವಾಗಿ ಎಸ್‌ಎಟಿಎಸ್ ತಂತ್ರಾಂಶದಲ್ಲಿ ದಾಖಲು ಮಾಡಬೇಕು. ಕರ್ನಾಟಕ ಪಠ್ಯಪುಸ್ತಕ ಸಂಘಕ್ಕೆ ಬೇಡಿಕೆ ಸಲ್ಲಿಸಿ, ಪಠ್ಯಪುಸ್ತಕ ಖರೀದಿಸಬೇಕು ಎಂದು ಸೂಚಿಸಿದ್ದಾರೆ.

‘ವಕ್ಫ್‌ನಿಂದ ಜಿಲ್ಲೆಗೊಂದು ಮಹಿಳಾ ಕಾಲೇಜು’

ಬೆಂಗಳೂರು: ‘ವಕ್ಫ್ ಮಂಡಳಿಯಿಂದ ಪ್ರತಿ ಜಿಲ್ಲೆಯಲ್ಲೂ ಒಂದೊಂದು ಮಹಿಳಾ ಕಾಲೇಜು ಸ್ಥಾಪನೆ ಮಾಡಲಾಗುವುದು’ ಎಂದು ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್ ಶನಿವಾರ ಹೇಳಿದರು.

ಹಜ್ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ 100 ಮದರಸಾಗಳಲ್ಲಿ ಔಪಚಾರಿಕ ಶಿಕ್ಷಣ ಉಪಕ್ರಮಕ್ಕೆ ಚಾಲನೆ ನೀಡಿದ ಅವರು, ‘ಹಿಜಾಬ್ ವಿವಾದದ ಬಳಿಕ ಉನ್ನತ ಶಿಕ್ಷಣದಿಂದ ದೂರ ಸರಿದಿದ್ದ ವಿದ್ಯಾರ್ಥಿನಿಯರನ್ನು ಮರಳಿ ಉನ್ನತ ಶಿಕ್ಷಣಕ್ಕೆ ತರುವ ಉದ್ದೇಶದಿಂದ ಜಿಲ್ಲಾ ಮಟ್ಟದಲ್ಲಿ ಕಾಲೇಜು ಸ್ಥಾಪನೆ ನಿರ್ಧಾರ ತೆಗೆದುಕೊಳ್ಳಲಾಗಿದೆ’ ಎಂದರು.

‘ಘೋಷಿತ ಕಾಯಿಲೆ’ಯಡಿ ಹಾವು ಕಡಿತ ಪ್ರಕರಣಗಳ ಮೇಲೆ ನಿಗಾ • ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ವ್ಯವಸ್ಥೆ

ಹಾವು ಕಡಿತ: 9 ತಿಂಗಳಲ್ಲಿ 9 ಸಾವಿರ ಪ್ರಕರಣ

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ಹಾವು ಕಡಿತವನ್ನು ‘ಘೋಷಿತ ಕಾಯಿಲೆ’ಯೆಂದು ಗುರುತಿಸಿದ್ದರಿಂದ ಖಾಸಗಿ ಆಸ್ಪತ್ರೆಗಳೂ ಹಾವು ಕಡಿತ ಪ್ರಕರಣಗಳನ್ನು ದಾಖಲಿಸಲಾರಂಭಿಸಿವೆ. ಇದರಿಂದಾಗಿ ಈ ವರ್ಷ ಗರಿಷ್ಠ ಸಂಖ್ಯೆಯಲ್ಲಿ ಹಾವು ಕಡಿತ ಹಾಗೂ ಕಡಿತದಿಂದಾದ ಮರಣ ಪ್ರಕರಣಗಳು ವರದಿಯಾಗಿವೆ.

ಹಾವು ಕಡಿತ ಪ್ರಕರಣಗಳ ವರದಿಯನ್ನು ಆರೋಗ್ಯ ಇಲಾಖೆ ಕಡ್ಡಾಯ ಗೊಳಿಸಿದೆ. ಈ ವರ್ಷ ಒಂಬತ್ತು ತಿಂಗಳ ಅವಧಿಯಲ್ಲಿಯೇ 9,529 ಹಾವು ಕಡಿತ ಪ್ರಕರಣಗಳು ವರದಿಯಾದರೆ, ಕಡಿತದಿಂದ 69 ಮಂದಿ ಮೃತಪಟ್ಟಿದ್ದಾರೆ. ರಾಜ್ಯದಲ್ಲಿ ಹಾವು ಕಡಿತಕ್ಕೆ ಒಳಗಾದವರ ಹಾಗೂ ಈ ಕಡಿತದಿಂದ ಮೃತಪಟ್ಟವರ ಸಮಗ್ರ ಮಾಹಿತಿ ದೊರೆಯದಿದ್ದುದರಿಂದಾಗಿ ಆರೋಗ್ಯ ಇಲಾಖೆಯು ಫೆಬ್ರವರಿ ಯಲ್ಲಿ ಹಾವು ಕಡಿತವನ್ನು ಘೋಷಿತ ಕಾಯಿಲೆಯೆಂದು ಗುರುತಿಸಿತ್ತು.ಇದರಿಂದಾಗಿ ಹಾವು ಕಡಿತಕ್ಕೆ ಒಳಗಾಗಿ ಒಳರೋಗಿ ಹಾಗೂ ಹೊರರೋಗಿಗಳಾಗಿ ಆಸ್ಪತ್ರೆಗೆ ಭೇಟಿ ನೀಡಿದವರು, ಮರಣ ಹೊಂದಿದವರ ವಿವರವನ್ನು ರಾಜ್ಯದ ಎಲ್ಲ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ವೈದ್ಯಕೀಯ ವಿಜ್ಞಾನ ಸಂಸ್ಥೆಗಳು ಕಡ್ಡಾಯವಾಗಿ ಕೇಂದ್ರ ಸರ್ಕಾರದ ಸಮಗ್ರ ಆರೋಗ್ಯ ಮಾಹಿತಿ ವೇದಿಕೆಯಡಿ ದಾಖಲಿಸುತ್ತಿವೆ.

ಹಾವು ಕಡಿತವನ್ನು ಘೋಷಿತ ಕಾಯಿಲೆಯೆಂದು ಗುರುತಿಸಿದ ಮೊದಲ ರಾಜ್ಯ ಕರ್ನಾಟಕವಾಗಿದೆ. ಈ ಕ್ರಮದಿಂದ ಹಾವು ಕಡಿತ ಪ್ರಕರಣಗಳ ಮೇಲೆ ನಿಗಾ ಮತ್ತು ನಿರ್ವಹಣೆ ಇಲಾಖೆಗೆ ಸಾಧ್ಯವಾಗಿದ್ದು, ಮಾರ್ಚ್ ಬಳಿಕ ಅಧಿಕ ಸಂಖ್ಯೆಯಲ್ಲಿ ಹಾವು ಕಡಿತ ಹಾಗೂ ಮರಣ ಪ್ರಕರಣಗಳು ವರದಿಯಾಗುತ್ತಿವೆ. 2022ರಲ್ಲಿ ರಾಜ್ಯದಲ್ಲಿ 3,425 ಹಾವು ಕಡಿತ ಪ್ರಕರಣಗಳು ವರದಿಯಾದರೆ, 17 ಮಂದಿ ಕಡಿತದಿಂದ ಮೃತಪಟ್ಟಿದ್ದರು. ಕಳೆದ ವರ್ಷ 6,596 ಪ್ರಕರಣಗಳು ವರದಿಯಾಗಿವೆ. ಕಡಿತಕ್ಕೆ ಒಳಗಾದವರಲ್ಲಿ 19 ಮಂದಿ ಮೃತಪಟ್ಟಿದ್ದರು. ಕೃಷಿ ಕೆಲಸದಲ್ಲಿ ತೊಡಗಿರುವಾಗ ಹಾವು ಕಚ್ಚಿ ಮೃತಪಟ್ಟವರಿಗೆ ಕೃಷಿ ಇಲಾಖೆಯಿಂದ ₹1 ಲಕ್ಷ ಪರಿಹಾರ ನೀಡುವ ಯೋಜನೆ ಜಾರಿಯಲ್ಲಿದೆ. ಇತರರಿಗೂ ಪರಿಹಾರ ಒದಗಿಸುವ ಬಗ್ಗೆ ಆರೋಗ್ಯ ಇಲಾಖೆಯಿಂದ ಕ್ರಿಯಾಯೋಜನೆ ರೂಪಿಸಲಾಗುತ್ತಿದೆ.

ಚಿಕಿತ್ಸೆಗೆ ವ್ಯವಸ್ಥೆ: ರಾಜ್ಯದ ಎಲ್ಲ ಜಿಲ್ಲಾ ಆಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು ಹಾಗೂ ಆಯ್ದ ಸಮುದಾಯ ಆರೋಗ್ಯ ಕೇಂದ್ರಗಳನ್ನು ಹಾವು ಕಡಿತ ಚಿಕಿತ್ಸಾ ಕೇಂದ್ರಗಳನ್ನಾಗಿ ಗುರುತಿಸಲಾಗಿದೆ. ಹಾವಿನ ನಂಜಿನ ಲಕ್ಷಣಗಳು ವ್ಯಕ್ತಿಗೆ ಕಂಡುಬಂದಲ್ಲಿ ತಕ್ಷಣ ರೋಗಿಯ ಅಥವಾ ಸಂಬಂಧಿಕರ ಒಪ್ಪಿಗೆ ಪತ್ರ ಪಡೆದು, ‘ಆ್ಯಂಟಿ ಸ್ನೇಕ್ ವೆನಮ್’ ಒದಗಿಸಲಾಗುತ್ತಿದೆ. 2030ರ ವೇಳೆಗೆ ಹಾವು ಕಡಿತ ಪ್ರಕರಣ ಹಾಗೂ ಮರಣವನ್ನು ಅರ್ಧದಷ್ಟು ಇಳಿಸುವ ಗುರಿಯನ್ನು ಇಲಾಖೆ ಹಾಕಿಕೊಂಡಿದೆ. ಇದಕ್ಕೆ ಪೂರಕವಾಗಿ ಹಾವು ಕಡಿತಕ್ಕೆ ಒಳಗಾದವರಿಗೆ ಆಂಬುಲೆನ್ಸ್ ಸೇವೆ ಹಾಗೂ ಚಿಕಿತ್ಸೆಗೆ ಆದ್ಯತೆ ನೀಡಲಾಗಿದೆ.

‘ಕೃಷಿ ಕೆಲಸ ಸೇರಿ ವಿವಿಧ ಸಂದರ್ಭದಲ್ಲಿ ಹಾವು ಕಡಿತಕ್ಕೆ ಒಳಗಾದವರು ಚಿಕಿತ್ಸೆ ಪಡೆಯುವುದು ವಿಳಂಬವಾದಲ್ಲಿ ಜೀವಕ್ಕೆ ತೊಂದರೆಯಾಗುತ್ತದೆ. ಘೋಷಿತ ರೋಗವೆಂದು ಗುರುತಿಸಿದ್ದರಿಂದ ಹಾವು ಕಡಿತದಿಂದ ಉಂಟಾಗುತ್ತಿದ್ದ ಪ್ರಾಣ ಹಾನಿ ತಡೆಯಲು ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಒಂದು ವೇಳೆ ಹಾವು ಕಡಿತದಿಂದ ವ್ಯಕ್ತಿ ಮರಣ ಹೊಂದಿದಲ್ಲಿ ‘ಸಾವಿನ ಲೆಕ್ಕಗಳ ವರದಿ’ (ಡೆತ್ ಆಡಿಟ್) ಮಾಡಿಸಲಾಗುತ್ತಿದೆ. ಇದರಿಂದಾಗಿ ಹಾವು ಕಡಿತದ ಬಗ್ಗೆ ಸ್ಪಷ್ಟ ಚಿತ್ರಣ ಸಿಗುತ್ತಿದೆ’ ಎಂದು ಇಲಾಖೆ ಅಧಿಕಾರಿಗಳು ತಿಳಿಸಿದರು.

ನಿರ್ವಹಣೆ ಬಗ್ಗೆ ತರಬೇತಿ

ಹಾವು ಕಡಿತ ಪ್ರಕರಣಗಳ ನಿರ್ವಹಣೆಗೆ ಸಂಬಂಧಿಸಿದಂತೆ ಇಲಾಖೆಯು ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ವೈದ್ಯಕೀಯ ಹಾಗೂ ಪ್ಯಾರಾಮೆಡಿಕಲ್ ಸಿಬ್ಬಂದಿಗೆ ತರಬೇತಿ ನೀಡುತ್ತಿದೆ. ಹಾವು ಕಡಿತಕ್ಕೆ ಒಳಗಾದ ವ್ಯಕ್ತಿಯನ್ನು ಪ್ರಾಣಾಪಾಯದಿಂದ ಪಾರು ಮಾಡಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ತಿಳಿಸಿಕೊಡಲಾಗುತ್ತಿದೆ. ಹಾವು ಕಚ್ಚಿದಾಗ ಜನರು ನಾಟಿ ವೈದ್ಯರ ಬಳಿಗೆ ಹೋಗುವುದರಿಂದ ಅವರಿಗೂ ಪ್ರಥಮ ಚಿಕಿತ್ಸೆ ನೀಡುವುದು ಹೇಗೆ? ಪ್ರಥಮ ಚಿಕಿತ್ಸೆ ನೀಡಿದ ಬಳಿಕ ಏನು ಮಾಡಬೇಕು ಎಂಬ ಬಗ್ಗೆ ತರಬೇತಿ ನೀಡಲು ಇಲಾಖೆ ಮುಂದಾಗಿದೆ.

ಈ ವರ್ಷ ಅಧಿಕ ಹಾವು ಕಡಿತ ಪ್ರಕರಣ ವರದಿಯಾದ ಜಿಲ್ಲೆಗಳು



> ರಾಜ್ಯದಲ್ಲಿ ಹಾವು ಕಚ್ಚಿದ ಹೆಚ್ಚಿನ ಪ್ರಕರಣಗಳು ಈ ಹಿಂದೆ ಗಮನಕ್ಕೆ ಬರುತ್ತಿರಲಿಲ್ಲ. ಘೋಷಿತ ಕಾಯಿಲೆಯೆಂದು ಗುರುತಿಸಿದ ಬಳಿಕ ಹೆಚ್ಚು ಮಾಹಿತಿ ದೊರೆಯುತ್ತಿದೆ
>
> **ಡಾ. ಅನ್ಸರ್ ಅಹಮದ್**, ಆರೋಗ್ಯ ಇಲಾಖೆಯ ಸಮಗ್ರ ರೋಗ ಕಣ್ಗಾವಲು ಯೋಜನೆ (ಐಡಿಎಸ್‌ಪಿ) ನಿರ್ದೇಶಕ

ಸುದ್ದಿ 2 ನಿಮಿಷ

‘ನವೆಂಬರ್ ಒಳಗೆ ಸಾಗುವಳಿ ಹಕ್ಕು’

ಬೆಂಗಳೂರು: ‘ಸಾಗುವಳಿ ಹಕ್ಕು ಕೋರಿ ಸಲ್ಲಿಕೆಯಾಗಿರುವ ಬಗರ್‌ಹುಕುಂ ಅರ್ಜಿಗಳನ್ನು ನವೆಂಬರ್ 30ರ ಒಳಗೆ ಇತ್ಯರ್ಥ ಮಾಡದ ತಹಶೀಲ್ದಾರ್‌ಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಬಗರ್‌ಹುಕುಂ ಅರ್ಜಿಗಳ ಸ್ಥಿತಿಗತಿ ಕುರಿತು ಅಧಿಕಾರಿಗಳೊಂದಿಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ಶನಿವಾರ ನಡೆಸಿದ ಸಭೆಯಲ್ಲಿ ಅವರು ಮಾತನಾಡಿದರು.

ಸಾಗುವಳಿ ಹಕ್ಕು ಕೋರಿ ಅರ್ಜಿ ನಮೂನೆ 53 ಹಾಗೂ 57ರಲ್ಲಿ 14.85 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿವೆ. ಎಲ್ಲ ಅರ್ಜಿಗಳನ್ನೂ ಪರಿಶೀಲಿಸಬೇಕು. ಅರ್ಹರಿಗೆ ಭೂಹಕ್ಕು ನೀಡಬೇಕು. ಅನರ್ಹ ಅರ್ಜಿಗಳನ್ನು ಸಕಾರಣ ನೀಡಿ, ತಿರಸ್ಕರಿಸಬೇಕು ಎಂದು ಉಪ ವಿಭಾಗಾಧಿಕಾರಿ ಹಾಗೂ ತಹಶೀಲ್ದಾರ್‌ಗಳಿಗೆ ತಾಕೀತು ಮಾಡಿದರು.

ಅರ್ಹ ಭೂರಹಿತರಿಗೆ ಜಮೀನು ಮಂಜೂರು ಮಾಡಬೇಕು ಎನ್ನುವುದು ಕಾಂಗ್ರೆಸ್ ಸರ್ಕಾರದ ಧ್ಯೇಯ. ಅದಕ್ಕಾಗಿ ಅಕ್ರಮ–ಸಕ್ರಮ ಯೋಜನೆ ರೂಪಿಸಲಾಗಿದೆ ಎಂದರು.

ಈಗಾಗಲೇ 160 ಬಗರ್‌ಹುಕುಂ ಸಮಿತಿಗಳನ್ನು ರಚಿಸಲಾಗಿದೆ. ಅಧಿಕಾರಿಗಳು ಸಮಿತಿಯ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಅರ್ಜಿಗಳನ್ನು ತ್ವರಿತವಾಗಿ ಇತ್ಯರ್ಥ ಮಾಡಬೇಕು ಎಂದು ಹೇಳಿದರು.

ಅಗತ್ಯವಿದ್ದರಷ್ಟೇ ಕ್ಷೇತ್ರ ಕಾರ್ಯ: ‘ಗ್ರಾಮ ಆಡಳಿತ ಅಧಿಕಾರಿಗಳಿಗೆ ಈಗಾಗಲೇ ಕೆಲಸದ ಒತ್ತಡ ಹೆಚ್ಚಾಗಿದೆ. ಅವರನ್ನು ಅನಗತ್ಯವಾಗಿ ಕ್ಷೇತ್ರ ಕಾರ್ಯಕ್ಕೆ ಕಳುಹಿಸಬಾರದು’ ಎಂದು ಸಚಿವ ಕೃಷ್ಣ ಬೈರೇಗೌಡ ತಹಶೀಲ್ದಾರ್‌ಗಳಿಗೆ ಸೂಚಿಸಿದರು.

‘ಬಗರ್‌ಹುಕುಂ ಅರ್ಜಿಗಳನ್ನು ಕಚೇರಿಯಲ್ಲೇ ಕುಳಿತು ಪರಿಶೀಲಿಸಬೇಕು. ಅಗತ್ಯವಿದ್ದಾಗ ಸ್ಥಳ ಪರಿಶೀಲನೆ ನಡೆಸಬೇಕು. ಅನರ್ಹ ಅರ್ಜಿಗಳನ್ನು ಯಾವುದೇ ಒತ್ತಡಕ್ಕೆ ಮಣಿಯದೆ ತಿರಸ್ಕರಿಸಬೇಕು’ ಎಂದು ಹೇಳಿದರು.

ಎಚ್‌ಎಂಟಿ ಪುನಶ್ಚೇತನಕ್ಕೆ ಮಾತುಕತೆ: ಎಚ್‌ಡಿಕೆ

ಬೆಂಗಳೂರು: ‘ಎಚ್‌ಎಂಟಿ ಕಾರ್ಖಾನೆಯ ಪುನಶ್ಚೇತನಕ್ಕೆ ಸಲಹೆಗಳನ್ನು ಪಡೆಯಲು ಸಲಹಾ ಸಂಸ್ಥೆ ನೇಮಿಸುವ ಸಂಬಂಧ ಮಾತುಕತೆ ನಡೆಯುತ್ತಿದೆ’ ಎಂದು ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಎಚ್‌.ಡಿ.ಕುಮಾರಸ್ವಾಮಿ ಶನಿವಾರ ಹೇಳಿದರು.

ನಗರದ ಜಾಲಹಳ್ಳಿಯ ಎಚ್‌ಎಂಟಿ ಟೂಲ್ಸ್ ಮತ್ತು ಮೆಷಿನ್ಸ್ ಘಟಕಕ್ಕೆ ಭೇಟಿ ನೀಡಿದ್ದ ಅವರು, ಕಾರ್ಮಿಕರ ಜತೆಗೆ ಚರ್ಚಿಸುವಾಗ ಈ ಮಾತು ಹೇಳಿದರು. ‘ಸಚಿವಾಲಯ ಮತ್ತು ನೀತಿ ಆಯೋಗದಲ್ಲಿ ಚರ್ಚೆ ನಡೆದಿದೆ, ಮಹತ್ವದ ಹೆಜ್ಜೆ ಇಡಲಾಗಿದೆ’ ಎಂದರು.

‘ಪ್ರಧಾನಿ ನರೇಂದ್ರ ಮೋದಿ ಅವರು ಕೈಗಾರಿಕೆಗಳ ಸ್ಥಾಪನೆ ಮತ್ತು ಉದ್ಯೋಗ ಸೃಷ್ಟಿಗೆ ಒತ್ತು ನೀಡುತ್ತಾರೆ. ಎಚ್‌ಎಂಟಿ ಪುನಶ್ಚೇತನದ ಯತ್ನಗಳಿಗೆ ಫಲ ದೊರೆಯುತ್ತದೆ. ಒಂದೆರಡು ತಿಂಗಳು ಕಾಲಾವಕಾಶ ನೀಡಿ’ ಎಂದರು.

ರೋಬೊಗಳ ಮೂಲಕವೇ ಹೂಗುಚ್ಛ ನೀಡುವ ಮೂಲಕ ಕುಮಾರಸ್ವಾಮಿ ಅವರನ್ನು ಸ್ವಾಗತಿಸಲಾಯಿತು.

ಸಂಕ್ಷಿಪ್ತ ಸುದ್ದಿ

26 ಸ್ಥಳಗಳಲ್ಲಿ ಎನ್‌ಐಎ ಶೋಧ ಒಬ್ಬನ ಬಂಧನ

ನವದೆಹಲಿ (ಪಿಟಿಐ): ಪಾಕಿಸ್ತಾನ ಮೂಲದ ಉಗ್ರ ಸಂಘಟನೆ ಜೈಶ್–ಎ–ಮೊಹಮ್ಮದ್ (ಜೆಇಎಂ) ಜತೆ ಸಂಪರ್ಕ ಹೊಂದಿದ್ದಾರೆ ಎಂಬ ಆರೋಪದ ಮೇರೆಗೆ ಹಲವರಿಗೆ ಸಂಬಂಧಿಸಿದ 26 ಸ್ಥಳಗಳ ಮೇಲೆ ರಾಷ್ಟ್ರೀಯ ತನಿಖಾ ಏಜೆನ್ಸಿ (ಎನ್‌ಐಎ) ಶನಿವಾರ ಶೋಧ ಕಾರ್ಯಾಚರಣೆ ನಡೆಸಿದೆ.

ಅಸ್ಸಾಂ, ಮಹಾರಾಷ್ಟ್ರ, ಉತ್ತರ ಪ್ರದೇಶ, ದೆಹಲಿ, ಜಮ್ಮು ಮತ್ತು ಕಾಶ್ಮೀರದ ಒಟ್ಟು 26 ಸ್ಥಳಗಳ ಮೇಲೆ ದಾಳಿ ನಡೆಸಿದ ಎನ್‌ಐಎ ಅಧಿಕಾರಿಗಳು, ಒಬ್ಬನನ್ನು ಬಂಧಿಸಿ ಹಲವರನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

ಬಂಧಿತನನ್ನು ಶೇಖ್ ಸುಲ್ತಾನ್ ಸಲಾಹ್ ಉದ್ದೀನ್ ಅಯೂಬಿ ಎಂದು ಗುರುತಿಸಲಾಗಿದೆ. ಪಿತೂರಿ ಪ್ರಕರಣವೊಂದರಲ್ಲಿ ಪಾತ್ರವಿರುವ ಆರೋಪದ ಮೇಲೆ ಆತನನ್ನು ಬಂಧಿಸಲಾಗಿದೆ ಎಂದು ಎನ್‌ಐಎ ಪ್ರಕಟಣೆ ತಿಳಿಸಿದೆ.

ಮುಸ್ಲಿಂ ಯುವಕನ ಥಳಿಸಿದ ವಿಎಚ್‌ಪಿ ಸದಸ್ಯರು

ಲಖನೌ: ಉತ್ತರ ಪ್ರದೇಶದ ಕಾನ್ಪುರದಲ್ಲಿ ನವರಾತ್ರಿ ಅಂಗವಾಗಿ ಆಯೋಜಿಸಿದ್ದ ‘ಗರಬಾ’ ಮತ್ತು ‘ದಾಂಡಿಯಾ’ ನೃತ್ಯ ಕಾರ್ಯಕ್ರಮಕ್ಕೆ ಪ್ರವೇಶಿಸಲು ಮುಂದಾದ ಮುಸ್ಲಿಂ ಯುವಕನನ್ನು ವಿಶ್ವ ಹಿಂದೂ ಪರಿಷತ್ತಿನ (ವಿಎಚ್‌ಪಿ) ಸದಸ್ಯರು ಥಳಿಸಿರುವ ಘಟನೆ ನಡೆದಿದೆ.

ಕಾನ್ಪುರದ ಸ್ವರೂಪ್ ನಗರದಲ್ಲಿ ಶುಕ್ರವಾರ ರಾತ್ರಿ ಆಯೋಜನೆಗೊಂಡಿದ್ದ ಕಾರ್ಯಕ್ರಮದಲ್ಲಿ ಸಂದರ್ಶಕರ ಆಧಾರ್ ಕಾರ್ಡ್‌ಗಳನ್ನು ಪರಿಶೀಲಿಸುವ ವೇಳೆ ಈ ಯುವಕ ವಿಎಚ್‌ಪಿ ಸದಸ್ಯರ ಕೈಗೆ ಸಿಕ್ಕಿಬಿದ್ದಿದ್ದು ಬಳಿಕ ಅವರು ಆ ವ್ಯಕ್ತಿಯನ್ನು ಥಳಿಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಮುಸ್ಲಿಂ ವ್ಯಕ್ತಿಯ ಗುರುತು ಪತ್ತೆಯಾಗಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

ಯುವಕನ ಧರ್ಮದ ಬಗ್ಗೆ ಕೇಳುತ್ತಿದ್ದ ಗುಂಪು, ಆತನ ಮೇಲೆ ಹಲ್ಲೆ ನಡೆಸಿದ ದೃಶ್ಯವಿರುವ ವಿಡಿಯೊ ಶನಿವಾರ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿದೆ. ಇದರ ಬೆನ್ನಲ್ಲೇ ಈ ಕುರಿತು ಪ್ರಕರಣ ದಾಖಲಿಸಿರುವ ಪೊಲೀಸರು, ಹಲ್ಲೆ ನಡೆಸಿದವರ ಪತ್ತೆಗೆ ಶೋಧ ಕೈಗೊಂಡಿದ್ದಾರೆ.

ಭೂಮಿ ವಸತಿ ಹಕ್ಕು ವಂಚಿತರ ಪ್ರಾತಿನಿಧ್ಯ ಸಮಾವೇಶ: ಸರ್ಕಾರಕ್ಕೆ ಎಚ್ಚರಿಕೆ

‘ಭೂಮಿ ನೀಡದಿದ್ದರೆ ತೀವ್ರ ಹೋರಾಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಂಚಿತರಿಗೆ ಭೂಮಿ, ವಸತಿ ನ್ನು ಕಲ್ಪಿಸಲು ಕಾಂಗ್ರೆಸ್ ಸರ್ಕಾರ ಕ್ರಮ ತೆಗೆದುಕೊಳ್ಳದಿದ್ದರೆ, ಸರ್ಕಾರದ ವಿರುದ್ಧ ತೀವ್ರ ಹೋರಾಟ ನಡೆಸುತ್ತೇವೆ’ ಎಂದು ಭೂಮಿ ವಸತಿ ಹಕ್ಕು ವಂಚಿತರ ಹೋರಾಟ ಸಮಿತಿ ಕಾರ್ಯಾಧ್ಯಕ್ಷ ಡಿ.ಎಚ್.ಪೂಜಾರ್ ಶನಿವಾರ ಹೇಳಿದರು.

ಸಮಿತಿ ಇಲ್ಲಿ ಆಯೋಜಿಸಿದ್ದ ‘ಭೂಮಿ ವಸತಿ ಹಕ್ಕು ವಂಚಿತರ ಪ್ರಾತಿನಿಧ್ಯ ಸಮಾವೇಶ’ದಲ್ಲಿ ಅವರು ಮಾತನಾಡಿದರು. ‘ಭೂರಹಿತರು ಮತ್ತು ಮನೆ ಇಲ್ಲದವರಿಗಾಗಿ ಹೋರಾಟ ಆರಂಭಿಸಿ 20 ವರ್ಷಗಳೇ ಕಳೆದಿವೆ. ಇನ್ನೂ ತಾರ್ಕಿಕ ಅಂತ್ಯ ಸಿಕ್ಕಿಲ್ಲ’ ಎಂದರು.

‘ಸಿದ್ದರಾಮಯ್ಯ ಅವರ ಹಿಂದಿನ ಸರ್ಕಾರದ ಅವಧಿಯಲ್ಲಿ ಚರ್ಚೆ ನಡೆದರೂ, ಕೆಲಸ ಆಗಲಿಲ್ಲ. ಯಡಿಯೂರಪ್ಪ ಸಿ.ಎಂ ಆಗಿದ್ದಾಗ ಮನವಿ ಹಿಡಿದುಕೊಂಡು ಹೋದರೆ, ಗೃಹ ಕಚೇರಿ ಒಳಗೇ ಬಿಟ್ಟುಕೊಳ್ಳುತ್ತಿರಲಿಲ್ಲ. ಬಿಜೆಪಿ ಸರ್ಕಾರದಲ್ಲಿ ಕೆಲಸ ಆಗುವುದಿಲ್ಲ ಎಂದೇ ಜಾಗೃತ ಕರ್ನಾಟಕ, ಕರ್ನಾಟಕ ಜನಶಕ್ತಿ ಮೊದಲಾದ ಸಂಘಟನೆಗಳು ಚುನಾವಣೆಯಲ್ಲಿ ಕಾಂಗ್ರೆಸ್ ಪರವಾಗಿ ಕೆಲಸ ಮಾಡಿದವು. ಆದರೆ ಕಾಂಗ್ರೆಸ್ ಸರ್ಕಾರ ಸಹ ಏನೂ ಮಾಡುತ್ತಿಲ್ಲ’ ಎಂದು ಆರೋಪಿಸಿದರು.

ಮುಖ್ಯಾಂಶಗಳು

- ಸಚಿವ ಕೃಷ್ಣ ಬೈರೇಗೌಡಗೆ ಸಮಾವೇಶದ ನಿರ್ಣಯ ಪತ್ರ ಸಲ್ಲಿಕೆ
- ಅರಣ್ಯಭೂಮಿ ಹಂಚಿಕೆಗೆ ಹಲವು ಕಾನೂನು ತೊಡಕುಗಳಿವೆ: ಸಚಿವ
- ಅರ್ಹರಿಗಷ್ಟೇ ಭೂಮಿ ಮಂಜೂರು ಮಾಡುವ ಭರವಸೆ

ಸಮಿತಿಯ ಉಪಾಧ್ಯಕ್ಷ ಸಿರಿಮನೆ ನಾಗರಾಜ್ ಮಾತನಾಡಿ, ಸಾಂಕೇತಿಕ ಹೋರಾಟದಿಂದ ಉಪಯೋಗವಿಲ್ಲ, ಹೀಗಾಗಿ ನಾವು ಪ್ರಬಲ ಹೋರಾಟ ಕಟ್ಟಬೇಕು’ ಎಂದರು.

ಭೂಮಿ ವಸತಿ ಹಕ್ಕು ವಂಚಿತರ ಪ್ರಾತಿನಿಧ್ಯ ಸಮಾವೇಶದಲ್ಲಿ ಗುಜರಾತ್‌ನ ವಡಗಾಂ ಶಾಸಕ ಜಿಗ್ನೇಶ್ ಮೆವಾನಿ ಮತ್ತು ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯ ನೂರ್ ಶ್ರೀಧರ್ ಚರ್ಚೆಯಲ್ಲಿ ತೊಡಗಿದ್ದರು. ಹೋರಾಟ ಸಮಿತಿಯ ಬೆಂಬಲಿಗರಾದ ಎನ್‌ವೆಂಕಟೇಶ್, ಡಾ.ವಿಜಯಾ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಮನುವಾದ ಜಾರಿಗೆ ತರುತ್ತಿರುವ ಮೋದಿ: ಜಿಗ್ನೇಶ್ ಆರೋಪ

‘ಶೂದ್ರ, ದಲಿತ ಮತ್ತು ಮಹಿಳೆಯರಿಗೆ ಭೂಮಿ ಅಥವಾ ಸಂಪತ್ತು ಹೊಂದುವ ಅಧಿಕಾರ ಇಲ್ಲ ಎಂದು ಮನುಸ್ಮೃತಿ ಹೇಳುತ್ತದೆ. ಸಂವಿಧಾನವು ಇವರಿಗೆ ಈ ಅಧಿಕಾರವನ್ನು ಕೊಟ್ಟಿದೆ. ಆದರೆ ಕೇಂದ್ರದಲ್ಲಿರುವ ಈಗಿನ ಸರ್ಕಾರವು ಈ ಹಕ್ಕು ಮತ್ತು ಅಧಿಕಾರಗಳನ್ನು ಕಿತ್ತುಕೊಳ್ಳುತ್ತಿದೆ. ನರೇಂದ್ರ ಮೋದಿ ಮನುವಾದವನ್ನು ಜಾರಿಗೆ ತರುತ್ತಿದ್ದಾರೆ’ ಎಂದು ಗುಜರಾತ್ ಶಾಸಕ ಜಿಗ್ನೇಶ್ ಮೆವಾನಿ ಆರೋಪಿಸಿದರು.

‘70 ವರ್ಷಗಳಲ್ಲಿ ಸಂವಿಧಾನವು ನೀಡಿರುವ ಭೂಮಿ ಮತ್ತು ವಿವಿಧ ಹೋರಾಟಗಳ ಮೂಲಕ ತಳಸಮುದಾಯದವರು ಗಳಿಸಿಕೊಂಡಿದ್ದ ಭೂಮಿಯನ್ನು ಬಂಡವಾಳಶಾಹಿಗಳಿಗಾಗಿ ಕಿತ್ತುಕೊಳ್ಳಲಾಗುತ್ತಿದೆ. ಈ ಬಗ್ಗೆ ಎಚ್ಚರಿಕೆಯಿಂದ ಇರಬೇಕಾಗಿದೆ’ ಎಂದು ಅವರು ಹೇಳಿದರು.

ಸಮಿತಿಯ ಸದಸ್ಯ ಕೆ.ಎಲ್.ಅಶೋಕ್ ಮಾತನಾಡಿ, ‘ಬುಡಕಟ್ಟು–ಆದಿವಾಸಿ ಸಮುದಾಯಗಳನ್ನು ರಾಷ್ಟ್ರೀಯ ಉದ್ಯಾನ, ಹುಲಿ ಯೋಜನೆ, ಕಸ್ತೂರಿ ರಂಗನ್ ವರದಿ ಹೆಸರಿನಲ್ಲಿ ಒಕ್ಕಲೆಬ್ಬಿಸಲು ಯತ್ನಗಳು ನಡೆಯುತ್ತಿವೆ’ ಎಂದು ಕಳವಳ ವ್ಯಕ್ತಪಡಿಸಿದರು.

ಬ್ರಿಗೇಡ್ ರಚನೆ: ನಾಳೆ ಹುಬ್ಬಳ್ಳಿಯಲ್ಲಿ ಸಭೆ

ಶಿವಮೊಗ್ಗ: ‘ರಾಜ್ಯದಲ್ಲಿ ಹಿಂದುಳಿದ ವರ್ಗಗಳಿಗೆ ನ್ಯಾಯ ಒದಗಿಸುವ ಉದ್ದೇಶದಿಂದ ಸಂಗೊಳ್ಳಿ ರಾಯಣ್ಣ–ಕಿತ್ತೂರು ಚನ್ನಮ್ಮ ಬ್ರಿಗೇಡ್ ರಚಿಸುತ್ತಿದ್ದೇವೆ. ಈ ಕುರಿತು ಚರ್ಚಿಸಲು ಅ.7ರಂದು ಹುಬ್ಬಳ್ಳಿಯಲ್ಲಿ ಪೂರ್ವಭಾವಿ ಸಭೆ ಆಯೋಜಿಸಿದ್ದೇವೆ’ ಎಂದು ರಾಷ್ಟ್ರಭಕ್ತ ಬಳಗದ ಸಂಚಾಲಕ ಕೆ.ಎಸ್. ಈಶ್ವರಪ್ಪ ಹೇಳಿದರು.

‘ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸೇರಿ 40ಕ್ಕೂ ಹೆಚ್ಚು ಮುಖಂಡರು ಪಾಲ್ಗೊಳ್ಳಲಿದ್ದಾರೆ. ಇದು ಪಕ್ಷಾತೀತ ಸಭೆ. ಯಾವ ಮಠಾಧೀಶರೂ ಇದರಲ್ಲಿ ಭಾಗವಹಿಸುತ್ತಿಲ್ಲ. ಮುಂದಿನ ದಿನಗಳಲ್ಲಿ ಅವರ ಬೆಂಬಲ ಪಡೆಯುವ ಬಗ್ಗೆ ಚರ್ಚಿಸುತ್ತೇವೆ’ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಜನರ ಅಭಿಪ್ರಾಯ ಪಡೆದು ಜಾತಿ ಗಣತಿ ವರದಿಯ ಶಿಫಾರಸು ಬಹಿರಂಗಗೊಳಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುತ್ತಿದ್ದಾರೆ. ಅವರು ಈ ಹಿಂದೆ ಕೊಟ್ಟ ಮಾತಿನಂತೆ ನಡೆದುಕೊಳ್ಳಬೇಕು. ನಾನು ಬಿಜೆಪಿಗೆ ಹೋಗುವ ಪ್ರಶ್ನೆ ಸದ್ಯಕ್ಕಂತೂ ಇಲ್ಲ’ ಎಂದರು.

ಲಾಡು ಗುಣಮಟ್ಟಕ್ಕೆ ಭಕ್ತರ ಶ್ಲಾಘನೆ: ನಾಯ್ಡು

ತಿರುಮಲ (ಪಿಟಿಐ): ತಿರುಪತಿ ವೆಂಕಟೇಶ್ವರ ದೇವಸ್ಥಾನದ ಲಾಡು ಪ್ರಸಾದದ ಗುಣಮಟ್ಟ ಚೆನ್ನಾಗಿದೆ ಎಂದು ಭಕ್ತರು ಶ್ಲಾಘಿಸುತ್ತಿದ್ದು, ಇದು ಹೀಗೆಯೇ ಮುಂದುವರಿಯಬೇಕು ಎಂದು ಆಶಿಸುತ್ತಿದ್ದಾರೆ ಎಂದು ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಶನಿವಾರ ಹೇಳಿದರು.

ದೇವಸ್ಥಾನದಲ್ಲಿ ವಾರ್ಷಿಕವಾಗಿ ನಡೆಯುವ 9 ದಿನಗಳ ಬ್ರಹ್ಮೋತ್ಸವವು ಶುಕ್ರವಾರದಿಂದ ಆರಂಭವಾಗಿದ್ದು, ಹೀಗಾಗಿ ನಾಯ್ಡು ಅವರು ದೇವಸ್ಥಾನಕ್ಕೆ ಭೇಟಿ ನೀಡಿದ್ದರು.

ಈ ವೇಳೆ ‘ತಿರುಮಲ ತಿರುಪತಿ ದೇವಸ್ಥಾನಂ’ (ಟಿಟಿಡಿ) ಹಿರಿಯಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು ‘ದೇವಸ್ಥಾನದಲ್ಲಿ ಪ್ರಸಾದ ತಯಾರಿಕೆಗೆ ಉತ್ತಮ ಗುಣಮಟ್ಟದ ವಸ್ತುಗಳನ್ನು ಮಾತ್ರವೇ ಬಳಸಬೇಕು. ತಿರುಮಲದಲ್ಲಿ ವಿಐಪಿ ಸಂಸ್ಕೃತಿ ಕಡಿಮೆಯಾಗಬೇಕು. ಗಣ್ಯರು ದೇವಸ್ಥಾನಕ್ಕೆ ಬಂದಾಗ ಗದ್ದಲ ಇರಬಾರದು. ದೇವಸ್ಥಾನದ ಅಲಂಕಾರವು ಯಾವುದೇ ಅತಿರೇಕ ಮತ್ತು ಅನಗತ್ಯ ವೆಚ್ಚವಿಲ್ಲದೆ ಸರಳ ಹಾಗೂ ಆಧ್ಯಾತ್ಮಿಕವಾಗಿರಬೇಕು’ ಎಂದು ಸೂಚಿಸಿದರು.

ಅಲ್ಲದೇ ‘ತಿರುಮಲದಲ್ಲಿರುವ ಅರಣ್ಯ ಪ್ರದೇಶದ ಪ್ರಮಾಣವನ್ನು ಶೇ72ರಿಂದ 80ಕ್ಕೆ ಹೆಚ್ಚಿಸಬೇಕು’ ಎಂದೂ ಅವರು ಅಧಿಕಾರಿಗಳಿಗೆ ನಿರ್ದೇಶಿಸಿದರು.

ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ನಾಯ್ಡು ಅವರು ದೇವಸ್ಥಾನದಲ್ಲಿ ನೂತನವಾಗಿ ನಿರ್ಮಾಣ ಮಾಡಲಾಗಿರುವ ಅತ್ಯಾಧುನಿಕ ಅಡುಗೆ ಕೋಣೆಯನ್ನು ಉದ್ಘಾಟಿಸಿದರು. ಇದೇ ವೇಳೆ ಅವರು ಟಿಟಿಡಿಯ 2025ರ ಕ್ಯಾಲೆಂಡರ್ ಹಾಗೂ ಡೈರಿಯನ್ನು ಬಿಡುಗಡೆ ಮಾಡಿದರು.

ಏಜೆನ್ಸಿಗಳು ವಿಫಲವಾಗಿವೆ: ಗೃಹ ಸಚಿವ ಜಿ. ಪರಮೇಶ್ವರ

ಗುಪ್ತಚರ ಇಲಾಖೆ ವೈಫಲ್ಯ: ಆರೋಪ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಕೇಂದ್ರ ಸರ್ಕಾರದ ಗುಪ್ತಚರ ಇಲಾಖೆಯ ವೈಫಲ್ಯದಿಂದ ಪಾಕಿಸ್ತಾನದವರು ಸುಲಭವಾಗಿ ಬೆಂಗಳೂರಿಗೆ ಬರುತ್ತಿದ್ದಾರೆ. ರಾಜ್ಯ ಪೊಲೀಸರಿಗೆ ಮಾಹಿತಿ ದೊರೆತ ತಕ್ಷಣ ಕೆಲವರನ್ನು ಬಂಧಿಸಲಾಗಿದೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ನಗರದ ವಿಮಾನ ನಿಲ್ದಾಣದಲ್ಲಿ ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಕೇಂದ್ರ ಸರ್ಕಾರದ ಬಳಿ ರಾ (ಆರ್‌ಎಡಬ್ಲು), ಕೇಂದ್ರ ಗುಪ್ತಚರ, ಸಿಬಿಐ ಅಂಥ ಏಜೆನ್ಸಿಗಳು ಇದ್ದಾಗಲೂ ರಾಜ್ಯಕ್ಕೆ ನುಸುಳುಕೋರರು ಬಂದು ಪಾಸ್ ಪೋರ್ಟ್ ಮಾಡಿಸಿಕೊಳ್ಳುತ್ತಿದ್ದಾರೆ ಎಂದರೆ ಏಜೆನ್ಸಿಗಳು ವಿಫಲವಾಗಿವೆ ಎಂದರ್ಥ. ರಾಜ್ಯದ ಇತರೆಡೆಯೂ ಅವರು ವಾಸವಾಗಿದ್ದಾರೆ ಎನ್ನುವ ಮಾಹಿತಿಯಿದ್ದು, ಅವರನ್ನು ಪತ್ತೆ ಹಚ್ಚುವ ಕೆಲಸ ನಡೆಯುತ್ತಿದೆ’ ಎಂದರು.

‘ಕಾಂಗ್ರೆಸ್ ಸೇಡಿನ ರಾಜಕಾರಣ ಮಾಡುತ್ತಿದೆ’ ಎನ್ನುವ ಪ್ರತಿಪಕ್ಷ ಗಳ ಹೇಳಿಕೆಗೆ ಪ್ರತಿಕ್ರಿಯಿಸಿದ ಸಚಿವ ಪರಮೇಶ್ವರ, ‘ನಾವು ಯಾರ ಮೇಲೂ ಸೇಡಿನ ರಾಜಕಾರಣ ಮಾಡುತ್ತಿಲ್ಲ. ಯಾರೇ ದೂರು ನೀಡಿದರೂ ಎಫ್‌ಐಆರ್ ಮಾಡಿಕೊಳ್ಳುತ್ತೇವೆ. ತನಿಖೆಯಲ್ಲಿ ಸತ್ಯಾಂಶ ಕಂಡು ಬಂದರೆ ಕಾನೂನು ಪ್ರಕಾರ ಕ್ರಮಕೈಗೊಳ್ಳುತ್ತೇವೆ. ಪೊಲೀಸರಿಗೆ, ಲೋಕಾಯುಕ್ತಕ್ಕೆ ತನಿಖೆಗೆ ಕೊಟ್ಟಾಗ, ತನಿಖೆ ಪೂರ್ಣಗೊಳ್ಳುವವರೆಗೂ ಕಾಯಬೇಕು. ಪ್ರತಿಪಕ್ಷಗಳು ಸಕಾರಾತ್ಮಕವಾಗಿ ವಿಮರ್ಶೆ ಮಾಡಬೇಕು, ಅದನ್ನು ಮೀರಿ ಅವರು ರಾಜಕಾರಣ ಮಾಡುತ್ತಿದ್ದಾರೆ. ಕಾಂಗ್ರೆಸ್‌ಗೆ ರಾಜಕಾರಣ ಹೇಳಿಕೊಡಬೇಕಾ? ಅದಕ್ಕೆ ನಾವು ಸಹ ಪ್ರತ್ಯುತ್ತರ ನೀಡಲು ಸಮರ್ಥವಾಗಿದ್ದೇವೆ’ ಎಂದು ಹೇಳಿದರು.

‘ಎಫ್‌ಐಆರ್ ಆದವರೆಲ್ಲ ರಾಜೀನಾಮೆ ನೀಡಲಿ ಎಂದು ಶಾಸಕ ಜಿ.ಟಿ. ದೇವೇಗೌಡ ಹೇಳಿದ್ದಾರೆ ಎಂದ ಮಾತ್ರಕ್ಕೆ ಅವರು ಕಾಂಗ್ರೆಸ್ ಸೇರ್ಪಡೆಯಾಗುತ್ತಾರೆ ಎನ್ನಲು ಸಾಧ್ಯವಿಲ್ಲ. ಆ ಕುರಿತು ಹೆಚ್ಚಿನ ಮಾಹಿತಿಯಿಲ್ಲ’ ಎಂದು ಪರಮೇಶ್ವರ ಹೇಳಿದರು.

ಬೇಜವಾಬ್ದಾರಿ ಹೇಳಿಕೆ: ಜೋಶಿ ಟೀಕೆ

ಹುಬ್ಬಳ್ಳಿ: ‘ರಾಜ್ಯದಲ್ಲಿ ಹಲವಾರು ವರ್ಷಗಳಿಂದ ಪಾಕಿಸ್ತಾನದವರು ಅಕ್ರಮವಾಗಿ ವಾಸಿಸುತ್ತಿದ್ದಾರೆ. ಈ ಹಿಂದೆ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗಲೂ ಅವರು ಇದ್ದರು. ಏನೂ ತಿಳಿಯದೆ ರಾಹುಲ್ ಗಾಂಧಿಯಂತೆ ಬೇಜವಾಬ್ದಾರಿಯಿಂದ ಗೃಹ ಸಚಿವ ಜಿ.ಪರಮೇಶ್ವರ ಮಾತನಾಡುವುದನ್ನು ಬಿಡಲಿ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಕಿಡಿಕಾರಿದರು.

ದ್ವೇಷ ಭಾಷಣ: ಉಪನ್ಯಾಸಕನ ವಿರುದ್ಧ ಎಫ್‌ಐಆರ್

ಮಂಗಳೂರು: ಧರ್ಮಗಳ ನಡುವೆ ದ್ವೇಷ ಹಬ್ಬಿಸುವ ಮಾತುಗಳನ್ನು ಆಡಿದ ಆರೋಪದ ಮೇಲೆ ತೊಕ್ಕೊಟ್ಟು ಭಟ್ನಗರದ ನಿವಾಸಿಯಾಗಿರುವ ಖಾಸಗಿ ಕಾಲೇಜಿನ ಉಪನ್ಯಾಸಕ ಅರುಣ್ ಉಳ್ಳಾಲ್ ಎಂಬುವರ ವಿರುದ್ಧ ಇಲ್ಲಿನ ಸೆನ್ ಅಪರಾಧ ಠಾಣೆಯ ಪೊಲೀಸರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದ್ದಾರೆ.

ಉಳ್ಳಾಲ ತಾಲ್ಲೂಕಿನ ಕಿನ್ಯ ಬೆಳರಿಂಗೆಯ ಕೇಶವ ಶಿಶುಮಂದಿರದಲ್ಲಿ ಭಾನುವಾರ ಏರ್ಪಡಿಸಿದ್ದ ನವದಂಪತಿ ಸಮಾವೇಶದಲ್ಲಿ ಭಾಗವಹಿಸಿದ್ದ ಅರುಣ್ ಉಳ್ಳಾಲ್ ಅನಿಸಿಕೆ ವ್ಯಕ್ತಪಡಿಸಿದ್ದರು. ಇದರ ವಿಡಿಯೊ ತುಣುಕು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು.

‘ನಾವು ಅಥವಾ ನಮ್ಮ ಮನೆಯವರ ಮದುವೆ ಸಮಾರಂಭವನ್ನು ಹಿಂದೂ ಸಮುದಾಯದವರ ಸಭಾಂಗಣದಲ್ಲೇ ಏರ್ಪಡಿಸಬೇಕು. ನಾವು ಖರೀದಿಸುವ ವಸ್ತುಗಳ ಒಂದಷ್ಟು ಮೊತ್ತ ವಿದೇಶಕ್ಕೆ ಹೋಗುತ್ತದೆ. ಅದು ಯಾರಿಗೋ ಸಲ್ಲುತ್ತದೆ’ ಎಂದು ಅರುಣ್ ಉಳ್ಳಾಲ್ ಹೇಳಿರುವುದು ಆ ವಿಡಿಯೊ ತುಣುಕಿನಲ್ಲಿದೆ.

ಮೆಟ್ರೊ ಉದ್ಘಾಟನೆ

ಮುಂಬೈ ಮೆಟ್ರೊದ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್– ಜೆವಿಎಲ್‌ಆರ್ ನಡುವಣ ಮಾರ್ಗ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಮೆಟ್ರೊ ರೈಲಿನಲ್ಲಿ ಪ್ರಯಾಣಿಸುವಾಗ ಕಾರ್ಮಿಕರ ಜತೆ ಮಾತನಾಡಿದರು –ಪಿಟಿಐ ಚಿತ್ರ

ಪ್ರತಿಭಟನೆ, ಕಲ್ಲು ತೂರಾಟ: 21 ಮಂದಿ ಪೊಲೀಸರಿಗೆ ಗಾಯ

ಆಕ್ಷೇಪಾರ್ಹ ಹೇಳಿಕೆ: ಸ್ವಾಮೀಜಿ ವಶಕ್ಕೆ

ಅಮರಾವತಿ (ಪಿಟಿಐ): ಪ್ರವಾದಿ ಮಹಮ್ಮದರ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿರುವ ಸ್ವಾಮೀಜಿ ವಿರುದ್ಧ ಪ್ರಕರಣ ದಾಖಲಿಸಬೇಕೆಂದು ಒತ್ತಾಯಿಸಿದ ಗುಂಪೊಂದು ಮಹಾರಾಷ್ಟ್ರದ ಅಮರಾವತಿ ನಗರದಲ್ಲಿ ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿದೆ. ಘಟನೆಯಲ್ಲಿ 21 ಮಂದಿ ಪೊಲೀಸರು ಗಾಯಗೊಂಡಿದ್ದಾರೆ.

ಪ್ರವಾದಿ ಮಹಮ್ಮದರ ವಿರುದ್ಧ ನೀಡಿರುವ ಆಕ್ಷೇಪಾರ್ಹ ಹೇಳಿಕೆ ನೀಡಿದ ಘಾಜಿಯಾಬಾದ್‌ನ ಸ್ವಾಮೀಜಿ ಯತಿ ನರಸಿಂಹಾನಂದ ಮಹಾರಾಜ್ ಅವರನ್ನು ವಶಕ್ಕೆ ಪಡೆಯಲಾಗಿದೆ ಮತ್ತು ಅವರ ವಿರುದ್ಧ ಮೂರು ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬುಲಂದಶಹರ್ ನಗರದಲ್ಲಿ ಶುಕ್ರವಾರ ರಾತ್ರಿ ಹಿಂಸಾಚಾರ ನಡೆಸಿದ ಪ್ರಕರಣ ಸಂಬಂಧ ಎಂಟು ಮಂದಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ತಿಳಿಸಿವೆ.

ಅಮರಾವತಿ ನಗರದ ನಾಗ್ಪುರಿ ಗೇಟ್ ಪೊಲೀಸ್ ಠಾಣೆಯ ಹೊರಗೆ ಶುಕ್ರವಾರ ರಾತ್ರಿ ಗುಂಪು ಕಲ್ಲು ತೂರಾಟ ನಡೆಸಿದೆ. ಇದರಿಂದ 10 ಪೊಲೀಸ್ ವಾಹನಗಳಿಗೆ ಹಾನಿಯಾಗಿದೆ. ಕಲ್ಲು ತೂರಾಟಕ್ಕೆ ಸಂಬಂಧಿಸಿ ಸುಮಾರು 1,200 ಜನರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದು, ಇದರಲ್ಲಿ ಕಲ್ಲು ತೂರಿದ 26 ಜನರನ್ನು ಗುರುತಿಸಲಾಗಿದೆ ಎಂದು ಅಮರಾವತಿ ಪೊಲೀಸ್ ಕಮಿಷನರ್ ನವೀನ್ ಚಂದ್ರರೆಡ್ಡಿ ಸುದ್ದಿಗಾರರಿಗೆ ತಿಳಿಸಿದರು.

‘ಕೆಲವು ಸಂಘಟನೆಗಳ ಸದಸ್ಯರನ್ನು ಒಳಗೊಂಡ ಭಾರಿ ಸಂಖ್ಯೆಯ ಗುಂಪೊಂದು ರಾತ್ರಿ 8.15ರ ಸುಮಾರಿಗೆ ನಾಗ್ಪುರಿ ಗೇಟ್ ಪೊಲೀಸ್ ಠಾಣೆಗೆ ಬಂದು ಸ್ವಾಮೀಜಿ ಯತಿ ನರಸಿಂಹಾನಂದ ಮಹಾರಾಜ್ ವಿರುದ್ಧ ಪ್ರಕರಣ ದಾಖಲಿಸುವಂತೆ ಒತ್ತಡ ಹಾಕಿತು. ಈಗಾಗಲೇ ಎಫ್‌ಐಆರ್ ದಾಖಲಿಸಲಾಗಿದೆ ಮತ್ತು ವಿಚಾರಣೆ ನಡೆಯುತ್ತಿದೆ ಎಂದು ಠಾಣೆಯ ಅಧಿಕಾರಿ ತಿಳಿಸಿದ ನಂತರ ಆ ಗುಂಪು ವಾಪಸಾಯಿತು. ಆದರೆ ಕೆಲವರು, ಸ್ವಾಮೀಜಿಯ ಹೇಳಿಕೆಗಳ ವಿಡಿಯೊ ಹಂಚಿಕೊಳ್ಳುತ್ತಿದ್ದಂತೆ ಮತ್ತೊಂದು ದೊಡ್ಡ ಗುಂಪು ನಾಗ್ಪುರಿಗೇಟ್ ಪೊಲೀಸ್ ಠಾಣೆಗೆ ಬಂದಿದೆ. ಪೊಲೀಸ್ ಅಧಿಕಾರಿಗಳು ಗುಂಪಿನ ಮನವೊಲಿಸಲು ಪ್ರಯತ್ನಿಸಿದಾಗ, ಗುಂಪಿನಲ್ಲಿದ್ದವರು ಏಕಾಏಕಿ ಪೊಲೀಸ್ ಸಿಬ್ಬಂದಿಯ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ’ ಎಂದು ಅವರು ತಿಳಿಸಿದರು.

‘ಪೊಲೀಸ್ ಅಧಿಕಾರಿಗಳು ಗುಂಪು ಚದುರಿಸಿ, ಪರಿಸ್ಥಿತಿ ನಿಭಾಯಿಸಿದ್ದಾರೆ. ಸ್ಥಳದಲ್ಲಿ ಹೆಚ್ಚುವರಿ ಪೊಲೀಸ್ ಪಡೆ ನಿಯೋಜಿಸಲಾಗಿದೆ. ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ (ಬಿಎನ್‌ಎಸ್‌ಎಸ್) ಸೆಕ್ಷನ್ 163 ರ ಅಡಿಯಲ್ಲಿ ನಿಷೇಧಾಜ್ಞೆ ಹೊರಡಿಸಲಾಗಿದೆ. ನಾಗ್ಪುರಿ ಗೇಟ್ ಪ್ರದೇಶದಲ್ಲಿ ಐದು ಅಥವಾ ಅದಕ್ಕಿಂತ ಹೆಚ್ಚು ಜನರು ಒಟ್ಟಿಗೆ ಸೇರುವುದನ್ನು ನಿರ್ಬಂಧಿಸಲಾಗಿದೆ’ ಎಂದು ಅವರು ಹೇಳಿದರು.

ಕಲಬುರಗಿಯಲ್ಲಿ ಮೂರು ಎಫ್‌ಐಆರ್ ದಾಖಲು

ಕಲಬುರಗಿ: ಪ್ರವಾದಿ ಮುಹಮ್ಮದ್ ಮತ್ತು ಇಸ್ಲಾಂ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ ಆರೋಪದಲ್ಲಿ ಉತ್ತರ ಪ್ರದೇಶದ ದಾಸ್ನಾ ದೇವಾಲಯದ ಪೀಠಾಧಿಪತಿ ಯತಿ ನರಸಿಂಹಾನಂದ ಮಹಾರಾಜ್ ವಿರುದ್ಧ ನಗರದ ಮೂರು ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿವೆ.

ರೋಜಾ ಪೊಲೀಸ್ ಠಾಣೆಯಲ್ಲಿ ಕಾಂಗ್ರೆಸ್ ಜಿಲ್ಲಾ ಅಲ್ಪಸಂಖ್ಯಾಂತರ ಅಧ್ಯಕ್ಷ ನಯೀಮ್ ಖಾನ್, ಆರ್‌ಜಿ ನಗರ ಪೊಲೀಸ್ ಠಾಣೆಯಲ್ಲಿ ಖಿದ್ಮತ್ ಇ ಮಿಲ್ಲತ್ ಸದಸ್ಯ ಇಮ್ರಾನ್ ರಜ್ವಿ ಮಹಮದ್ ಅಬ್ಬಾಸ್ ಹಾಗೂ ಸಬ್‌ಅರ್ಬನ್ ಪೊಲೀಸ್ ಠಾಣೆಯಲ್ಲಿ ಹಾಜಿಬಾಬಾ ಮಹಮದ್ ಹುಸೇನ್ ಅವರು ದೂರು ದಾಖಲಿಸಿದ್ದಾರೆ.

ಉತ್ತರ ಪ್ರರದೇಶದ ಹಿಂದಿ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನರಸಿಂಹಾನಂದ ಮಹಾರಾಜ್ ಅವರು ಮುಸ್ಲಿಂ ಸಮುದಾಯದ ಭಾವನೆಗಳಿಗೆ ಧಕ್ಕೆ ಬರುವಂತೆ ಮಾತನಾಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

ಆರ್‌ಜಿ ನಗರ ಹಾಗೂ ರೋಜಾ ಪೊಲೀಸ್ ಠಾಣೆಗಳಲ್ಲಿ ಬಿಎನ್‌ಎಸ್ ಸೆಕ್ಷನ್ ಅಡಿ 196, 297, 302 353(2) ಹಾಗೂ ಸಬ್‌ಅರ್ಬನ್ ಠಾಣೆಯಲ್ಲಿ ಕಲಂ 196, 197, 299, 302 ಅಡಿ ಪ್ರಕರಣ ದಾಖಲಾಗಿದೆ.

ಗುಜರಾತ್: ಯುವತಿ ಮೇಲೆ ಸಾಮೂಹಿಕ ಅತ್ಯಾಚಾರ

ವಡೋದರಾ (ಪಿಟಿಐ): ಗುಜರಾತ್‌ನ ವಡೋದರಾ ನಗರದ ಹೊರವಲಯದಲ್ಲಿ ಯುವತಿಯ ಮೇಲೆ ಇಬ್ಬರು ಸಾಮೂಹಿಕ ಅತ್ಯಾಚಾರ ಎಸಗಿರುವ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಯುವತಿಯು ತಡರಾತ್ರಿ 11 ಗಂಟೆ ಸುಮಾರಿಗೆ ತನ್ನ ಬಾಲ್ಯ ಸ್ನೇಹಿತನನ್ನು ಭೇಟಿಯಾಗಲು ನಗರದ ಲಕ್ಷ್ಮೀಪುರಕ್ಕೆ ಹೋಗಿದ್ದಳು. ಯುವತಿ ಮತ್ತು ಆಕೆಯ ಸ್ನೇಹಿತ ಸ್ಕೂಟಿಯಲ್ಲಿ ಹಿಂದಿರುಗುತ್ತಿದ್ದ ವೇಳೆ ಬೈಕ್‌ಗಳಲ್ಲಿ ಬಂದ ಐವರು, ಇಬ್ಬರನ್ನು ತಡೆದು ವಾಗ್ವಾದಕ್ಕಿಳಿದಿದ್ದಾರೆ.

ಸ್ವಲ್ಪ ಸಮಯದ ಬಳಿಕ ಐವರ ಪೈಕಿ ಇಬ್ಬರು ಹೊರಟು ಹೋಗಿದ್ದಾರೆ. ಆಗ ಉಳಿದ ಇಬ್ಬರು ಯುವತಿಯ ಮೇಲೆ ಅತ್ಯಾಚಾರ ಎಸಗಿದ್ದಾರೆ. ಇನ್ನೊಬ್ಬ ವ್ಯಕ್ತಿ ಯುವತಿಯನ್ನು ರಕ್ಷಿಸದಂತೆ ಆಕೆಯ ಸ್ನೇಹಿತನನ್ನು ತಡೆದನು ಎಂದು ಸಂತ್ರಸ್ತ ಯುವತಿಯು ಹೇಳಿಕೆ ನೀಡಿದ್ದಾಳೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ಕುರಿತು ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಆರೋಪಿಗಳ ಪತ್ತೆಗೆ ತನಿಖಾ ತಂಡವನ್ನು ರಚಿಸಲಾಗಿದೆ ಎಂದು ಅವರು ತಿಳಿಸಿದರು.

ಬಾಲಕಿ ಮೇಲೆ ಅತ್ಯಾಚಾರ, ಕೊಲೆ?

ಒಂದನೇ ಪುಟದಿಂದ...

ಆರೋಪಿ ಬಂಧನ: ‘ದೂರು ಸ್ವೀಕರಿಸಿದ ತಕ್ಷಣವೇ ಕ್ರಮ ಕೈಗೊಳ್ಳ ಲಾಗಿದ್ದು, ಒಬ್ಬ ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಶುಕ್ರವಾರ ರಾತ್ರಿ 9ಕ್ಕೆ ಎಫ್‌ಐಆರ್ ದಾಖಲಾಗುತ್ತಿದ್ದಂತೆಯೇ, ಪೊಲೀಸರು ಕಾರ್ಯಪ್ರವೃತ್ತರಾದರು. ಶನಿವಾರ ಬೆಳಿಗ್ಗೆ ಆರೋಪಿಯನ್ನು ಬಂಧಿಸಲಾಗಿದೆ. ತನಿಖೆ ಪ್ರಗತಿಯಲ್ಲಿದ್ದು, ಸಂತ್ರಸ್ತ ಕುಟುಂಬದ ಜತೆ ಸಂಪರ್ಕದಲ್ಲಿದ್ದೇವೆ. ಪೊಲೀಸ್ ಹೊರಠಾಣೆಗೆ ಬೆಂಕಿ ಹಚ್ಚಿದ್ದರಿಂದ ಪ್ರಮುಖ ದಾಖಲೆಗಳು ಸಂಪೂರ್ಣವಾಗಿ ನಾಶವಾಗಿವೆ. ತಪ್ಪಿತಸ್ಥರನ್ನು ಗುರುತಿಸಿ, ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದರು.

ಮಾತಿನ ಚಕಮಕಿ

ಬಾಲಕಿಯ ಶವವನ್ನು ಮರಣೋತ್ತರ ಪರೀಕ್ಷೆಗೆ ಪದಮೆರ್ಹಾಟ್‌ನ ಆಸ್ಪತ್ರೆಗೆ ಕೊಂಡೊಯ್ಯಲಾಯಿತು. ಈ ವೇಳೆ ಅಲ್ಲಿಗೆ ಭೇಟಿ ನೀಡಿದ ಟಿಎಂಸಿ ಸಂಸದೆ ಪ್ರತಿಮಾ ಮೊಂಡಲ್ ವಿರುದ್ಧ ಸ್ಥಳೀಯರು ‘ಗೋಬ್ಯಾಕ್’ ಘೋಷಣೆ ಕೂಗಿದರು.

ಇದಾದ ಬಳಿಕ ಬಿಜೆಪಿ ಶಾಸಕಿ ಅಗ್ನಿಮಿತ್ರಾ ಪಾಲ್, ಮಾಜಿ ಸಚಿವೆ ಹಾಗೂ ಸಿಪಿಎಂ ನಾಯಕಿ ಕಾಂತಿ ಗಂಗೂಲಿ, ಡಿವೈಎಫ್‌ಐ ನಾಯಕಿ ಮೀನಾಕ್ಷಿ ಮುಖರ್ಜಿ ಅವರು ಪ್ರತ್ಯೇಕವಾಗಿ ಆಸ್ಪತ್ರೆಗೆ ಭೇಟಿ ನೀಡಿದರು. ಬಾಲಕಿಯ ಕುಟುಂಬಸ್ಥರ ಭೇಟಿಗೆ ಅವಕಾಶ ನೀಡದ ಪೊಲೀಸರ ಜತೆಗೆ ಮಾತಿನ ಚಕಮಕಿ ನಡೆಸಿದರು.

ಈ ವೇಳೆ ಮಾತನಾಡಿದ ಶಾಸಕಿ ಪೌಲ್, ‘ಆಡಳಿತ ಪಕ್ಷದ ಹಸ್ತಕ್ಷೇಪವಿಲ್ಲದ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಬೇಕು. ಪ್ರಕರಣದ ಕುರಿತು ಮ್ಯಾಜಿಸ್ಟ್ರೇಟ್ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದರು. ಬಿಜೆಪಿ ಹಾಗೂ ಸಿಪಿಎಂ ಪಕ್ಷದ ನಾಯಕರ ಬೇಡಿಕೆಯಂತೆ, ಮರಣೋತ್ತರ ಪರೀಕ್ಷೆ ನಡೆಸಲು ಬಾಲಕಿಯ ಮೃತದೇಹವನ್ನು ಕೋಲ್ಕತ್ತಕ್ಕೆ ಸಾಗಿಸಲಾಯಿತು.

ಶಾಸಕರನ್ನೇ ಬೆನ್ನಟ್ಟಿದ ಗ್ರಾಮಸ್ಥರು

ಘಟನಾ ಸ್ಥಳಕ್ಕೆ ಕುಲ್‌ತಲಿ ಕ್ಷೇತ್ರದ ಟಿಎಂಸಿ ಶಾಸಕ ಗಣೇಶ್ ಮೊಂಡಲ್ ಅವರು ಭೇಟಿ ನೀಡಿದಾಗ ಸ್ಥಳೀಯರು ಆಕ್ರೋಶ ಹೊರಹಾಕಿದರು. ‘ಪೊಲೀಸರ ನಿಷ್ಕ್ರಿಯತೆ’ಯನ್ನು ಶಾಸಕರು ಬೆಂಬಲಿಸುತ್ತಿದ್ದಾರೆ ಎಂದು ಆರೋಪಿಸಿ ಕೆಲವರು ಅವರನ್ನು ಬೆನ್ನು ಹತ್ತಿದರು.

> ಇದೊಂದು ಗಂಭೀರ ಪ್ರಕರಣವಾಗಿದ್ದು, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ಪಕ್ಷ ಬಯಸುತ್ತದೆ. ಬಿಜೆಪಿ, ಸಿಪಿಎಂ ಈ ವಿಚಾರದಲ್ಲಿ ರಾಜಕಾರಣ ಮಾಡುತ್ತಿದೆ
>
> **ಕುನಾಲ್ ಘೋಷ್**, ಟಿಎಂಸಿ ಮುಖಂಡ

ಬಿಜೆಪಿ ಆಕ್ರೋಶ ಪ್ರತಿಭಟನೆ

‘ಬಂಗಾಳದಲ್ಲಿ ಮಹಿಳೆಯರು ಸುರಕ್ಷಿತವಾಗಿಲ್ಲ. ಮಹಿಳೆಯರಿಗೆ ರಕ್ಷಣೆ ನೀಡುವಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿಫಲವಾಗಿದ್ದಾರೆ’ ಎಂದು ಕೇಂದ್ರ ಸಚಿವ ಸುಕಾಂತ ಮಜುಂದಾರ್ ‘ಎಕ್ಸ್’ನಲ್ಲಿ ಕಿಡಿಕಾರಿದ್ದಾರೆ.

ಘಟನೆಯನ್ನು ಖಂಡಿಸಿ ಬಿಜೆಪಿ ಕಾರ್ಯಕರ್ತರು ಸಾಲ್ಟ್‌ಲೇಕ್ ಪ್ರದೇಶದಲ್ಲಿ ಪ್ರತಿಭಟನೆ ನಡೆಸಿದರು.

75 Years of Prestige

ಪ್ರೆಸ್ಟೀಜ್ ಶುಭ ಉತ್ಸವ

ಈ ಹಬ್ಬದ ಋತುವಿನಲ್ಲಿ ಪ್ರೆಸ್ಟೀಜ್‌ನ ವಿನೂತನ ಪ್ರಾಡಕ್ಟ್‌ಗಳೊಂದಿಗೆ ಅಡುಗೆ ಮನೆಯಲ್ಲಿ ಸಂಭ್ರಮಾಚರಣೆ ಆರಂಭಗೊಳ್ಳುತ್ತದೆ!

16 ಸೆಪ್ಟೆಂಬರ್ - 15 ನವೆಂಬರ್, 2024

ಖರೀದಿಸಿ
ಸ್ವಚ್ಛ್ ಟ್ರೈ-ಪ್ಲೈ ಪ್ರೆಶರ್ ಕುಕ್ಕರ್ (3L),
ಮೌಲ್ಯ ₹3 870.00 1 ಯೂನಿಟ್

+

ಉಚಿತವಾಗಿ ಪಡೆಯಿರಿ*
ಡ್ಯುರಾಸ್ಟೋನ್ ಓಮ್ನಿ ತವಾ (27 ಸೆಂ.ಮೀ),
ಮೌಲ್ಯ ₹1 550.00
1 ಯೂನಿಟ್

2ಲೀ ಮತ್ತು ಅದಕ್ಕಿಂತ ಹೆಚ್ಚಿನ ಎಲ್ಲಾ ಟ್ರೈ-ಪ್ಲೈ ಪ್ರೆಶರ್ ಕುಕ್ಕರ್‌ಗಳ ಮೇಲೂ ಅನ್ವಯವಾಗುತ್ತದೆ

ಖರೀದಿಸಿ
ಕಿರಿಕಿರಿಯಿಲ್ಲದ ಕ್ಲೀನಿಂಗ್‌ಗಾಗಿ
ಲಿಫ್ಟ್ ಮಾಡಬಹುದಾದ ಬರ್ನರ್‌ಗಳಿರುವ
ಸ್ವಚ್ಛ್ ನಿಯೊ 3-ಬರ್ನರ್ ಗ್ಯಾಸ್ ಸ್ಟವ್
ಮೌಲ್ಯ ₹11 295.00 1 ಯೂನಿಟ್

+

ಉಚಿತವಾಗಿ ಪಡೆಯಿರಿ*
ಸ್ವಚ್ಛ್ ಗ್ರಾನೈಟ್ ನಾನ್-ಸ್ಟಿಕ್ ಕುಕ್‌ವೇರ್
3-ಪೀಸ್ ಸೆಟ್, ಮೌಲ್ಯ ₹4 395.00
ಮತ್ತು ಸ್ವಚ್ಛ್ ಪಾಪ್ಯುಲರ್ SS ಪ್ರೆಶರ್ ಕುಕ್ಕರ್ (3L),
ಮೌಲ್ಯ ₹2 420.00 1 ಯೂನಿಟ್

ಖರೀದಿಸಿ
ಸ್ಟೈನ್‌ಲೆಸ್ ಸ್ಟೀಲ್ ಪ್ಲಾಟಿನಾ
ಪಾಪ್ಯುಲರ್ ಕುಕ್‌ವೇರ್ 3-ಪೀಸ್ ಸೆಟ್,
ಮೌಲ್ಯ ₹3 825.00 1 ಸೆಟ್

+

ಉಚಿತವಾಗಿ ಪಡೆಯಿರಿ*
ಪಾಪ್ಯುಲರ್
ಸ್ವಚ್ಛ್ SS
ಪ್ರೆಶರ್ ಕುಕ್ಕರ್ (3L),
ಮೌಲ್ಯ ₹2 420.00
1 ಯೂನಿಟ್

ಖರೀದಿಸಿ
ಆಸ್ಕರ್ ಸೇಫ್‌ಸೆನ್ಸ್™ ಚಿಮ್ನಿ 900ಎಂಎಂ,
ಮೌಲ್ಯ ₹33 645.00 1 ಯೂನಿಟ್
@ 25% ರಿಯಾಯಿತಿ*

SafeSense technology

ಪ್ರೆಸ್ಟೀಜ್ ಚಿಮ್ನಿಗಳೊಂದಿಗೆ**
₹2 249.00 ಮೌಲ್ಯದ ಕಿಟ್
ಮತ್ತು ಇನ್‌ಸ್ಟಾಲೇಶನ್
ಉಚಿತ

+

ಉಚಿತವಾಗಿ ಪಡೆಯಿರಿ*
ಸ್ವಚ್ಛ್ ಎಫಿಶಿಯಾ ಹಾಬ್ 3-ಬರ್ನರ್,
ಮೌಲ್ಯ ₹17 495.00 1 ಯೂನಿಟ್

**ಆಯ್ದ ಚಿಮ್ನಿ ಮಾಡೆಲ್‌ಗಳಿಗೆ ಆಫರ್ ಅನ್ವಯವಾಗುತ್ತದೆ.
ಆಸ್ಕರ್ ಸೇಫ್‌ಸೆನ್ಸ್™ 600 ಎಂಎಂ ಮತ್ತು
ಆಸ್ಕರ್ ಬ್ಲ್ಯಾಕ್ (600 ಎಂಎಂ ಮತ್ತು 900 ಎಂಎಂ) ಮೇಲೂ ಅನ್ವಯವಾಗುತ್ತದೆ.

ಖರೀದಿಸಿ
ಪ್ರೆಸ್ಟೀಜ್ ರಾಯಲ್ ಪ್ಲಸ್ 3-ಬರ್ನರ್
ಗ್ಯಾಸ್ ಸ್ಟವ್, ಮೌಲ್ಯ ₹9 995.00 1 ಯೂನಿಟ್

10 YEAR WARRANTY ON GLASS

+

ಉಚಿತವಾಗಿ ಪಡೆಯಿರಿ*
ಪ್ರೆಸ್ಟೀಜ್ ಅವರ ಜಡ್ಜ್ 24-ಪೀಸ್
SS ಡಿನ್ನರ್ ಸೆಟ್, ಮೌಲ್ಯ ₹3 195.00
ಮತ್ತು ಪಾಪ್ಯುಲರ್ ಪ್ಲಸ್
ಸ್ವಚ್ಛ್ ಪ್ರೆಶರ್ ಕುಕ್ಕರ್ (3L),
ಮೌಲ್ಯ ₹1 780.00
1 ಯೂನಿಟ್

JUDGE® By Prestige®

ಖರೀದಿಸಿ
ಎಂಡ್ಯೂರಾ ಪ್ರೊ 1000W
ಮಿಕ್ಸರ್ ಗ್ರೈಂಡರ್,
ಮೌಲ್ಯ ₹13 995.00 1 ಯೂನಿಟ್
@ 25% ರಿಯಾಯಿತಿ*

+

ಉಚಿತವಾಗಿ ಪಡೆಯಿರಿ*
PGMFB ಸ್ಯಾಂಡ್‌ವಿಚ್ ಮೇಕರ್
ಮೌಲ್ಯ ₹1 795.00 1 ಯೂನಿಟ್

3, 4, 6 ಜಾರ್ಸ್ ಎಂಡ್ಯೂರಾ 1000W ಮಿಕ್ಸರ್ ಗ್ರೈಂಡರ್ ಮೇಲೂ ಅನ್ವಯವಾಗುತ್ತದೆ

ಖರೀದಿಸಿ
₹1 265.00 ಮೌಲ್ಯದ ಜಡ್ಜ್ SS
ಇಲೆಕ್ಟ್ರಿಕ್ ಕೆಟಲ್ 1 ಯೂನಿಟ್ ₹599.00ಕ್ಕೆ

JUDGE® By Prestige®

ಖರೀದಿಸಿ
PIC 3.1 V3 ಇಂಡಕ್ಷನ್ ಕುಕ್‌ಟಾಪ್,
ಮೌಲ್ಯ ₹6 070.00 1 ಯೂನಿಟ್

AUTOMATIC WHISTLE COUNTER

+

ಉಚಿತವಾಗಿ ಪಡೆಯಿರಿ*
ಗ್ರಾನೈಟ್ ಆಲ್ಫಾ ನಾನ್-ಸ್ಟಿಕ್
ಕುಕ್‌ವೇರ್ 3-pc ಸೆಟ್,
ಮೌಲ್ಯ ₹3 995.00
1 ಸೆಟ್

ಸ್ಪ್ರಿಷ್ V4 | PIC 6.1 V3 ಮತ್ತು PIC 2.0 V2
ಮೇಲೂ ಅನ್ವಯವಾಗುತ್ತದೆ

*ಷರತ್ತುಗಳು ಅನ್ವಯಿಸುತ್ತವೆ. ಮೇಲೆ ಸೂಚಿಸಿದ ಬೆಲೆಗಳು ಉತ್ಪನ್ನದ ಎಂ ಆರ್ ಪಿ (ಎಲ್ಲಾ ತೆರಿಗೆಗಳನ್ನು ಒಳಗೊಂಡಂತೆ). ಎಂ ಆರ್ ಪಿ ಮೇಲೆ ಮಾತ್ರ ರಿಯಾಯಿತಿಗಳನ್ನು ನೀಡಲಾಗುತ್ತದೆ. ಯಾವುದೇ ಎರಡು ಕೊಡುಗೆಗಳನ್ನು ಸೇರಿಸಲಾಗದು. 3 ಯೂನಿಟ್‌ಗಳ ಸ್ಟೈನ್‌ಲೆಸ್ ಸ್ಟೀಲ್ ಕುಕ್‌ವೇರ್‌ನಲ್ಲಿ ಫ್ರೈ ಪ್ಯಾನ್ –22 ಸೆ.ಮೀ., ಗ್ಲಾಸ್ ಮುಚ್ಚಳದೊಂದಿಗೆ ಕಡಾಯಿ–22ಸೆ.ಮೀ, ಗ್ಲಾಸ್ ಮುಚ್ಚಳದೊಂದಿಗೆ ಸಾಸ್ ಪ್ಯಾನ್ – 16 ಸೆ.ಮೀ ಒಳಗೊಂಡಿರುತ್ತದೆ. ಕೊಡುಗೆಗಳು ಆಯ್ದ ಮಾದರಿಗಳ ಮೇಲೆ ದಾಸ್ತಾನು ಇರುವವರೆಗೆ ಮಾತ್ರ. ಕೊಡುಗೆಗಳು ಆಯ್ದ ಸ್ಟೋರ್‌ಗಳಲ್ಲಿ ಮಾತ್ರ ಲಭ್ಯವಿರುತ್ತದೆ. ಕೊಡುಗೆಗಳು ತಮಿಳುನಾಡು, ಕರ್ನಾಟಕ, ಗೋವಾ, ಗುಜರಾತ್ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಅನ್ವಯಿಸುತ್ತದೆ. ಪ್ರೆಸ್ಟೀಜ್® ಲೋಗೋ ಭಾರತದಲ್ಲಿ ಟಿಟಿಕೆ ಪ್ರೆಸ್ಟೀಜ್ ಲಿಮಿಟೆಡ್‌ಗೆ ನೋಂದಾಯಿತ ಟ್ರೇಡ್ ಮಾರ್ಕ್ ಆಗಿದೆ. ಜಡ್ಜ್® ಲೋಗೋ ಭಾರತದಲ್ಲಿ ಹಾರ್ವುಡ್ ಹೋಮ್‌ವೇರ್ಸ್ ಲಿಮಿಟೆಡ್‌ನ ನೋಂದಾಯಿತ ಟ್ರೇಡ್‌ಮಾರ್ಕ್ ಆಗಿದೆ. ಎಂ ಆರ್ ಪಿ ಮತ್ತು ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ ಹತ್ತಿರದ ನಿಮ್ಮ ಪ್ರೆಸ್ಟೀಜ್ ಎಕ್ಸ್‌ಕ್ಲೂಸಿವ್/ಡೀಲರ್ ಔಟ್‌ಲೆಟ್‌ಗೆ ಭೇಟಿ ನೀಡಿ.

Prestige®
ತಮ್ಮವರನ್ನು ಪ್ರೀತಿಸುವವರು ಪ್ರೆಸ್ಟೀಜನ್ನು ಹೇಗೆ ನಿರಾಕರಿಸುತ್ತಾರೆ?

MADE WITH PRIDE IN INDIA | CUSTOMER CARE NO 080-6000 4411 | Store Locator | Scan to Connect | Shop Online on shop.ttkprestige.com | ttk

Prestige® | Xclusive

Outer Ring Road, Hennur, Ph: 7204250679; **Tumkur Rd: 8th Mile T.Dasarahalli:** Ph: 9972541116; **Koramangala,** Ph: 9663515616; **Tumkur:** Ph: 9164853121; **Bull Temple Rd,** Ph: 26609012; **Malleswaram,** Ph: 9448282470; **Rt Nagar Main Rd,** Ph: 41698761; **Ganganagar Cbi Rd,** Ph: 43705914; **Wheeler Rd,** Ph: 25803080; **Kattriguppe Circle,** Ph: 40900685; **Vijayanagar,** Ph: 9739004750; **Hsr Bda Complex,** Ph: 25726991; **Marathahalli,** Ph: 42197088; **Sanjaynagar,** Ph: 41258300; **Banaswadi Ring Rd,** Ph: 41634115; **Jayanagar,** Ph: 9845066549; **J.P.Nagar,** Ph: 41122235; **Rajarajeshwaringr,** Ph: 28603540, 9008418800; **Kengeri Stl Town,** Ph: 28485296; **Rajajinagar,** Ph: 41731224; **B.T.M.Layout,** Ph: 40939168; **Sarjapura Rd,** Ph: 42038646; **Konankunte Cross,** Ph: 9845057728; **Nagharabhavi Bda Cmplx,** Ph: 9739004750; **Begur,** Ph: 8970366139; **Vidyaranayapura,** Ph: 9845518824; **Wilson Garden,** Ph: 9480010720; **Brookefield,** Ph: 28541555; **Ramamurthynagar,** Ph: 08042049545; **Kr Puram,** Ph: 8861494277; **Cambridge Layout,** Ph: 42074468; **Kaggadaspura,** Ph: 7019776742; **Kammanahalli,** Ph: 41606044; **Whitefield,** Ph: 40907273; **Chandapura,** Ph: 9036190725; **Dommasandra,** Ph: 9611423555; **Hesarghatta Road,** Ph: 28370400; **Uttarahalli,** Ph: 9986879095; **Anjananagr Magadi Rd,** Ph: 23281206; **Kadugodi,** Ph: 8123042234; **Hosur Rd Huskur Gate,** Ph: 9606406009; **Yelahanka Newtown,** Ph: 8668034376; **Jayamahal Ext,** Ph: 41616484; **Mahalakshmi Lyt,** Ph: 23572233; **Jpnagar 7th Phase: Puttenahalli,** Ph: 41465855; **Kumaraswamy Lyt,** Ph: 8618517716; **Chandralyt,** Ph: 9739004750; **Channasandra,** Ph: 9986369569; **Sheshadripuram,** Ph: 8711090976; **Kasturinagar,** Ph: 08049923166; **Attibele,** Ph: 9341221525; **Jigani,** Ph: 8762069852; **Sarjapura Town,** Ph: 9036373175; **Hosa Rd Junction,** Ph: 9845597099; **Mathikere,** Ph: 6366636592; **Basaveshwaranagar,** Ph: 9739591008; **Thalagatapura,** Ph: 9964116888; **Hegganahalli,** Ph: 28360289; **Gottigere,** Ph: 8431241099; **Ullal,** Ph: 9686646565; **Jayanagar:** 4th Block East Extension, Ph: 9945446335; **Nelamangala,** Ph: 9632356627; **Kolar,** Ph: 9738882584; **Channapatna,** Ph: 9686661294; **Madhugiri,** Ph: 9611552805; **Gauribidanur,** Ph: 8317399465; **Gubbi,** Ph: 9035195120, 8095459040, **Banshankari Stage 2, Bda Complex,** Ph: 49890679, 9740677740; **Vijayabank Colony, Bilekahalli,** Ph: 8970366139; **Whitefield,** Ph: 08040907273; **Malur,** Ph: 9845028859; **Kumbalagodu,** Ph: 9845014860; **Devanahalli,** Ph: 9845737576; **Thanisandra,** Ph: 9686340159; **Hulimavu,** Ph: 8904654433; **Singanayakanahalli,** Ph: 9151717779; **Anekal,** Ph: 8660070202; **Tiptur,** Ph: 9164688773; **Bhyadarahalli,** Ph: 9845982089; **Hennur Bande,** Ph: 9980097982; **Tc Palya Road,** Ph: 9148775224; **Chikkajaala,** Ph: 9036202892; **Mutthanallur,** Ph: 8970736606; **Madnayakhalli,** Ph: 8951515939; **Hoskote,** Ph: 9845028859; **Sira,** Ph: 8310660400; **Dodballapura,** Ph: 9035349755, Ph: 9972435545;

Also Available At : Jayanagar: Sarathy, Ph: 41210047; Vishaals, Ph: 08022447285; Royal Mart, Ph: 8790311104; Anjana Superstores, Ph: 41301836; Kitchenmart, Ph: 26652885; Aravinda, Ph: 41301989; **Bankcolony:** Vardhaman Ind, Ph: 22428300; **Banashankari:** Varada Glass & Crky, Ph: 9980949316; Patel Agn, Ph: 26714285; Patel Ktchen Apl, Ph: 9079061706; Chamundi Ind, Ph: 26712633; **Bilekhalli:** Sree Pooja Ha, Ph: 9036919084; **Bommanahalli:** Sridurga Ha, Ph: 9900674018; **Chamarjpet:** Vadirajstores, Ph: 41517646; **Devarachikkanahalli:** Sapna Ha, Ph: 9738732036; **Electronic City:** Dream Mart Hm, Ph: 9148934858; **Hosa Rd:** Maharaja Kw, Ph: 9036400829; **Hosakota:** Dream Mart Hm, Ph: 9964744480; **Isro Layout:** Bhumi Kitchen, Ph: 9916830850; **Jp Nagar:** Surya Kitchen World, Ph: 9449762988; **Kanakapura Rd:** Royal Mart, Ph: 28425777; **Padmanabnagar:** Royalmart, Ph: 9886088993; **Uthrahalli:** Royalmart, Ph: 26394114; Rme Super Market, Ph: 9964228208; **Mysore Road:** The Karnataka Metal Industry, Ph: 9449342727; **Ayyappanagar:** Top Mart Sm-, Ph: 7204448111; **Babusapalya:** Karnataka Ha, Ph: 8105754544; **Basaveshwarnagar:** Bigday Hm, Ph: 9972517344; Mahaveer Ha, Ph: 9844173501; Modern Colln, Ph: 23583440; Aadhinath Kitchen Gal, Ph: 41220555; **Gayathri Ngr:** J.K.Steel, Ph: 23320853; **Giri Nagar:** Vidya Ent, Ph: 9449988650; Matahji Ha, Ph: 7019385120; **Bagalgunte:** Royal Mart, Ph: 9538000072; **Chandra Layout:** Rajguru Kw, Ph: 9513034351; Pavan Kw, Ph: 8618028319; **Ganganagar:** Salemindustries, Ph: 41284470; Patel Ind, Ph: 8050899296; **Hesargatta Main Rd:** Royal Mart, Ph: 28398200; **Horamavu:** Mamtha Ha, Ph: 8880050050; **Hrbr Layout:** Bhavaniha, Ph: 9845916164; **Harlurur:** Vinayaka Ha, Ph: 7760531454; **Katriguppe:** Mk Metal Mart, Ph: 9035779199; **Kr Puram:** Srm Elect, Ph: 9845445748; Pooja Ele And Mob, Ph: 9738850503; **Boodhigererd:** New Royal Fresh, Ph: 9538038885; **Kamanhalli:** Ramdev Steel, Ph: 7259575732; Hm Traders, Ph: 9964797616; **Kasavanahalli:** Mathaji Ha, Ph: 8880796036; **Kunadanahalli:** New Prakash Ha, Ph: 7090444111; **Kengeri:** Falcon Hm, Ph: 7829999066; **Koramangala:** Sowbhagya Traders, Ph: 7337733887; **Kmr Swylayout:** Patel Ha, Ph: 8951979665; **Laggere:** Top Mart, Ph: 9110246047; **Lnpura:** Arihanth Ent, Ph: 7899633338; **Malleshwaram:** Deviprasad Ha, Ph: 23564536; Bright Novelty, Ph: 23343505; **Mathikere:** M.Bhawarlals Inc, Ph: 41724740; Maharaja Agency, Ph: 41278050; **Kadugodi:** Little Wonder, Ph: 9961224224; **Madiwala:** Surya Ha, Ph: 9449635332; **Malleshpalya:** Bajrang Ha, Ph: 9449526463; New Bheru Ha, Ph: 9448680738; Ramdev Ha, Ph: 9035175860; Sri Bhagawathi Ha, Ph: 9590575427; Maa Ambe Ha, Ph: 8884198322; **Magadiroad:** Royal Mart, Ph: 23584498; **Annaporneshwari Nagar:** Deepak Ha, Ph: 9148912736; **M S Palya:** Royal Mart, Ph: 8147014079; **B Narayanpura:** Yellow Mart, Ph: 7676726487; **Rajajinagar:** Mahalakshmi Metal House, Ph: 23355994; Rathna Sales, Ph: 23375566; Dhanalakshmi Kitchen World, Ph: 41285801; Jayalakshmi Kw, Ph: 9844755146; R S Mart, Ph: 6363602929; Pooja Stl Cent, Ph: 23327014; **Rr Nagar:** Milan Ha, Ph: 28605619; Pavan Kg, Ph: 9739207043; **Tavarakere:** Mytri Mart Sm, Ph: 7996598838; **T C Palya:** Rhk Super Mkt, Ph: 9731668995; Big Day Sm, Ph: 8867604818; Karnataka Ha, Ph: 8105754544; **Tipsandra:** Pawar Ha, Ph: 9980517021; Milan Ha, Ph: 9986196375; Ramdev Ha, Ph: 7406901545; **Ulsoor:** Aishwaryapranam Ha Ph: 9902788429; Pranam Steel Center, Ph: 9448053781; **Udaynagar:** Mother India, Ph: 9036189765; **Venkatapura:** Pooja Kg, Ph: 9900426176; **Vijayanagar:** Vijaylaxmi Kw, Ph: 9845022284; Mahendras, Ph: 23141126; Maruthi Ha, Ph: 8904689155; **Vidyarnapra:** Praksh Kw, Ph: 805062087; Mahalakshmi Steel House, Ph: 9663375159; All Seasons Hm, Ph: 9946728736; **Whitefield:** Rolla Hm, Ph: 9148003448; Loyalcity, Ph: 7892565797; Royal Mart, Ph: 7079734574; **Yelahanka:** Royalmart, Ph: 41705760; Mutha Electricals, Ph: 22971920; Sai Kitchen World, Ph: 9632811797; **Btm Layout:** Patel Agencies, Ph: 9482853401; **Tumkur:** N.R Metal Agency, Ph: 0816-2275003; Kavitha Kitchen Ware, Ph: 9538537166; Surya Metal Store, Ph: 9731351050; Tumkur Trade Centre, Ph: 9901432287; Dharshan Ha, Ph: 9632132567; Sudha Ha, Ph: 9964011253; **Gubbi:** Keerthi Gas Stove, Ph: 9686004169; **Tiptur:** Sri Sai Electronics, Ph: 8861432166; Srirama-Ent, Ph: 9880362018; Kumar And Kumar, Ph: 9141609900; **Turuvekere:** Sri Sai Electronics, Ph: 8861432166; **Pavgada:** Shivanagere Ha, Ph: 9880768236; Meenakshi Appl, Ph: 9880360326; **Sira:** Swamy Ent, Ph: 9741561491; Lakshmi Sreel, Ph: 9060434807; Mallikarjuna Ha, Ph: 8123206930; **Madhugiri:** Akshya Ha, Ph: 9141786066; Vinayaka Store, Ph: 9900219291; **Kunigal:** Karnataka Metal Stores, Ph: 9448550390; New Karnataka Steel Centre, Ph: 08132221548; Karnataka Ha, Ph: 8892197645; **KGF**- Prakash Ha, Ph: 9845113454; **Bangarpet:** Kumar Stores, Ph: 9845935240; **Gauribidanur:** Sri Raju Ha, Ph: 9448249527; Dhighvijaya Elec, Ph: 7204757456; **Kanakapura:** Sri Kabbalamma Ha, Ph: 9880835508; **Kolar:** Reddy Ele, Ph: 9844472531; Rakesh Ele, Ph: 9880634555; Naveenprakash Ha, Ph: 9844997787; **Malur:** Srm Elec, Ph: 9845445748; Reddy Ele, Ph: 9844435121; **Vijayapura:** Rmcity, Ph: 9845164990; Reddy Ele, Ph: 9900336061; **Devanahalli:** New Sowmyaele, Ph: 9141335210; **Chintamani:** Great India Ele, Ph: 9742963551; Lavanya Stores, Ph; 9242498294; **For Franchisee Enquiry Contact: Ayush Kumar Sahu, Ph: 9993010283;**

Available at all PAI Store. Pai INTERNATIONAL

ಅತ್ಯಾಚಾರ ಪ್ರಕರಣ: ಮುನಿರತ್ನ ಮತ್ತೆ ಜೈಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಚಾರ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ ಸಿಐಡಿಯ ವಿಶೇಷ ತನಿಖಾ ದಳದ ವಶದಲ್ಲಿದ್ದ ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಅವರು ಮತ್ತೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿದರು.

ಮುನಿರತ್ನ ವಿರುದ್ಧ ದಾಖಲಾಗಿದ್ದ ಕೊಲೆ ಬೆದರಿಕೆ, ಜಾತಿ ನಿಂದನೆ ಹಾಗೂ ಅತ್ಯಾಚಾರ ಪ್ರಕರಣದ ತನಿಖೆಯನ್ನು ಸರ್ಕಾರವು ಎಸ್ಐಟಿಗೆ ವಹಿಸಿ ಆದೇಶಿಸಿತ್ತು. ಹೆಚ್ಚಿನ ವಿಚಾರಣೆಗೆ ಬಾಡಿ ವಾರಂಟ್ ಮೇಲೆ ಅವರನ್ನು ಜೈಲಿನಿಂದ ಎಸ್ಐಟಿ ಅಧಿಕಾರಿಗಳು ತಮ್ಮ ವಶಕ್ಕೆ ಪಡೆದುಕೊಂಡಿದ್ದರು. ಈ ಅವಧಿ ಶನಿವಾರಕ್ಕೆ ಮುಕ್ತಾಯವಾಗಿದ್ದರಿಂದ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ನ್ಯಾಯಾಲಯವು 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿತು.

ಮುನಿರತ್ನ

ಆದೇಶದ ಬೆನ್ನಲ್ಲೇ ಮುನಿರತ್ನ ಅವರನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಯಿತು.

ಮುನಿರತ್ನ ಅವರಿಗೆ ಮನೆ ಊಟಕ್ಕೆ ಅವಕಾಶ ಮಾಡಿಕೊಡುವಂತೆ ವಕೀಲರು ಕೋರ್ಟ್‌ಗೆ ಮನವಿ ಮಾಡಿದರು. ಈ ಸಂಬಂಧ ಜೈಲಿನ ಅಧಿಕಾರಿಗಳಲ್ಲಿ ಮನವಿ ಮಾಡುವಂತೆ ನ್ಯಾಯಾಲಯ ಸೂಚಿಸಿತು. ಅನುಮತಿ ನೀಡದಿದ್ದರೆ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸುವಂತೆ ಹೇಳಿತು.

ಅತ್ಯಾಚಾರ ಪ್ರಕರಣದಲ್ಲಿ ಮುನಿರತ್ನ ಅವರನ್ನು ಕಗ್ಗಲೀಪುರ ಠಾಣೆ ಪೊಲೀಸರು ಬಂಧಿಸಿದ್ದರು. ಇದಕ್ಕೂ ಮೊದಲು ಬಿಬಿಎಂಪಿ ಗುತ್ತಿಗೆದಾರರೊಬ್ಬರಿಗೆ ಜೀವ ಬೆದರಿಕೆ ಮತ್ತು ಜಾತಿ ನಿಂದನೆ ಆರೋಪದ ಅಡಿ ಮುನಿರತ್ನ ಅವರು ಜೈಲು ಸೇರಿದ್ದರು. ಆ ಪ್ರಕರಣದಲ್ಲಿ ಅವರಿಗೆ ಜಾಮೀನು ಮಂಜೂರಾಗಿದೆ.

₹70 ಕೋಟಿ ಮೌಲ್ಯದ ಆಸ್ತಿಗೆ ಪರಿಹಾರ ಪಡೆಯಲು ಯತ್ನ – ಆರೋಪ

19 ಮಂದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಮೀನಿನ ನಕಲಿ ದಾಖಲೆ ಸೃಷ್ಟಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ(ಬಿಡಿಎ) ₹70 ಕೋಟಿ ಮೌಲ್ಯದ ಆಸ್ತಿಗೆ ಪರಿಹಾರ ಪಡೆಯಲು ಯತ್ನಿಸಿದ ಆರೋಪದ ಅಡಿ ಬಿಡಿಎ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಸೇರಿದಂತೆ 19 ಮಂದಿ ವಿರುದ್ಧ ಶೇಷಾದ್ರಿಪುರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಚಲ್ಲಘಟ್ಟದ ನಿವಾಸಿ ಪುಟ್ಟಮ್ಮ, ಗಂಗಮ್ಮ, ನಾಗರಾಜ್ , ಲಕ್ಷ್ಮಮ್ಮ, ಶ್ರೀನಿವಾಸ್, ಸಂತೋಷ್, ರವಿಕುಮಾರ್ , ಭರತ್ , ಸುನಿತಾ, ಆಶಾ, ಸ್ವಾಮಿ, ಉಮೇಶ್ ಹಾಗೂ ಬಿಡಿಎ ಭೂಸ್ವಾಧೀನ ಅಧಿಕಾರಿ ಸುಧಾ, ಬೆಂಗಳೂರು ದಕ್ಷಿಣ ವಿಭಾಗದ ಉಪ ವಿಭಾಗಾಧಿಕಾರಿ ಶಿವಣ್ಣ, ಬಿಡಿಎ ಸರ್ವೇಯರ್ ರವಿಪ್ರಕಾಶ್, ಕೆ.ಜಿ. ರಸ್ತೆ ಕಚೇರಿಯ ವಿಶೇಷ ತಹಶೀಲ್ದಾರ್, ಕಂದಾಯ ಇಲಾಖೆ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಇತರೆ ಅಧಿಕಾರಿಗಳು, ಸಿಬ್ಬಂದಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಬಿಡಿಎ ವಿಚಕ್ಷಣಾ ದಳದ ಡಿವೈಎಸ್‌ಪಿ ಎಂ.ಮಲ್ಲೇಶ್ ಅವರು ನೀಡಿದ ದೂರು ಆಧರಿಸಿ, ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

'ಎಲ್ಲ ಆರೋಪಿಗಳು ಸೇರಿ ಚಲ್ಲಘಟ್ಟದ ಸರ್ವೆ ನಂ.13 ಹಾಗೂ 58ರಲ್ಲಿನ 6 ಎಕರೆಗೆ ನಕಲಿ ದಾಖಲೆ ಸೃಷ್ಟಿಸಿದ್ದರು. ಜಮೀನಿನ ಮೂಲ ಮಾಲೀಕ ಮೂಡ್ಲಪ್ಪ ಅವರಿಗೂ ಆರೋಪಿಗಳಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಅಧಿಕಾರಿಗಳ ಜತೆಗೆ ಶಾಮೀಲಾಗಿ ಕಂದಾಯ ಇಲಾಖೆಯಿಂದ ನಕಲಿ ದಾಖಲೆ ಪಡೆದುಕೊಳ್ಳಲಾಗಿತ್ತು. ನಕಲಿ ದಾಖಲೆಗಳನ್ನು ಬಿಡಿಎಗೆ ಸಲ್ಲಿಸಿ, ಆಸ್ತಿಯ ಮಾಲೀಕರು ತಾವೇ ಎಂದು ಹೇಳಿಕೊಂಡು ₹70 ಕೋಟಿ ಮೌಲ್ಯದ ಆಸ್ತಿಗೆ ಪರಿಹಾರ ಕೋರಿದ್ದರು' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ಆಸ್ತಿಯನ್ನು ಪರಿಶೀಲಿಸಿ ವರದಿ ನೀಡಲು ನೇಮಕವಾಗಿದ್ದ ಬಿಡಿಎ ವಿಶೇಷ ಭೂಸ್ವಾಧೀನ ಅಧಿಕಾರಿ ಸುಧಾ, ಸರ್ವೇಯರ್ ಪಿ.ಎನ್.ರವಿಪ್ರಕಾಶ್ ಅವರು ಪರಿಶೀಲನೆ ನಡೆಸದೇ ಆಸ್ತಿಗೆ ಸಂಬಂಧವಿಲ್ಲದ ವ್ಯಕ್ತಿ ಉಮೇಶ್ ಅವರು ನೀಡಿದ್ದ ನಕಲಿ ದಾಖಲೆ ಆಧರಿಸಿ ವರದಿ ಸಿದ್ಧಪಡಿಸಿ, ಬಿಡಿಎಗೆ ತಪ್ಪು ಮಾಹಿತಿ ನೀಡಿದ್ದರು' ಎಂದು ಉಲ್ಲೇಖಿಸಲಾಗಿದೆ.

'ಆಶ್ರಯ ಯೋಜನೆ'ಗೆ ಕಾಯ್ದಿರಿಸಿರುವ ಜಮೀನು ಆಗಿದ್ದರೂ ರವಿಪ್ರಕಾಶ್ ಮತ್ತು ಸುಧಾ ಅವರು ಭೂಪರಿಹಾರಕ್ಕೆ ಅರ್ಹವಾಗಿರುವ ಜಮೀನು ಎಂದು ಸುಳ್ಳು ನಕಾಶೆ ತಯಾರಿಸಿದ್ದರು' ಎಂದು ವಿವರಿಸಲಾಗಿದೆ.

'ದಕ್ಷಿಣ ಉಪ ವಿಭಾಗದ ಉಪ ವಿಭಾಗಾಧಿಕಾರಿ ಶಿವಣ್ಣ ಅವರು ಆರೋಪಿಗಳು ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸದೇ 2021ರ ಜ.19ರಂದು ಪುಟ್ಟಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಲು ಬೆಂಗಳೂರು ದಕ್ಷಿಣ ತಾಲ್ಲೂಕು ವಿಶೇಷ ತಹಶೀಲ್ದಾರ್‌ಗೆ ಆದೇಶ ನೀಡಿ ಕೃತ್ಯದಲ್ಲಿ ಭಾಗಿ ಆಗಿದ್ದಾರೆ' ಎಂದು ಎಫ್ ಐಆರ್ ಪ್ರತಿಯಲ್ಲಿ ಉಲ್ಲೇಖಿಸಲಾಗಿದೆ.

'ಆಸ್ತಿಯ ಮಾಲೀಕ ಮೂಡ್ಲಪ್ಪ ಅಲಿಯಾಸ್ ಮೂಡ್ಲಯ್ಯ ಅವರು 1976ರಲ್ಲಿ ನಿಧನರಾಗಿದ್ದಾರೆ. 1992ರಲ್ಲಿ ಆಸ್ತಿಯ ಪೋಡಿ ಆಗಿದೆ. 2019–2020ರಲ್ಲಿ ಆಸ್ತಿಗೆ ಸಂಬಂಧಿಸಿದಂತೆ ಆರೋಪಿಗಳು 'ರಿಲೀಸ್ ಡೀಡ್' ಮಾಡಿಕೊಂಡಿದ್ದಾರೆ. ಪುಟ್ಟಮ್ಮ ಹೆಸರಿಗೆ 57,498 ಚದರ ಅಡಿಗಳಿಗೆ ಭೂಪರಿಹಾರ ಮಂಜೂರಾತಿಗೆ ದಾಖಲೆಗಳ ಸಲ್ಲಿಕೆ ಆಗಿವೆ. ಆದರೆ, ಪರಿಹಾರ ಬಿಡುಗಡೆ ಆಗಿಲ್ಲ. ಹೀಗಾಗಿ, ವಂಚನೆ ಮಾಡಿದ ಖಾಸಗಿ ವ್ಯಕ್ತಿಗಳು ಹಾಗೂ ಸರ್ಕಾರಿ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ಕೋರಲಾಗಿದೆ.

ಪ್ರಾಥಮಿಕ ವಿಚಾರಣೆ

ಈ ಅಕ್ರಮದ ಸಂಬಂಧ ಗೋವಿಂದರಾಜು ಎಂಬವರು ಬಿಡಿಎಗೆ ದೂರು ನೀಡಿದ್ದರು. ದೂರು ಆಧರಿಸಿ ಪ್ರಾಥಮಿಕ ವಿಚಾರಣೆ ಹಾಗೂ ಬೆರಳಚ್ಚು ತಜ್ಞರಿಂದ ಪರಿಶೀಲನೆ ನಡೆಸಲಾಗಿತ್ತು. ತಜ್ಞರು ವರದಿ ನೀಡಿದ್ದು ವರದಿಗಳಲ್ಲಿ ಆರೋಪಿಗಳು ಕೃತ್ಯದಲ್ಲಿ ಭಾಗಿ ಆಗಿರುವುದು ಪತ್ತೆಯಾಗಿ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಸುದ್ದಿ 2 ನಿಮಿಷ

ಸಿ.ಎಂ ಜತೆ ಸಭೆ: ಸ್ಥಳ, ಸಮಯ ನಿಗದಿಗೆ ಆಗ್ರಹ

ಗದಗ: 'ಪಂಚಮಸಾಲಿ ಸಮಾಜದ 2ಎ ಮೀಸಲಾತಿ ಹೋರಾಟ ಗುರಿ ಮುಟ್ಟುವವರೆಗೂ ನಿಲ್ಲುವುದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅ.15ರಂದು ಸಮಾಜದ ಪ್ರಮುಖ ವಕೀಲರ ಸಭೆ ಕರೆದಿದ್ದಾರೆ. ಆದರೆ, ಸಭೆ ನಡೆಸುವ ಸ್ಥಳ, ಸಮಯವನ್ನು ಇನ್ನೂ ನಿಗದಿಗೊಳಿಸಿಲ್ಲ. ಕೂಡಲೇ ಇದನ್ನು ಪ್ರಕಟಿಸಬೇಕು' ಎಂದು ಬಸವಜಯ ಮೃತ್ಯುಂಜಯ ಸ್ವಾಮೀಜಿ ಶನಿವಾರ ಆಗ್ರಹಿಸಿದರು.

'ಅಂದಿನ ಸಭೆಯಲ್ಲಿ ಮುಖ್ಯಮಂತ್ರಿ ನಮ್ಮ ಬೇಡಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸದೇ ಇದ್ದಲ್ಲಿ ಅಥವಾ ಕಾರಣ ನೀಡಿ ಸಭೆಯನ್ನೇ ನಡೆಸದಿದ್ದಲ್ಲಿ ವಕೀಲರು, ಸಮುದಾಯದ ಜನರ ಜತೆಗೂಡಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುವುದು' ಎಂದು ಸುದ್ದಿಗಾರರಿಗೆ ತಿಳಿಸಿದರು.

'ಪಂಚಮಸಾಲಿ 2ಎ ಮೀಸಲಾತಿ ಹೋರಾಟಕ್ಕೆ ಸಂಬಂಧಿಸಿದಂತೆ ವಿಧಾನಸಭೆಯಲ್ಲಿ ಸಚಿವರು, ಶಾಸಕರ ಧ್ವನಿ ಅಡಗಿದೆ. ಆದಕಾರಣ, ನ್ಯಾಯಾಂಗದ ಮೂಲಕ ಹೋರಾಟ ಆರಂಭಿಸಲಾಗಿದೆ' ಎಂದು ತಿಳಿಸಿದರು.

'ಅ.15ರಂದು ನಡೆಯುವ ಸಭೆಯಲ್ಲಿ ಯಾವ ವಿಷಯಗಳನ್ನು ಚರ್ಚಿಸಬೇಕು ಎಂದು ತೀರ್ಮಾನಿಸಲಾಗಿದೆ. 10 ಮಂದಿ ವಕೀಲರು, ಸಮಾಜದ ಪ್ರಮುಖರ ಜತೆಗೆ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಮೀಸಲಾತಿ ಸಿಗದಿರುವ ಕಾರಣ ಸಮಾಜದ ಮಕ್ಕಳಿಗೆ ಆಗುತ್ತಿರುವ ತೊಂದರೆ ಬಗ್ಗೆ ವಿವರಿಸಲಾಗುವುದು. ಅವರು ನಮ್ಮ ಸಮಾಜಕ್ಕೆ ಮೀಸಲಾತಿ ನೀಡುವರು ಎಂಬ ವಿಶ್ವಾಸ ಇದೆ' ಎಂದು ತಿಳಿಸಿದರು.

ಮತ್ತೆ 20 ವಸತಿ ಶಾಲೆಗಳಿಗೆ ಸಮ್ಮತಿ

ಬೆಂಗಳೂರು: ಹೋಬಳಿ ಹಂತದಲ್ಲಿ ಇನ್ನೂ 20 ವಸತಿ ಶಾಲೆಗಳನ್ನು ಸ್ಥಾಪಿಸಲು ಸಮಾಜಕಲ್ಯಾಣ ಇಲಾಖೆ ಮುಂದಾಗಿದೆ.

ಈ ಕುರಿತು ಆದೇಶ ಹೊರಡಿಸಿರುವ ಇಲಾಖೆ, ಗ್ರಾಮೀಣ ಭಾಗದ ಪೋಷಕರಿಂದ ವಸತಿ ಶಾಲೆಗಳಿಗೆ ಸಾಕಷ್ಟು ಬೇಡಿಕೆ ಬಂದಿವೆ. ಹೋಬಳಿ ಕೇಂದ್ರಗಳಲ್ಲಿ ವಸತಿ ಶಾಲೆಗಳ ಅಗತ್ಯವನ್ನು ಸರ್ಕಾರ ಮನಗಂಡಿದೆ. ಮೊದಲ ಹಂತದಲ್ಲಿ 20 ಹೋಬಳಿಗಳಲ್ಲಿ ವಸತಿ ಶಾಲೆಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಸ್ಥಳ ಆಯ್ಕೆ ಪ್ರಕ್ರಿಯೆಯನ್ನೂ ಪೂರ್ಣಗೊಳಿಸಲಾಗಿದೆ ಎಂದು ಹೇಳಿದೆ.

ಬೇಡಿಕೆಗೆ ತಕ್ಕಂತೆ ಇನ್ನಷ್ಟು ವಸತಿ ಶಾಲೆಗಳನ್ನು ಸ್ಥಾಪಿಸುವುದಾಗಿ 2024ರ ಬಜೆಟ್‌ನಲ್ಲೂ ಘೋಷಿಸಲಾಗಿತ್ತು. ಈಗ ಬೆಂಗಳೂರು ಗ್ರಾಮಾಂತರ, ತುಮಕೂರು, ಮಂಡ್ಯ ಮತ್ತು ಕೊಡಗಿನಲ್ಲಿ ಶಾಲೆಗಳನ್ನು ಆರಂಭಿಸಲು ಸಮ್ಮತಿಸಲಾಗಿದೆ.

ವಿವೇಕನಗರ ಠಾಣೆಯಲ್ಲಿ ಪ್ರಕರಣ ದಾಖಲು: ಪತಿ ಬಂಧನ

ವರದಕ್ಷಿಣೆ ಕಿರುಕುಳ ಆರೋಪ: ಗೃಹಿಣಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವೇಕನಗರದ ಬಾಡಿಗೆ ಮನೆಯಲ್ಲಿ ನೇಣುಬಿಗಿದ ಸ್ಥಿತಿಯಲ್ಲಿ ಗೃಹಿಣಿಯ ಶವ ಪತ್ತೆಯಾಗಿದೆ.

ಉಡುಪಿ ಜಿಲ್ಲೆಯ ಕುಂದಾಪುರದ ಮೇಘನಾ ಶೆಟ್ಟಿ(27) ಮೃತಪಟ್ಟವರು. ಮೇಘನಾ ಅವರು ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು. ಎರಡು ವರ್ಷಗಳ ಹಿಂದೆ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಹಣಗೆರೆ ಗ್ರಾಮದ ಕಲ್ಲುಕೊಪ್ಪ ಗ್ರಾಮದ ಸುದೀಪ್ ಶೆಟ್ಟಿ(30) ಅವರೊಂದಿಗೆ ವಿವಾಹ ಆಗಿತ್ತು. ದಂಪತಿಗೆ ಒಂದು ವರ್ಷದ ಹೆಣ್ಣು ಮಗುವಿದೆ.

ಪತಿಯ ವರದಕ್ಷಿಣೆ ಕಿರುಕುಳಕ್ಕೆ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿ ಮೇಘನಾ ಅವರ ಪೋಷಕರು ದೂರು ನೀಡಿದ್ದು ವಿವೇಕನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಪತಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಇಬ್ಬರೂ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ದಂಪತಿ ಈಜಿಪುರದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಮೇಘನಾ ಶೆಟ್ಟಿ ಪೋಷಕರು ಕೂಡ ಈಜಿಪುರದಲ್ಲಿ ವಾಸವಾಗಿದ್ದರು' ಎಂದು ಪೊಲೀಸರು ಮಾಹಿತಿ ನೀಡಿದರು.

'ದಂಪತಿ ನಡುವೆ ಕೆಲವು ತಿಂಗಳಿಂದ ಕೌಟುಂಬಿಕ ವಿಚಾರವಾಗಿ ಜಗಳ ನಡೆಯುತ್ತಿತ್ತು. ಪತಿ ಸುದೀಪ್, ಮೇಘನಾ ಶೆಟ್ಟಿ ಅವರಿಗೆ ಸಂಬಳವನ್ನು ತನಗೆ ಕೊಡುವಂತೆ ಪೀಡಿಸುತ್ತಿದ್ದರು. ಕಾರು ಹಾಗೂ ಇತರೆ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು ಎಂದು ಒತ್ತಾಯಿಸುತ್ತಿದ್ದರು. ಆದರೆ, ಮೇಘನಾ ನಿರಾಕರಿಸಿದ್ದರು ಎಂದು ಹೇಳಲಾಗಿದೆ. ನಿರಂತರವಾಗಿ ಪತ್ನಿಗೆ ಕಿರುಕುಳ ನೀಡುತ್ತಿದ್ದರು. ಇದರಿಂದ ಬೇಸತ್ತು ಮೇಘನಾ ಶೆಟ್ಟಿ, ಶುಕ್ರವಾರ ರಾತ್ರಿ ಮನೆಯ ಕೋಣೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ದೂರು ನೀಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

ಮಹಡಿಯಿಂದ ಕಾಲು ಜಾರಿ ಬಿದ್ದು ವಿದ್ಯಾರ್ಥಿನಿ ಸಾವು

ಬೆಂಗಳೂರು: ಚಂದ್ರಾಲೇಔಟ್‌ನ ಅಪಾರ್ಟ್‌ಮೆಂಟ್‌ನ ಮಹಡಿಯಿಂದ ಕಾಲು ಜಾರಿ ಬಿದ್ದು ಸಾರಿಗೆ ಇಲಾಖೆ ಅಧಿಕಾರಿಯ ಪುತ್ರಿಯೊಬ್ಬರು ಮೃತಪಟ್ಟಿದ್ದಾರೆ.

ಚಂದ್ರಾಲೇಔಟ್ 2ನೇ ಹಂತದ ನಿಶ್ಚಿತಾ(20) ಮೃತ ಯುವತಿ.

ನಿಶ್ಚಿತಾ ಅವರ ತಾಯಿ ಶೋಭಾ ಅವರು ಸಾರಿಗೆ ಇಲಾಖೆಯಲ್ಲಿ ಜಂಟಿ ಆಯುಕ್ತರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. 'ಎಂಜಿನಿಯರಿಂಗ್ ಓದುತ್ತಿದ್ದ ನಿಶ್ಚಿತಾ ಅವರು ಶುಕ್ರವಾರ ಸಂಜೆ 4 ಗಂಟೆಯ ಸುಮಾರಿಗೆ ಗೆಳತಿಯರ ಜತೆಗೆ ಮನೆಯ ಮಹಡಿಗೆ ತೆರಳಿದ್ದರು. ಅಲ್ಲಿ ಆಯತಪ್ಪಿ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದರು. ಕೂಡಲೇ ಅವರನ್ನು ಕೆಂಗೇರಿ ಬಳಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದರು. ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡಿರುವ ಚಂದ್ರಾಲೇಔಟ್ ಪೊಲೀಸರು, ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಿದ್ದಾರೆ.

'ಭೂಮ್ತಾಯಿಯ ಕಕ್ಷೆಯಲಿ ಪಕ್ಷಿಯಾಗಿ' ಬಿಡುಗಡೆ

'ಹೆಣ್ಣು, ಭೂಮಿಯ ಶೋಷಣೆ ತಪ್ಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಭಿವೃದ್ಧಿಯ ಹೆಸರಿನಲ್ಲಿ ಮನುಷ್ಯ ಪರಿಸರವನ್ನು ನಾಶ ಮಾಡುತ್ತಿದ್ದಾನೆ. ಇದೇ ರೀತಿ ಮುಂದುವರೆದರೆ ಮಾನವ ಸಂಕುಲಕ್ಕೆ ಉಳಿಗಾಲವಿಲ್ಲ' ಎಂದು ಪರಿಸರ ತಜ್ಞ ಅ.ನ.ಯಲ್ಲಪ್ಪರೆಡ್ಡಿ ಎಚ್ಚರಿಸಿದರು.

ಜನ ಪ್ರಕಾಶನ, ಬೆಂಗಳೂರು ವಿಜ್ಞಾನ ವೇದಿಕೆ ಹಾಗೂ ಬೆಂಗಳೂರು ಸಮಾಜ ವಿಜ್ಞಾನ ವೇದಿಕೆ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ರೂಪ ಹಾಸನ ಅವರ 'ಭೂಮ್ತಾಯಿಯ ಕಕ್ಷೆಯಲ್ಲಿ ಪಕ್ಷಿಯಾಗಿ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಭೂಮಿ ಮತ್ತು ಹೆಣ್ಣು ಮಕ್ಕಳ ಮೇಲೆ ಎಲ್ಲಿಯವರೆಗೂ ಶೋಷಣೆ ಮಾಡುತ್ತೀರಾ? ಅವರ ಗೋಳು ತಪ್ಪಿಸಿ. ಉತ್ತರ ಪ್ರದೇಶದ ಅಮೇಠಿಯಲ್ಲಿ ಮಹಿಳೆಯೊಬ್ಬರು ತನ್ನನ್ನು ಚುಡಾಯಿಸಿದ್ದಾರೆ ಎಂದು ಆರೋಪಿಸಿದ್ದಕ್ಕೆ ಅವರನ್ನು ಸೇರಿಸಿ, ಕುಟುಂಬದ ಸದಸ್ಯರನ್ನೆಲ್ಲ ಗುಂಡಿಕ್ಕಿ ಹತ್ಯೆ ಮಾಡುತ್ತಾರೆ ಎಂದರೆ, ನಾವೆಲ್ಲ ಯಾವ ಲೋಕದಲ್ಲಿದ್ದೇವೆ ಎಂಬುದನ್ನು ಯೋಚಿಸಬೇಕು' ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಎತ್ತಿನಹೊಳೆ ಯೋಜನೆಯ ಹೆಸರಿನಲ್ಲಿ ಲೆಕ್ಕವಿಲ್ಲದಷ್ಟು ಮರಗಳನ್ನು ಕಡಿದು ಹಾಕಲಾಯಿತು. ಯುವ ಜನರು ಪರಿಸರ ರಕ್ಷಣೆಗೆ ಮುಂದಾಗಬೇಕು. ಮಕ್ಕಳಿಗೆ ಸಾಧಕ ವಿಜ್ಞಾನಿಗಳ ಬಗ್ಗೆ ಮಾಹಿತಿ ನೀಡಬೇಕು ಎಂದು ಸಲಹೆ ನೀಡಿದರು.

ನಗರದಲ್ಲಿ ಏರ್ಪಡಿಸಿದ್ದ 'ಭೂಮ್ತಾಯಿಯ ಕಕ್ಷೆಯಲ್ಲಿ ಪಕ್ಷಿಯಾಗಿ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಪರಿಸರ ಗೀತೆ ಹಾಡಿದ ವಿದ್ಯಾರ್ಥಿನಿ ಚಿತ್ರಶ್ರೀ ಅವರಿಗೆ ಪರಿಸರ ತಜ್ಞ ಅ.ನ.ಯಲ್ಲಪ್ಪ ರೆಡ್ಡಿ ಹಾಗೂ ಎಚ್.ಎಲ್.ಪುಷ್ಪಾ ಅವರು ಸಸಿ ನೀಡಿ ಗೌರವಿಸಿದರು. ಲೇಖಕಿ ರೂಪ ಹಾಸನ, ಬಿ.ರಾಜಶೇಖರಮೂರ್ತಿ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

> **ಪ್ರಕೃತಿ ಮತ್ತು ಮಹಿಳೆಯ ಗಾಢ ಮೌನದ ಧ್ವನಿ ಆಲಿಸದಿದ್ದರೆ ಅಪಾಯ ತಪ್ಪಿದ್ದಲ್ಲ. ಸರ್ಕಾರ ಒಳ್ಳೆಯ ಯೋಜನೆ ಜಾರಿಗೆ ತಂದರೆ ಬದಲಾವಣೆ ಸಾಧ್ಯ**
> **ರೂಪ ಹಾಸನ,** ಲೇಖಕಿ

ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್.ಪುಷ್ಪಾ, ಪುಸ್ತಕದಲ್ಲಿ ಜಲ ಸಂರಕ್ಷಣೆ, ಪರಿಸರ ರಕ್ಷಣೆ ಕುರಿತ ಮಾಹಿತಿ ನೀಡಲಾಗಿದೆ. ಮಳೆ ಬರಬೇಕಾದಾಗ ಬರುತ್ತಿಲ್ಲ. ಯಾವ ಕಾಲಕ್ಕೆ ಏನು ಆಗಬೇಕೋ ಅದು ಆಗುತ್ತಿಲ್ಲ. ಕಾರ್ಖಾನೆಗಳ ಕಲುಷಿತ ನೀರನ್ನು ನದಿ, ಕೆರೆಗಳಿಗೆ ಬಿಡುತ್ತಿರುವುದರಿಂದ ಜಲಚರಗಳು ಸಾಯುತ್ತಿವೆ. ಈ ನೀರನ್ನು ಕುಡಿದ ಮನುಷ್ಯನ ಆರೋಗ್ಯವೂ ಹದಗೆಡುತ್ತಿದೆ ಎಂದರು.

ಕೃತಿ ಕುರಿತು ಲೇಖಕಿ ವಿ.ಗಾಯತ್ರಿ ಮಾತನಾಡಿದರು. ಬೆಂಗಳೂರು ವಿಜ್ಞಾನ ವೇದಿಕೆ ಕಾರ್ಯದರ್ಶಿ ಎಂ. ಸುಚರಿತ ಚಂದ್ರ, ಬೆಂಗಳೂರು ಸಮಾಜ ವಿಜ್ಞಾನ ವೇದಿಕೆ ಕಾರ್ಯದರ್ಶಿ ಪಿ.ಎಸ್.ಪ್ರತಿಮಾ, ಜನ ಪ್ರಕಾಶನದ ಬಿ.ರಾಜಶೇಖರಮೂರ್ತಿ, ಕನ್ನಡ ವಿಭಾಗದ ಮುಖ್ಯಸ್ಥ ಶಿವಣ್ಣ ಪಾಲ್ಗೊಂಡಿದ್ದರು.

ಹೆದರಲು ಸಿದ್ದರಾಮಯ್ಯ ದೆವ್ವವೇ?: ಎಚ್‌ಡಿಕೆ

ಬೆಂಗಳೂರು: 'ನಾನು ಭಯ ಪಡುವುದಕ್ಕೆ ಸಿದ್ದರಾಮಯ್ಯ ದೆವ್ವವೇ? ಅವರು ದೆವ್ವವಲ್ಲ. ದೆವ್ವಕ್ಕೂ ನಾನು ಹೆದರುವುದಿಲ್ಲ. ನಾನು ಹೆದರುವುದು ದೇವರು ಮತ್ತು ನಾಡಿನ ಜನರಿಗಷ್ಟೇ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.



'ಸಿದ್ದರಾಮಯ್ಯ ಅವರನ್ನು ಕಂಡರೆ ನಿಮಗೆ ಭಯವಂತೆ' ಎಂದು ಸುದ್ದಿಗಾರರು ಪ್ರಶ್ನಿಸಿದಾಗ, 'ನಾನು ಪಕ್ಷದಲ್ಲಿ ಕೆಲಸ ಮಾಡಿ, ಸ್ವಂತಬಲದಿಂದ ಮೇಲೆ ಬಂದಿದ್ದೇನೆ. ಆದರೆ ಸಿದ್ದರಾಮಯ್ಯ ಬೆಳೆದಿದ್ದು ದೇವೇಗೌಡ ಮತ್ತು ಜೆಡಿಎಸ್ ನೆರಳಿನಲ್ಲಿ. ಅದನ್ನು ಮರೆಯಬಾರದು. ಸ್ವಂತ ಬಲದ ನನ್ನನ್ನು ಹೆದರಿಸಲು ಯಾರಿಗೂ ಸಾಧ್ಯವಿಲ್ಲ' ಎಂದರು.

'ಇದರಲ್ಲಿ ಬೇರೇನೂ ಇಲ್ಲ. ಸರ್ಕಾರದ ಅಕ್ರಮಗಳ ಬಗ್ಗೆ ಮಾತನಾಡಬಾರದು ಎಂದು ಬೆದರಿಸಲೆಂದೇ ಎಫ್‌ಐಆರ್ ದಾಖಲಿಸಲಾಗಿದೆ. ಆದರೆ ಇದಕ್ಕೆಲ್ಲಾ ನಾನು ಹೆದರುವುದಿಲ್ಲ. ಮುಡಾ ಹಗರಣದಿಂದ ಜನರ ಗಮನವನ್ನು ಬೇರೆಡೆ ಸೆಳೆಯುವ ಉದ್ದೇಶವೂ ಈ ಎಫ್‌ಐಆರ್ ಹಿಂದೆ ಇದೆ' ಎಂದರು.

ಐದೂ ವರ್ಷ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಆಗಿರುತ್ತಾರೆ ಎಂದ ಡಿ.ಕೆ. ಸುರೇಶ್ ಹೇಳಿಕೆ ಬಗ್ಗೆ ಪ್ರಶ್ನಿಸಿದಾಗ, 'ಈ ಸರ್ಕಾರ ಏನು ರಾಜಕಾರಣ ಮಾಡುತ್ತಿದೆ ಎಂಬುದು ಎಲ್ಲರಿಗೂ ಗೊತ್ತಾಗುತ್ತಿದೆ. ಒಬ್ಬೊಬ್ಬರು ಒಂದೊಂದು ಮಾತನಾಡುತ್ತಿದ್ದಾರೆ. ಈ ಎಲ್ಲದಕ್ಕೂ ಕಾಲವೇ ಉತ್ತರ ನೀಡಲಿದೆ' ಎಂದರು.

'ಅಮಾನ್ಯ ನೋಟು ವಿಲೇವಾರಿ ಕೇಂದ್ರದ ಮಾರ್ಗಸೂಚಿ ಪಾಲಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಮಾನ್ಯಗೊಂಡ ನೋಟುಗಳ ವಿಲೇವಾರಿ ಮತ್ತು ವಿನಿಮಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ 2017ರಲ್ಲಿ ಹೊರಡಿಸಿರುವ ಮಾರ್ಗ ಸೂಚಿಗಳನ್ನು ಅನುಸರಿಸಬೇಕು' ಎಂದು ವಿಚಾರಣಾ ನ್ಯಾಯಾಲಯಗಳು ಮತ್ತು ತನಿಖಾ ಸಂಸ್ಥೆಗಳಿಗೆ ಹೈಕೋರ್ಟ್ ನಿರ್ದೇಶಿಸಿದೆ.

ಹೈಕೋರ್ಟ್ ಸುದ್ದಿ

ಈ ಸಂಬಂಧ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸಲ್ಲಿಸಿದ್ದ ಮೇಲ್ಮನವಿಯನ್ನು ವಿಚಾರಣೆ ನಡೆಸಿದ ಕಲಬುರಗಿ ಪೀಠದ ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಮತ್ತು ನ್ಯಾಯಮೂರ್ತಿ ರಾಮಚಂದ್ರ ಡಿ.ಹುದ್ದಾರ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಅಮಾನ್ಯಗೊಂಡ ನೋಟುಗಳ ವಿಲೇವಾರಿ, ನ್ಯಾಯಾಲಯದಿಂದ ಬಿಡುಗಡೆ ಮತ್ತು ವಿನಿಮಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಹಲವು ಷರತ್ತುಗಳನ್ನು ಒಳಗೊಂಡಂತೆ ವಿವರವಾದ ಮಾರ್ಗಸೂಚಿಯನ್ನು 2017ರ ಮೇ 12ರಂದು ಹೊರಡಿಸಿದೆ. 2016ರ ಡಿಸೆಂಬರ್ 30ಕ್ಕೂ ಮೊದಲು ತನಿಖಾ ಸಂಸ್ಥೆಗಳು ಸಲ್ಲಿಸಿರುವ ಅಮಾನ್ಯಗೊಂಡ ನೋಟುಗಳಿಗೆ ಕೇಂದ್ರದ ನಿಯಮವೇ ಅನ್ವಯವಾಗಲಿದೆ. ಹಾಗಾಗಿ, ತನಿಖಾ ಸಂಸ್ಥೆಗಳು ಆ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು' ಎಂದು ನ್ಯಾಯಪೀಠ ವಿವರಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಕಲಬುರಗಿಯ ಸಂಜು ಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಆರ್‌ಬಿಐ ಮೇಲ್ಮನವಿ ಸಲ್ಲಿಸಿತ್ತು.

'ಅಮಾನ್ಯಗೊಂಡ ಕರೆನ್ಸಿಗಳನ್ನು ಕಾನೂನು ಬದ್ಧ ಟೆಂಡರ್‌ನೊಂದಿಗೆ ವಿನಿಮಯ ಮಾಡಿಕೊಳ್ಳುವ ವಿನಂತಿಯನ್ನು ಪರಿಗಣಿಸಲಾಗುವುದಿಲ್ಲ. ಇದನ್ನು ಕೇಂದ್ರ ಸರ್ಕಾರ ಮಾತ್ರವೇ ಪರಿಗಣಿಸಬಹುದು' ಎಂದು ಆರ್‌ಬಿಐ ಪರ ವಕೀಲರು ಮೇಲ್ಮನವಿ ವಿಚಾರಣೆಯಲ್ಲಿ ಬಲವಾಗಿ ಪ್ರತಿಪಾದಿಸಿದ್ದರು.

ಚಿನ್ನಾಭರಣ ಕಳವು: ಆರೋಪಿ ಬಂಧನ

ಬೆಂಗಳೂರು: ರಾತ್ರಿ ವೇಳೆ ಮನೆಯ ಬೀಗ ಒಡೆದು ಚಿನ್ನಾಭರಣ ಹಾಗೂ ನಗದು ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಜ್ಞಾನಭಾರತಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಘುವನಹಳ್ಳಿ ಬಾಲಾಜಿ ಲೇಔಟ್‌ನ ನಿವಾಸಿ ರಘು ಅಲಿಯಾಸ್ ಪೆಪ್ಸಿ ಬಂಧಿತ. 'ಆರೋಪಿಯಿಂದ ₹8.50 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಒಂದು ಬೈಕ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಎಸ್‌ಎಂವಿ ಲೇಔಟ್‌ನ ಖಾಲಿದ್ ನಯಾಜ್ ಅವರ ಮನೆಯಲ್ಲಿ ಆರೋಪಿ, 220 ಗ್ರಾಂ ಚಿನ್ನಾಭರಣ, ₹50 ಸಾವಿರ ನಗದು ಹಾಗೂ ಬೈಕ್ ಕಳವು ಮಾಡಿದ್ದ. ನಯಾಜ್ ಅವರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'ಆರೋಪಿಯ ಬಂಧನದಿಂದ ಜ್ಞಾನಭಾರತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಮೂರು, ತಮಿಳುನಾಡಿನ ಕೊಯಮತ್ತೂರು ಹಾಗೂ ಆಂಧ್ರಪ್ರದೇಶದ ಚಿತ್ತೂರು ಠಾಣೆಗಳಲ್ಲಿ ದಾಖಲಾಗಿದ್ದ ತಲಾ ಎರಡು ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ. ಆರೋಪಿ ವಿರುದ್ಧ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ 22 ಪ್ರಕರಣಗಳು ದಾಖಲಾಗಿವೆ' ಎಂದು ಪೊಲೀಸರು ತಿಳಿಸಿದರು.

'ಸ್ನೇಹಿತರಾದ ಮಿಥುನ್, ದೀಪಕ್ ಹಾಗೂ ಜೈದೀಪು ಜತೆಗೆ ಸೇರಿಕೊಂಡು ಕಳ್ಳತನ ಮಾಡುತ್ತಿದ್ದೆ ಎಂಬುದಾಗಿ ಆರೋಪಿ ವಿಚಾರಣೆ ವೇಳೆ ಬಾಯ್ಬಿಟ್ಟಿದ್ದಾನೆ' ಎಂದು ಪೊಲೀಸರು ತಿಳಿಸಿದರು.

ಇಸ್ರೇಲ್ ದಾಳಿ: ನಸ್ರಲ್ ಉತ್ತರಾಧಿಕಾರಿ ಹತ್ಯೆ?

ಬೈರೂತ್/ಜೆರುಸಲೇಂ (ರಾಯಿಟರ್ಸ್): ಇಸ್ರೇಲ್ ದಾಳಿಯಿಂದ ಹತರಾಗಿರುವ ಹಿಜ್ಬುಲ್ಲಾ ನಾಯಕ ಹಸನ್ ನಸ್ರಲ್ಲಾ ಅವರ ಸಂಭಾವ್ಯ ಉತ್ತರಾಧಿಕಾರಿ ಹಶೀಮ್ ಸಫೀದಿನ್ ಶುಕ್ರವಾರದಿಂದ ಸಂಪರ್ಕಕ್ಕೆ ಸಿಕ್ಕಿಲ್ಲ ಎಂದು ಲೆಬನಾನ್ ಭದ್ರತಾ ಮೂಲಗಳು ಶನಿವಾರ ತಿಳಿಸಿವೆ. ಇಸ್ರೇಲ್ ಪಡೆಗಳು ಸಫೀದಿನ್ ಅವರನ್ನೇ ಗುರಿಯಾಗಿಸಿ ವೈಮಾನಿಕ ದಾಳಿ ನಡೆಸಿವೆ ಎಂದು ವರದಿಯಾಗಿದೆ.

ಬೈರೂತ್‌ನ ದಕ್ಷಿಣ ನಗರಗಳ ಮೇಲೆ ಇಸ್ರೇಲ್ ಗುರುವಾರ ತಡರಾತ್ರಿ ಸರಣಿ ವೈಮಾನಿಕ ದಾಳಿ ನಡೆಸಿದೆ. ಭೂಗತ ಬಂಕರ್‌ನಲ್ಲಿದ್ದ ಹಶೀಮ್ ಸಫೀದಿನ್ ಅವರನ್ನು ಗುರಿಯಾಗಿಸಿ ದಾಳಿಗಳನ್ನು ನಡೆಸಲಾಗಿದೆ ಎಂದು ಇಸ್ರೇಲ್‌ನ ಮೂವರು ಅಧಿಕಾರಿಗಳು ತಿಳಿಸಿದ್ದಾರೆ ಎಂದು ಮಾಧ್ಯಮ ವರದಿ ಹೇಳಿದೆ.

ಈ ದಾಳಿಯ ಬಳಿಕ ಸಫೀದೀನ್ ಕುರಿತು ಹಿಜ್ಬುಲ್ಲಾ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆದರೆ ನಸ್ರಲ್ಲಾ ಉತ್ತರಾಧಿಕಾರಿಯ ನಷ್ಟವು ಹಿಜ್ಬುಲ್ಲಾ ಮತ್ತು ಇರಾನ್‌ಗೆ ಆಘಾತ ತರಿಸಿದೆ ಎನ್ನಲಾಗಿದೆ.

ಹಿಜ್ಬುಲ್ಲಾದ ಗುಪ್ತಚರ ಪ್ರಧಾನ ಕಚೇರಿಯ ಮೇಲೂ ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ಲೆಫ್ಟಿನೆಂಟ್ ಕರ್ನಲ್ ನಡಾವ್ ಶೋಶಾನಿ ತಿಳಿಸಿದ್ದಾರೆ.

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. 23/ಎಸ್‌ಬಿಸಿ/24 ದಿನಾಂಕ : 27-09-2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಬೆಂಗಳೂರು – ಸಂಪಿಗೆ ರೋಡ್ ಸೆಕ್ಷನ್ : ಸೆಕ್ಷನಲ್ ವೇಗವನ್ನು ಗಂಟೆಗೆ 110 ಕಿಮೀ ನಿಂದ 130 ಕಿಮೀ ಗೆ ಹೆಚ್ಚಿಸುವ ಕಾಮಗಾರಿಗೆ ಸಂಬಂಧಿಸಿದಂತೆ 14 ಕಿಮೀ ಉದ್ದಕ್ಕಾಗಿ ಬೌಂಡರಿ ಗೋಡೆಯ ನಿರ್ಮಾಣ. ನಿರ್ವಹಣಾ ಅವಧಿಯು 12 ತಿಂಗಳು (ದ್ವಿಲಕೋಟೆ ಪದ್ಧತಿ)	ರೂ. 14,79,81,308/-
2	ಬೆಂಗಳೂರು – ಧರ್ಮವರಂ ಸೆಕ್ಷನ್ : ಸೆಕ್ಷನಲ್ ವೇಗವನ್ನು ಗಂಟೆಗೆ 110 ಕಿಮೀ ನಿಂದ 130 ಕಿಮೀ ಗೆ ಹೆಚ್ಚಿಸುವ ಕಾಮಗಾರಿಗೆ ಸಂಬಂಧಿಸಿದಂತೆ 26.2 ಕಿಮೀ ಉದ್ದಕ್ಕಾಗಿ ಬೌಂಡರಿ ಗೋಡೆಯ ನಿರ್ಮಾಣ. ನಿರ್ವಹಣಾ ಅವಧಿಯು 12 ತಿಂಗಳು (ದ್ವಿಲಕೋಟೆ ಪದ್ಧತಿ)	ರೂ. 27,69,36,448/-
3	ಹಿರಿಯ ವಿಭಾಗೀಯ ಇಂಜಿನಿಯರ್ / ಉತ್ತರ / ಬೆಂಗಳೂರು ಸೆಕ್ಷನ್ : ಚಿಕ್ಕಬಾಣಾವರ ನಿಲ್ದಾಣ : ಚಿಕ್ಕಬಾಣಾವರ ನಿಲ್ದಾಣದಲ್ಲಿ 24 ಕೋಚ್ ಉದ್ದದ ರೈಲುಗಳ ಕಾರ್ಯಾಚರಣೆಗಾಗಿ ಚಿಕ್ಕಬಾಣಾವರದಲ್ಲಿ ಹೈ ಲೆವೆಲ್ ಪ್ಲಾಟ್‌ಫಾರಂನ ಉದ್ದೇಶಿತ ವಿಸ್ತರಣೆ, ಪ್ಲಾಟ್‌ಫಾರಂ-1 ನ್ನು 140ಮೀ, ಪ್ಲಾಟ್‌ಫಾರಂ-2 ಮತ್ತು 3ನ್ನು 140ಮೀ, ಪ್ಲಾಟ್‌ಫಾರಂ-4ನ್ನು 60ಮೀ (ಒಟ್ಟು – 340 ಮೀ). ನಿರ್ವಹಣಾ ಅವಧಿಯು 6 ತಿಂಗಳು.	ರೂ. 75,58,565/-
4	ಸೇಲಂ – ಬೆಂಗಳೂರು ಸೆಕ್ಷನ್ : ಎಸ್‌ಎಸ್‌ಇ/ಪಿವೇ/ಧರ್ಮಪುರಿ (ದಕ್ಷಿಣ) ಸೆಕ್ಷನ್‌ನಲ್ಲಿ ತೊಪ್ಪೂರು ಮತ್ತು ಮುತ್ತಂಪಟ್ಟಿ ನಿಲ್ದಾಣಗಳ ನಡುವೆ ಕಿಮೀ 48/600–700, 49/000–100 ವರೆಗೆ ಕಟ್ಟಿಂಗ್‌ಗಳಲ್ಲಿ ಇಳಿಜಾರುಗಳ ವೈರ್‌ನೆಟ್ಟಿಂಗ್‌ನಿಂದ ಇಳಿಜಾರುಗಳನ್ನು ಸ್ಥಿರೀಕರಿಸುವುದು. ನಿರ್ವಹಣಾ ಅವಧಿಯು 12 ತಿಂಗಳು.	ರೂ. 6,11,69,743/-
5	ಸೇಲಂ – ಬೆಂಗಳೂರು ಸೆಕ್ಷನ್ : ಎಸ್‌ಎಸ್‌ಇ/ಪಿವೇ/ಧರ್ಮಪುರಿ (ದಕ್ಷಿಣ) ಸೆಕ್ಷನ್‌ನಲ್ಲಿ ತೊಪ್ಪೂರು ಮತ್ತು ಮುತ್ತಂಪಟ್ಟಿ ನಿಲ್ದಾಣಗಳ ನಡುವೆ ಕಿಮೀ 50/100–300 ವರೆಗೆ ಕಟ್ಟಿಂಗ್‌ಗಳಲ್ಲಿ ಇಳಿಜಾರುಗಳ ವೈರ್‌ನೆಟ್ಟಿಂಗ್‌ನಿಂದ ಇಳಿಜಾರುಗಳನ್ನು ಸ್ಥಿರೀಕರಿಸುವುದು. ನಿರ್ವಹಣಾ ಅವಧಿಯು 12 ತಿಂಗಳು.	ರೂ. 6,83,89,778/-
6	ಬೆಂಗಳೂರು – ಜೋಲಾರ್‌ಪೇಟೆ ಸೆಕ್ಷನ್ : ನಿರ್ದಿಷ್ಟ ಅಗಲವನ್ನು ಒದಗಿಸುವುದರಿಂದ ಬ್ಯಾಂಕ್‌ನ್ನು ಬಲಗೊಳಿಸುವುದು ಮತ್ತು ಕಿಮೀ 216/000 – 238ಎ/000 ಅಪ್ ಮತ್ತು ಡೌನ್ ಲೈನ್‌ವರೆಗೆ 8.66 ಕಿಮೀ.ಗಳು ಮತ್ತು 289/100–302/600 ಅಪ್ ಮತ್ತು ಡೌನ್ ಲೈನ್‌ವರೆಗೆ 5.653 ಕಿಮೀ.ಗಳವರೆಗೆ (ಒಟ್ಟು ಉದ್ದ – 14.313 ಕಿಮೀ.ಗಳು) ಪ್ರತ್ಯೇಕಿತ ಸ್ಥಳಗಳಲ್ಲಿ ಡ್ರೈನೇಜ್‌ನ್ನು ಸುಧಾರಣೆಗೊಳಿಸುವ ಕಾಮಗಾರಿಗೆ ಸಂಬಂಧಿಸಿದಂತೆ 1ಕಿಮೀ ಉದ್ದಕ್ಕಾಗಿ ಆರ್‌ಸಿಸಿ ಗಟಾರದ ನಿರ್ಮಾಣ. ನಿರ್ವಹಣಾ ಅವಧಿಯು 6 ತಿಂಗಳು.	ರೂ. 1,19,15,171/-
7	ಬೆಂಗಳೂರು – ಜೋಲಾರಪೇಟೆ ಸೆಕ್ಷನ್ : ರಸ್ತೆ–10ರ ವಿದ್ಯುದೀಕರಣಕ್ಕೆ ಸಂಬಂಧಿಸಿದಂತೆ ಸ್ಯಾಟಲೈಟ್ ಗೂಡ್ಸ್ ಟರ್ಮಿನಲ್ ಯಾರ್ಡ್‌ನಲ್ಲಿ ಹೈಟ್ ಗೇಜ್‌ಗಳನ್ನು ಒದಗಿಸುವುದು ಮತ್ತು ಎಸ್‌ಜಿಟಿ ಯಾರ್ಡ್‌ನಲ್ಲಿ ರಸ್ತೆ–11 ಮತ್ತು ರಸ್ತೆ–12 ಗಳಿಗಾಗಿ ಟಾಪ್ ವೈರಿಂಗ್ ವ್ಯವಸ್ಥೆಗಳು. ನಿರ್ವಹಣಾ ಅವಧಿಯು 6 ತಿಂಗಳು.	ರೂ. 40,92,476/-
8	ಬೆಂಗಳೂರು – ಜೋಲಾರಪೇಟೆ ಸೆಕ್ಷನ್ : 1. ಕೃಷ್ಣರಾಜಪುರಂ ಯಾರ್ಡ್‌ನ ಎಫ್‌ಸಿಐ ಸೈಡಿಂಗ್‌ನಲ್ಲಿ 1.741 ಕಿಮೀ.ಗಳ ಉದ್ದಕ್ಕಾಗಿ ಸಿಟಿಆರ್(ಎಸ್). 2. ವೈಟ್‌ಫೀಲ್ಡ್ ಯಾರ್ಡ್‌ನ ಎಫ್‌ಸಿಐ ಸೈಡಿಂಗ್‌ನಲ್ಲಿ 7.05 ಕಿಮೀ.ಗಳ ಉದ್ದಕ್ಕಾಗಿ ಸಿಟಿಆರ್(ಎಸ್) ಕಾಮಗಾರಿಗಳಿಗೆ ಸಂಬಂಧಿಸಿದಂತೆ ಟಿಸಿಎಲ್ ಡಿಪೋದಲ್ಲಿ ಲೀಡಿಂಗ್ ಮತ್ತು ಲೋಡಿಂಗ್ ಒಳಗೊಂಡಂತೆ ಬಲ್ಲಾಸ್ಟ್‌ನ ಸಂಗ್ರಹಣೆ ಮತ್ತು ಸರಬರಾಜು (22,880 ಸಿಯುಎಂ)	ರೂ. 1,99,24,362/-
9	ಬೆಂಗಳೂರು – ಎಲಿಯೂರು ಸೆಕ್ಷನ್ : ನಿಡಘಟ್ಟ ಹಾಲ್ಟ್ ನಿಲ್ದಾಣದಲ್ಲಿ ಪ್ಲಾಟ್‌ಫಾರಂ ಸಂ.1 ಮತ್ತು ಪ್ಲಾಟ್‌ಫಾರಂ ಸಂ.2 ಗಳನ್ನು ಸಂಪರ್ಕಿಸಲು ಉದ್ದೇಶಿತ ಪಾದಚಾರಿ ಮೇಲ್ಸೇತುವೆ. ನಿರ್ವಹಣಾ ಅವಧಿಯು 3 ತಿಂಗಳು.	ರೂ. 1,55,61,087/-
10	ಕೆಎಸ್‌ಆರ್ ಬೆಂಗಳೂರು : ಸಬ್‌ವರ್ಕ್–1 : ಕೆಎಸ್‌ಆರ್ ಬೆಂಗಳೂರು ನಿಲ್ದಾಣದ ಬೆಂಗಳೂರು ದಂಡು ಎಂಡ್‌ನಲ್ಲಿ ಪಾದಚಾರಿ ಮೇಲ್ಸೇತುವೆಗಾಗಿ ಪ್ಲಾಟ್‌ಫಾರಂ ಸಂ.9 ಮತ್ತು 10ಗಳಲ್ಲಿ 1 ಸಂಖ್ಯೆಯ ಲಿಫ್ಟ್‌ನ್ನು ಒದಗಿಸುವುದಕ್ಕಾಗಿ ಉದ್ದೇಶಿತ ಸಿವಿಲ್ ಕಾಮಗಾರಿಗಳು. ಸಬ್‌ವರ್ಕ್–2: ಕೆಎಸ್‌ಆರ್ ಬೆಂಗಳೂರು ನಿಲ್ದಾಣದ ಬೆಂಗಳೂರು ದಂಡು ಎಂಡ್‌ನಲ್ಲಿ ಪಾದಚಾರಿ ಮೇಲ್ಸೇತುವೆಗಾಗಿ ಪ್ಲಾಟ್‌ಫಾರಂ ಸಂ.5 ಮತ್ತು 6 ಗಳಲ್ಲಿ 1 ಸಂಖ್ಯೆಯ ಲಿಫ್ಟ್‌ನ್ನು ಒದಗಿಸುವುದಕ್ಕಾಗಿ ಉದ್ದೇಶಿತ ಸಿವಿಲ್ ಕಾಮಗಾರಿಗಳು. ಸಬ್‌ವರ್ಕ್–3 : ಕೆಎಸ್‌ಆರ್ ಬೆಂಗಳೂರು ನಿಲ್ದಾಣದ ಹಿಂಭಾಗದಲ್ಲಿ ಮೆಟ್ರೋ ಸ್ಕೈ ವಾಕ್ ಸಂಪರ್ಕಿಸುವ ಪಾದಚಾರಿ ಮೇಲ್ಸೇತುವೆಗೆ ಲಿಫ್ಟ್‌ನ್ನು ಒದಗಿಸುವುದು. ಸಬ್‌ವರ್ಕ್–4 : ಶೆಟ್ಟಿಹಳ್ಳಿ (ಪ್ಲಾಟ್‌ಫಾರಂ–1) ಮತ್ತು ಬಿಡದಿ (ಪ್ಲಾಟ್‌ಫಾರಂ–1/2) ನಲ್ಲಿ ಉದ್ದೇಶಿತ ಪಾವತಿಸಿ ಮತ್ತು ಬಳಸಿ ಶೌಚಾಲಯಗಳನ್ನು ಒದಗಿಸುವುದು. ಸಬ್‌ವರ್ಕ್–5 : ಕೆಂಗೇರಿ : ಪ್ಲಾಟ್‌ಫಾರಂ ಸಂ. 2/3 ಮತ್ತು 1 ರಲ್ಲಿ ಉದ್ದೇಶಿತ ಅಪ್ ಮತ್ತು ಡೌನ್ ಎಸ್ಕಲೇಟರ್‌ಗಳನ್ನು ಒದಗಿಸುವುದು (ಬಾಕಿ ಉಳಿದ ಕಾಮಗಾರಿ) ಸಬ್‌ವರ್ಕ್–6 : ಕೆಎಸ್‌ಆರ್ ಬೆಂಗಳೂರು : ಕೆಎಸ್‌ಆರ್ ಬೆಂಗಳೂರು ನಿಲ್ದಾಣದ ಪ್ಲಾಟ್‌ಫಾರಂ 7 ಮತ್ತು 8ರಲ್ಲಿ ಉದ್ದೇಶಿತ ಅಪ್ ಮತ್ತು ಡೌನ್ ಎಸ್ಕಲೇಟರ್. ನಿರ್ವಹಣಾ ಅವಧಿಯು 6 ತಿಂಗಳು.	ರೂ. 3,12,44,370/-
11	ಹಿರಿಯ ವಿಭಾಗೀಯ ಇಂಜಿನಿಯರ್/ಪಶ್ಚಿಮ/ಬೆಂಗಳೂರು ಸೆಕ್ಷನ್ : ಸಬ್‌ವರ್ಕ್–1 : ಸಹಾಯಕ ವಿಭಾಗೀಯ ಇಂಜಿನಿಯರ್ / ಮಂಡ್ಯ ಉಪವಿಭಾಗ : ಚನ್ನಪಟ್ಟಣದಲ್ಲಿ ವಸತಿಗೃಹ ಸಂ. 24/ಎ ಮತ್ತು ಬಿ, 25/ಎ ಮತ್ತು ಬಿ (4 ಯೂನಿಟ್‌ಗಳು) ಗಳ ಬದಲಿಗೆ ವಿಧ–2 ವಸತಿಗೃಹಗಳ ಮರುನಿರ್ಮಾಣ. ಸಬ್‌ವರ್ಕ್–2 : ಕೆಎಸ್‌ಆರ್ ಬೆಂಗಳೂರು : ವಿಭಾಗೀಯ ಸ್ಟೋರ್ ಡಿಪೋ / ಬೆಂಗಳೂರು ಇಲ್ಲಿ ಸಾಮಾನ್ಯ ಮೂಲಭೂತ ಸೌಕರ್ಯದ ಉನ್ನತೀಕರಣ – ರೂಫಿಂಗ್‌ಗೆ ಉದ್ದೇಶಿತ ಸುಧಾರಣೆಗಳು, ವಿಭಾಗೀಯ ಸ್ಟೋರ್ ಡಿಪೋ / ಬೆಂಗಳೂರು ಇಲ್ಲಿ ಸ್ಟ್ರಾಂಗ್ ರೂಮ್‌ಗಳ ನಿರ್ಮಾಣ. ಸಬ್‌ವರ್ಕ್–3 : ಕೆಎಸ್‌ಆರ್ ಬೆಂಗಳೂರು – ಮೈಸೂರು ಸೆಕ್ಷನ್ : ಸಹಾಯಕ ವಿಭಾಗೀಯ ಇಂಜಿನಿಯರ್ / ಮಂಡ್ಯ ಸೆಕ್ಷನ್‌ನಲ್ಲಿ 7 ಸಂಖ್ಯೆಗಳ ಟ್ರ್ಯಾಕ್ ಮೆನ್ ರೆಸ್ಟ್ ರೂಮ್ / ಟೂಲ್ ರೂಮ್‌ಗಳ ಉದ್ದೇಶಿತ ನಿರ್ಮಾಣ (ಬಾಕಿ ಉಳಿದ ಕಾಮಗಾರಿ) ಸಬ್‌ವರ್ಕ್–4 : ಶೆಟ್ಟಿಹಳ್ಳಿಯಲ್ಲಿ ಕಿಮೀ 62/300–900 ವರೆಗೆ ರಸ್ತೆ–5 ಲೋಡಿಂಗ್ ಮತ್ತು ಅನ್‌ಲೋಡಿಂಗ್ ಪ್ರದೇಶಕ್ಕೆ ಸುಧಾರಣೆಗಳು ಮತ್ತು ಶೆಟ್ಟಿಹಳ್ಳಿ ಯಾರ್ಡ್‌ನಲ್ಲಿ ಮರ್ಚೆಂಟ್ ರೂಮ್‌ನ ನಿರ್ಮಾಣ. ನಿರ್ವಹಣಾ ಅವಧಿಯು 12 ತಿಂಗಳು.	ರೂ. 3,67,38,900/-
12	ಬೆಂಗಳೂರು – ಮೈಸೂರು ಸೆಕ್ಷನ್ : ಸಬ್‌ವರ್ಕ್–1 : ಕೆಂಗೇರಿ ನಿಲ್ದಾಣದಲ್ಲಿ 50 ಕೆಎಲ್‌ಡಿ ಸಾಮರ್ಥ್ಯದ ಎಸ್‌ಟಿಪಿ ಟ್ಯಾಂಕ್‌ನ್ನು ಒದಗಿಸುವುದು. ನಿರ್ವಹಣಾ ಅವಧಿಯು 24 ತಿಂಗಳು.	ರೂ. 1,14,85,923/-
13	ಬೆಂಗಳೂರು – ಮೈಸೂರು ಸೆಕ್ಷನ್ : ಸಬ್‌ವರ್ಕ್–1 : ಅಪ್ ಮತ್ತು ಡೌನ್ ಲೈನ್‌ನಲ್ಲಿ 46/400 ನಿಂದ 99/000 ವರೆಗೆ ಪ್ರತ್ಯೇಕಿತ ಸ್ಥಳಗಳಲ್ಲಿ ನಿರ್ದಿಷ್ಟ ಅಗಲವನ್ನು ಒದಗಿಸುವುದರಿಂದ ಬ್ಯಾಂಕ್‌ನ್ನು ಬಲಗೊಳಿಸುವುದು. ಸಬ್‌ವರ್ಕ್–2 : ಮಂಡ್ಯ ಮತ್ತು ಹನಕೆರೆ ಯಾರ್ಡ್‌ನಲ್ಲಿ ಟಿಡಬ್ಲ್ಯುಎಸ್ ಜೊತೆಗೆ ಹಾಲಿ ಇರುವ 12 ರಲ್ಲಿ 1 ಕರ್ವ್ಡ್ ಸ್ವಿಚ್‌ನ ಟಿಟಿಆರ್ ಮತ್ತು 8 ಸಂಖ್ಯೆಗಳ ವೆಲ್ಡಬಲ್ ಸಿಎಂಎಸ್ ಕ್ರಾಸಿಂಗ್‌ಗಳು. ಸಬ್‌ವರ್ಕ್–3 : ಬೆಂಗಳೂರು – ಮೈಸೂರು ಸೆಕ್ಷನ್ : ಸಹಾಯಕ ವಿಭಾಗೀಯ ಇಂಜಿನಿಯರ್ / ಮಂಡ್ಯ ಸೆಕ್ಷನ್‌ನಲ್ಲಿ ಕಿಮೀ 72/300 – 100/900 ವರೆಗೆ ಹಳೆಯದಾದ ಎಸ್‌ಇಜೆ ಯನ್ನು ಪಿಎಸ್‌ಸಿ ಸುಧಾರಿತ ಎಸ್‌ಇಜೆ – 52 ಕೆಜಿ ಯಿಂದ ಬದಲಿಸುವುದು – ಒಟ್ಟು 16 ಸಂಖ್ಯೆಗಳು. ನಿರ್ವಹಣಾ ಅವಧಿಯು ಯಾವುದು ನಂತರವೋ ಅದರಂತೆ 6 ತಿಂಗಳು ಅಥವಾ ಒಂದು ಮಳೆಗಾಲದ ಅವಧಿ. (ಸಮಗ್ರ ಕಾಮಗಾರಿ).	ರೂ. 1,06,91,375/-
14	ಸಹಾಯಕ ವಿಭಾಗೀಯ ಇಂಜಿನಿಯರ್ / ಮಂಡ್ಯ ಉಪ ವಿಭಾಗ : ಸಹಾಯಕ ವಿಭಾಗೀಯ ಇಂಜಿನಿಯರ್ / ಮಂಡ್ಯ ಉಪ ವಿಭಾಗದಲ್ಲಿ ರೈಲ್ವೆ ನಿಲ್ದಾಣ, ಸಿಬ್ಬಂದಿ ವಸತಿಗೃಹಗಳು, ಲೆವೆಲ್ ಕ್ರಾಸಿಂಗ್ ಗೇಟ್‌ಗಳು, ಮರಗಳ ಪ್ಲಾಂಟೇಶನ್ ಮತ್ತು ಉದ್ಯಾನಗಳಿಗೆ ಕುಡಿಯುವ ನೀರಿನ ಸರಬರಾಜು (ನಾಯಂಡಹಳ್ಳಿ, ಕೆಂಗೇರಿ, ಹೆಜ್ಜಾಲ, ಬಿಡದಿ, ರಾಮನಗರಂ, ಚನ್ನಪಟ್ಟಣ, ಮದ್ದೂರು, ಹನಕೆರೆ, ಮಂಡ್ಯ ನಿಲ್ದಾಣಗಳು).	ರೂ. 12,26,250/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 21-10-2024 ರಂದು 15:00 ಗಂಟೆಯವರೆಗೆ.

ಹೆಚ್ಚಿನ ವಿವರಗಳಿಗೆ www.ireps.gov.in ಗೆ ಲಾಗ್‌ಆನ್ ಮಾಡಿ.

ಪಿಯುಬಿ/477/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25 ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ, ಬೆಂಗಳೂರು

South Western Railway - SWR | southwesternrailway_swr | SWRRLY | southwesternrailway | SWRRLY

ಸಾರ್ವಜನಿಕ ಆಸ್ಪತ್ರೆ

ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ,
ಚನ್ನಪಟ್ಟಣ – 562160. ರಾಮನಗರ ಜಿಲ್ಲೆ. ದೂರವಾಣಿ : 080–2978 3168,
ಇ–ಮೇಲ್ : ghchannapatna@gmail.com

ಸಂಖ್ಯೆ : ಸಾ.ಆ.ಚ./ಟೆಂಡರ್/ನಾನ್–ಕ್ಲೀನಿಕಲ್/52/24–25 ದಿನಾಂಕ : 03–10–2024

ಅಲ್ಪಾವಧಿ ಮರು ಇ-ಟೆಂಡರ್ ಅಧಿಸೂಚನೆ

ಸಾರ್ವಜನಿಕ ಆಸ್ಪತ್ರೆ, ಚನ್ನಪಟ್ಟಣ ರಾಮನಗರ ಜಿಲ್ಲೆ ಈ ಆಸ್ಪತ್ರೆಗೆ 2024–25 ನೇ ಸಾಲಿಗೆ **06 ಜನ ನಾನ್ ಕ್ಲೀನಿಕಲ್ / ಸ್ವಚ್ಛತಾ ಸೇವೆಯ ಕೆಲಸ ನಿರ್ವಹಣೆಗೆ** ಹೊರಸಂಪನ್ಮೂಲ ಆಧಾರಿತ ಗುತ್ತಿಗೆಯನ್ನು ಪಡೆದುಕೊಳ್ಳಲು ಅರ್ಹ ಟೆಂಡರ್‌ದಾರರಿಂದ / ಮಾನ್ಯತೆ ಪಡೆದ ಅಧಿಕೃತ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 2000 ರ ಮೇರೆಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. **ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ವಿಳಾಸ : https://kppp.karnataka.gov.in ರಲ್ಲಿ ಪರಿಶೀಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು.** ಇ–ಪೋರ್ಟಲ್‌ನಲ್ಲಿ ಕಾಣಿಸಿದ ನಿಬಂಧನೆಗಳು ಟೆಂಡರ್‌ನ ಇ.ಎಂ.ಡಿ. ಮೊತ್ತ ಹಾಗೂ ಇತರ ವಿವರಗಳನ್ನು ಗಮನಿಸಿ ಕ್ರಮವಹಿಸುವುದು. ಟೆಂಡರ್‌ಗಳ ದಿನಾಂಕ ಈ ಕೆಳಕಂಡಂತೆ ಇರುತ್ತದೆ. ಮುಂದಿನ ಯಾವುದೇ ಬದಲಾವಣೆಯನ್ನು ಇ–ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು.

ವಿವರಗಳು : 1) ಟೆಂಡರ್ ಅಪ್‌ಲೋಡ್ ಮಾಡಲು ಪ್ರಾರಂಭದ ದಿನಾಂಕ : 03–10–2024 ರಿಂದ, 2) ಇ–ಪೋರ್ಟಲ್ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : 30–10–2024 ರ ಸಂಜೆ 4.30 ಗಂಟೆಯವರೆಗೆ, 3) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 05–11–2024 ರ ಬೆಳಿಗ್ಗೆ 11.00 ಗಂಟೆಯ ನಂತರ, 4) ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ : ತಾಂತ್ರಿಕ ಲಕೋಟೆಯನ್ನು ತೆರೆದ ನಂತರ ಆರ್ಥಿಕ ಲಕೋಟೆಯನ್ನು ತೆರೆಯಲಾಗುವುದು, 5) ಟೆಂಡರ್‌ನ ಅಂದಾಜು ಮೊತ್ತ : ರೂ. 10,00,000/– (ಹತ್ತು ಲಕ್ಷ ರೂಗಳು ಮಾತ್ರ), 6) ಟೆಂಡರ್‌ಗೆ ನಿಗಧಿಪಡಿಸಿದ ಇ.ಎಂ.ಡಿ. (5%) : ರೂ. 25,000/– (ಇಪ್ಪತ್ತೈದು ಸಾವಿರ ರೂಗಳು ಮಾತ್ರ)

ಹೆಚ್ಚಿನ ವಿವರಗಳನ್ನು https://kppp.karnataka.gov.in ಹಾಗೂ ಕಛೇರಿ ವೇಳೆಯಲ್ಲಿ ಸಾರ್ವಜನಿಕ ಆಸ್ಪತ್ರೆ, ಚನ್ನಪಟ್ಟಣ, ರಾಮನಗರ ಜಿಲ್ಲೆಯಲ್ಲಿ ಪಡೆಯಬಹುದು.

ಸಹಿ/– ಮುಖ್ಯ ವೈದ್ಯಾಧಿಕಾರಿಗಳು,
ಸಾರ್ವಜನಿಕ ಆಸ್ಪತ್ರೆ, ಚನ್ನಪಟ್ಟಣ – 562 160.

ಡಿಐಪಿಆರ್/ರಾಮನಗರ/380/ಮಣಿಪಾಲ್/2024–25

ಶೇಖರ್ ಆಸ್ಪತ್ರೆ
SHEKHAR HOSPITAL

ನಂ. 81, ಬಸವನಗುಡಿ ರಸ್ತೆ, ರಾಮಕೃಷ್ಣ ಆಶ್ರಮ ಹತ್ತಿರ, ಬೆಂಗಳೂರು–560019.
Mob: 94826 76525 Ph : 22421144, 22429366, Email: shekharhospitalbtr@gmail.com

ಸಾರ್ವಜನಿಕ ಪ್ರಕಟಣೆ

ಕಳೆದ ಒಂದು ವಾರದಿಂದ ನಮ್ಮ ಶೇಖರ್ ಆಸ್ಪತ್ರೆ ಬಸವನಗುಡಿ, ಬೆಂಗಳೂರು–19, ಇದರ ಬಗ್ಗೆ ವ್ಯಾಪಕವಾಗಿ ಸೋಷಿಯಲ್ ಮೀಡಿಯಾ (ವಾಟ್ಸಪ್)ನಲ್ಲಿ ಅವಹೇಳನ ಮತ್ತು ಆಘಾತಕಾರಿ ಅಲ್ಲದೇ ಸತ್ಯಕ್ಕೆ ದೂರವಾದ ಸುದ್ದಿಯೊಂದು ಹರಿದಾಡುತ್ತಿದೆ. ಇದರ ಬಗ್ಗೆ ಸ್ಪಷ್ಟೀಕರಣವನ್ನು ಈಗ ಈ ಮೂಲಕ ಶೇಖರ್ ಆಸ್ಪತ್ರೆ ನೀಡುತ್ತಿದೆ.

ಸದರಿ ಆಸ್ಪತ್ರೆಯನ್ನು ಯಾರಿಗೂ ಮಾರಾಟ ಮಾಡಿಲ್ಲ, ಮಾಡುವುದೂ ಇಲ್ಲ. ಮುಂಬರುವ ಯಾವುದೇ ದಿನಗಳಲ್ಲಿ ಬಾಡಿಗೆಗೆ ನೀಡುವುದಿಲ್ಲ.

ಅಲ್ಲದೆ ಸುದ್ದಿ ಮಾಧ್ಯಮದಲ್ಲಿ ತಿಳಿದು ಬಂದಂತೆ ಕಳೆದ 41 ವರ್ಷಗಳ ಇತಿಹಾಸದಲ್ಲಿ ವಾಟ್ಸಪ್, ಸುದ್ದಿ ಮಾಧ್ಯಮದಲ್ಲಿ ತಿಳಿಸಲ್ಪಟ್ಟ ರೋಗಿಯನ್ನು ನಾವು ನೋಡಿಲ್ಲ ಚಿಕಿತ್ಸೆಯನ್ನು ನೀಡಿಲ್ಲ. ಇದೆಲ್ಲ ವಿಷ ತುಂಬಿದ ವಿಕೃತ ಮನಸ್ಸಿನ ಕಟ್ಟು ಕಥೆ.

ನಮ್ಮ ಆಸ್ಪತ್ರೆಯು ಉತ್ತಮ ಕಾರ್ಯವೈಖರಿಯಿಂದ ನಮ್ಮ ಕುಟುಂಬದ ಹಾಗೂ ಇತರೇ ವೈದ್ಯರ ತಂಡದಿಂದ ಹೆಸರುವಾಸಿಯಾಗಿದೆ ಮತ್ತು ಈ ಸುದ್ದಿಯು ನೂರಾರು ಹಿತೈಷಿಗಳಿಗೆ ಹಾನಿ ಮಾಡಿದ್ದಲ್ಲದೆ ಇದರ ಬಗ್ಗೆ ಸಂಬಂಧಪಟ್ಟ ಆರಕ್ಷಕ ಠಾಣೆಯಲ್ಲಿ ದೂರು ದಾಖಲು ಮಾಡಿರುತ್ತೇವೆ.

ಮತ್ತು ಸತ್ಯಾಸತ್ಯತೆಯನ್ನು ದೇವರ ಇಚ್ಛೆಗೆ ಬಿಟ್ಟಿದ್ದೇವೆ ಹಾಗೂ ನಮ್ಮನ್ನು ದೂರವಾಣಿಯ ಮೂಲಕ ಸಂತೈಸಿದ ನಮ್ಮ ಎಲ್ಲಾ ಹಿತೈಷಿಗಳಿಗೆ ಈ ಮೂಲಕ ಧನ್ಯವಾದಗಳನ್ನು ಶೇಖರ್ ಆಸ್ಪತ್ರೆಯ ಆಡಳಿತ ಮಂಡಳಿ ಅರ್ಪಿಸುತ್ತದೆ.

ಸಹಿ/– ಶೇಖರ್ ಆಸ್ಪತ್ರೆ
ನಂ. 81, ಬುಲ್ ಟೆಂಪಲ್ ರಸ್ತೆ, ಬೆಂಗಳೂರು–560019



ಪ್ರಜಾವಾಣಿ ನವವರ್ಣ

ಕೇಸರಿ ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಭಾನುವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...

7338018541

Sri Krishna
ನವರಾತ್ರಿ ನವಖಾದ್ಯ ಸ್ಪರ್ಧೆ
ಅಕ್ಟೋಬರ್ 3 ರಿಂದ 11 ರವರೆಗೆ
ಶ್ರೀ ಕೃಷ್ಣ ತುಪ್ಪದಿಂದ ಮಾಡಿದ ನೈವೇದ್ಯದ ಫೋಟೋ ಕಳುಹಿಸಿ
ಬಹುಮಾನ ಗೆಲ್ಲಿ

ಈ ಹಬ್ಬಕ್ಕೆ ರೇಷ್ಮೆ ಸೀರೆ ಗೆಲ್ಲಿ
ಸ್ಪರ್ಧೆಯಲ್ಲಿ ಭಾಗವಹಿಸಲು ನಿಮ್ಮ ಹೆಸರನ್ನು Whatsapp ಮಾಡಿ
+91 90350 26824
ಅಥವಾ QR Code Scan ಮಾಡಿ

ಕೇಂದ್ರೀಯ ವಿಶ್ವವಿದ್ಯಾಲಯ

ಗೋಪಿಕಾ ಮತ್ತು ಗೆಳತಿಯರು

ಮೈತ್ರಿ

ಐಶ್ವರ್ಯ ಮತ್ತು ಗೆಳತಿಯರು

ಶರಣ್ಯ, ಸಮನ್ವಿ



ತೇಜಸ್ವಿನಿ ಜಹಗೀರದಾರ



ವಿಹಾನ್ ಭಾರದ್ವಾಜ್

ಹೆಸ್ವಿತಾ ಪ್ರಶಾಂತ್

ಅಶ್ವಿನಿ ಮತ್ತು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ

ಶಿಲ್ಪಾ ಮತ್ತು ಗೆಳತಿಯರು

ಗ್ರಿಷ್ಮಾ ಮತ್ತು ಗೆಳತಿಯರು

ರಾಧಾ ಮತ್ತು ಗುಂಪು

ಎನ್ ಸಿ ಬಿ

ಸರೋಜಾ ಮತ್ತು ಕುಟುಂಬ

ನೇತ್ರಾವತಿ ಮತ್ತು ಗೆಳತಿಯರು

ಹಯಾನ್ ಅಮಿತ್

ಎಸ್ ಆರ್ ಪಿ ಎಸ್

ಸ್ವಾತಿ ಮತ್ತು ಗೆಳತಿಯರು

ಎಂ ವಿ ಜಯಮಾಲಾ ಯಕ್ಷ & ಸಹೋದರಿ

ಮಾಲಾ

ಸುಶೀಲಾ & ತೇಜಲ್

ತಾಕೊಡೆ ಬರ್ಕೆ

ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ

ಸೌಭಾಗ್ಯ ಆನಂದ್

ಸುರಗಿಮಠ ಕುಟುಂಬ

SMV ಲೇಔಟ್

ಇಂದಿನ ಅಧಿದೇವತೆ
ಕೂಷ್ಮಾಂಡ ದೇವಿ

ಇಂದಿನ ಬಣ್ಣ - ಕೇಸರಿ

ಶ್ರೀ ಕೃಷ್ಣ ತುಪ್ಪ ಆನ್ಲೈನ್ ನಲ್ಲಿ ಕೊಳ್ಳಲು ಸ್ಕ್ಯಾನ್ ಮಾಡಿ

ನವರಾತ್ರಿ ಪೂಜೆಯಲ್ಲಿ ಪವಿತ್ರ ನೈವೇದ್ಯ ಸಮರ್ಪಿಸಿ
ಶ್ರೀ ಕೃಷ್ಣ ಹಳ್ಳಿ ತುಪ್ಪ
ಕಣಕಣವೂ ಪವಿತ್ರ

ಸಂಕ್ಷಿಪ್ತ ಸುದ್ದಿ

ಒಳನುಸುಳಲು ಯತ್ನಿಸಿದ ಇಬ್ಬರು ಭಯೋತ್ಪಾದಕರ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕುಪ್ವಾರ ಜಿಲ್ಲೆಯ ಗಡಿ ನಿಯಂತ್ರಣ ರೇಖೆ ಬಳಿ ಒಳನುಸುಳಲು ಯತ್ನಿಸಿದ ಇಬ್ಬರು ಭಯೋತ್ಪಾದಕರನ್ನು ಭದ್ರತಾ ಪಡೆ ಹತ್ಯೆ ಮಾಡಿದೆ ಎಂದು ಸೇನೆಯು ಶನಿವಾರ ತಿಳಿಸಿದೆ.



ಕುಪ್ವಾರದ ಗೂಗಲ್‌ಧಾರ್ ಪ್ರದೇಶದಲ್ಲಿ ಅನುಮಾನಾಸ್ಪದ ಚಟುವಟಿಕೆ ಗಳನ್ನು ಗಮನಿಸಿದ ಬಳಿಕ ಭದ್ರತಾ ಪಡೆ ಕಾರ್ಯಾಚರಣೆ ಪ್ರಾರಂಭಿಸಿತು. ನಂತರ ನಡೆದ ಗುಂಡಿನ ಚಕಮಕಿಯಲ್ಲಿ ಇಬ್ಬರು ಭಯೋತ್ಪಾದಕರು ಹತರಾದರು ಎಂದು ಸೇನೆಯು ಸಾಮಾಜಿಕ ಜಾಲತಾಣ 'ಎಕ್ಸ್' ಖಾತೆಯಲ್ಲಿ ಮಾಹಿತಿ ನೀಡಿದೆ.

ಬಂಗಾಳ: ಕೈದಿಗಳಿಗೆ ಮಟನ್ ಬಿರಿಯಾನಿ

ಕೋಲ್ಕತ್ತ (ಪಿಟಿಐ): ದುರ್ಗಾ ಪೂಜೆ ಸಂದರ್ಭದಲ್ಲಿ ಕೈದಿಗಳಿಗೆ ಮಟನ್ ಬಿರಿಯಾನಿ, ಬಸಂತಿ ಪುಲಾವ್ ಮತ್ತು ಬಂಗಾಳದ ಇತರೆ ವಿಶೇಷ ಖಾದ್ಯಗಳನ್ನು ನೀಡಲು ಪಶ್ಚಿಮ ಬಂಗಾಳದ ಗೃಹ ಇಲಾಖೆಯ ಅಧಿಕಾರಿಗಳು ಚಿಂತಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಕೈದಿಗಳಿಗೆ ಹಬ್ಬಗಳಿಂದ ದೂರವಾದ ಭಾವನೆ ಬಾರದಿರಲಿ ಎಂದು ಈ ಕ್ರಮ ಕೈಗೊಳ್ಳಲಾಗುತ್ತಿದೆ. ಅಪರಾಧಿಗಳು ಮತ್ತು ವಿಚಾರಣಾಧೀನ ಕೈದಿಗಳಿಗೆ ಅಕ್ಟೋಬರ್ 9ರಿಂದ ದಶಮಿವರೆಗೆ (ಅಕ್ಟೋಬರ್ 12) ನೂತನ ಮೆನುವಿನ ಪ್ರಕಾರ ಮಧ್ಯಾಹ್ನ ಮತ್ತು ರಾತ್ರಿ ಊಟ ನೀಡಲಾಗುತ್ತದೆ' ಎಂದು ಮಾಹಿತಿ ನೀಡಿದರು.

'ಹಬ್ಬಗಳ ಸಂದರ್ಭದಲ್ಲಿ ವಿಶೇಷ ಆಹಾರ ನೀಡುವಂತೆ ಕೈದಿಗಳು ಬೇಡಿಕೆ ಇಟ್ಟಿದ್ದರು. ಹೀಗಾಗಿ ಊಟದ ಮೆನು ಬದಲಾಯಿಸಲಾಗಿದೆ. ಇದರಿಂದ ಕೈದಿಗಳ ಮೊಗದಲ್ಲಿ ಸಂತಸ ಮೂಡಬಹುದು ಎಂದು ಭಾವಿಸಿದ್ದೇವೆ' ಎಂದರು.

ತಾಂತ್ರಿಕ ಸಮಸ್ಯೆ; ಚೆನ್ನೈಗೆ ಹಿಂದಿರುಗಿದ ವಿಮಾನ

ಚೆನ್ನೈ (ಪಿಟಿಐ): ಚೆನ್ನೈನಿಂದ ಮದುರೈಗೆ ಶನಿವಾರ ಹೊರಟಿದ್ದ ಏರ್ ಇಂಡಿಯಾ ವಿಮಾನವೊಂದರಲ್ಲಿ ತಾಂತ್ರಿಕ ಸಮಸ್ಯೆ ಕಂಡುಬಂದ ಕಾರಣ, ಮರಳಿ ಚೆನ್ನೈ ನಿಲ್ದಾಣಕ್ಕೆ ಬಂದಿಳಿದಿದೆ.

ಮದುರೈಗೆ ತೆರಳುತ್ತಿದ್ದ ಎಐ671 ವಿಮಾನದಲ್ಲಿ ತಾಂತ್ರಿಕ ದೋಷ ಕಂಡುಬಂದಿತ್ತು. ಹೀಗಾಗಿ ಸುರಕ್ಷತಾ ದೃಷ್ಟಿಯಿಂದ ತಪಾಸಣೆ ನಡೆಸಲು ವಿಮಾನವನ್ನು ಚೆನ್ನೈ ನಿಲ್ದಾಣದಲ್ಲಿ ಇಳಿಸಲಾಗಿದೆ. ವಿಮಾನವು ಸುರಕ್ಷಿತವಾಗಿ ಲ್ಯಾಂಡಿಂಗ್ ಆಗಿದ್ದು, ಯಾವುದೇ ಅಪಾಯ ಸಂಭವಿಸಿಲ್ಲ. ಪ್ರಯಾಣಿಕರಿಗೆ ಬದಲಿ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಏರ್ ಇಂಡಿಯಾ ವಿಮಾನಯಾನ ಸಂಸ್ಥೆಯ ಅಧಿಕಾರಿಗಳು ತಿಳಿಸಿದ್ದಾರೆ.

ಮಲಬಾರ್ ತಾಲೀಮು ಭಾರತದ ಆತಿಥ್ಯ

ನವದೆಹಲಿ (ಪಿಟಿಐ): ಭಾರತವು ನಾಲ್ಕು ರಾಷ್ಟ್ರಗಳನ್ನು ಒಳಗೊಂಡ 'ಮಲಬಾರ್ ಸಮರಾಭ್ಯಾಸ'ದ ಆತಿಥ್ಯ ವಹಿಸಿಕೊಂಡಿದ್ದು, ಮಂಗಳವಾರದಿಂದ ತಾಲೀಮು ಆರಂಭವಾಗಲಿದೆ.

ಭಾರತ, ಅಮೆರಿಕ ಆಸ್ಟ್ರೇಲಿಯಾ ಮತ್ತು ಜಪಾನ್‌ನ ನೌಕಾಪಡೆಗಳು ಸಮುದ್ರದಲ್ಲಿ ಸಂಕೀರ್ಣ ಅಭ್ಯಾಸಗಳನ್ನು ನಡೆಸಲಿವೆ. 'ಅಕ್ಟೋಬರ್ 8ರಿಂದ 18ರವರೆಗೆ ಮಲಬಾರ್ ತಾಲೀಮು–2024 ನಡೆಯಲಿದೆ. ಇದು ವಿಶಾಖಪಟ್ಟಣದ ನೌಕಾ ನಿಲ್ದಾಣದಿಂದ ಆರಂಭವಾಗಲಿದೆ' ಎಂದು ಭಾರತೀಯ ನೌಕಾಪಡೆಯು ತಿಳಿಸಿದೆ.

ಅಮೆರಿಕ ಮತ್ತು ಭಾರತದ ನೌಕಾಪಡೆಗಳ ದ್ವಿಪಕ್ಷೀಯ ಸಂಬಂಧ ವೃದ್ಧಿ ಉದ್ದೇಶದಿಂದ 1992ರಲ್ಲಿ ಮಲಬಾರ್ ಸಮರಾಭ್ಯಾಸ ಆರಂಭಿಸಲಾಯಿತು. ನಂತರ ಜಪಾನ್ ಮತ್ತು ಆಸ್ಟ್ರೇಲಿಯಾವನ್ನು ಸೇರ್ಪಡೆಗೊಳಿಸಲಾಗಿದೆ.

ಎನ್‌ಸಿಪಿ ನಾಯಕನ ಹತ್ಯೆ

ಮುಂಬೈ (ಪಿಟಿಐ): ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ಬಣದ ನಾಯಕರೊಬ್ಬರನ್ನು ಅಪರಿಚಿತರು ಮುಂಬೈನಲ್ಲಿ ಚಾಕುವಿನಿಂದ ಇರಿದು ಹತ್ಯೆ ಮಾಡಿದ್ದಾರೆ.

ಶುಕ್ರವಾರ ತಡರಾತ್ರಿ ನಗರದ ಬೈಕುಲ್ಲಾದ ಎಮ್‌ಎಚ್‌ಎಡಿಎ ಕಾಲೊನಿ ಪ್ರದೇಶದಲ್ಲಿ ಸಚಿನ್ ಕುರ್ಮಿ (43) ಅವರ ಮೇಲೆ ಅಪರಿಚಿತರು ದಾಳಿ ನಡೆಸಿದ್ದಾರೆ. ಬಳಿಕ ಸಚಿನ್ ಅವರನ್ನು ಜೆ.ಜೆ ಆಸ್ಪತ್ರೆಗೆ ದಾಖಲಿಸಲಾಯಿತು. ಅಲ್ಲಿ ಅವರು ಮೃತಪಟ್ಟರು ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

'ಎರಡು– ಮೂರು ಜನರು ಸಚಿನ್ ಮೇಲೆ ಮಾರಕಾಸ್ತ್ರಗಳಿಂದ ದಾಳಿ ಮಾಡಿದ್ದಾರೆ. ಆರೋಪಿಗಳ ಪತ್ತೆಗೆ ಸ್ಥಳದಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುತ್ತಿದೆ. ಘಟನೆ ಕುರಿತು ಪ್ರಕರಣ ದಾಖಲಿಸಲಾಗಿದ್ದು, ತನಿಖಾ ತಂಡ ರಚಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಕೈ' ಪಕ್ಷವನ್ನು 'ನಗರ ನಕ್ಸಲರು' ಮುನ್ನಡೆಸುತ್ತಿದ್ದಾರೆ: ಪ್ರಧಾನಿ ಆರೋಪ

'ಕಾಂಗ್ರೆಸ್ ಸಿದ್ಧಾಂತ ಸೋಲಿಸಲು ಒಟ್ಟಾಗಿ'

ಮುಖ್ಯಾಂಶಗಳು

- ಮಹಾರಾಷ್ಟ್ರದ ವಾಶಿಂನಲ್ಲಿ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ಮೋದಿ
- ₹ 23 ಸಾವಿರ ಕೋಟಿ ಮೊತ್ತದ ಯೋಜನೆಗಳಿಗೆ ಚಾಲನೆ
- ಬಂಜಾರ ವಿರಾಸತ್ ವಸ್ತು-ಸಂಗ್ರಹಾಲಯ ಉದ್ಘಾಟನೆ

ವಾಶಿಂ, ಮಹಾರಾಷ್ಟ್ರ (ಪಿಟಿಐ): ಕಾಂಗ್ರೆಸ್ ಅನ್ನು 'ನಗರ ನಕ್ಸಲರ ಗ್ಯಾಂಗ್' ಮುನ್ನಡೆಸುತ್ತಿದೆ ಎಂದು ಆರೋಪಿಸಿರುವ ಪ್ರಧಾನಿ ನರೇಂದ್ರ ಮೋದಿ, ಆ ಪಕ್ಷದ 'ಅಪಾಯಕಾರಿ ಸಿದ್ಧಾಂತ'ವನ್ನು ಸೋಲಿಸಲು ಜನರು ಒಟ್ಟಾಗಬೇಕು ಎಂದು ಕರೆ ನೀಡಿದರು.

'ದೇಶವನ್ನು ವಿಭಜಿಸುವ ಅವರ ಕಾರ್ಯಸೂಚಿಯು ನಾವೆಲ್ಲರೂ ಒಗ್ಗೂಡಿದರೆ ವಿಫಲಗೊಳ್ಳುತ್ತದೆ' ಎಂದು ಮಹಾರಾಷ್ಟ್ರದ ವಾಶಿಂ ಜಿಲ್ಲೆಯಲ್ಲಿ ಶನಿವಾರ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದ ನಂತರ ರ‍್ಯಾಲಿಯನ್ನುದ್ದೇಶಿಸಿ ಮಾತನಾಡುತ್ತಾ ಹೇಳಿದರು.

'ತನ್ನ ಸ್ವಾರ್ಥ ರಾಜಕಾರಣಕ್ಕಾಗಿ ಬಡವರನ್ನು ಲೂಟಿ ಮಾಡಿ ಅವರನ್ನು ಬಡವರಾಗಿಯೇ ಉಳಿಸುವುದು ಮಾತ್ರ ಕಾಂಗ್ರೆಸ್‌ಗೆ ಗೊತ್ತು. ಸಮಾಜವನ್ನು ಒಡೆಯುವುದಷ್ಟೆ ಆ ಪಕ್ಷದ ಕೆಲಸ. ನಾವು ಎಚ್ಚೆತ್ತುಕೊಂಡು ಒಗ್ಗಟ್ಟಿನಿಂದ ಇರಬೇಕು' ಎಂದರು.

'ಈಚೆಗೆ ದೆಹಲಿಯಲ್ಲಿ ಸಾವಿರಾರು ಕೋಟಿ ರೂಪಾಯಿ ಮೌಲ್ಯದ ಡ್ರಗ್ಸ್ ವಶಪಡಿಸಿಕೊಳ್ಳಲಾಗಿದ್ದು, ಕಾಂಗ್ರೆಸ್‌ನ ಮುಖಂಡರೊಬ್ಬರು ಅದರ ಕಿಂಗ್‌ಪಿನ್ ಆಗಿರುವ ಶಂಕೆ ವ್ಯಕ್ತವಾಗಿದೆ. ಯುವಕರಿಗೆ ಮಾದಕ ವಸ್ತುಗಳನ್ನು ಪೂರೈಸಿ, ಅದರಿಂದ ಬರುವ ಹಣದಿಂದ ಚುನಾವಣೆ ಎದುರಿಸಲು ಕಾಂಗ್ರೆಸ್ ಬಯಸಿದೆ' ಎಂದು ಆರೋಪಿಸಿದರು.

'ಬ್ರಿಟಿಷರಂತೆ ಈ ಕಾಂಗ್ರೆಸ್‌ನ ಕುಟುಂಬ ಕೂಡಾ ದಲಿತರು, ಹಿಂದುಳಿದವರು ಮತ್ತು ಬುಡಕಟ್ಟು ಸಮುದಾಯದವರು ತಮಗೆ ಸಮಾನರು ಎಂದು ಪರಿಗಣಿಸುವುದಿಲ್ಲ. ಭಾರತವನ್ನು ಒಂದೇ ಕುಟುಂಬ ಆಳಬೇಕು ಎಂದು ಬಯಸುವರು. ಆದ್ದರಿಂದಲೇ ಅವರು ಯಾವಾಗಲೂ ಬಂಜಾರ ಸಮುದಾಯದವರ ಬಗ್ಗೆ ತಿರಸ್ಕಾರ ಮನೋಭಾವ ಹೊಂದಿದ್ದಾರೆ' ಎಂದರು.

'ಬಂಜಾರ ಸಮುದಾಯದ ಸಂತರು ನಮ್ಮ ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆಯನ್ನು ಪ್ರೇರೇಪಿಸಿದರು. ಬ್ರಿಟಿಷರು ಬಂಜಾರ ಸಮುದಾಯಕ್ಕೆ ಕಿರುಕುಳ ನೀಡಿದ್ದರು. ಅವರು ದೇಶ ಬಿಟ್ಟು ತೊಲಗಿದ ನಂತರ, ಕಾಂಗ್ರೆಸ್ ಸರ್ಕಾರಗಳು ಈ ಪ್ರವೃತ್ತಿಯನ್ನು ಮುಂದುವರಿಸಿತಲ್ಲದೆ, ಸಮುದಾಯವು ಮುಖ್ಯವಾಹಿನಿಗೆ ಬರುವುದಕ್ಕೆ ತಡೆಯೊಡ್ಡಿತು' ಎಂದು ಆರೋಪಿಸಿದರು.

ವಿವಿಧ ಯೋಜನೆಗಳಿಗೆ ಚಾಲನೆ: ಪ್ರಧಾನಿ ಮೋದಿ ಅವರು ಕೃಷಿ ಮತ್ತು ಪಶುಸಂಗೋಪನಾ ಕ್ಷೇತ್ರಕ್ಕೆ ಸಂಬಂಧಿಸಿದ ₹23 ಸಾವಿರ ಕೋಟಿ ಮೊತ್ತದ ವಿವಿಧ ಯೋಜನೆಗಳಿಗೆ ಚಾಲನೆ ನೀಡಿದರು. ಪೊಹರಾದೇವಿಯಲ್ಲಿ ಬಂಜಾರ ವಿರಾಸತ್ ವಸ್ತುಸಂಗ್ರಹಾಲಯ ನಿರ್ಮಾಣ ಕಾರ್ಯ ಪೂರ್ಣಗೊಂಡದ್ದಕ್ಕೆ ಅವರು ಸಂತಸ ವ್ಯಕ್ತಪಡಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಮಹಾರಾಷ್ಟ್ರದ ವಾಶಿಂನಲ್ಲಿ ಬಂಜಾರ ವಿರಾಸತ್ ಮ್ಯೂಸಿಯಂ ಉದ್ಘಾಟಿಸಿದರು —ಪಿಟಿಐ ಚಿತ್ರ

'ಕರ್ನಾಟಕದಲ್ಲಿ ನೀರಾವರಿ ಯೋಜನೆ ಸ್ಥಗಿತ'

'ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಆರಂಭಿಸಿದ್ದ ನೀರಾವರಿ ಯೋಜನೆಗಳನ್ನು ಈಗಿನ ಕಾಂಗ್ರೆಸ್ ಸರ್ಕಾರ ಸ್ಥಗಿತಗೊಳಿಸಿದೆ' ಎಂದು ಪ್ರಧಾನಿ ಮೋದಿ ದೂರಿದರು.

ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳಲ್ಲಿನ ಸರ್ಕಾರಗಳು ರೈತರಿಗೆ ಮತ್ತು ನೀರಾವರಿ ಯೋಜನೆಗಳಿಗೆ ಮೀಸಲಾದ ಹಣವನ್ನು ಭ್ರಷ್ಟಾಚಾರಕ್ಕೆ ಬಳಸಿಕೊಂಡಿವೆ ಎಂದು ಆರೋಪಿಸಿದರು.

'ರೈತರ ಸಾಲ ಮನ್ನಾ ಮಾಡುತ್ತೇವೆ ಎಂಬ ಕಾಂಗ್ರೆಸ್‌ನ ಹುಸಿ ಭರವಸೆಗಳ ಬಗ್ಗೆ ಎಚ್ಚರದಿಂದ ಇರಬೇಕು. ತೆಲಂಗಾಣದ ರೈತರು ತಮ್ಮ ಸಾಲ ಮನ್ನಾ ಆಗಲಿ ಎಂದು ಇನ್ನೂ ಕಾಯುತ್ತಿದ್ದಾರೆ' ಎಂದು ಹೇಳಿದರು.

ಛತ್ತೀಸಗಢ: ಹತ್ಯೆಯಾದ ನಕ್ಸಲರ ಸಂಖ್ಯೆ 31ಕ್ಕೆ ಏರಿಕೆ

ದಾಂತೇವಾಡ (ಪಿಟಿಐ): ಛತ್ತೀಸಗಢದ ನಾರಾಯಣಪುರ ಮತ್ತು ದಾಂತೇವಾಡ ಜಿಲ್ಲೆಗಳ ಗಡಿಯಲ್ಲಿರುವ ದಟ್ಟಾರಣ್ಯದಲ್ಲಿ ಭದ್ರತಾ ಪಡೆಗಳು ಸುಮಾರು 48 ತಾಸು ನಡೆಸಿದ ಕಾರ್ಯಾಚರಣೆಯಲ್ಲಿ ಹತರಾದ ನಕ್ಸಲರ ಸಂಖ್ಯೆ 31ಕ್ಕೆ ತಲುಪಿದೆ.

ಎನ್‌ಕೌಂಟರ್ ನಡೆದ ಸ್ಥಳದಿಂದ ಶುಕ್ರವಾರ 28 ನಕ್ಸಲರ ಶವಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಶನಿವಾರ ಮತ್ತೆ, ಮೂವರು ನಕ್ಸಲರ ಶವಗಳು ಪತ್ತೆಯಾದವು. ಹತ್ಯೆಯಾದ ನಕ್ಸಲರೆಲ್ಲರೂ ಸಮವಸ್ತ್ರದಲ್ಲಿದ್ದರು. ನಕ್ಸಲರ ಶವಗಳನ್ನು ದಾಂತೇವಾಡಕ್ಕೆ ತರಲಾಗುತ್ತದೆ ಎಂದು ದಾಂತೇವಾಡ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಆರ್.ಕೆ. ಬರ್ಮನ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಶುಕ್ರವಾರ ಮಧ್ಯಾಹ್ನ 1 ಗಂಟೆ ಸುಮಾರಿಗೆ ಭದ್ರತಾ ಪಡೆಗಳು ಮತ್ತು ನಕ್ಸಲಯರ ನಡುವೆ ಗುಂಡಿನ ಚಕಮಕಿ ಆರಂಭವಾಗಿತ್ತು. ನೆಂದೂರು ಮತ್ತು ತುಳುತುಳಿ ಗ್ರಾಮಗಳ ನಡುವಿನ ಅರಣ್ಯದಲ್ಲಿ ಸಂಜೆ ಚಕಮಕಿ ಅಂತ್ಯಗೊಂಡಿತ್ತು. ದಾಂತೇವಾಡ ಮತ್ತು ನಾರಾಯಣಪುರದ ಜಿಲ್ಲಾ ಮೀಸಲು ಗಾರ್ಡ್‌ನ (ಡಿಆರ್‌ಜಿ) ಸುಮಾರು 1,500 ಯೋಧರು ಹಾಗೂ ವಿಶೇಷ ಕಾರ್ಯಪಡೆ ಯೋಧರು ಈ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು. ಅತ್ಯಂತ ಪ್ರಯಾಸಕರ ಮಾರ್ಗವನ್ನು ಕ್ರಮಿಸಿ ಈ ಕಾರ್ಯಾಚರಣೆ ನಡೆಸಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಹತರಾದ ನಕ್ಸಲರ ಗುರುತು ಇನ್ನೂ ಪತ್ತೆಯಾಗಿಲ್ಲ. ಆದರೆ ಪ್ರಾಥಮಿಕ ತನಿಖೆಯಲ್ಲಿ, ಮೃತರೆಲ್ಲರೂ ಪೀಪಲ್ಸ್ ಲಿಬರೇಶನ್ ಗೆರಿಲ್ಲಾ ಆರ್ಮಿ (ಪಿಎಲ್‌ಜಿಎ) ಕಂಪನಿ ಸಂಖ್ಯೆ 6ರ ಪ್ಲಟೂನ್ 16 ಮತ್ತು ಮಾವೋವಾದಿಗಳ ಪೂರ್ವ ಬಸ್ತಾರ್ ವಿಭಾಗಕ್ಕೆ ಸೇರಿದವರು ಎನ್ನುವುದು ಗೊತ್ತಾಗಿದೆ ಎಂದು ಬಸ್ತಾರ್ ವಲಯದ ಐಜಿಪಿ ಸುಂದರರಾಜ್ ಅವರು ತಿಳಿಸಿದ್ದಾರೆ.

ಗುಂಡಿನ ಚಕಮಕಿ ವೇಳೆ ನಕ್ಸಲರು ಸಿಡಿಸಿದ ಶೆಲ್ ಸ್ಫೋಟದಲ್ಲಿ ಯೋಧರೊಬ್ಬರು ಗಾಯಗೊಂಡಿದ್ದಾರೆ. ದಟ್ಟ ಅರಣ್ಯ ಮತ್ತು ಗುಡ್ಡಗಾಡು ಪ್ರದೇಶದ ಕೆಲವು ಸ್ಥಳಗಳಲ್ಲಿ ನಕ್ಸಲರ ಪೋಸ್ಟರ್‌ಗಳು ಭಾರಿ ಪ್ರಮಾಣದಲ್ಲಿ ಕಂಡುಬಂದಿವೆ ಎಂದು ತಿಳಿಸಿದ್ದಾರೆ.

ಮಾನನಷ್ಟ ಮೊಕದ್ದಮೆ ರಾಹುಲ್ ಗಾಂಧಿಗೆ ಸಮನ್ಸ್

ಪುಣೆ (ಪಿಟಿಐ): ಹಿಂದುತ್ವ ಸಿದ್ಧಾಂತದ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡುತ್ತಿದ್ದಾರೆ ಎಂದು ಆರೋಪಿಸಿ ವಿ.ಡಿ. ಸಾವರ್ಕರ್ ಅವರ ಮೊಮ್ಮಗ ದಾಖಲಿಸಿರುವ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ಪ್ರಕರಣಕ್ಕೆ ಸಂಬಂಧಿಸಿ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಗೆ ಪುಣೆಯ ವಿಶೇಷ ನ್ಯಾಯಾಲಯ ಸಮನ್ಸ್ ಜಾರಿ ಮಾಡಿದೆ.

ಸಂಸದರು ಮತ್ತು ಶಾಸಕರ ವಿರುದ್ಧದ ಪ್ರಕರಣಗಳಿಗೆ ಸಂಬಂಧಿಸಿದ ವಿಶೇಷ ನ್ಯಾಯಾಲಯವು ಅ.23ರಂದು ವಿಚಾರಣೆಗೆ ಹಾಜರಾಗುವಂತೆ ರಾಹುಲ್ ಅವರಿಗೆ ಶುಕ್ರವಾರ ಸಮನ್ಸ್ ಜಾರಿ ಮಾಡಿದೆ. ಉತ್ತರ ನೀಡಲು ಅವರು ಖುದ್ದು ಹಾಜರಾಗಬೇಕಿದೆ ಎಂದು ಸಾತ್ಯಕಿ ಸಾವರ್ಕರ್ ಪರ ವಕೀಲ ಸಂಗ್ರಾಮ್ ಕೊಲ್ಹಟ್ಕರ್ ತಿಳಿಸಿದ್ದಾರೆ.

ರಾಹುಲ್ ಗಾಂಧಿ ಅವರು 2023ರ ಮಾರ್ಚ್‌ನಲ್ಲಿ, ಲಂಡನ್‌ನಲ್ಲಿ ಮಾಡಿದ ಭಾಷಣದಲ್ಲಿ, ವಿ.ಡಿ. ಸಾವರ್ಕರ್ ಅವರು ತಮ್ಮ ಐದಾರು ಸ್ನೇಹಿತರೊಂದಿಗೆ ಸೇರಿಕೊಂಡು ಮುಸ್ಲಿಂ ವ್ಯಕ್ತಿಯನ್ನು ಹೊಡೆದು ಖುಷಿಪಟ್ಟಿದ್ದಾಗಿ ಪುಸ್ತಕದಲ್ಲಿ ಬರೆದುಕೊಂಡಿದ್ದಾರೆಂದು ಹೇಳಿದ್ದಾರೆ. ಆದರೆ, ಅಂತಹ ಯಾವುದೇ ಘಟನೆ ನಡೆದಿಲ್ಲ ಮತ್ತು ವಿ.ಡಿ. ಸಾವರ್ಕರ್ ಅವರು ಎಲ್ಲಿಯೂ ಆ ರೀತಿ ಬರೆದಿಲ್ಲ. ರಾಹುಲ್ ಗಾಂಧಿಯವರ ಈ ಆರೋಪ ದುರುದ್ದೇಶಪೂರಿತವಾಗಿದೆ ಎಂದು ಸಾವರ್ಕರ್ ಅವರ ಮೊಮ್ಮಗ ಸಾತ್ಯಕಿ ಸಾವರ್ಕರ್ ಅವರು ಕಳೆದ ವರ್ಷ ರಾಹುಲ್ ಗಾಂಧಿ ವಿರುದ್ಧ ಪುಣೆ ನ್ಯಾಯಾಲಯದಲ್ಲಿ ದೂರು ದಾಖಲಿಸಿದ್ದರು.

ಕೇರಳ: ಸುರೇಂದ್ರನ್ ಆರೋಪ ಮುಕ್ತ

ಕಾಸರಗೋಡು (ಪಿಟಿಐ): ಮಂಜೇಶ್ವರ ಕ್ಷೇತ್ರದ ವಿಧಾನಸಭಾ ಚುನಾವಣೆಯಲ್ಲಿ ಕಣದಿಂದ ಹಿಂದೆ ಸರಿಯಲು ಪ್ರತಿಸ್ಪರ್ಧಿ ಅಭ್ಯರ್ಥಿಗೆ ಹಣ ನೀಡಿದ ಆರೋಪ ಎದುರಿಸುತ್ತಿದ್ದ ಬಿಜೆಪಿಯ ಕೇರಳ ಘಟಕದ ಅಧ್ಯಕ್ಷ ಕೆ.ಸುರೇಂದ್ರನ್ ಹಾಗೂ ಸಂಗಡಿಗರನ್ನು ಆರೋಪಮುಕ್ತಗೊಳಿಸಿ ಕಾಸರಗೋಡು ಜಿಲ್ಲಾ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಸಾನು ಎಸ್.ಪಣಿಕ್ಕರ್ ಆದೇಶ ನೀಡಿದ್ದಾರೆ.

ಈ ಕುರಿತು ಮಾಹಿತಿ ನೀಡಿದ ಸುರೇಂದ್ರನ್ ಪರ ವಕೀಲರು, 'ಪ್ರಾಥಮಿಕ ಹಂತದಲ್ಲಿ ಈ ಪ್ರಕರಣದಲ್ಲಿ ಯಾವುದೇ ಹುರುಳಿಲ್ಲ. ರಾಜಕೀಯ ದುರುದ್ದೇಶದಿಂದ ಈ ಪ್ರಕರಣದಲ್ಲಿ ಸುರೇಂದ್ರನ್ ಅವರನ್ನು ಸಿಲುಕಿಸಲಾಗಿದೆ ಎಂಬ ವಾದವನ್ನು ನ್ಯಾಯಾಲಯವು ಪರಿಗಣಿಸಿದ್ದು, ಈ ಪ್ರಕರಣದಲ್ಲಿ ಹೆಚ್ಚಿನ ವಿಚಾರಣೆ ಅಗತ್ಯವಿಲ್ಲ ಎಂದು ಅಭಿಪ್ರಾಯಪಟ್ಟಿದೆ' ಎಂದು ತಿಳಿಸಿದರು.

ತೀರ್ಪಿನ ಬಳಿಕ ಮಾಧ್ಯಮಗಳ ಜತೆ ಮಾತನಾಡಿದ ಸುರೇಂದ್ರನ್, 'ಸತ್ಯವೇ ಮೇಲುಗೈ ಸಾಧಿಸಲಿದೆ' ಎಂಬುದನ್ನು ಮೊದಲಿನಿಂದಲೂ ಹೇಳಿದ್ದೆ. ಇದೊಂದು ಪೂರ್ವಯೋಜಿತ ಕೃತ್ಯವಾಗಿದ್ದು, ಸುಳ್ಳು ಪ್ರಕರಣದ ಮೂಲಕ ನನ್ನನ್ನು ರಾಜಕೀಯವಾಗಿ ಮುಗಿಸಲು ತಂತ್ರ ಹೆಣೆಯಲಾಗಿತ್ತು. ಸಿಪಿಎಂ, ಕಾಂಗ್ರೆಸ್ ಹಾಗೂ ಇಂಡಿಯನ್ ಮುಸ್ಲಿಂ ಲೀಗ್‌ನ ಮುಖಂಡರು ಈ ಸಂಚಿನ ಹಿಂದಿದ್ದರು' ಎಂದು ತಿಳಿಸಿದರು.

ಮೀಸಲಾತಿಗೆ ಶೇ 50ರ ಮಿತಿ 'ಕೃತಕ ಅಡ್ಡಿ'

ಜಾತಿಗಣತಿ ತಡೆಯಲು ಪ್ರಪಂಚದ ಯಾವ ಶಕ್ತಿಯಿಂದಲೂ ಸಾಧ್ಯವಿಲ್ಲ: ರಾಹುಲ್ ಗಾಂಧಿ

ಪ್ರಜಾವಾಣಿ ವಾರ್ತೆ

ಮುಂಬೈ: ಮೀಸಲಾತಿಗೆ ಶೇ 50ರ ಮಿತಿ ಹಾಕಲಾಗಿದೆ. ಇದು 'ಕೃತಕ ಅಡ್ಡಿ'. ಕಾಂಗ್ರೆಸ್ ನೇತೃತ್ವದ 'ಇಂಡಿಯಾ' ಒಕ್ಕೂಟ ಜಾತಿ ಗಣತಿ ನಡೆಸಿ, ಪ್ರಸ್ತುತ ಮೀಸಲಾತಿಗೆ ನಿಗದಿಪಡಿಸಿರುವ ಮಿತಿಯನ್ನು ತೆಗೆದುಹಾಕಲಿದೆ. ಇದನ್ನು ಪ್ರಪಂಚದ ಯಾವುದೇ ಶಕ್ತಿಗೂ ತಡೆಯಲು ಸಾಧ್ಯವಿಲ್ಲ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದರು.

ಐತಿಹಾಸಿಕ ನಗರ ಕೊಲ್ಹಾಪುರದಲ್ಲಿ ನಡೆದ ಸಂವಿಧಾನ ಸಮ್ಮಾನ್ ಸಮ್ಮೇಳನ ಉದ್ದೇಶಿಸಿ ಶನಿವಾರ ಮಾತನಾಡಿದ ಅವರು, 'ಇದು ಕಾಂಗ್ರೆಸ್ ನೀಡುತ್ತಿರುವ ವಾಗ್ದಾನ... ಮೀಸಲಾತಿಗೆ ನಿಗದಿ ಮಾಡಿರುವ ಶೇ 50ರ ಮಿತಿ ತೆಗೆದು ಹಾಕುತ್ತೇವೆ ಮತ್ತು ಜಾತಿ ಗಣತಿ ನಡೆಸುತ್ತೇವೆ. ಆರ್‌ಎಸ್‌ಎಸ್, ಬಿಜೆಪಿ, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಯಾರಿಂದಲೂ ನಮ್ಮನ್ನು ತಡೆಯಲು ಸಾಧ್ಯವಿಲ್ಲ' ಎಂದು ಹೇಳಿದರು.

'ಇದನ್ನು ಜಾರಿ ಮಾಡಲು ನಾನು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ನಮ್ಮ ಪಕ್ಷ ಬದ್ಧವಾಗಿದೆ. ಸತ್ಯವನ್ನು ತಿಳಿದುಕೊಳ್ಳುವುದರಲ್ಲಿ ಅಪಾಯ ಏನಿದೆ ಎಂದು ಪ್ರಶ್ನಿಸಿದರು.

'ನಮಗೆ ಸರಿಯಾದ ದತ್ತಾಂಶ ಬೇಕು. ದಲಿತರು, ಹಿಂದುಳಿದ ವರ್ಗದವರು, ಬುಡಕಟ್ಟು ಜನರು, ಮಹಿಳೆಯರು, ಅಲ್ಪಸಂಖ್ಯಾತರು ಮತ್ತು ಸಾಮಾನ್ಯ ವರ್ಗದವರು ಎಷ್ಟು ಮಂದಿ ಇದ್ದಾರೆ ಎಂಬ ಮಾಹಿತಿ ಬೇಕು. ಜಾತಿ ಗಣತಿ ನಡೆಸಬೇಕೆಂಬ ಬೇಡಿಕೆ ಮೂಲಕ ಸಂವಿಧಾನವನ್ನು ರಕ್ಷಿಸಲು ಯತ್ನಿಸುತ್ತಿದ್ದೇವೆ' ಎಂದು ಒತ್ತಿ ಹೇಳಿದರು.

'ಜಾತಿ ಗಣತಿಗೆ ಎರಡು ಉದ್ದೇಶಗಳಿವೆ. ಒಂದು; ಯಾವ ಸಮುದಾಯದ ಜನಸಂಖ್ಯೆ ಹೆಚ್ಚಿದೆ ಎಂದು ತಿಳಿಯಲು ಮತ್ತು ಎರಡನೆಯದು; ಸಾಮಾಜಿಕ–ಆರ್ಥಿಕ ಸಮೀಕ್ಷೆ ನಡೆಸಲು. ಈ ಸಮೀಕ್ಷೆಯು ದೇಶದ ಸಂಸ್ಥೆಗಳಲ್ಲಿ ದಲಿತರು, ಬುಡಕಟ್ಟು ಸಮುದಾಯ ಮತ್ತು ಹಿಂದುಳಿದ ವರ್ಗದವರ ಪಾಲ್ಗೊಳ್ಳುವಿಕೆ ಎಷ್ಟಿದೆ ಎಂದು ತಿಳಿಸುತ್ತದೆ' ಎಂದು ವಿವರಿಸಿದರು.

ಬಿಜೆಪಿ ವಿರುದ್ಧ ವಾಗ್ದಾಳಿ: 'ಬಿಜೆಪಿಗೆ ಜಾತಿ ಗಣತಿ ಬೇಕಿಲ್ಲ. ಆರ್‌ಎಸ್‌ಎಸ್ ಇದರ ವಿರುದ್ಧವಾಗಿದೆ. ನಾನು ಜಾತಿ ಗಣತಿ ಬಗ್ಗೆ ಮಾತನಾಡಿದಾಗಲೆಲ್ಲ ಬಿಜೆಪಿಯವರು ಜಾತಿ ಗಣತಿ ನಡೆಯಕೂಡದು ಎನ್ನುತ್ತಾರೆ. ಜನರಿಗೆ ಸತ್ಯ ತಿಳಿಯುವುದು ಅವರಿಗೆ ಇಷ್ಟವಿಲ್ಲ' ಎಂದು ಕಿಡಿಕಾರಿದರು. 'ಚುನಾವಣೆಗೂ ಮುನ್ನ ನರೇಂದ್ರ ಮೋದಿ ಅವರು 400ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲುತ್ತೇವೆ ಎನ್ನುತ್ತಿದ್ದರು. ಆದರೆ, ಜನರು 'ಸಂವಿಧಾನಕ್ಕೆ ಗೌರವ ನೀಡಬೇಕು' ಎಂಬ ಸ್ಪಷ್ಟ ಸಂದೇಶ ರವಾನಿಸಿದ್ದಾರೆ. ಇದು ದೇಶದ ಜನರಿಗಿರುವ ಶಕ್ತಿ' ಎಂದು ಹೇಳಿದರು.

'ಶಿವಾಜಿ ಎದುರು ಮೋದಿ ತಲೆಬಾಗಿದರೆ ಪ್ರಯೋಜನವಿಲ್ಲ'



ರಾಹುಲ್ ಗಾಂಧಿ ಅವರು ಕೊಲ್ಹಾಪುರದಲ್ಲಿ ಛತ್ರಪತಿ ಶಿವಾಜಿ ಮಹಾರಾಜ ಅವರ ಮೂರ್ತಿಯನ್ನು ಎತ್ತಿ ಹಿಡಿದರು —ಪಿಟಿಐ ಚಿತ್ರ

ಕೊಲ್ಹಾಪುರ (ಪಿಟಿಐ): ಜನರನ್ನು ಬೆದರಿಸಿ, ದೇಶದ ಸಂವಿಧಾನ ಮತ್ತು ಸಂಸ್ಥೆಗಳನ್ನು ನಾಶ ಮಾಡಿ ನಂತರ ಶಿವಾಜಿ ಮಹಾರಾಜ ಅವರ ಎದುರು ತಲೆಬಾಗಿದರೆ ಪ್ರಯೋಜನವಿಲ್ಲ ಎಂದು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಶನಿವಾರ ವಾಗ್ದಾಳಿ ನಡೆಸಿದರು.

ಕೊಲ್ಹಾಪುರದಲ್ಲಿ ನಿರ್ಮಾಣವಾಗಿರುವ ಛತ್ರಪತಿ ಶಿವಾಜಿ ಮಹಾರಾಜ ಅವರ ಪ್ರತಿಮೆ ಅನಾವರಣಕ್ಕೂ ಮುನ್ನ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಅಧಿಕಾರದಲ್ಲಿ ಇರುವವರ ಉದ್ದೇಶ ಮತ್ತು ಸಿದ್ಧಾಂತದಲ್ಲಿ ದೋಷ ಇದೆ. ಅವರು (ಬಿಜೆಪಿ) ಸಿಂಧುದುರ್ಗದಲ್ಲಿ ಶಿವಾಜಿ ಅವರ ಪ್ರತಿಮೆ ನಿರ್ಮಿಸಿದರು. ಕೆಲವೇ ದಿನಗಳಲ್ಲಿ ಕುಸಿದುಬಿತ್ತು. ಅವರ ಉದ್ದೇಶ ಸರಿ ಇರಲಿಲ್ಲ. 'ಶಿವಾಜಿ ಮಹಾರಾಜರ ಪ್ರತಿಮೆ ನಿರ್ಮಿಸುವುದಾದರೆ ಅವರ ಸಿದ್ಧಾಂತವನ್ನು ಅನುಸರಿಸಬೇಕು' ಎಂಬ ಸಂದೇಶವನ್ನು ಪ್ರತಿಮೆಯೇ ನೀಡಿತು ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರನ್ನು ಪರೋಕ್ಷವಾಗಿ ಉಲ್ಲೇಖಿಸಿ, 'ಅವರು ಬೆಳಿಗ್ಗೆ ಎದ್ದು ಸಂವಿಧಾನವನ್ನು ಹೇಗೆ ನಾಶ ಮಾಡಬೇಕು ಎಂದು ಚಿಂತಿಸುತ್ತಾರೆ. ದೇಶದ ಸಂಸ್ಥೆಗಳ ಮೇಲೆ ದಾಳಿ ನಡೆಸುತ್ತಾರೆ. ಜನರನ್ನು ಬೆದರಿಸುತ್ತಾರೆ. ನಂತರ ಶಿವಾಜಿ ಪ್ರತಿಮೆ ಎದುರು ತಲೆಬಾಗುತ್ತಾರೆ. ಇದರಿಂದ ಯಾವುದೇ ಪ್ರಯೋಜನ ಇಲ್ಲ. ಶಿವಾಜಿ ಪ್ರತಿಮೆ ಮುಂದೆ ನಿಂತು ನಮಸ್ಕರಿಸುತ್ತೀರಿ ಎಂದಾದರೆ ಸಂವಿಧಾನವನ್ನು ರಕ್ಷಿಸಬೇಕು' ಎಂದು ಹರಿಹಾಯ್ದರು.

'ಈ ದೇಶವು ಪ್ರತಿಯೊಬ್ಬರಿಗೂ ಸೇರಿದ್ದು ಎಂದು ಛತ್ರಪತಿ ಶಿವಾಜಿ ಸಂದೇಶ ನೀಡಿದ್ದಾರೆ. ಸಂವಿಧಾನವು ಅವರ ಸಿದ್ಧಾಂತದ ಪ್ರತೀಕ. ಶಿವಾಜಿ ಮಹಾರಾಜ ಮತ್ತು ಸಮಾಜ ಸುಧಾರಕ ಸಾಹು ಮಹಾರಾಜ ಅಂಥವರು ಇರದೇ ಇದ್ದರೆ ಸಂವಿಧಾನವೇ ಇರುತ್ತಿರಲಿಲ್ಲ' ಎಂದರು.

'ದೇಶದಲ್ಲಿ ಎರಡು ಸಿದ್ಧಾಂತಗಳಿವೆ. ಒಂದು; ಸಮಾನತೆ, ಏಕತೆ ಬಗ್ಗೆ ಮಾತನಾಡುವ ಸಂವಿಧಾನವನ್ನು ರಕ್ಷಿಸುತ್ತದೆ. ಇದು ಶಿವಾಜಿ ಅವರ ಸಿದ್ಧಾಂತ. ಇನ್ನೊಂದು; ಸಂವಿಧಾನವನ್ನು ನಾಶಪಡಿಸುತ್ತದೆ' ಎಂದು ಹೇಳಿದರು.

ಪ್ರತಿಮೆ ಕುಸಿದ ನಂತರ ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ, 'ಛತ್ರಪತಿ ಶಿವಾಜಿ ಕೇವಲ ಒಬ್ಬ ರಾಜ ಅಥವಾ ಒಂದು ಹೆಸರಲ್ಲ. ನಮ್ಮ ಆರಾಧ್ಯ ದೈವ. ಇಂದು ನಾನು ಅವರ ಕಾಲಿಗೆ ಬಿದ್ದು ಕ್ಷಮೆಯಾಚಿಸುತ್ತೇನೆ' ಎಂದು ಹೇಳಿದ್ದರು.

ಹರಿಯಾಣ: ಶೇ 61.19ರಷ್ಟು ಮತದಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ಹರಿಯಾಣದ 90 ವಿಧಾನಸಭಾ ಕ್ಷೇತ್ರಗಳಿಗೆ ಶನಿವಾರ ಚುನಾವಣೆ ನಡೆದಿದ್ದು, ಕೆಲ ಸಣ್ಣಪುಟ್ಟ ಘಟನೆಗಳನ್ನು ಹೊರತುಪಡಿಸಿದರೆ ಬಹುತೇಕ ಶಾಂತಿಯುತವಾಗಿ ಮತದಾನ ನಡೆದಿದೆ. ರಾಜ್ಯದ 2.03 ಕೋಟಿ ಮತದಾರರ ಪೈಕಿ ಶೇ61.19 ಮಂದಿ ಮತಚಲಾಯಿಸಿದ್ದಾರೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಚುನಾವಣೆಯಲ್ಲಿ ಸ್ಪರ್ಧಿಸಿದ್ದ 1,031 ಅಭ್ಯರ್ಥಿಗಳ ಭವಿಷ್ಯ ವಿದ್ಯುನ್ಮಾನ ಮತಯಂತ್ರಗಳಲ್ಲಿ (ಇವಿಎಂ) ದಾಖಲಾಗಿದೆ. ರಾಜ್ಯದಲ್ಲಿ ಸತತ ಮೂರನೇ ಬಾರಿ ಅಧಿಕಾರಕ್ಕೇರುವ ಆಶಯವನ್ನು ಬಿಜೆಪಿ ಹೊಂದಿದ್ದರೆ, ದಶಕದ ಬಳಿಕ ಮತ್ತೆ ಅಧಿಕಾರ ಪಡೆಯುವ ತವಕದಲ್ಲಿ ಕಾಂಗ್ರೆಸ್ ಇದೆ.

ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ, ವಿರೋಧ ಪಕ್ಷದ ನಾಯಕ ಭೂಪಿಂದರ್ ಸಿಂಗ್ ಹೂಡಾ, ಕಾಂಗ್ರೆಸ್ ಅಭ್ಯರ್ಥಿ ವಿನೇಶ್ ಫೋಗಟ್, ಐಎನ್‌ಎಲ್‌ಡಿ ನಾಯಕ ಅಭಯ ಸಿಂಗ್ ಚೌಟಾಲಾ, ಜೆಜೆಪಿಯ ದುಶ್ಯಂತ್ ಚೌಟಾಲಾ ಸೇರಿದಂತೆ ಚುನಾವಣಾ ಅಖಾಡದಲ್ಲಿರುವ ಹಲವು ಪ್ರಮುಖರ ಭವಿಷ್ಯ ಮತಯಂತ್ರಗಳಲ್ಲಿ ಅಡಕವಾಗಿದೆ.

ನೂಹ್‌ನಲ್ಲಿ ಮಾರಾಮಾರಿ: ನೂಹ್ ಜಿಲ್ಲೆಯಲ್ಲಿ ಕಾಂಗ್ರೆಸ್‌ನ ಹಾಲಿ ಶಾಸಕ ಪುನ್ಹಾನಾ ಮತ್ತು ಪಕ್ಷೇತರ ಅಭ್ಯರ್ಥಿ ರಹೀಶ್ ಖಾನ್ ಅವರ ಬೆಂಬಲಿಗರ ನಡುವೆ ಮಾರಾಮಾರಿ ಆಗಿದೆ.

ಮಾಜಿ ಶಾಸಕ ಆನಂದ್ ಸಿಂಗ್ ಡಾಂಗಿ ಅವರು ಮತಗಟ್ಟೆಯಲ್ಲಿ ತನ್ನ ಮತ್ತು ಸಹಾಯಕನ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಮೆಹಮ್ ಕ್ಷೇತ್ರದ ಹರಿಯಾಣ ಜನಸೇವಕ್ ಪಕ್ಷದ ಅಭ್ಯರ್ಥಿ ಬಲರಾಜ್ ಕುಂಡು ಆರೋಪ ಮಾಡಿದ್ದಾರೆ.

ಸಂಸದ ನವೀನ್ ಜಿಂದಾಲ್ ಕುದುರೆ ಏರಿ ಬಂದು ಮತಚಲಾಯಿಸಿದರು —ಪಿಟಿಐ ಚಿತ್ರ

ಕಾಂಗ್ರೆಸ್ ಅಭ್ಯರ್ಥಿಯೂ ಆಗಿರುವ ಕುಸ್ತಿಪಟು ವಿನೇಶ್ ಫೋಗಟ್ ತನ್ನ ತಾಯಿಯೊಂದಿಗೆ ಮತಗಟ್ಟೆಯಲ್ಲಿ ಮತಚಲಾಯಿಸಿ ಶಾಯಿ ಗುರುತು ಪ್ರದರ್ಶಿಸಿದರು —ಪಿಟಿಐ ಚಿತ್ರ

ಪ್ರಜಾ ಮತ
ಜನತಂತ್ರದ ಹಬ್ಬ

ಬೆಳಿಗ್ಗೆ 7 ಗಂಟೆಗೆ ಆರಂಭವಾದ ಮತದಾನ ಪ್ರಕ್ರಿಯೆ ಸಂಜೆ 6 ಗಂಟೆಗೆ ಮುಕ್ತಾಯವಾಯಿತು. ಚುನಾವಣಾ ಆಯೋಗ ರಾತ್ರಿ 7.20ಕ್ಕೆ ನೀಡಿದ ಮಾಹಿತಿ ಪ್ರಕಾರ ಶೇ 61.19ರಷ್ಟು ಮತದಾನವಾಗಿದೆ. 2019ರ ಚುನಾವಣೆಯಲ್ಲಿ ಶೇ 68ರಷ್ಟು ಮತದಾನವಾಗಿತ್ತು. ಇತ್ತೀಚೆಗೆ ನಡೆದಿದ್ದ ಲೋಕಸಭಾ ಚುನಾವಣೆಯಲ್ಲಿ ಶೇ 64.8ರಷ್ಟು ಮತದಾನ ನಡೆದಿತ್ತು.

ಗುರುಗ್ರಾಮದಲ್ಲಿ ಕಡಿಮೆ ಮತದಾನ: ಅತ್ಯಂತ ಕಡಿಮೆ ಮತದಾನ ಗುರುಗ್ರಾಮ ಮತ್ತು ಫರಿದಾಬಾದ್ ಜಿಲ್ಲೆಗಳಲ್ಲಿ ದಾಖಲಾಗಿವೆ. ಇಲ್ಲಿ ಕ್ರಮವಾಗಿ ಶೇ 49.97 ಮತ್ತು ಶೇ 51.90ರಷ್ಟು ಮತದಾನವಾಗಿದೆ. ಮೇವಾತ್ ಜಿಲ್ಲೆಯಲ್ಲಿ ಅತ್ಯಧಿಕ ಅಂದರೆ ಶೇ 68.28ರಷ್ಟು ಮತದಾನವಾಗಿದೆ. ನಂತರದ ಸ್ಥಾನದಲ್ಲಿ ಯಮುನಾನಗರ (ಶೇ67.93) ಮತ್ತು ಫತೇಹಾಬಾದ್ (ಶೇ 67.05) ಜಿಲ್ಲೆಗಳಿವೆ.

ರಾಜ್ಯದ 89 ಕ್ಷೇತ್ರಗಳಲ್ಲಿ ಬಿಜೆಪಿ ಸ್ಪರ್ಧಿಸಿದ್ದು, ಒಂದು ಕ್ಷೇತ್ರವನ್ನು (ಸಿರ್ಸಾ) ಹರಿಯಾಣ ಲೋಖಿತ್ ಪಕ್ಷದ ಮುಖ್ಯಸ್ಥ ಗೋಪಾಲ್ ಕಾಂಡ ಅವರಿಗೆ ಬಿಟ್ಟುಕೊಟ್ಟಿದೆ. ಕಾಂಗ್ರೆಸ್ ಸಹ 89 ಕ್ಷೇತ್ರ ಗಳಲ್ಲಿ ಸ್ಪರ್ಧೆ ಮಾಡಿದ್ದು, ಭಿವಾನಿ ಕ್ಷೇತ್ರವನ್ನು ಸಿಪಿಎಂಗೆ ಬಿಟ್ಟುಕೊಟ್ಟಿದೆ. ಎಎಪಿ ಮತ್ತು ಐಎನ್‌ಎಲ್‌ಡಿ–ಬಿಎಸ್‌ಪಿ ಹಾಗೂ ಜೆಜೆಪಿ–ಎಎಸ್‌ಪಿ (ಕಾನ್ಶಿರಾಮ್) ಮೈತ್ರಿಗಳು ಎಲ್ಲ ಕ್ಷೇತ್ರ ಗಳಲ್ಲೂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ.

ಕುದುರೆ ಏರಿ ಬಂದ ಸಂಸದ: ಕುರುಕ್ಷೇತ್ರದ ಸಂಸದ ನವೀನ್ ಜಿಂದಾಲ್ ಅವರು ಮತಗಟ್ಟೆಗೆ ಕುದುರೆ ಏರಿ ಬಂದು ಮತಚಲಾಯಿಸಿದರು. ಈ ಕುರಿತು ಪ್ರತಿಕ್ರಿಯಿಸಿದ ಅವರು, 'ಕುದುರೆ ಸವಾರಿಯನ್ನು ಮಂಗಳಕರ ಎನ್ನಲಾಗುತ್ತದೆ ಮತ್ತು ಜನರು ಮದುವೆಗೆ ಹೋಗುವಾಗ ಕುದುರೆ ಸವಾರಿ ಮಾಡುತ್ತಾರೆ. ಹೀಗಾಗಿಯೇ ಈ ಶುಭ ಕಾರ್ಯಕ್ಕೆ ನಾನು ಕುದುರೆ ಮೇಲೆ ಬಂದಿದ್ದೇನೆ' ಎಂದರು.

ಮತಗಟ್ಟೆಗೆ ಬಂದ ಮದುಮಗ

ಚಂಡೀಗಢ (ಪಿಟಿಐ): ವಿವಾಹಕ್ಕೆ ಸಿದ್ಧರಾಗಿದ್ದ ವರ ಸುನಿಲ್ ಕುಮಾರ್ ಮದುಮಗನ ವಸ್ತ್ರದಲ್ಲಿಯೇ ಹರಿಯಾಣದ ಕುರುಕ್ಷೇತ್ರ ಜಿಲ್ಲೆಯ ಮತಗಟ್ಟೆಗೆ ಬಂದು ಶನಿವಾರ ಮತ ಚಲಾಯಿಸಿದರು.

ಲಾಡವ ವಿಧಾನಸಭಾ ಕ್ಷೇತ್ರದಲ್ಲಿ ಮತ ಚಲಾಯಿಸಿದ ನಂತರ ಪ್ರತಿಕ್ರಿಯಿಸಿದ ಸುನಿಲ್ ಕುಮಾರ್, 'ಮತದಾನ ಮಾಡುವುದು ಮುಖ್ಯ. ಯಾರೂ ತಮ್ಮ ಮತವನ್ನು ವ್ಯರ್ಥ ಮಾಡಬಾರದು' ಎಂದು ಹೇಳಿದರು. 'ವಿವಾಹಕ್ಕೆ ತಡವಾಗುತ್ತಿದೆ. ಆದರೂ ಮತ ಚಲಾಯಿಸುವುದು ಮುಖ್ಯ' ಎಂದರು.

ಬಸ್ ಮಾರ್ಷಲ್‌ಗಳ ಮರು ನಿಯೋಜನೆ ಬಗ್ಗೆ ಸಂಪುಟದ ನಿರ್ಣಯ ಸಲ್ಲಿಕೆ

ಬಿಜೆಪಿ ಶಾಸಕನ ಕಾಲು ಹಿಡಿದ ದೆಹಲಿ ಸಚಿವ!

ನವದೆಹಲಿ (ಪಿಟಿಐ): ಬಸ್ ಮಾರ್ಷಲ್‌ಗಳ ಮರು ನಿಯೋಜನೆ ಬಗ್ಗೆ ಸಚಿವ ಸಂಪುಟ ಕೈಗೊಂಡಿರುವ ನಿರ್ಣಯಕ್ಕೆ ಒಪ್ಪಿಗೆ ನೀಡುವಂತೆ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾಗೆ ಮನವಿ ಮಾಡಲು ತಮ್ಮ ಜೊತೆ ಬರುವಂತೆ ದೆಹಲಿ ಸಚಿವ ಸೌರಭ್ ಭಾರದ್ವಜ್ ಅವರು ಬಿಜೆಪಿ ಶಾಸಕ ವಿಜೇಂದರ್ ಗುಪ್ತಾ ಅವರ ಕಾಲು ಹಿಡಿದು ಮನವಿ ಮಾಡಿದರು.

ಇದಕ್ಕೆ ಅವರು ಸ್ಪಂದಿಸುತ್ತಿದಂತೆಯೇ, ಮುಖ್ಯಮಂತ್ರಿ ಆತಿಶಿ ಅವರು ತಮ್ಮ ಕಾರನ್ನು ಬಿಟ್ಟು ಬಿಜೆಪಿ ನಾಯಕರ ಕಾರಿನಲ್ಲಿ ಕುಳಿತು ಸಚಿವರು, ಶಾಸಕರೊಂದಿಗೆ ಸಕ್ಸೇನಾ ಅವರ ಮನೆಗೆ ತೆರಳಿದರು. ಆದರೆ, ಅಲ್ಲಿಂದ ಹೊರ ಬರುತ್ತಿದಂತೆಯೇ ಎಎಪಿ ನಾಯಕರು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

'ಸಚಿವ ಸಂಪುಟದ ನಿರ್ಣಯಕ್ಕೆ ಸಹಿ ಮಾಡುವಂತೆ ಬಿಜೆಪಿಯು ಲೆಫ್ಟಿನೆಂಟ್ ಗವರ್ನರ್ ಅವರನ್ನು ಒತ್ತಾಯಿಸಿಲ್ಲ' ಎಂದು ಆರೋಪಿಸಿದ ಎಎಪಿ ನಾಯಕರು, ಲೆ.ಗವರ್ನರ್ ಮನೆ ಮುಂದೆ ಪ್ರತಿಭಟನೆ ನಡೆಸಿದರು.

'ಲೆ.ಗವರ್ನರ್ ಅವರನ್ನು ಭೇಟಿ ಮಾಡಲು ಬಿಜೆಪಿ ಶಾಸಕರು ತಯಾರಿರಲಿಲ್ಲ. ಆದರೆ ನಾವು ಅವರನ್ನು ಜೊತೆಗೆ ಕರೆದುಕೊಂಡು ಹೋದೆವು. ನಿರ್ಣಯಕ್ಕೆ ಸಹಿ ಮಾಡುವಂತೆ ಬಿಜೆಪಿ ಶಾಸಕರು ಲೆ.ಗವರ್ನರ್ ಅವರಿಗೆ ಮನವಿ ಮಾಡಲಿಲ್ಲ. ಬಿಜೆಪಿಯು ದ್ರೋಹ ಮಾಡಿದೆ' ಎಂದು ಮುಖ್ಯಮಂತ್ರಿ ಆತಿಶಿ ಕಿಡಿಕಾರಿದರು.

ದೆಹಲಿಯ ಸಚಿವ ಸೌರಭ್ ಭಾರದ್ವಜ್ ಅವರು ಬಿಜೆಪಿ ಶಾಸಕ ವಿಜೇಂದರ್ ಗುಪ್ತಾ ಅವರ ಕಾಲಿಗೆ ಬಿದ್ದರು — ಪಿಟಿಐ ಚಿತ್ರ

ಪ್ರತಿಭಟನೆ ನಡೆಸಿದ ಎಎಪಿ ನಾಯಕರನ್ನು ಪೊಲೀಸರು ವಶಕ್ಕೆ ಪಡೆದರು.

'ಸಚಿವ ಸಂಪುಟದ ನಿರ್ಣಯಕ್ಕೆ ಲೆ.ಗವರ್ನರ್ ಸಹಿ ಮಾಡಿಲ್ಲ. ಇದರಿಂದಾಗಿ 10 ಸಾವಿರ ಬಸ್ ಮಾರ್ಷಲ್‌ಗಳ ಕೋಪಕ್ಕೆ ಅವರು ತುತ್ತಾಗಲಿದ್ದಾರೆ' ಎಂದು ಸಚಿವ ಭಾರದ್ವಜ್ ಹೇಳಿದರು.

ನಾಗರಿಕ ಸೇನೆಯ 10 ಸಾವಿರ ಸ್ವಯಂಸೇವಕರನ್ನು ಬಸ್‌ಗಳಲ್ಲಿ ಮಾರ್ಷಲ್‌ಗಳಾಗಿ ನಿಯೋಜಿಸಿರುವ ಬಗ್ಗೆ ನಾಗರಿಕ ರಕ್ಷಣಾ ನಿರ್ದೇಶನಾಲಯವು ಆಕ್ಷೇಪ ವ್ಯಕ್ತಪಡಿಸಿದ ಕಾರಣ ಕಳೆದ ವರ್ಷ ಅವರನ್ನು ವಜಾಗೊಳಿಸಲಾಗಿತ್ತು. ಬಸ್ ಮಾರ್ಷಲ್‌ಗಳ ಮರುನಿಯೋಜನೆಯ ಬಗ್ಗೆ ಬಿಜೆಪಿ ಶಾಸಕರು ಶುಕ್ರವಾರ ಮುಖ್ಯಮಂತ್ರಿ ಆತಿಶಿ ಜೊತೆ ಮಾತುಕತೆ ನಡೆಸಿದ್ದರು. ಇದರ ಬೆನ್ನಲ್ಲೇ ಸಚಿವ ಸಂಪುಟವು ನಿರ್ಣಯ ಕೈಗೊಂಡಿತ್ತು.

ಹರಿಯಾಣ: 'ಕೈ'ಗೆ ಅಧಿಕಾರ

ಒಂದನೇ ಪುಟದಿಂದ...

ಹರಿಯಾಣದಲ್ಲಿ ಕಾಂಗ್ರೆಸ್ ಪಕ್ಷವು 44 ರಿಂದ 54 ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೇರಲಿದೆ ಎಂದು 'ದೈನಿಕ್ ಭಾಸ್ಕರ್' ಸಂಸ್ಥೆಯ ಸಮೀಕ್ಷೆಯು ಹೇಳಿದೆ. ಬಿಜೆಪಿಗೆ 15–29 ಸ್ಥಾನಗಳು ಸಿಗಬಹುದು ಎಂದು ಅಂದಾಜು ಮಾಡಿದೆ. ರಿಪಬ್ಲಿಕ್ ಭಾರತ್–ಮ್ಯಾಟ್ರಿಜ್ ಸಂಸ್ಥೆಯು ಕಾಂಗ್ರೆಸ್‌ಗೆ ಅತಿಹೆಚ್ಚು ಸ್ಥಾನಗಳನ್ನು (55–62) ಅಂದಾಜು ಮಾಡಿದೆ.

ಸಿ–ವೋಟರ್– ಇಂಡಿಯಾ ಟುಡೆ ಸಂಸ್ಥೆಯ ಸಮೀಕ್ಷೆಯು ಜಮ್ಮು ಮತ್ತು ಕಾಶ್ಮೀರದಲ್ಲಿ ಕಾಂಗ್ರೆಸ್–ಎನ್‌ಸಿ ಮೈತ್ರಿಕೂಟ 40ರಿಂದ 48 ಸ್ಥಾನಗಳನ್ನು ಗೆಲ್ಲಬಹುದು ಎಂದು ಅಂದಾಜು ಮಾಡಿದೆ. ಬಿಜೆಪಿಗೆ 27 ರಿಂದ 32 ಸ್ಥಾನಗಳು ಸಿಗಬಹುದು ಎಂದಿದೆ.

ವಿವಿಧ ಸಮೀಕ್ಷೆಗಳು ಪಿಡಿಪಿಗೆ 5 ರಿಂದ 12 ಸ್ಥಾನಗಳು ಹಾಗೂ ಇತರರಿಗೆ 4 ರಿಂದ 16 ಸ್ಥಾನಗಳು ಸಿಗಬಹುದು ಎಂದು ಹೇಳಿವೆ.

ಜಮ್ಮು - ಕಾಶ್ಮೀರ — 90 ಒಟ್ಟು ಸ್ಥಾನಗಳು; 46 ಸರಳ ಬಹುಮತ

ಸಮೀಕ್ಷೆ ಕೈಗೊಂಡ ಸಂಸ್ಥೆ	ಬಿಜೆಪಿ	ಕಾಂಗ್ರೆಸ್+ಎನ್‌ಸಿ	ಪಿಡಿಪಿ	ಇತರರು
ಆ್ಯಕ್ಸಿಸ್ ಮೈ ಇಂಡಿಯಾ	24-34	35-45	4-6	8-23
ದೈನಿಕ್ ಭಾಸ್ಕರ್	20-25	35-40	4-7	12-18
ರಿಪಬ್ಲಿಕ್–ಗುಲಿಸ್ತಾನ್	28-30	31-36	5-7	10-17
ಸಿ–ವೋಟರ್–ಇಂಡಿಯಾ ಟುಡೆ	27-32	40-48	6-12	6-11
ಪೀಪಲ್ಸ್ ಪಲ್ಸ್	23-27	46-50	7-11	4-6

ಬಿಜೆಪಿ ಜೊತೆ ಮೈತ್ರಿ ಇಲ್ಲ: ಅಬ್ದುಲ್ಲಾ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಪಕ್ಷವು ಬಿಜೆಪಿಯೊಂದಿಗೆ ಚುನಾವಣೋತ್ತರ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ಪಕ್ಷದ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಶನಿವಾರ ಸ್ಪಷ್ಟಪಡಿಸಿದರು.

ಬಿಜೆಪಿ ವಿರೋಧಿ ಮತಗಳು ನಮಗೆ ಬಂದಿವೆ. ಹೀಗಾಗಿ ಬಿಜೆಪಿ ಜೊತೆ ಸೇರುವುದಿಲ್ಲ. ಅವರು ಮುಸ್ಲಿಮರ ಮಳಿಗೆಗಳು, ಮನೆಗಳು, ಮಸೀದಿ ಮತ್ತು ಶಾಲೆಗಳ ಮೇಲೆ 'ಬುಲ್ಡೋಜರ್ ಕಾರ್ಯಾಚರಣೆ' ನಡೆಸಿದ್ದಾರೆ. ನಾವು ಅವರೊಂದಿಗೆ ಹೋಗುತ್ತೇವೆ ಎಂದು ನೀವು ಭಾವಿಸುತ್ತೀರಾ ಎಂದು ಅವರು ಪ್ರಶ್ನಿಸಿದರು.ಸರ್ಕಾರ ರಚನೆಗೆ ಬಿಜೆಪಿ ಜೊತೆ ಎನ್‌ಸಿ ಕೈಜೋಡಿಸಲಿದೆ ಎಂಬ ವದಂತಿ ಬೆನ್ನಲ್ಲೇ ಅಬ್ದುಲ್ಲಾ ಅವರು ಸ್ಪಷ್ಟನೆ ನೀಡಿದರು.

ಪ್ರಜಾವಾಣಿ

ನವವರ್ಣ

ಕೇಸರಿ ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಛಾಯಾಚಿತ್ರಗಳನ್ನು ಭಾನುವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...

7338018541

RSPA ವಿದ್ಯಾಕೇಂದ್ರ

ಶಾಂತಲಾ – ಬೆಸ್ಕಾಂ

MSIL ಮಹಿಳಾ ಅಸೋಸಿಯೇಟ್ಸ್

ಮಾಸ್ಟರ್ ಪಿಯು ಕಾಲೇಜು

ವಿಜಯಲಕ್ಷ್ಮಿ ಮತ್ತು ಗೆಳತಿಯರು

ಯಶಸ್ವಿನಿ ಮತ್ತು ಸ್ನೇಹಿತರು

ಪಿನಾಕಲ್ ಇನ್ಸಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್

ಉಷಾ ಮತ್ತು ಕುಟುಂಬ

ಸೌಮ್ಯಾ ಮತ್ತು ಗೆಳತಿಯರು

RPS ಶಾಲೆ

ದೀಪ ಮತ್ತು ಗೆಳತಿಯರು

ಶೋಭಾ ಮತ್ತು ಗೆಳತಿಯರು

ರಮಾದೇವಿ ಮತ್ತು ಗೆಳತಿಯರು


ಲಿಲ್ಲಿ ಬಡ್ಡೀಸ್ ಗ್ರೂಪ್

ಆಶಾ

ತಿಶಾ

ಕವಿತಾ, ನೇತ್ರಾ

ದೀಕ್ಷಾ

AKVK ಯೋಗ ಕೇಂದ್ರ

ವಿಜಯಲಕ್ಷ್ಮಿ ಮತ್ತು ಗೆಳತಿಯರು

ಲಲಿತಾ ಮತ್ತು ಸ್ನೇಹಿತರು

ಸಾಯಿ ವೆಂಕಟ್ ಸ್ಕೂಲ್

ಸೋರ್ಸ್‌ಹಬ್ ಸಿಬ್ಬಂದಿ

ಶ್ರೀ ಯೋಗಧಾಮ

ಸರ್ ಎಂ ವಿಶ್ವೇಶ್ವರಯ್ಯ ಬ್ಯಾಂಕ್ ಸಿಬ್ಬಂದಿ

ಶ್ರುತಿ ಮತ್ತು ಸ್ನೇಹಿತರು

ಸಂಜಯ್ ಗಾಂಧಿ ಸಂಸ್ಥೆ

ವಿಜಯಲಕ್ಷ್ಮಿ ಮತ್ತು ಗೆಳತಿಯರು

ಛಾಯ ಮತ್ತು ಗೆಳತಿಯರು

GKVK ಸಿಬ್ಬಂದಿ

ಸರಿತಾ


ಸೋನು

ನಿಗಮ ವ್ಯವಹಾರಗಳು ಶಾಖೆ, ಬೆಸ್ಕಾಂ

ದೀಪಾಶ್ರೀ ಮತ್ತು ಸ್ನೇಹಿತರು


ರೇಖಾ, ಕಾವ್ಯ

24ಕ್ಕೆ ಪಿಎಸಿ ಮುಂದೆ ಹಾಜರಾಗಲು ಸೆಬಿ ಅಧ್ಯಕ್ಷೆ ಮಾಧವಿಗೆ ಸೂಚನೆ

ಮಾಧವಿ ಬುಚ್

ನವದೆಹಲಿ (ಪಿಟಿಐ): ಹಿತಾಸಕ್ತಿ ಸಂಘರ್ಷ ಆರೋಪ ಎದುರಿಸುತ್ತಿರುವ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಅಧ್ಯಕ್ಷೆ ಮಾಧವಿ ಪುರಿ ಬುಚ್ ಅವರು, ಅಕ್ಟೋಬರ್ 24ರಂದು ಸಂಸತ್‌ನ ಸಾರ್ವಜನಿಕ ಲೆಕ್ಕಪತ್ರ ಸಮಿತಿ (ಪಿಎಸಿ) ಮುಂದೆ ಹಾಜರಾಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಂಸತ್‌ನ ಕಾಯ್ದೆಯಡಿ ಸ್ಥಾಪಿಸಿರುವ ವಿವಿಧ ನಿಯಂತ್ರಕ ಸಂಸ್ಥೆಗಳ ಕಾರ್ಯ ನಿರ್ವಹಣೆ ಕುರಿತು ಪರಾಮರ್ಶೆ ನಡೆಸುವ ಅಧಿಕಾರ ಈ ಸಮಿತಿಗೆ ಇದೆ. ಕೆ.ಸಿ. ವೇಣುಗೋಪಾಲ್ ಇದರ ಅಧ್ಯಕ್ಷರಾಗಿದ್ದಾರೆ. ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರದ (ಟ್ರಾಯ್) ಅಧ್ಯಕ್ಷ ಅನಿಲ್ ಕುಮಾರ್ ಲಹೋಟಿ ಅವರಿಗೂ ಸಮಿತಿ ಮುಂದೆ ಹಾಜರಾಗಲು ಸೂಚಿಸಲಾಗಿದೆ.

ಕೇಂದ್ರ ಹಣಕಾಸು ಸಚಿವಾಲಯ ಮತ್ತು ಕೇಂದ್ರ ಸಂವಹನ ಸಚಿವಾಲಯದ ಹಿರಿಯ ಅಧಿಕಾರಿಗಳು, ಸಮಿತಿ ಮುಂದೆ ಹಾಜರಾಗುವಂತೆ ಸಚಿವಾಲಯಗಳ ಅಧೀನಕ್ಕೆ ಒಳಪಟ್ಟಿರುವ ಈ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

'ಸಮಿತಿ ನೀಡಿರುವ ಸಮನ್ಸ್‌ಗೆ ಸಂಬಂಧಿಸಿದಂತೆ ಸಂಸ್ಥೆಗಳ ಮುಖ್ಯಸ್ಥರು ವಿವರಣೆ ನೀಡಲಿದ್ದಾರೆ' ಎಂದು ತಿಳಿಸಿವೆ.

'ಈ ಎರಡು ನಿಯಂತ್ರಕ ಸಂಸ್ಥೆಗಳ ಕಾರ್ಯ ನಿರ್ವಹಣೆ ಸಂಬಂಧ ಪರಾಮರ್ಶೆ ನಡೆಸುವುದು ಅಂದಿನ ಸಭೆಯ ಕಾರ್ಯಸೂಚಿಯಾಗಿದೆ' ಎಂದು ಸಮಿತಿ ತಿಳಿಸಿದೆ.

ಮಾಧವಿ ಪುರಿ ಬುಚ್ ಮತ್ತು ಅವರ ಪತಿ ದವಳ್ ಬುಚ್ ಅವರು, ಅದಾನಿ ಸಮೂಹದ ಸಾಗರೋತ್ತರ ಹೂಡಿಕೆಯಲ್ಲಿ ಪಾಲುದಾರಿಕೆ ಹೊಂದಿದ್ದಾರೆ. ಹಾಗಾಗಿಯೇ, ಕಳೆದ ವರ್ಷದ ಜನವರಿಯಲ್ಲಿ ಅದಾನಿ ಸಮೂಹದ ವಿರುದ್ಧ ಪ್ರಕಟಿಸಿದ್ದ ತನ್ನ ವರದಿಗೆ ಸಂಬಂಧಿಸಿದಂತೆ ಸಮರ್ಪಕವಾಗಿ ತನಿಖೆ ನಡೆಸಲು ಮಾಧವಿ ಅವರು ನಿರ್ಲಕ್ಷ್ಯವಹಿಸಿದ್ದಾರೆ ಎಂದು ಅಮೆರಿಕದ ಶಾರ್ಟ್ ಸೆಲ್ಲರ್ ಕಂಪನಿ ಹಿಂಡನ್‌ಬರ್ಗ್ ರಿಸರ್ಚ್ ಆರೋಪಿಸಿತ್ತು.

ಹಿಂಡನ್‌ಬರ್ಗ್‌ನ ಆರೋಪ ಕುರಿತು ತನಿಖೆ ನಡೆಸಬೇಕು ಎಂದು ಕಾಂಗ್ರೆಸ್ ಪಕ್ಷವು ದೇಶದಾದ್ಯಂತ ಪ್ರತಿಭಟನೆ ನಡೆಸಿತ್ತು. ಮಾಧವಿ ಅವರು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿತ್ತು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಕೈಲಾಸ ಸಮಾರಾಧನೆ

ಶ್ರೀ ಡಿ.ಎಸ್. ಜಯದೇವ್
(1938-2024)
ಮಾಜಿ ಡೆಪ್ಯೂಟಿ ಚೀಫ್ ಇಂಜಿನಿಯರ್, ಕೆ.ಐ.ಡಿ.
ನಮ್ಮ ಪೂಜ್ಯ ಪತಿಯವರು ದಿನಾಂಕ: 27-09-2024 ಶುಕ್ರವಾರ ಬೆಳಗ್ಗೆ 5 ಘಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಕೈಲಾಸ ಸಮಾರಾಧನೆಯನ್ನು ದಿನಾಂಕ: 07-10-2024 ಸೋಮವಾರ 12 ಘಂಟೆಗೆ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು: ಪತ್ನಿ ಮತ್ತು ಕುಟುಂಬದವರು
ಮೊಬೈಲ್: 99163 10007

ಬೇಡಿಕೆ ಕುಸಿತ: ಗೋದಾಮಿನಲ್ಲಿ ಉಳಿದ 3,854 ಕ್ವಿಂಟಲ್ ದಾಸ್ತಾನು

ಹಾಲಿನ ಪುಡಿ ಬಿಕರಿಗೆ ಗ್ರಹಣ

● ಧನ್ಯಪ್ರಸಾದ್ ಬಿ.ಜೆ./ ಇಮಾಮ್‌ಹುಸೇನ್ ಗೂಡುನವರ

ಧಾರವಾಡ/ ಬೆಳಗಾವಿ: ರಾಜ್ಯದ ವಿವಿಧ ಜಿಲ್ಲೆಯ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟಗಳಿಂದ ಪೂರೈಸಿದ ಹಾಲಿನಿಂದ ತಯಾರಿಸಿದ್ದ 3,854 ಕ್ವಿಂಟಲ್ ಕೆನೆರಹಿತ ಹಾಲಿನ ಪುಡಿ ಮಾರಾಟವಾಗದೆ ಧಾರವಾಡ ಜಿಲ್ಲಾ ಹಾಲು ಒಕ್ಕೂಟದ (ಧಾಮುಲ್) ಗೋದಾಮಿನಲ್ಲಿಯೇ ಉಳಿದಿದೆ.

ಒಕ್ಕೂಟಗಳಿಗೆ ಪೂರೈಸುವ ಹಾಲು ಮಾರಾಟ ಮಾಡಿದ ನಂತರವೂ ಉಳಿಯುವ ಹಾಲಿನಿಂದ ಈ ಕೆನೆರಹಿತ ಪುಡಿ ತಯಾರಿಸಲಾಗುತ್ತಿದೆ. ಹಾಲಿನ ಕೊರತೆ ಎದುರಿಸುತ್ತಿದ್ದ ರಾಜಸ್ಥಾನ, ಮಧ್ಯಪ್ರದೇಶ, ದೆಹಲಿ, ಮಹಾರಾಷ್ಟ್ರ, ಕೇರಳ ಮತ್ತಿತರ ರಾಜ್ಯಗಳ ಡೇರಿಗಳು ಟೆಂಡರ್ ಪ್ರಕ್ರಿಯೆ ಮೂಲಕ ಈ ಪುಡಿ ಖರೀದಿಸುತ್ತಿದ್ದವು. ಕೆಲವೊಮ್ಮೆ ವಿದೇಶಕ್ಕೂ ರಫ್ತಾಗುತ್ತಿತ್ತು. ಕೆ.ಜಿಗೆ ₹250 ರಿಂದ ₹300ರ ವರೆಗೆ ದರ ಇರುತ್ತಿತ್ತು.

ಆದರೆ, ಈ ಬಾರಿ ವಿವಿಧ ರಾಜ್ಯಗಳಲ್ಲಿ ಹಾಲಿನ ಉತ್ಪಾದನೆಯ ಪ್ರಮಾಣ ಹೆಚ್ಚಿದೆ. ಹಾಗಾಗಿ, ಹಾಲಿನ ಪುಡಿಗೆ ಬೇಡಿಕೆ ಕುಸಿದಿದ್ದು, ಈಗ ಕೆ.ಜಿಗೆ ₹215 ಇದೆ. ಹಾಗಾಗಿ, ದರ ಏರಬಹುದು ಎಂಬ ನಿರೀಕ್ಷೆಯಿಂದ ಹಲವು ತಿಂಗಳಿಂದ ಧಾರವಾಡದ ಗೋದಾಮಿನಲ್ಲೇ ಪುಡಿ ದಾಸ್ತಾನು ಮಾಡಲಾಗಿದೆ. ನಿಗದಿತ ಅವಧಿಯೊಳಗೆ ಮಾರಾಟ ಮಾಡದಿದ್ದರೆ, ಅದು ಹಾಳಾಗುವ ಸಾಧ್ಯತೆಯೂ ಇದೆ.

'ಪ್ರತಿದಿನ 300 ಕ್ವಿಂಟಲ್ ಹಾಲಿನ ಪುಡಿ ತಯಾರಿಕೆ ಸಾಮರ್ಥ್ಯದ ಘಟಕ ಧಾಮುಲ್‌ನಲ್ಲಿ ಇದೆ. ವಿವಿಧ ಹಾಲು ಒಕ್ಕೂಟದವರು ಮಾರುಕಟ್ಟೆಯಲ್ಲಿ ಮಾರಾಟ ಮಾಡಿದ ನಂತರ ಉಳಿದ ಹಾಲನ್ನು ಪುಡಿ ತಯಾರಿಕೆಗೆ ಇಲ್ಲಿಗೆ ರವಾನಿಸುತ್ತಾರೆ. ಕೆನೆರಹಿತ (ಎಸ್‌ಎಂಪಿ) ಮತ್ತು ಕೆನೆಭರಿತ (ಡಬ್ಲುಎಂಪಿ) ಹಾಲಿನ ಪುಡಿ ತಯಾರಿಸಲಾಗುತ್ತದೆ. ಕೆನೆಭರಿತ ಹಾಲಿನ ಪುಡಿ ಕ್ಷೀರಭಾಗ್ಯ ಯೋಜನೆಗೆ ಬಳಕೆಯಾಗುತ್ತದೆ' ಎಂದು ಧಾಮುಲ್ ನಿರ್ದೇಶಕ ವೀರೇಶ್ ತರಲಿ ತಿಳಿಸಿದರು.

'ಹಾಲಿನ ಪುಡಿ ಪ್ರಮಾಣ ಹೆಚ್ಚಿದೆ. ಆದರೆ, ಬೇಡಿಕೆ ಕಡಿಮೆಯಾಗಿದೆ. ಧಾಮುಲ್ ಘಟಕದಲ್ಲಿ ಎರಡು ದಿನಕ್ಕೊಮ್ಮೆ 300 ಕ್ವಿಂಟಲ್ ಹಾಲಿನ ಪುಡಿ ಉತ್ಪಾದನೆ ಮಾಡಲಾಗುತ್ತದೆ. ಬೆಳಗಾವಿ, ಶಿವಮೊಗ್ಗ ಒಕ್ಕೂಟಗಳ ಹಾಲಿನ ಪುಡಿ ಹೆಚ್ಚು ಉಳಿದಿದೆ' ಎಂದು ವಿವರಿಸಿದರು.

ಒಂದಿಷ್ಟು ಬಳಸಿದ್ದೇವೆ: 'ಬೆಳಗಾವಿ ಹಾಲು ಒಕ್ಕೂಟದಲ್ಲಿ (ಬೆಮುಲ್) ಪ್ರತಿದಿನ 1.80 ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತದೆ. ಈ ಪೈಕಿ 85 ಸಾವಿರ ಲೀಟರ್ ಮಾರಾಟವಾಗುತ್ತದೆ. ಇದರೊಂದಿಗೆ ಉಪ ಉತ್ಪನ್ನ ತಯಾರಿಸುತ್ತೇವೆ. ಉಳಿದ 40 ಸಾವಿರದಿಂದ 45 ಸಾವಿರ ಲೀಟರ್ ಹಾಲನ್ನು ಪುಡಿ ಮಾಡಲು ಧಾರವಾಡಕ್ಕೆ ಕಳುಹಿಸುತ್ತೇವೆ. ದರ ಕುಸಿತದಿಂದ 3 ಸಾವಿರ ಕ್ವಿಂಟಲ್ ಪುಡಿ ಉಳಿದಿತ್ತು. ಈಗ ಒಂದಿಷ್ಟು ಬಳಸಿಕೊಂಡಿದ್ದೇವೆ' ಎಂದು ಬೆಮುಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಕೃಷ್ಣಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

ಉಳಿಕೆಯಾಗಿರುವುದು ಎಷ್ಟು?

ಧಾಮುಲ್ ಗೋದಾಮಿನಲ್ಲಿ ಅಕ್ಟೋಬರ್ 3ರಂದು 3,854 ಕ್ವಿಂಟಲ್ ಹಾಲಿನ ಪುಡಿ ಮಾರಾಟವಾಗದೆ ಉಳಿದಿದೆ. ಈ ಪೈಕಿ ಶಿವಮೊಗ್ಗ ಒಕ್ಕೂಟದಿಂದ ಕಳುಹಿಸಿದ ಹಾಲಿನಿಂದ ತಯಾರಿಸಿದ 1,671 ಕ್ವಿಂಟಲ್ ಹಾಲಿನ ಪುಡಿ, ಬೆಳಗಾವಿ ಒಕ್ಕೂಟದ 1,313 ಕ್ವಿಂಟಲ್ ಹಾಲಿನ ಪುಡಿ ಇದೆ.

ಉಳಿದಂತೆ ಬಳ್ಳಾರಿ ಒಕ್ಕೂಟದ 461 ಕ್ವಿಂಟಲ್, ಹಾವೇರಿ ಒಕ್ಕೂಟದ 370 ಕ್ವಿಂಟಲ್, ಧಾರವಾಡ ಒಕ್ಕೂಟದ 26 ಕ್ವಿಂಟಲ್, ಕಲಬುರಗಿ ಒಕ್ಕೂಟದ 10.9 ಕ್ವಿಂಟಲ್ ಮತ್ತು ವಿಜಯಪುರ ಒಕ್ಕೂಟದ 8 ಕೆ.ಜಿ ಪುಡಿ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಸಕ್ತ ಆರ್ಥಿಕ ವರ್ಷದಡಿ 1.25 ಲಕ್ಷ ಯುವಜನರಿಗೆ ವೃತ್ತಿ ತರಬೇತಿ

ಪಿಎಂ ಇಂಟರ್ನ್‌ಶಿಪ್: 12ರಿಂದ ನೋಂದಣಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಅನುಷ್ಠಾನಗೊಳಿಸಲಿರುವ ಪ್ರಧಾನ ಮಂತ್ರಿ ಇಂಟರ್ನ್‌ಶಿಪ್ ಯೋಜನೆಯಡಿ ಅಕ್ಟೋಬರ್ 12ರಿಂದ ಹೆಸರು ನೋಂದಣಿ ಮಾಡಿಕೊಳ್ಳಲು ಯುವಜನರಿಗೆ ಅವಕಾಶ ಕಲ್ಪಿಸುವ ಸಾಧ್ಯತೆಯಿದೆ.

ಡಿಸೆಂಬರ್ 2ರಿಂದ ಈ ಯೋಜನೆಯು ಪ್ರಾಯೋಗಿಕವಾಗಿ ಜಾರಿಗೆ ಬರಲಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಯೋಜನೆಗೆ ಒಟ್ಟು ₹800 ಕೋಟಿ ಅನುದಾನವನ್ನು ಮೀಸಲಿಡಲಾಗಿದೆ. ಮುಂದಿನ ವರ್ಷದ ಮಾರ್ಚ್ ಅಂತ್ಯದೊಳಗೆ 1.25 ಲಕ್ಷ ಯುವಜನರಿಗೆ ವಿವಿಧ ವೃತ್ತಿ ತರಬೇತಿ ನೀಡುವ ಗುರಿ ಹೊಂದಲಾಗಿದೆ.

ಜುಲೈನಲ್ಲಿ ಮಂಡಿಸಿದ್ದ ಕೇಂದ್ರ ಬಜೆಟ್‌ನಲ್ಲಿ ಸರ್ಕಾರವು ಈ ಯೋಜನೆಯನ್ನು ಘೋಷಿಸಿತ್ತು. ಮುಂದಿನ ಐದು ವರ್ಷದಲ್ಲಿ ಒಂದು ಕೋಟಿ ಯುವಜನರಿಗೆ ಇಂಟರ್ನ್‌ಶಿಪ್ ನೀಡಲಾಗುತ್ತದೆ. ಕೇಂದ್ರ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ www.pminternship.mca.gov.in ಪೋರ್ಟಲ್ ಮೂಲಕ ಯುವಜನರು ಅರ್ಜಿ ಸಲ್ಲಿಸಬಹುದಾಗಿದೆ.

ಪೋರ್ಟಲ್‌ನಲ್ಲಿ 2,200ಕ್ಕೂ ಹೆಚ್ಚು ಇಂಟರ್ನ್‌ಶಿಪ್ ಅವಕಾಶಗಳನ್ನು ಪ್ರಕಟಿಸಲಾಗಿದೆ ಎಂದು ಸಚಿವಾಲಯದ ಮೂಲಗಳು ತಿಳಿಸಿವೆ.

ಆಯ್ಕೆಯಾದ ಪ್ರತಿ ಅಭ್ಯರ್ಥಿಗೆ 12 ತಿಂಗಳವರೆಗೆ ವೃತ್ತಿ ತರಬೇತಿ ನೀಡಲಾಗುತ್ತದೆ. ಪ್ರತಿ ಮಾಸಿಕ ₹5 ಸಾವಿರ ಭತ್ಯೆ ನೀಡಲಾಗುತ್ತದೆ. ಅಲ್ಲದೆ, ಒಂದು ಬಾರಿಗೆ ಸರ್ಕಾರವು ₹6 ಸಾವಿರ ಧನಸಹಾಯ ನೀಡಲಿದೆ. 21ರಿಂದ 24 ವರ್ಷದ ಒಳಗಿನ ಯುವಜನರು ಅರ್ಜಿ ಸಲ್ಲಿಸಲು ಅರ್ಹರಾಗಿದ್ದಾರೆ.

ಸುದ್ದಿ 2 ನಿಮಿಷ

ಇಂಡಿಗೊ ಸರ್ವರ್‌ನಲ್ಲಿ ತಾಂತ್ರಿಕ ದೋಷ: ಪ್ರಯಾಣಿಕರ ಪರದಾಟ

ಮುಂಬೈ (ಪಿಟಿಐ): ಇಂಡಿಗೊ ವಿಮಾನಯಾನ ಕಂಪನಿಯ ಸರ್ವರ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದು, ಕಂಪನಿಯ ವೆಬ್‌ಸೈಟ್ ಮತ್ತು ಟಿಕೆಟ್ ಬುಕಿಂಗ್‌ನಲ್ಲಿ ಸಮಸ್ಯೆ ಎದುರಾಗಿದೆ.

ಇದರಿಂದ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರ ಚೆಕ್–ಇನ್‌ಗೂ ಅಡಚಣೆಯಾಗಿದೆ.

'ನೆಟ್‌ವರ್ಕ್ ವ್ಯವಸ್ಥೆಯಲ್ಲಿನ ಸಮಸ್ಯೆಯಿಂದಾಗಿ ಪ್ರಯಾಣಿಕರು ವಿಮಾನ ನಿಲ್ದಾಣದಲ್ಲಿ ಸಾಲುಗಟ್ಟಿ ಕಾಯುವ ಸ್ಥಿತಿ ನಿರ್ಮಾಣವಾಗಿದೆ' ಎಂದು ಕಂಪನಿಯು 'ಎಕ್ಸ್'ನಲ್ಲಿ ಶನಿವಾರ ತಿಳಿಸಿದೆ.

ತಾಂತ್ರಿಕ ದೋಷ ಸರಿಪಡಿಸುವ ಕಾರ್ಯ ಪ್ರಗತಿಯಲ್ಲಿದೆ. ತ್ವರಿತವಾಗಿ ಪ್ರಯಾಣಿಕರಿಗೆ ಆಗಿರುವ ಸಮಸ್ಯೆ ಪರಿಹರಿಸಲು ಕ್ರಮವಹಿಸಲಾಗುತ್ತಿದೆ ಎಂದು ತಿಳಿಸಿದೆ.

ಅಂತರರಾಷ್ಟ್ರೀಯ ಹಾಗೂ ದೇಶೀಯ ಮಟ್ಟದಲ್ಲಿ ಪ್ರತಿ ದಿನ ಇಂಡಿಗೊ ಕಂಪನಿಯ ಎರಡು ಸಾವಿರಕ್ಕೂ ಹೆಚ್ಚು ವಿಮಾನಗಳು ಕಾರ್ಯಾಚರಣೆ ನಡೆಸುತ್ತವೆ.

ಆರ್‌ಬಿಐ ಡೆಪ್ಯುಟಿ ಗವರ್ನರ್ ಸೇವಾವಧಿ 1 ವರ್ಷ ವಿಸ್ತರಣೆ

ನವದೆಹಲಿ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ ಡೆಪ್ಯುಟಿ ಗವರ್ನರ್ ಎಂ. ರಾಜೇಶ್ವರ ರಾವ್ ಅವರ ಸೇವಾವಧಿಯನ್ನು ಕೇಂದ್ರ ಸರ್ಕಾರವು, ಒಂದು ವರ್ಷ ವಿಸ್ತರಿಸಿದೆ ಎಂದು ಮೂಲಗಳು ತಿಳಿಸಿವೆ.

ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯ ಸಂಪುಟ ನೇಮಕಾತಿ ಸಮಿತಿಯು ಅಕ್ಟೋಬರ್ 9ರಿಂದ ಜಾರಿಗೆ ಬರುವಂತೆ ಸೇವಾವಧಿ ವಿಸ್ತರಿಸಲು ಅನುಮೋದನೆ ನೀಡಿದೆ ಎಂದು ಹೇಳಿವೆ.

ರಾವ್ ಅವರು 2016ರ ನವೆಂಬರ್‌ನಲ್ಲಿ ಆರ್‌ಬಿಐನ ಕಾರ್ಯ ನಿರ್ವಾಹಕ ನಿರ್ದೇಶಕರಾಗಿ ನೇಮಕವಾಗಿದ್ದರು. ಬಳಿಕ 2020ರ ಅಕ್ಟೋಬರ್‌ನಲ್ಲಿ ಮೂರು ವರ್ಷದ ಅವಧಿಗೆ ಅವರನ್ನು ಡೆಪ್ಯುಟಿ ಗವರ್ನರ್ ಆಗಿ ನೇಮಿಸಲಾಗಿತ್ತು.ಕೊಚ್ಚಿ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ವಿಷಯದಲ್ಲಿ ಪದವಿ ಮತ್ತು ಎಂಬಿಎ ಸ್ನಾತಕೋತ್ತರ ಪದವಿ ಪಡೆದಿರುವ ಅವರು, 1984ರಲ್ಲಿ ಆರ್‌ಬಿಐ ಸೇವೆಗೆ ಸೇರ್ಪಡೆಗೊಂಡಿದ್ದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್

Agricultural Land Converted

Mysore

ಜಮೀನು ಮಾರಾಟಕ್ಕಿದೆ:ಮೈಸೂರಿನ ಕುವೆಂಪು ನಗರದಿಂದ ಕೇವಲ ಆರು ಕಿಲೋಮೀಟರ್ ದೂರದಲ್ಲಿರುವ ಪೆರಿಫೆರಲ್ ರಿಂಗ್ ರೋಡ್‌ಗೆ ಹೊಂದಿಕೊಂಡಿರುವ ಲೇಔಟ್‌ಗೆ ಸೂಕ್ತವಾದ 8.5ಎಕರೆ ಜಮೀನುಮಾರಾಟಕ್ಕಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ:ಡಾ.ಗುರುಪ್ರಸಾದ್ 9036284426.

Agricultural Land

General

3 ACRES Land facing Highway at Gopanpally situated 30 KM from Kodangal is for Sale. Contact. 08978862823 or 09441070427

Chitradurga

ಚಿಕ್ಕೇನಹಳ್ಳಿ ಸಿರಿಗೆರೆಯಿಂದ ಭೀಮಸಮುದ್ರ ಹೋಗುವ ರೋಡ್ ಹತ್ತಿರ 5ಎಕರೆ ಅಡಿಕೆ ತೋಟ ಮಾರಾಟಕ್ಕಿದೆ, 3300 ಅಡಿಕೆಗಿಡಗಳು, 4ಬೋರ್‌ವೆಲ್‌ಗಳು. 9590045633

Sites

Shivamogga

ನಿವೇಶನ ಮಾರಾಟಕ್ಕೆ ಶಿಕಾರಿಪುರ ಪಟ್ಟಣದ KHB Layout ನಲ್ಲಿ 30x40 ಅಳತೆಯ ನಿವೇಶನ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ 7406958864

ಉದ್ಯೋಗಾವಕಾಶ

Drivers

ವ್ಯಕ್ತಿಗತ ಚಾಲಕರ ಅಗತ್ಯವಿದೆ. ವೇತನ: ರೂಮ್ + Rs 18,000 Rs 20,000. ಸ್ಥಳ: ಫ್ರೆಜರ್ ಟೌನ್, ಬೆಂಗಳೂರು. ಸಂಪರ್ಕ ಮಾಹಿತಿಗಳು: 9845669830

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

General

ರಕ್ಷಾ ಸೆಕ್ಯುರಿಟಿ ಸರ್ವಿಸಸ್ ಸೆಕ್ಯುರಿಟಿ ಗಾರ್ಡ್ ಹುದ್ದೆಗಳಿಗೆ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳುತ್ತಿದೆ. ಪ್ರತಿಷ್ಠಿತ MNCಯಲ್ಲಿ ಉದ್ಯೋಗದ ಸ್ಥಳವು ಬೆಂಗಳೂರು ಆಗಿರುತ್ತದೆ. ಪುರುಷ/ ಮಹಿಳಾ ಅಭ್ಯರ್ಥಿಗಳಿಗೆ ಮೂಲ ಇಂಗ್ಲಿಷ್ ಮಾತನಾಡುವ/ ಬರವಣಿಗೆ ಕೌಶಲ್ಯ ಹೊಂದಿರುವ ಉತ್ತಮಅವಕಾಶ. ಕನ್ನಡ ಭಾಷೆ ಹೆಚ್ಚುವರಿ ಪ್ರಯೋಜನವಾಗಿದೆ. ವಿದ್ಯಾರ್ಹತೆ: 10ನೇ ತರಗತಿ ತೇರ್ಗಡೆಯ ಅಗತ್ಯವಿದೆ, ವಯಸ್ಸು: 18-30ವರ್ಷಗಳ ನಡುವೆ ಇರಬೇಕು ಉದ್ಯಮದಲ್ಲಿ ಉತ್ತಮ ಸಂಬಳ. *ಕ್ಲೈಂಟ್ ಸಂದರ್ಶನದಲ್ಲಿ ಉತ್ತೀರ್ಣರಾಗಲು ಒಳಪಟ್ಟಿರುತ್ತದೆ. ನೋಂದಣಿಗಾಗಿ ಸಂಪರ್ಕಿಸಿ: ಸಂತೋಷ್- 9493419561 ವೈ.ಎಸ್.ಶಾಹಿದ್- 6281557937 ಎನ್.ಕೆ.ಯಾದವ್- 6300676517.

ಭವಿಷ್ಯ

Astrology

"ಕೆಲಸಆದ ನಂತರ ಕಾಣಿಕೆ" ನೀವು ಇಷ್ಟಪಟ್ಟವರು ನಿಮ್ಮಂತೆ ಆಗಲು ಧನವಶ, ಜನವಶ, ಭೂಮಿವಶ, ಶತ್ರುನಾಶ, ಇನ್ನೂ ನಿಮ್ಮ ಸಮಸ್ಯೆ ಏನೇಯಿದ್ದರೂ ಕೇರಳ ಕೊಳ್ಳೇಗಾಲದ ಅಥರ್ವಣ ತಂತ್ರಿಕವಿದ್ಯೆಯಿಂದ ಕೇವಲ 11ಗಂಟೆಯಲ್ಲಿ ನೇರ ಫೋನಿನ ಮೂಲಕ ಶಾಶ್ವತ ಪರಿಹಾರ. ತಕ್ಷಣ ಕರೆಮಾಡಿ 9686168466

ಪ್ರವಾಸ

Travel

ಶ್ರೀರಾಜರಾಜೇಶ್ವರಿ ಯಾತ್ರಾ, ಗಿರೀಶ್ ನೆಲಮಂಗಲ. 9743895346, 22.12.2024, 8 ದಿನಗಳು. ಗುಜರಾತ್ ಮಧ್ಯಪ್ರದೇಶ ವಿಮಾನ ದರಸೇರಿ ಸೀಟೊಂದಕ್ಕೆ ರೂ. 37500/.

★ಶ್ರೇಯಸ್ ಟೂರ್ಸ್★ 20.11.2024 12/15/21ದಿನಗಳು ಈಶಾನ್ಯ ಭಾರತ ರಾಜ್ಯಗಳ(ಸೆವೆನ್ ಸಿಸ್ಟರ್ಸ್)ಅಸ್ಸಾಂ,ಅರುಣಾಚಲ ಮೇಘಾಲಯ,ನಾಗಲ್ಯಾಂಡ್ ಮಣಿಪುರ,ತ್ರಿಪುರ,ಮಿಜೋರಾಂ 08.11.2024 7ದಿನಗಳು ಭೂತಾನ್ ರಾಷ್ಟ್ರದ ತಿಂಪೂ ಪಾರೋ,ಪುನಕಾ,ಫೂಚಲಿಂಗ್. 01.12.2024 13ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ (ಅಮರಕಂಟಕ ಮಯ್ಯಾರ್ ಸಹಿತ). 20.12.2024 9ದಿನಗಳು ವಿಜಯವಾಡ,ಮಂಗಳಗಿರಿ ಪಂಚರಾಮ,ಪೀಠಾಪುರಂ ಅನ್ನಾವರಂ,ವಿಶಾಖಪಟ್ಟಣ ಅರಕು,ಶ್ರೀಕೂರ್ಮಂ 20.10.2024,21.11.2024, 20.12.2024 7ದಿನಗಳು ಕಾಶಿ ನೈಮಿಷ್ಯಾರಣ್ಯ,ಪ್ರಯಾಗ್ ಗಯಾ,ದೇವ್‌ಘರ್,ನಳಂದ 01.12.2024 10ದಿನಗಳು ಅಖಂಡ ರಾಜಸ್ಥಾನ ಪ್ರವಾಸ. 21.11.2024,20.12.2024 12ದಿನಗಳು ಅಖಂಡ ಗುಜರಾತ್ ರಾಜ್ಯ ಪ್ರವಾಸ (ಬುಜ್‌ಕಚ್ ಸಹಿತ)(ಉಜ್ಜೈನಿ ಓಂಕಾರ್ ಸಹಿತ).9743351212/ 9206979202

ವೈಯಕ್ತಿಕ

Change of Name

ನಾನು, ಸುಮಂಗಲಾ ಎಂ ಜಿ, W/o (ಲೇಟ್) ಶ್ರೀ ಮೋಹನ್ ರಾಘವರಾವ್ ಬೆನೆಗಲ್, 304, ಚಿತ್ರಾಪುರ್ ಸಿ ಎಚ್ ಎಸ್, 15ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು 560055, ನಲ್ಲಿ ವಾಸಿಸುತ್ತಿದ್ದೇನೆ. ಅಫಿಡವಿಟ್ ಸಂಖ್ಯೆ IN KA18121160597729W ಹೇಳಿದಂತೆ ನಾನು ನನ್ನ ಹೆಸರನ್ನು ಸುಮಂಗಲಾ ಮಂಗೇಶ್ ಗೋಳಿಕೇರಿ ಎಂದು ಬದಲಾಯಿಸಿದ್ದೇನೆ.

ನಾನು, ಆದಿತ್ಯ ಎಂ ಬೆನೆಗಲ್, S/o (ಲೇಟ್) ಶ್ರೀ ಮೋಹನ್ ರಾಘವರಾವ್ ಬೆನೆಗಲ್, 304, ಚಿತ್ರಾಪುರ್ ಸಿ ಎಚ್ ಎಸ್, 15ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು 560055, ನಲ್ಲಿ ವಾಸಿಸುತ್ತಿದ್ದೇನೆ. ಅಫಿಡವಿಟ್ ಸಂಖ್ಯೆ IN KA18120590310785W ಹೇಳಿದಂತೆ ನಾನು ನನ್ನ ಹೆಸರನ್ನು ಆದಿತ್ಯ ಮೋಹನ್ ಬೆನೆಗಲ್ ಎಂದು ಬದಲಾಯಿಸಿದ್ದೇನೆ.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9901641752 | 080-45557163/164
*Conditions apply

ಲೆಬನಾನ್–ಸಿರಿಯಾ ಗಡಿ ಬಂದ್

ಒಂದೇ ದಿನ 100ಕ್ಕೂ ಹೆಚ್ಚು ಹಿಜ್ಬುಲ್ಲಾ ಬಂಡುಕೋರರ ಹತ್ಯೆ– ಇಸ್ರೇಲ್

ಬೈರೂತ್ (ಎ.ಪಿ): ಲೆಬನಾನ್ ರಾಜಧಾನಿ ಬೈರೂತ್ ಮೇಲೆ ಸರಣಿ ವಾಯುದಾಳಿ ನಡೆಸಿರುವ ಇಸ್ರೇಲ್ ಸೇನೆ, ಲೆಬನಾನ್ ಮತ್ತು ಸಿರಿಯಾ ಗಡಿಯಲ್ಲಿ ಸಂಪರ್ಕ ಕಡಿದು ಹಾಕಿದೆ.

ಮುಖ್ಯ ಗಡಿ ಬಂದ್ ಆಗಿದ್ದರಿಂದ ಇಸ್ರೇಲ್ ದಾಳಿ ಆರಂಭವಾದ ನಂತರ ಸಿರಿಯಾ ಕಡೆಗೆ ತೆರಳುತ್ತಿದ್ದ ಸಾವಿರಾರು ಜನರ ವಲಸೆಗೆ ತೊಡಕಾಗಿದೆ. ದಾಳಿಯಿಂದಾಗಿ ರಾಜಧಾನಿಯಲ್ಲಿ ಕಟ್ಟಡ ನೆಲಸಮಗೊಂಡಿದೆ. ಪ್ರಾಣಹಾನಿ ವಿವರ ತಿಳಿದುಬಂದಿಲ್ಲ.

ಬೈರೂತ್‌ನಲ್ಲಿ ಹಿಜ್ಬುಲ್ಲಾ ಸಂಘಟನೆಯ ಕೇಂದ್ರ ಗುಪ್ತದಳದ ಮುಖ್ಯ ಕಚೇರಿ ಗುರಿಯಾಗಿಸಿ ದಾಳಿ ನಡೆಯಿತು. 24 ಗಂಟೆಗಳಲ್ಲಿ ಈ ಭಾಗದಲ್ಲಿ ನೆಲೆಯೂರಿದ್ದ 100ಕ್ಕೂ ಹೆಚ್ಚು ಹಿಜ್ಬುಲ್ಲಾ ಬಂಡುಕೋರರನ್ನು ಹತ್ಯೆ ಮಾಡಲಾಗಿದೆ ಎಂದು ಇಸ್ರೇಲ್ ಸೇನೆ ಪ್ರಕಟಿಸಿದೆ.

ಲೆಬನಾನ್‌ನ ಅಧಿಕೃತ ಸುದ್ದಿ ಸಂಸ್ಥೆಯ ಪ್ರಕಾರ, ರಾಜಧಾನಿ ಮೇಲೆ ಸತತ 10 ಬಾರಿ ವಾಯುದಾಳಿಯಾಗಿದೆ. ಹಿಜ್ಬುಲ್ಲಾ ಬಂಡುಕೋರರು, ಜನರು ಸೇರಿ ಸುಮಾರು 1,400 ಲೆಬೆನಿಯನ್ನರು ಸತ್ತಿದ್ದಾರೆ. ಅಂದಾಜು 12 ಲಕ್ಷ ಜನರು ಮನೆ ತೊರೆದಿದ್ದಾರೆ.

ದಾಳಿಯಲ್ಲಿ ಹಿಜ್ಬುಲ್ಲಾ ಸಂವಹನ ವಿಭಾಗದ ಮುಖ್ಯಸ್ಥ ಮೊಹಮ್ಮದ್ ರಶೀದ್ ಸ್ಕಫಿ ಹತ್ಯೆಯಾಗಿದೆ. ಈತ 2000ರಿಂದ ಈ ಘಟಕದ ಮುಖ್ಯಸ್ಥನಾಗಿದ್ದ ಎಂದು ಇಸ್ರೇಲ್ ಸೇನೆಯು ತಿಳಿಸಿದೆ.

ಪ್ರತೀಕಾರವಾಗಿ ಹಿಜ್ಬುಲ್ಲಾದ ಬಂಡುಕೋರರು ಇಸ್ರೇಲ್‌ನತ್ತ ಸುಮಾರು 100 ರಾಕೆಟ್‌ಗಳನ್ನು ಪ್ರಯೋಗಿಸಿದ್ದಾರೆ ಎಂದು ಸೇನೆ ತಿಳಿಸಿದೆ. ಆದರೆ, ಇಸ್ರೇಲ್‌ನಲ್ಲಿ ಇದರಿಂದ ಆಗಿರುವ ಹಾನಿಯ ವಿವರವನ್ನು ನೀಡಿಲ್ಲ.

ಅಲ್ಲದೆ, ಇನ್ನೊಂದೆಡೆ ಗಾಜಾದಲ್ಲಿರುವ ಹಮಾಸ್ ಬಂಡುಕೋರರು ಶುಕ್ರವಾರ ಇಸ್ರೇಲ್‌ನತ್ತ ಎರಡು ರಾಕೆಟ್ ಪ್ರಯೋಗಿಸಿದ್ದಾರೆ. ಈ ತಿಂಗಳಲ್ಲಿ ಇದೇ ಮೊದಲ ಬಾರಿಗೆ ಈ ವಲಯದಿಂದ ರಾಕೆಟ್ ದಾಳಿ ನಡೆದಿದೆ ಎಂದು ಸೇನೆ ತಿಳಿಸಿದೆ.

ಹಮಾಸ್ ಅಧಿಕಾರಿಯ ಹತ್ಯೆ

ಜೆರುಸಲೇಂ (ಎಪಿ): ಲೆಬನಾನ್‌ನ ಉತ್ತರ ಭಾಗದಲ್ಲಿ ನಿರಾಶ್ರಿತರ ಶಿಬಿರದ ಮೇಲೆ ಇಸ್ರೇಲ್ ಸೇನೆ ದಾಳಿ ನಡೆಸಿದ್ದು, ಹಮಾಸ್ ಅಧಿಕಾರಿ ಸಯೀದ್ ಆತಲ್ಲಾಹ ಅಲಿ ಮತ್ತು ಕುಟುಂಬದ ಸದಸ್ಯರು ಮೃತಪಟ್ಟಿದ್ದಾರೆ ಎಂದು ಹಮಾಸ್ ಶನಿವಾರ ತಿಳಿಸಿದೆ.

ಬೆದ್ದಾವಿಯಲ್ಲಿ ಇರುವ ನಿರಾಶ್ರಿತ ಶಿಬಿರದ ದಾಳಿ ನಡೆಸಿದೆ. ಸಯೀದ್, ಅವರ ಪತ್ನಿ ಶ್ಯಾಮಾ ಅಜಂ ಮತ್ತು ಇಬ್ಬರು ಪುತ್ರಿಯರು ಹತರಾಗಿದ್ದಾರೆ ಎಂದು ಹಮಾಸ್ ತಿಳಿಸಿದೆ.

97 ಮಂದಿ ಸ್ಥಳಾಂತರ: ಲೆಬನಾನ್‌ನಿಂದ 97 ಮಂದಿಯನ್ನು ಕರೆತಂದ ಸೇನಾ ವಿಮಾನ ದಕ್ಷಿಣ ಕೊರಿಯಾಗೆ ಬಂದಿಳಿಯಿತು. ದೇಶದ ಇನ್ನೂ 30 ಪ್ರಜೆಗಳು ಲೆಬನಾನ್‌ನಲ್ಲಿ ಉಳಿದಿದ್ದಾರೆ ಎಂದು ದಕ್ಷಿಣ ಕೊರಿಯಾ ವಿದೇಶಾಂಗ ಸಚಿವಾಲಯ ತಿಳಿಸಿದೆ. ಸಂಘರ್ಷಪೀಡಿತ ಪ್ರದೇಶದಿಂದ ದೇಶದ ಪ್ರಜೆಗಳನ್ನು ಕರೆತರಲು ಅಧ್ಯಕ್ಷ ಯೂನ್ ಸುಕ್ ಯೊಲ್ ಬುಧವಾರ ಸೂಚಿಸಿದ್ದರು.

ಇಸ್ರೇಲ್ ಸೇನೆಯ ವಾಯುದಾಳಿಯಿಂದಾಗಿ ಲೆಬನಾನ್‌ನ ಅಬ್ಲಾ ಪಟ್ಟಣದಲ್ಲಿ ಕಟ್ಟಡ ಹಾನಿಗೊಂಡಿದೆ ಎಎಫ್‌ಪಿ ಚಿತ್ರ

'ಅಧ್ಯಕ್ಷೀಯ ಚುನಾವಣೆಗೆ ಪ್ರಭಾವ ಬೀರಲು ಯತ್ನ'

ವಾಷಿಂಗ್ಟನ್ (ಎಪಿ): 'ಅಮೆರಿಕದ ಅಧ್ಯಕ್ಷೀಯ ಚುನಾವಣೆ ಮೇಲೆ ಪ್ರಭಾವ ಬೀರಲೆಂದೇ ಶಾಂತಿ ಒಪ್ಪಂದವನ್ನು ಇಸ್ರೇಲ್ ತಡೆ ಹಿಡಿದಿದೆಯೇ ಎಂದು ಗೊತ್ತಿಲ್ಲ' ಎಂದು ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ. ಶನಿವಾರ ಶ್ವೇತಭವನದಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ಸೆನೆಟರ್ ಕ್ರಿಸ್ ಮುರ್ಫಿ ಹೇಳಿಕೆಗೆ ಪ್ರತಿಕ್ರಿಯಿಸಿದರು.

'ಇಸ್ರೇಲ್‌ಗೆ ನನ್ನ ನೇತೃತ್ವದ ಸರ್ಕಾರಕ್ಕಿಂತಲೂ ಹೆಚ್ಚಿನ ಸಹಾಯ ಯಾರೂ ಮಾಡಲು ಸಾಧ್ಯವಿಲ್ಲ. ಬೆಂಜಮಿನ್ ಇದನ್ನು ಸ್ಮರಿಸಬೇಕು' ಎಂದು ಪ್ರತಿಪಾದಿಸಿದರು. ಗಾಜಾ ಪಟ್ಟಿಯಲ್ಲಿ ಕದನ ವಿರಾಮ ಘೋಷಿಸಬೇಕು ಎಂಬ ಅಮೆರಿಕದ ಆಗ್ರಹಕ್ಕೆ ಇಸ್ರೇಲ್ ಸ್ಪಂದಿಸಿಲ್ಲ.

ಜಾನುವಾರುಗಳಿಗೆ ಜಿನೊಮಿಕ್ ಚಿಪ್ ಅಳವಡಿಕೆ

ವಾಶಿಮ್ (ಪಿಟಿಐ): ಮಹಾರಾಷ್ಟ್ರದ ವಾಶಿಮ್‌ನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ಜಾನುವಾರುಗಳಿಗೆ ಏಕೀಕೃತ ಜಿನೊಮಿಕ್ ಚಿಪ್‌ಗಳ ಅಳವಡಿಕೆ ಯೋಜನೆಗೆ ಚಾಲನೆ ನೀಡಿದರು.

ಈ ಯೋಜನೆಯಡಿ ಹಸುಗಳಿಗೆ 'ಗೌಚಿಪ್' ಮತ್ತು ಎಮ್ಮೆಗಳಿಗೆ 'ಮಹಿಷ ಚಿಪ್' ಅಳವಡಿಸಲಾಗುತ್ತದೆ. ಪಶು ಸಂಗೋಪನಾ ಇಲಾಖೆಯು ಈ ಚಿಪ್‌ಗಳನ್ನು ಅಭಿವೃದ್ಧಿಪಡಿಸಿದೆ.

ಚಿಪ್ ಅಳವಡಿಕೆಯಿಂದ ಜಾನುವಾರು ವಂಶವಾಹಿ ವಿಶ್ಲೇಷಣೆ ಮಾಡಬಹುದಾಗಿದೆ. ಇದರಿಂದ ಭವಿಷ್ಯದಲ್ಲಿ ಉತ್ತಮ ಸಾಮರ್ಥ್ಯವಿರುವ ಎತ್ತುಗಳನ್ನು ಅವುಗಳ ಹದಿಹರೆಯದಲ್ಲಿಯೇ ಗುರುತಿಸಬಹುದಾಗಿದೆ. ಕರುಗಳ ಲಿಂಗವನ್ನು ಪೂರ್ವ ನಿರ್ಧರಿಸಲು ನೆರವಾಗುವ ಹಸುಗಳ ವೀರ್ಯ ವಿಂಗಡಣೆ ತಂತ್ರಜ್ಞಾನಕ್ಕೂ ಚಾಲನೆ ನೀಡಿದರು. ಪ್ರತಿ ಡೋಸ್‌ಗೆ ₹200 ದರ ನಿಗದಿಯಾಗಿದೆ.

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹211
ಆರ್‌ಎಸ್‌ಎಸ್-5	₹207
ಗುಡ್ ಲಾಟ್	₹197

(ಪ್ರತಿ ಕೆ.ಜಿಗೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100ಕ್ಕೆ	₹550
12 ಕ್ಕೆ	₹75

ಮೈಸೂರು

100ಕ್ಕೆ	₹555

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹235-520
ದ್ವಿತಳಿ (ಬಿ.ವಿ)	₹322-666

ಬುರ್ಕಿನಾ ಫಾಸೊ: ಒಂದೇ ಗಂಟೆಯಲ್ಲಿ 600 ಮಂದಿ ಹತ್ಯೆ

ಔಗಡೌಗ್: 'ದಕ್ಷಿಣ ಆಫ್ರಿಕಾ ಖಂಡದ ಬುರ್ಕಿನಾ ಫಾಸೊ ರಾಷ್ಟ್ರದಲ್ಲಿ ಅಲ್‌ಕೈದಾ ಬೆಂಬಲಿತ ಉಗ್ರರು ಆಗಸ್ಟ್ 24ರಂದು ಗುಂಡಿನ ದಾಳಿ ನಡೆಸಿ 600 ಮಂದಿಯನ್ನು ಹತ್ಯೆಗೈದಿದ್ದಾರೆ' ಎಂದು ಫ್ರೆಂಚ್‌ನ ಭದ್ರತಾ ಮೌಲ್ಯಮಾಪಕ ಘಟಕವು ವರದಿ ಮಾಡಿದೆ.

'ಉಗ್ರರಿಂದ ರಕ್ಷಿಸಿಕೊಳ್ಳಲು ಇಲ್ಲಿನ ಬರ್ಸಾಲೊಗೊ ಗ್ರಾಮಸ್ಥರು ಹೊರವಲಯದಲ್ಲಿ ಕಂದಕ ನಿರ್ಮಿಸಿದ್ದರು. ಇದರಿಂದ ಸಿಟ್ಟಾಗಿದ್ದ ಅಲ್ ಕೈದಾ ಬೆಂಬಲಿತ 'ಜಮಾತ್ ನುಸ್ರಾತ್– ಅಲ್ ಇಸ್ಲಾಂ–ವಾಲ್ ಮುಸ್ಲಿಮೀನ್' ಸಂಘಟನೆಯ ಉಗ್ರರು ಶಸ್ತ್ರಸಜ್ಜಿತರಾಗಿ ಬೈಕ್‌ಗಳಲ್ಲಿ ಗ್ರಾಮದ ಒಳಗೆ ನುಗ್ಗಿ ಮನಬಂದಂತೆ ಗುಂಡಿನ ದಾಳಿ ನಡೆಸಿದ್ದಾರೆ' ಎಂದು ಸಿಎನ್‌ಎನ್ ಸುದ್ದಿವಾಹಿನಿ ವರದಿ ಮಾಡಿದೆ.

'ಇಸ್ರೇಲ್' ಬಸ್ ಈಗ 'ಜೆರುಸಲೇಂ'

ಪ್ರಜಾವಾಣಿ ವಾರ್ತೆ

ಮಂಗಳೂರು: ಇಸ್ರೇಲ್ ಮೇಲಿನ ಅಭಿಮಾನದಿಂದ ಇಲ್ಲಿನ ಖಾಸಗಿ ಬಸ್ ಮಾಲೀಕರೊಬ್ಬರು ತಮ್ಮ ಬಸ್‌ಗೆ 'ಇಸ್ರೇಲ್' ಎಂದು ಹೆಸರಿಟ್ಟಿದ್ದರು. ಇದಕ್ಕೆ ಸಾಮಾಜಿಕ ಮಾಧ್ಯಮಗಳಲ್ಲಿ ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಬೇಸತ್ತ ಅವರು ಬಸ್ ಹೆಸರನ್ನು 'ಜೆರುಸಲೇಂ' ಎಂದು ಈಚೆಗೆ ಬದಲಾಯಿಸಿದ್ದಾರೆ.

ಕಟೀಲಿನ ಲೆಸ್ಟರ್ ಅವರು 12 ವರ್ಷದಿಂದ ಇಸ್ರೇಲ್‌ನಲ್ಲಿ ಉದ್ಯೋಗಿಯಾಗಿದ್ದಾರೆ. ಮೂಡುಬಿದಿರೆ - ಕಿನ್ನಿಗೋಳಿ- ಕಟೀಲು- ಮೂಲ್ಕಿ ಮಾರ್ಗದಲ್ಲಿ ಸಂಚರಿಸುತ್ತಿದ್ದ ಹಳೆ ಬಸ್ ಒಂದನ್ನು ಈಚೆಗೆ ಖರೀದಿಸಿದ್ದ ಅವರು ಅದಕ್ಕೆ 'ಇಸ್ರೇಲ್' ಎಂದು ಹೆಸರಿಟ್ಟಿದ್ದರು. ಇಸ್ರೇಲ್- ಪ್ಯಾಲೆಸ್ಟೀನ್, ಇಸ್ರೇಲ್– ಇರಾನ್ ನಡುವೆ ಸಂಘರ್ಷ ಉಲ್ಬಣಗೊಳ್ಳುತ್ತಿದ್ದಂತೆಯೇ, ಸಾಮಾಜಿಕ ಮಾಧ್ಯಮಗಳಲ್ಲಿ ಕೆಲವರು ಬಸ್ ಹೆಸರು 'ಇಸ್ರೇಲ್' ಎಂದಿರುವುದಕ್ಕೆ ಆಕ್ಷೇಪಿಸಿದ್ದರು.

'ನನಗೆ ಬದುಕು ನೀಡಿದ್ದೇ ಇಸ್ರೇಲ್. ನಮ್ಮ ಪವಿತ್ರ ಭೂಮಿ ಜೆರುಸಲೇಂ ಇರುವ ದೇಶವಿದು. ಇಲ್ಲಿನ ವ್ಯವಸ್ಥೆ ನನಗೆ ತುಂಬಾ ಇಷ್ಟ. ಈ ಅಭಿಮಾನದಿಂದಾಗಿ, ಬಸ್‌ಗೆ 'ಇಸ್ರೇಲ್ ಟ್ರಾವೆಲ್ಸ್' ಎಂದು ಹೆಸರು ಇಟ್ಟಿದ್ದೆ' ಎಂದು ಲೆಸ್ಟರ್ ತಿಳಿಸಿದರು. ಈಗಲೂ ಅವರು ಇಸ್ರೇಲ್‌ನಲ್ಲಿ ಉದ್ಯೋಗದಲ್ಲಿದ್ದು, ಕಟೀಲಿನಲ್ಲಿರುವ ಅವರ ಕುಟುಂಬದವರು ಬಸ್‌ನ ನಿರ್ವಹಣೆ ಮಾಡುತ್ತಿದ್ದಾರೆ.

ಬಸ್‌ನ ಹೆಸರನ್ನು 'ಜೆರುಸಲೇಂ' ಎಂದು ಬದಲಾಯಿಸಲಾಗಿದೆ

ಚೆಸ್: ಪ್ರಶಸ್ತಿ ಖಚಿತಪಡಿಸಿಕೊಂಡ ಲುಬೋವ್

ಬೆಂಗಳೂರು: ಒಂದು ಸುತ್ತಿನ ಆಟ ಬಾಕಿ ಇರುವಂತೆ ಹಾಲಿ ಚಾಂಪಿಯನ್ ಉಕ್ರೇನ್ ಝಿಲ್ಟ್ಸೋವಾ ಲಿಸೆಂಕೊ ಲುಬೋವ್ ಅವರು ಐಬಿಸಿಎ 12ನೇ ವಿಶ್ವ ಮಹಿಳಾ ಅಂಧರ ಚೆಸ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಖಚಿತಪಡಿಸಿಕೊಂಡರು.

ನಗರದ ಚಾನ್ಸರಿ ಪೆವಿಲಿಯನ್‌ನಲ್ಲಿ ನಡೆಯುತ್ತಿರುವ ಈ ಕೂಟದಲ್ಲಿ ಶನಿವಾರ, ಲುಬೋವ್ ಅವರು ಎಂಟನೇ ಸುತ್ತಿನಲ್ಲಿ ವಿಯೆಟ್ನಾಂನ ಫಾಮ್ ಥಿ ಹುವಾಂಗ್ ಅವರನ್ನು ಸೋಲಿಸಿದರು. 12 ವರ್ಷಗಳಿಂದ ಪ್ರಶಸ್ತಿ ಗೆಲ್ಲುತ್ತ ಬಂದಿರುವ ಲುಬೋವ್ ಎಂಟು ಸುತ್ತುಗಳಿಂದ ಗರಿಷ್ಠ 8 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ.

ಪೋಲೆಂಡ್ ಆಟಗಾರ್ತಿ ಇಗೆಮನ್ ಎಮಿಲಿಯಾ 6.5 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಪೋಲೆಂಡ್‌ನ ಮತ್ತೊಬ್ಬ ಸ್ಪರ್ಧಿ ಟ್ರಿಯಾನ್‌ಸ್ಕಾ ಎಮಿಲಿಯಾ 6 ಪಾಯಿಂಟ್‌ಗಳೊಂದಿಗೆ ಮೂರನೇ ಸ್ಥಾನದಲ್ಲಿದ್ದಾರೆ.

ಜೂಲಿಯಾಗೆ ಅಗ್ರಸ್ಥಾನ: ಜೂನಿಯರ್ ವಿಭಾಗದಲ್ಲಿ ಎರಡನೇ ಶ್ರೇಯಾಂಕದ ಸಾಲೊಮನ್ ಜೂಲಿಯಾ (ಪೋಲೆಂಡ್) ಎಂಟನೇ ಸುತ್ತಿನ ನಂತರ 7 ಪಾಯಿಂಟ್‌ಗಳೊಡನೆ ಅಗ್ರಸ್ಥಾನ ಉಳಿಸಿಕೊಂಡಿದ್ದಾರೆ. ಜೂಲಿಯಾ ಅವರು ಭಾರತದ ರಾಹುಲ್ ವಫೇಲಾ ವಿರುದ್ಧ ಜಯಗಳಿಸಿದರು. ಅಗ್ರ ಶ್ರೇಯಾಂಕದ ಪೋಲೆಂಡ್‌ನ ರೇಸಿಸ್ ಮೈಕೆಲ್ (6.5), ಭಾರತದ ರಾಹುಲ್ ಸಾಹ್ನಿ ವಿರುದ್ಧ ಗೆಲುವು ದಾಖಲಿಸಿ ಎರಡನೇ ಸ್ಥಾನದಲ್ಲಿ ಮುಂದುವರಿದರು. ಈ ವಿಭಾಗದಲ್ಲಿ 12 ಮಂದಿ ಕಣದಲ್ಲಿದ್ದು, ಜೂಲಿಯಾ ಏಕಮಾತ್ರ ಮಹಿಳಾ ಸ್ಪರ್ಧಿ ಎನಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಸಂಕ್ಷಿಪ್ತ ಸುದ್ದಿ

ಟೆನಿಸ್: ಆರಾಧ್ಯಗೆ ಕಿರೀಟ

ಬೆಂಗಳೂರು: ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಕರ್ನಾಟಕದ ಆರಾಧ್ಯ ಕ್ಷಿತಿಜ್, ನವದೆಹಲಿಯ ಡಿಎಲ್‌ಟಿಎ ಕಾಂಪ್ಲೆಕ್ಸ್‌ನಲ್ಲಿ ನಡೆದ 29ನೇ ಫೆನೆಸ್ಟಾ ಓಪನ್ ರಾಷ್ಟ್ರೀಯ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ 18 ವರ್ಷದೊಳಗಿನವರ ಬಾಲಕರ ವಿಭಾಗದ ಪ್ರಶಸ್ತಿ ಗೆದ್ದರು.

ಶನಿವಾರ ನಡೆದ ಫೈನಲ್ ಹಣಾಹಣಿಯಲ್ಲಿ ಆರಾಧ್ಯ 5-7, 7-5, 6-4 ರಿಂದ ಮಣಿಪುರದ ಶಂಕರ್ ಹೈಸ್ನಾಮ್ ಅವರನ್ನು ಸೋಲಿಸಿದರು. ಮೊದಲ ಸೆಟ್‌ನಲ್ಲಿ ಹಿನ್ನಡೆ ಅನುಭವಿಸಿದ್ದ ಕರ್ನಾಟಕದ ಆಟಗಾರ ನಂತರದ ಸೆಟ್‌ಗಳಲ್ಲಿ ಲಯ ಕಂಡುಕೊಂಡು ಗೆಲುವು ಸಾಧಿಸಿದರು.

18 ವರ್ಷದೊಳಗಿನ ಬಾಲಕಿಯರ ಪ್ರಶಸ್ತಿಯನ್ನು ಮಹಾರಾಷ್ಟ್ರದ ಪ್ರಿಶಾ ಶಿಂಧೆ ಗೆದ್ದರು. ಅವರು ಫೈನಲ್‌ನಲ್ಲಿ 1-6, 7-6, 6-2ರಿಂದ ತಮಿಳುನಾಡಿನ ದಿಯಾ ರಮೇಶ್ ಅವರನ್ನು ಸೋಲಿಸಿದರು.

ಶ್ರೇಯಾಂಕ ರಹಿತ ತಮಿಳುನಾಡಿನ ರೆತಿನ್ ಪ್ರಣವ್ ಆರ್.ಎಸ್ ಮತ್ತು ಅಗ್ರ ಶ್ರೇಯಾಂಕದ ಗುಜರಾತ್‌ನ ವೈದೇಹಿ ಚೌಧರಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ಓಪನ್ ವಿಭಾಗದ ಪ್ರಶಸ್ತಿಗಳನ್ನು ಗೆದ್ದುಕೊಂಡರು.

ಸ್ನೂಕರ್: ಸಮೀಕ್ಷಾಗೆ ಪ್ರಶಸ್ತಿ

ಬೆಂಗಳೂರು: ಸಮೀಕ್ಷಾ ದೇವನ್ ರಾಜ್ಯ ರ‍್ಯಾಂಕಿಂಗ್ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಟೂರ್ನಿಯ ಜೂನಿಯರ್ ಬಾಲಕಿಯರ ಸ್ನೂಕರ್ ಫೈನಲ್‌ನಲ್ಲಿ 2–1ರಿಂದ ಹರ್ಷಿತಾ ಭಾವಿ ಅವರನ್ನು ಸೋಲಿಸಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಕರ್ನಾಟಕ ರಾಜ್ಯ ಬಿಲಿಯರ್ಡ್ಸ್ ಸಂಸ್ಥೆಯಲ್ಲಿ ಶನಿವಾರ ನಡೆದ ಪಂದ್ಯದ ಮೊದಲ ಸುತ್ತಿನಲ್ಲಿ ಸಮೀಕ್ಷಾ 54-33ರಿಂದ ಮೇಲುಗೈ ಸಾಧಿಸಿದರು. ಆದರೆ, ಎರಡನೇ ಸುತ್ತನ್ನು ಹರ್ಷಿತಾ 43-35ರಿಂದ ವಶಮಾಡಿಕೊಂಡರು. ಆದರೆ, ನಿರ್ಣಾಯಕ ಸುತ್ತಿನಲ್ಲಿ ಮತ್ತೆ ಸಮೀಕ್ಷಾ ಮೇಲುಗೈ ಸಾಧಿಸಿದರು.

ಆರ್ಚರಿ: ಭಾರತಕ್ಕೆ ಬೆಳ್ಳಿ

ನವದೆಹಲಿ (ಪಿಟಿಐ): ಭರವಸೆಯ ಬಿಲ್ಗಾರ್ತಿ ವೈಷ್ಣವಿ ಪವಾರ್ ಅವರ ನಿಖರ ಗುರಿಯ ನೆರವಿನಿಂದ ಭಾರತ ತಂಡವು ಚೀನಾ ತೈಪೆಯಲ್ಲಿ ನಡೆಯುತ್ತಿರುವ ಏಷ್ಯನ್ ಯೂತ್ (18 ವರ್ಷದೊಳಗಿನವರ) ಆರ್ಚರಿ ಚಾಂಪಿಯನ್‌ಷಿಪ್‌ನ ರಿಕರ್ವ್ ಮಹಿಳೆಯರ ವಿಭಾಗದಲ್ಲಿ ಬೆಳ್ಳಿ ಪದಕ ಜಯಿಸಿತು.

ವೈಷ್ಣವಿ, ಪ್ರಾಂಜಲ್ ಥೋಲಿಯಾ ಮತ್ತು ಜನ್ನತ್ ಅವರ ಸಂಯೋಜನೆಯ ತಂಡ ಈ ಸಾಧನೆ ಮಾಡಿದೆ.

ಗ್ವಾಲಿಯರ್‌ನಲ್ಲಿ ಭಾರತ–ಬಾಂಗ್ಲಾ ಮೊದಲ ಟಿ20 ಪಂದ್ಯ ಇಂದು

ವೇಗಿ ಮಯಂಕ್ ಮೇಲೆ ಕಣ್ಣು

ಗ್ವಾಲಿಯರ್ (ಪಿಟಿಐ): ಹೋದ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಸಂಚಲನ ಮೂಡಿಸಿದ್ದ ವೇಗದ ಬೌಲರ್ ಮಯಂಕ್ ಯಾದವ್ ಅವರು ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ಗೆ ಪದಾರ್ಪಣೆ ಮಾಡಲು ಸಜ್ಜಾಗಿದ್ದಾರೆ.

ಪ್ರತಿ ಗಂಟೆಗೆ 150 ಕಿ.ಮೀ ವೇಗದಲ್ಲಿ ಎಸೆತಗಳನ್ನು ಹಾಕುವ ಮಯಂಕ್ ಭಾನುವಾರ ಇಲ್ಲಿ ನಡೆಯಲಿರುವ ಬಾಂಗ್ಲಾದೇಶ ಎದುರಿನ ಟಿ20 ಪಂದ್ಯದಲ್ಲಿ ಆಡಲಿದ್ದಾರೆ. ತಂಡದ ಅನುಭವಿ ಬೌಲರ್‌ಗಳು ವಿಶ್ರಾಂತಿ ಪಡೆದಿರುವುದರಿಂದ ಮಯಂಕ್ ಅವರಿಗೆ ಅವಕಾಶ ಸಿಗುವುದು ಬಹುತೇಕ ಖಚಿತವಾಗಿದೆ. ಐಪಿಎಲ್ ಸಂದರ್ಭದಲ್ಲಿ ಗಾಯದ ಸಮಸ್ಯೆಯಿಂದ ಬಳಲಿದ್ದ ಮಯಂಕ್ ಚಿಕಿತ್ಸೆಗೆ ತೆರಳಿದ್ದರು. ಚೇತರಿಸಿಕೊಂಡ ನಂತರ ಕ್ರಿಕೆಟ್‌ಗೆ ಮರಳಿದ್ದಾರೆ. ಬಾಂಗ್ಲಾ ಎದುರಿನ ಮೂರು ಪಂದ್ಯಗಳ ಸರಣಿಯು ಮಯಂಕ್ ಅವರಿಗೆ ಫಿಟ್‌ನೆಸ್ ಪರೀಕ್ಷೆಯ ವೇದಿಕೆಯಾಗಿದೆ.

ದೆಹಲಿಯ ವೇಗಿ ಹರ್ಷಿತ್ ರಾಣಾ ಮತ್ತು ಆಲ್‌ರೌಂಡರ್ ನಿತೀಶ್ ಕುಮಾರ್ ಕೂಡ ಭಾರತ ತಂಡದಲ್ಲಿ ಪದಾರ್ಪಣೆ ಮಾಡಲು ಸಿದ್ಧರಾಗಿದ್ದಾರೆ. ಈಚೆಗೆ ಜಿಂಬಾಬ್ವೆ ಎದುರಿನ ಸರಣಿಯಲ್ಲಿ ಆಡಲು ಹರ್ಷಿತ್ ಆಯ್ಕೆಯಾಗಿದ್ದರು. ಅದರ ನಂತರ ಗಾಯಗೊಂಡಿದ್ದ ಅವರಿಗೆ ಸರಣಿಯಲ್ಲಿ ಆಡಲು ಸಾಧ್ಯವಾಗಿರಲಿಲ್ಲ. ಇದೇ ತಿಂಗಳು ನ್ಯೂಜಿಲೆಂಡ್ ಎದುರು ನಡೆಯಲಿರುವ ಟೆಸ್ಟ್ ಸರಣಿಯಲ್ಲಿ ಆಡುವುದಕ್ಕೆ ಆದ್ಯತೆ ನೀಡಿರುವ ಪ್ರಮುಖ ಆಟಗಾರರಾದ ಶುಭಮನ್ ಗಿಲ್, ರಿಷಭ್ ಪಂತ್, ಯಶಸ್ವಿ ಜೈಸ್ವಾಲ್, ಮೊಹಮ್ಮದ್ ಸಿರಾಜ್ ಮತ್ತು ಅಕ್ಷರ್ ಪಟೇಲ್ ಅವರಿಗೆ ಈ ಟಿ20 ಸರಣಿಯಿಂದ ವಿಶ್ರಾಂತಿ ನೀಡಲಾಗಿದೆ.

ಸೂರ್ಯಕುಮಾರ್ ಯಾದವ್ ನಾಯಕತ್ವದ ತಂಡದಲ್ಲಿರುವ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ, ವೇಗಿ ಅರ್ಷದೀಪ್ ಸಿಂಗ್, ಬ್ಯಾಟರ್ ರಿಯಾನ್ ಪರಾಗ್, ವಿಕೆಟ್‌ಕೀಪರ್ ಸಂಜು ಸ್ಯಾಮ್ಸನ್ ಅವರ ಮೇಲೆ ಹೆಚ್ಚು ನಿರೀಕ್ಷೆ ಇದೆ. ತಂಡದಲ್ಲಿರುವ ಯುವ ಆಟಗಾರರಿಗೆ ಆಯ್ಕೆಗಾರರ ಗಮನ ಸೆಳೆಯಲು ಇದು ಸದಾವಕಾಶ.

ದುಬೆ ಬದಲಿಗೆ ವರ್ಮಾ: ಆಲ್‌ರೌಂಡರ್ ಶಿವಂ ದುಬೆ ಬೆನ್ನುನೋವಿನ ಕಾರಣದಿಂದ ಬಾಂಗ್ಲಾದೇಶ ವಿರುದ್ಧದ ಟಿ20 ಸರಣಿಯಿಂದ ಹೊರಗುಳಿದಿದ್ದಾರೆ. ಅವರ ಬದಲು ಎಡಗೈ ಬ್ಯಾಟರ್ ತಿಲಕ್ ವರ್ಮಾ ತಂಡವನ್ನು ಸೇರಿಕೊಳ್ಳಲಿದ್ದಾರೆ.

ಟೆಸ್ಟ್ ಸರಣಿಯಲ್ಲಿ ಸೋತಿರುವ ಪ್ರವಾಸಿ ಬಾಂಗ್ಲಾ ತಂಡವು ಅನುಭವಿ ಆಲ್‌ರೌಂಡರ್ ಶಕೀಬ್ ಅಲ್ ಹಸನ್ ಅವರಿಲ್ಲದೇ ಟಿ20 ಪಂದ್ಯದಲ್ಲಿ ಕಣಕ್ಕಿಳಿಯುತ್ತಿದೆ.

ಪಂದ್ಯ ಆರಂಭ: ರಾತ್ರಿ 7
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ

ಬಲಾಬಲ (ಟಿ20)	
ಒಟ್ಟು ಮುಖಾಮುಖಿ	14
ಭಾರತ ಗೆಲುವು	13
ಬಾಂಗ್ಲಾ ಗೆಲುವು	1

ಸೂರ್ಯಕುಮಾರ್ ಯಾದವ್
ಮಯಂಕ್ ಯಾದವ್

ಗ್ವಾಲಿಯರ್‌ನಲ್ಲಿ 14 ವರ್ಷದ ನಂತರ ಪಂದ್ಯ

ಶಾಸ್ತ್ರೀಯ ಸಂಗೀತದ ಊರು ಗ್ವಾಲಿಯರ್ ನಗರದ ಹೊರವಲಯದಲ್ಲಿ ನಿರ್ಮಾಣವಾಗಿರುವ ಶ್ರೀಮಂತ ಮಾಧವರಾವ್ ಸಿಂಧಿಯಾ ಕ್ರೀಡಾಂಗಣದಲ್ಲಿ ಈ ಪಂದ್ಯ ನಡೆಯಲಿದೆ. ಈ ಕ್ರೀಡಾಂಗಣದಲ್ಲಿ ಆಯೋಜನೆಯಾಗಿರುವ ಮೊದಲ ಅಂತರರಾಷ್ಟ್ರೀಯ ಪಂದ್ಯ ಇದಾಗಿದೆ.

ಅಲ್ಲದೇ ಗ್ವಾಲಿಯರ್‌ನಲ್ಲಿ 14 ವರ್ಷಗಳ ನಂತರ ನಡೆಯುತ್ತಿರುವ ಅಂತರರಾಷ್ಟ್ರೀಯ ಪಂದ್ಯವೂ ಹೌದು. 2010ರಲ್ಲಿ ಇಲ್ಲಿರುವ ಕ್ಯಾಪ್ಟನ್ ರೂಪ್ ಸಿಂಗ್ ಕ್ರೀಡಾಂಗಣದಲ್ಲಿ ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ನಡುವಣ ಏಕದಿನ ಪಂದ್ಯ ನಡೆದಿತ್ತು. ಆಗ ಸಚಿನ್ ತೆಂಡೂಲ್ಕರ್ ಅವರು ದ್ವಿಶತಕ ಬಾರಿಸಿ ವಿಶ್ವದಾಖಲೆ ನಿರ್ಮಿಸಿದ್ದರು.

ಹೋಟೆಲ್‌ನಲ್ಲಿಯೇ ಬಾಂಗ್ಲಾ ಆಟಗಾರರ ಪ್ರಾರ್ಥನೆ

ಬಾಂಗ್ಲಾದೇಶದ ಆಟಗಾರರು ಶುಕ್ರವಾರದ ಪ್ರಾರ್ಥನೆ ಸಲ್ಲಿಸಲು ನಗರದ ಮೋತಿ ಮಸೀದಿಗೆ ತೆರಳಲಿಲ್ಲ. ಬದಲಿಗೆ ತಮ್ಮ ಹೋಟೆಲ್‌ನಲ್ಲಿಯೇ ಪ್ರಾರ್ಥನೆ ಸಲ್ಲಿಸಿದರು.

‘ಆಟಗಾರರು ಮೋತಿ ಮಸೀದಿಗೆ ತೆರಳಿ ಪ್ರಾರ್ಥನೆ ಸಲ್ಲಿಸಲು ಬಿಗಿ ಭದ್ರತಾ ವ್ಯವಸ್ಥೆ ಮಾಡಲಾಗಿತ್ತು. ಆದರೆ ತಂಡವು ಹೋಟೆಲ್‌ನಲ್ಲಿಯೇ ಇರಲು ನಿರ್ಧರಿಸಿತು’ ಎಂದು ಗ್ವಾಲಿಯರ್ ವಲಯ ಐಜಿಪಿ ಅರವಿಂದ್ ಸಕ್ಸೆನಾ ತಿಳಿಸಿದ್ದಾರೆ.

‘ಬಾಂಗ್ಲಾದೇಶದಲ್ಲಿ ಈಚೆಗೆ ನಡೆದ ರಾಜಕೀಯ ಸಂಘರ್ಷದ ಸಂದರ್ಭದಲ್ಲಿ ಅಲ್ಲಿಯ ಹಿಂದೂಗಳ ಮೇಲೆ ದೌರ್ಜನ್ಯ ಎಸಗಲಾಗಿದೆ. ಆದ್ದರಿಂದ ಗ್ವಾಲಿಯರ್‌ನಲ್ಲಿ ಬಾಂಗ್ಲಾದೇಶಕ್ಕೆ ಆಡಲು ಅವಕಾಶ ನೀಡಬಾರದು’ ಎಂದು ಕೆಲವು ಸಂಘಟನೆಗಳು ಆಗ್ರಹಿಸಿದ್ದವು. ಪಂದ್ಯಕ್ಕೆ ತಡೆಯೊಡ್ಡುವುದಾಗಿಯೂ ಬೆದರಿಕೆ ಹಾಕಿದ್ದವು. ಆದ್ದರಿಂದ ನಗರದಲ್ಲಿ ವಿಶೇಷ ಭದ್ರತಾ ವ್ಯವಸ್ಥೆ ಮಾಡಲಾಗಿದೆ.

ಶೂಟಿಂಗ್: ದಿವಾನ್ಶಿಗೆ ಚಿನ್ನದ ಪದಕ

ಲಿಮಾ, ಪೆರು (ಪಿಟಿಐ): ಭಾರತದ ಶೂಟರ್ ದಿವಾನ್ಶಿ ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವ ಚಾಂಪಿಯನ್‌ಷಿಪ್‌ನ ವೈಯಕ್ತಿಕ ಮಹಿಳೆಯರ 25 ಮೀಟರ್ ಸ್ಟ್ಯಾಂಡರ್ಡ್ ಪಿಸ್ತೂಲ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರು.

ಭಾರತದ ಶೂಟರ್‌ಗಳು ಶುಕ್ರವಾರ ಐದು ಪದಕಗಳನ್ನು ಗೆದ್ದಿದ್ದಾರೆ. ಈ ಮೂಲಕ ಭಾರತವು 21 ಪದಕಗಳೊಂದಿಗೆ (13 ಚಿನ್ನ, 2 ಬೆಳ್ಳಿ ಮತ್ತು 6 ಕಂಚು) ಅಗ್ರಸ್ಥಾನ ಕಾಯ್ದುಕೊಂಡಿದೆ. 25 ಮೀಟರ್ ಸ್ಟ್ಯಾಂಡರ್ಡ್ ಪಿಸ್ತೂಲ್ ಸ್ಪರ್ಧೆಯಲ್ಲಿ ಮೂರೂ ಪದಕಗಳು ಭಾರತದ ಪಾಲಾದವು. ಫೈನಲ್ ಸುತ್ತಿನಲ್ಲಿ ದಿವಾಶ್ನಿ 564 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನ ಪಡೆದರು. ಪರೀಶಾ ಗುಪ್ತಾ (559) ಮತ್ತು ಮಾನ್ವಿ ಜೈನ್ (557) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು. ಪುರುಷರ ಸ್ಪರ್ಧೆಯಲ್ಲಿ ಭಾರತದ ಸೂರಜ್ ಶರ್ಮಾ ಚಿನ್ನ ಗೆದ್ದರು. ಭಾರತದ ಮುಕೇಶ್ ನೆಲವಳ್ಳಿ ಕಂಚು ಗೆದ್ದರು.

ನವರಾತ್ರಿಯನ್ನು ಆಚರಿಸುತ್ತಿದ್ದಾರೆ !

ಮಹಿಳಾ ವಿಶ್ವಕಪ್: ಭಾರತ–ಪಾಕಿಸ್ತಾನ ಹಣಾಹಣಿ ಇಂದು

ಹರ್ಮನ್ ಪಡೆ ಮುಂದೆ ಕಠಿಣ ಪರೀಕ್ಷೆ

ದುಬೈ(ಪಿಟಿಐ): ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ತಂಡವು ಟಿ20 ವಿಶ್ವಕಪ್ ಮಹಿಳಾ ಕ್ರಿಕೆಟ್ ಟೂರ್ನಿಯ ಎ ಗುಂಪಿನ ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು ಎದುರಿಸಲಿದೆ.

ಭಾನುವಾರ ನಡೆಯಲಿರುವ ಈ ಪಂದ್ಯಕ್ಕಾಗಿ ಕೌರ್ ಬಳಗವು ಅಪಾರ ಒತ್ತಡದಲ್ಲಿರುವುದಂತೂ ನಿಜ. ಏಕೆಂದರೆ; ಗುಂಪಿನ ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ ಎದುರು ತಂಡವು ಹೀನಾಯವಾಗಿ ಸೋತಿತ್ತು. ಅದರಿಂದಾಗಿ ಜಯದ ಹಾದಿಗೆ ಮರಳುವ ಒತ್ತಡ ಒಂದೆಡೆಯಾದರೆ, ಬದ್ಧ ಎದುರಾಳಿಯಾಗಿರುವ ಪಾಕ್ ತಂಡದ ಎದುರು ವಿಫಲವಾಗದಿರುವ ಸವಾಲು ಇನ್ನೊಂದೆಡೆ ಇದೆ.

ಭಾರತ ತಂಡವು ಗುಂಪು ಹಂತದಲ್ಲಿ ಪಾಕ್ ಎದುರಿನ ಪಂದ್ಯದ ನಂತರದ ಪಂದ್ಯಗಳಲ್ಲಿ ಶ್ರೀಲಂಕಾ ಮತ್ತು ಆಸ್ಟ್ರೇಲಿಯಾ ತಂಡಗಳನ್ನೂ ಎದುರಿಸಬೇಕಿದೆ. ಅಷ್ಟೇ ಅಲ್ಲ. ಎಲ್ಲ ಪಂದ್ಯಗಳಲ್ಲಿ ಉತ್ತಮ ರನ್‌ರೇಟ್‌ನೊಂದಿಗೆ ಜಯಿಸಿದರೆ ಸೆಮಿಫೈನಲ್ ಹಾದಿ ಸುಗಮವಾಗಲಿದೆ.

ಪಾಕ್ ತಂಡವು ತನ್ನ ಮೊದಲ ಪಂದ್ಯದಲ್ಲಿ ಶ್ರೀಲಂಕಾ ಎದುರು ಜಯಿಸಿದ್ದು ಅಪಾರ ಆತ್ಮವಿಶ್ವಾಸದಲ್ಲಿದೆ. ಅದಕ್ಕಾಗಿ ತಂಡದ ಎಲ್ಲ ವಿಭಾಗ ಗಳಲ್ಲಿಯೂ ಆಟ ಸುಧಾರಣೆ ಮಾಡಿಕೊಳ್ಳುವ ಅಗತ್ಯವಿದೆ. ಕಿವೀಸ್ ಎದುರು ಆರಂಭದಲ್ಲಿ ಉತ್ತಮ ಬೌಲಿಂಗ್ ಮಾಡಿದ್ದ ಭಾರತದ ಬೌಲರ್‌ಗಳು ಕೊನೆಯ ಆರು ಓವರ್‌ಗಳಲ್ಲಿ ದುಬಾರಿಯಾಗಿದ್ದರು. ಫೀಲ್ಡಿಂಗ್ ಕೂಡ ದುರ್ಬಲವಾಗಿತ್ತು. ದೊಡ್ಡ ಮೊತ್ತದ ಗುರಿ ಬೆನ್ನಟ್ಟಿದ ತಂಡದ ಬ್ಯಾಟಿಂಗ್ ಕೂಡ ಕಳಪೆಯಾಗಿತ್ತು. ನಾಯಕಿ ಕೌರ್, ಅನುಭವಿಗಳಾದ ಸ್ಮೃತಿ ಮಂದಾನ, ಶಫಾಲಿ ವರ್ಮಾ ಮತ್ತು ಜೆಮಿಮಾ ರಾಡ್ರಿಗಸ್ ಸೇರಿದಂತೆ ಉಳಿದೆಲ್ಲ ಬ್ಯಾಟರ್‌ಗಳು ಕುಸಿದರು.

ಈ ಎಲ್ಲ ಲೋಪಗಳನ್ನು ಸುಧಾರಿಸಿಕೊಂಡು ಕಣಕ್ಕಿಳಿಯಬೇಕಿದೆ. ತಂಡದ ಮುಖ್ಯ ಕೋಚ್ ಅಮೋಲ್ ಮಜುಂದಾರ್ ಅವರಿಗೂ ಇದು ‘ಸತ್ವಪರೀಕ್ಷೆ’ಯಾಗಿದೆ. ತಂಡದಲ್ಲಿ ಮತ್ತು ಬ್ಯಾಟಿಂಗ್ ಕ್ರಮಾಂಕಗಳಲ್ಲಿ ಬದಲಾವಣೆಗಳಾಗುವ ನಿರೀಕ್ಷೆ ಇದೆ. ಬೌಲಿಂಗ್‌ನಲ್ಲಿ ಅರುಂಧತಿ ರೆಡ್ಡಿ ಇದ್ದುದರಲ್ಲಿ ಪರವಾಗಿಲ್ಲ. ಆದರೆ ಸ್ಪಿನ್ನರ್‌ಗಳಾದ ಶ್ರೇಯಾಂಕಾ ಪಾಟೀಲ, ದೀಪ್ತಿ ಶರ್ಮಾ ಅವರು ತಮ್ಮ ಲಯಕ್ಕೆ ಮರಳಬೇಕಿದೆ. 13 ಟಿ20 ಪಂದ್ಯಗಳಲ್ಲಿ 22 ವಿಕೆಟ್ ಗಳಿಸಿರುವ ಎಡಗೈ ಸ್ಪಿನ್ನರ್ ರಾಧಾ ಯಾದವ್ ಅವರಿಗೆ ಮೊದಲ ಪಂದ್ಯದಲ್ಲಿ ಆಡುವ ಅವಕಾಶ ಲಭಿಸಿರಲಿಲ್ಲ. ಅವರನ್ನು ಈ ಪಂದ್ಯದಲ್ಲಿ ಕಣಕ್ಕಿಳಿಸುವ ಸಾಧ್ಯತೆ ಇದೆ.

ಫಾತಿಮಾ ಸನಾ ನಾಯಕತ್ವದ ಪಾಕ್ ಬಳಗವು ಕಳೆದ ಪಂದ್ಯದಲ್ಲಿ ಆಡಿದ ತಂಡವನ್ನೇ ಉಳಿಸಿಕೊಳ್ಳುವ ಸಾಧ್ಯತೆ ಹೆಚ್ಚು.

ಭಾರತ ನಾಯಕಿ ಹರ್ಮನ್‌ಪ್ರೀತ್ ಕೌರ್ ಮತ್ತು ಸಹ ಆಟಗಾರ್ತಿಯರ ಅಭ್ಯಾಸ

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2024

ಬಲಾಬಲ (ಟಿ20)	
ಪಂದ್ಯ	15
ಭಾರತ ಜಯ	12
ಪಾಕಿಸ್ತಾನ ಜಯ	3

ವಿಶ್ವಕಪ್ ಮುಖಾಮುಖಿ	
ಪಂದ್ಯ	7
ಭಾರತ ಜಯ	5
ಪಾಕ್ ಗೆಲುವು	2

ಪಂದ್ಯ ಆರಂಭ: ಮಧ್ಯಾಹ್ನ 3.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಹಾಟ್‌ಸ್ಟಾರ್ ಆ್ಯಪ್

ತನುಷ್ ಅಮೋಘ ಶತಕ ಮುಂಬೈ ಮಡಿಲಿಗೆ ಇರಾನಿ ಕಪ್

ಲಖನೌ (ಪಿಟಿಐ): ಮುಂಬೈ ಕ್ರಿಕೆಟ್ ತಂಡವು 27 ವರ್ಷಗಳ ನಂತರ ಇರಾನಿ ಕಪ್ ಜಯಿಸಿತು. ತಂಡವು 15ನೇ ಬಾರಿ ಈ ಸಾಧನೆ ಮಾಡಿದೆ.

ಶನಿವಾರ ಮುಕ್ತಾಯವಾದ ಪಂದ್ಯದಲ್ಲಿ ಮುಂಬೈ ತಂಡವು ಭಾರತ ಇತರೆ ತಂಡದ ಎದುರು ಡ್ರಾ ಸಾಧಿಸುವಲ್ಲಿ ಸಫಲವಾಯಿತು. ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ್ದ ಮುನ್ನಡೆಯ ಆಧಾರದ ಮೇಲೆ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು. ಮುಂಬೈ ತಂಡವು ಕಳೆದ ಋತುವಿನಲ್ಲಿ ರಣಜಿ ಚಾಂಪಿಯನ್ ಕೂಡ ಆಗಿತ್ತು.

ಎಂಟನೇ ಕ್ರಮಾಂಕದ ಬ್ಯಾಟರ್ ತನುಷ್ ಕೋಟ್ಯಾನ್ (ಅಜೇಯ 114; 150ಎ) ಮತ್ತು ಹತ್ತನೇ ಕ್ರಮಾಂಕದ ಮೋಹಿತ್ ಅವಸ್ತಿ (ಔಟಾಗದೆ 51; 93ಎ) ಅವರು ಮುರಿಯದ 9ನೇ ವಿಕೆಟ್ ಜೊತೆಯಾಟದಲ್ಲಿ 162 ರನ್ ಸೇರಿಸಿದರು. ಇದರಿಂದಾಗಿ ತಂಡವು ಯಾವುದೇ ಒತ್ತಡಕ್ಕೊಳಗಾಗದೇ ಪ್ರಶಸ್ತಿ ಜಯಿಸುವಂತಾಯಿತು.

ಪಂದ್ಯದ ನಾಲ್ಕನೇ ದಿನದಾಟದ (ಶುಕ್ರವಾರ) ಅಂತ್ಯಕ್ಕೆ ಮುಂಬೈ ತಂಡವು 6 ವಿಕೆಟ್‌ಗಳಿಗೆ 153 ರನ್ ಗಳಿಸಿತ್ತು. ಕೊನೆಯ ದಿನದಾಟದ ಬೆಳಿಗ್ಗೆಯೇ ಉಳಿದ ವಿಕೆಟ್‌ಗಳನ್ನು ಕಬಳಿಸಿದ ನಂತರ ಲಭಿಸುವ ಗುರಿಯನ್ನು ಬೆನ್ನಟ್ಟಿ ಜಯಿಸುವ ಭಾರತ ಇತರೆ ತಂಡದ ಯೋಚನೆ ಫಲಿಸಲಿಲ್ಲ.

ಮೊದಲ ಇನಿಂಗ್ಸ್‌ನಲ್ಲಿ ಅರ್ಧಶತಕ ಗಳಿಸಿದ್ದ ತನುಷ್ ಎರಡನೇಯದ್ದರಲ್ಲಿಯೂ ಮಿಂಚಿದರು. ಅವರೊಂದಿಗೆ ಮೋಹಿತ್ ಕೂಡ ತಮ್ಮ ಬ್ಯಾಟಿಂಗ್ ಪ್ರತಿಭೆಯನ್ನು ತೋರಿಸಿದರು. ಇದರಿಂದಾಗಿ ತಂಡವು ಒಟ್ಟು 450 ರನ್‌ಗಳ ಮುನ್ನಡೆ ಸಾಧಿಸಿತು. ಮಧ್ಯಾಹ್ನದ ನಂತರ ಈ ಗುರಿಯನ್ನು ಬೆನ್ನತ್ತಿ ಜಯಿಸುವುದು ಅಸಾಧ್ಯ ಎಂಬುದನ್ನು ಅರಿತ ಭಾರತ ಇತರೆ ತಂಡದ ನಾಯಕ ಋತುರಾಜ್ ಗಾಯಕವಾಡ ಅವರು ಡ್ರಾ ಮಾಡಿಕೊಳ್ಳಲು ಸಮ್ಮತಿಸಿ, ಮುಂಬೈ ತಂಡದ ನಾಯಕ ಅಜಿಂಕ್ಯ ರಹಾನೆ ಅವರ ಕೈಕುಲುಕಿದರು.

ಟ್ರೋಫಿಯೊಂದಿಗೆ ತನುಷ್ ಕೋಟ್ಯಾನ್

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಮುಂಬೈ: 141 ಓವರ್‌ಗಳಲ್ಲಿ 537. ಭಾರತ ಇತರೆ: 110 ಓವರ್‌ಗಳಲ್ಲಿ 416. ಎರಡನೇ ಇನಿಂಗ್ಸ್: ಮುಂಬೈ: 78 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 329 (ಸರ್ಫರಾಜ್ ಖಾನ್ 17, ತನುಷ್ ಕೋಟ್ಯಾನ್ ಔಟಾಗದೆ 114, ಮೋಹಿತ್ ಅವಸ್ತಿ ಔಟಾಗದೆ 51, ಸಾರಾಂಶ್ ಜೈನ್ 121ಕ್ಕೆ6, ಮಾನವ್ ಸುತಾರ್ 78ಕ್ಕೆ2) **ಫಲಿತಾಂಶ:** ಡ್ರಾ. **ಪಂದ್ಯದ ಆಟಗಾರ:** ಸರ್ಫರಾಜ್ ಖಾನ್.

ಮೈಸೂರಿನಲ್ಲಿ ಸಿ.ಎಂ. ಕಪ್ ರಾಜ್ಯ ಮಟ್ಟದ ದಸರಾ ಕ್ರೀಡಾಕೂಟ

ಬೆಂಗಳೂರು, ಮೈಸೂರು ಅಥ್ಲೀಟ್‌ಗಳ ಪ್ರಾಬಲ್ಯ

● ಆರ್. ಜಿತೇಂದ್ರ

ಮೈಸೂರು: ಆತಿಥೇಯ ಮೈಸೂರು ವಿಭಾಗದ ಅಥ್ಲೀಟ್‌ಗಳು ಇಲ್ಲಿ ನಡೆದಿರುವ ಸಿ.ಎಂ. ಕಪ್ ರಾಜ್ಯಮಟ್ಟದ ದಸರಾ ಕ್ರೀಡಾಕೂಟದ ಮೂರನೇ ದಿನವಾದ ಶನಿವಾರ ಮಹಿಳೆಯರ ವಿಭಾಗದಲ್ಲಿ ಚಿನ್ನದ ಪದಕಗಳ ಬೇಟೆಯಾಡಿದರು. ಪುರುಷರ ವಿಭಾಗದಲ್ಲಿ ಬೆಂಗಳೂರಿನ ಸ್ಪರ್ಧಿಗಳು ಪಾರಮ್ಯ ಮೆರೆದರು.

ಮಳೆಯಿಂದ ತೋಯ್ದ ಚಾಮುಂಡಿ ವಿಹಾರ ಕ್ರೀಡಾಂಗಣದ ಅಂಕಣದಲ್ಲಿ ಮೈಸೂರು ವಿಭಾಗದ ಯುವತಿಯರು 5 ಚಿನ್ನ ಹಾಗೂ 2 ಬೆಳ್ಳಿ ಪದಕಗಳೊಂದಿಗೆ ಸಂಭ್ರಮಿಸಿದರು. ಬೆಂಗಳೂರು ನಗರ ವಿಭಾಗದ ಪುರುಷರು 4 ಚಿನ್ನ, 2 ಬೆಳ್ಳಿ ಪದಕ ಗೆದ್ದರು.

ಫಲಿತಾಂಶ: ಪುರುಷರು: ಅಥ್ಲೆಟಿಕ್ಸ್: 200 ಮೀ. ಓಟ: ಪ್ರಸನ್ನ-ಕುಮಾರ್ (ಬೆಂಗಳೂರು. ಕಾಲ: 21.56 ಸೆ)–1, ಗುರುಪ್ರಸಾದ್ (ಮೈಸೂರು)–2, ವಿನಯ್ (ವಿಜಯಪುರ)–3; 800 ಮೀ. ಓಟ: ಬಿ. ತುಷಾರ್ (ಬೆಂಗಳೂರು. ಕಾಲ: 1ನಿ, 52.95 ಸೆ)–1, ಆಶ್ರಿತ್ (ಶಿವಮೊಗ್ಗ)–2, ಕಲ್ಯಾಣ್ (ಬೆಂಗಳೂರು)–3; 5000 ಮೀ. ಓಟ: ನಾಗರಾಜ್ ದಿವಟೆ (ಧಾರವಾಡ. ಕಾಲ: 15ನಿ, 5.38 ಸೆ)–1, ಗುರುಪ್ರಸಾದ್ (ಬೆಂಗಳೂರು)–2, ಪುರುಷೋತ್ತಮ್ (ದಕ್ಷಿಣ ಕನ್ನಡ)–3; ಲಾಂಗ್ ಜಂಪ್: ಜಫರ್‌ಖಾನ್ (ಬೆಳಗಾವಿ. ಅಂತರ; 7.53 ಮೀ), ಅನುಷ್ (ಚಿಕ್ಕಮಗಳೂರು)–2, ಯಶಸ್ ಗೌಡ (ಮಂಡ್ಯ)–3; ಟ್ರಿಪಲ್ ಜಂಪ್: ಜಫರ್ ಖಾನ್ (ಬೆಳಗಾವಿ. ಅಂತರ; 14.98 ಮೀ)–1, ಯಶಸ್ ಗೌಡ (ಮಂಡ್ಯ)–2, ಎಸ್. ಪುನೀತ್ (ಕೊಡಗು)–3. ಶಾಟ್‌ಪಟ್: ಮೊಹಮ್ಮದ್ ಸಕ್ಲೇನ್ ಅಹಮ್ಮದ್ (ಮೈಸೂರು. ದೂರ: 16.72 ಮೀ)–1, ಪ್ರಜ್ವಲ್ ಶೆಟ್ಟಿ (ಬೆಂಗಳೂರು)–2, ಕಾರ್ತಿಕ್ (ಬಳ್ಳಾರಿ)–3; ಡಿಸ್ಕಸ್ ಥ್ರೋ: ಮೊಹಮ್ಮದ್ ಸಕ್ಲೇನ್ ಅಹಮ್ಮದ್ (ಮೈಸೂರು: ದೂರ: 50.52 ಮೀ), ಮೋಹಿತ್ ರಾಜ್ (ಮೈಸೂರು)–2, ಪ್ರೀತಂ ರಜಪೂತ್ (ವಿಜಯಪುರ)–3. 110 ಮೀ ಹರ್ಡಲ್ಸ್: ರಾಥೋಡ್ ಲೋಕೇಶ್ ದಾಮು (ಬೆಂಗಳೂರು: ಕಾಲ; 15.55 ಸೆ)–1, ತೇಜಲ್ (ದಕ್ಷಿಣ ಕನ್ನಡ)–2, ಸೃಜನ್ ಗೌಡ (ಮಂಡ್ಯ)–3. 4X400 ರಿಲೇ : ಬೆಂಗಳೂರು–1, ಮೈಸೂರು–2, ಬೆಂಗಳೂರು ಗ್ರಾಮಾಂತರ–3. ವೇಟ್‌ಲಿಫ್ಟಿಂಗ್: 67 ಕೆ.ಜಿ. ವಿಭಾಗ: ಸುಬ್ರಹ್ಮಣ್ಯ (ದಕ್ಷಿಣ ಕನ್ನಡ)–1, ತಿಪ್ಪಣ್ಣ (ದಕ್ಷಿಣ ಕನ್ನಡ)–2, ಯೋಗೇಶ್ ನಾಯಕ (ಬೆಂಗಳೂರು); 73 ಕೆ.ಜಿ. ವಿಭಾಗ: ಶಿವಾನಂದ (ದಕ್ಷಿಣ ಕನ್ನಡ)–1, ಶರತ್ (ದಕ್ಷಿಣ ಕನ್ನಡ)–2, ವಜ್ರದತ್ ಜಾಧವ್ (ದಾವಣಗೆರೆ)–3; 81 ಕೆ.ಜಿ. ವಿಭಾಗ: ಪ್ರತೀಕ್ (ದಕ್ಷಿಣ ಕನ್ನಡ)–1, ಪ್ರಥಮ್ ಬಂಗೇರ (ದಕ್ಷಿಣ ಕನ್ನಡ)–2, ಕೃಷ್ಣ (ದಾವಣಗೆರೆ)–3. 89 ಕೆ.ಜಿ. ವಿಭಾಗ: ಜೇಮ್ಸ್ ಕ್ಯಾರಿ (ದಕ್ಷಿಣ ಕನ್ನಡ)–1, ತಿಲಕ್ (ಬೆಂಗಳೂರು)–2, ಸಮರ್ಥ (ದಕ್ಷಿಣ ಕನ್ನಡ)–3. ಸೈಕ್ಲಿಂಗ್: 80 ಕಿ.ಮೀ. ಮಾಸ್‌ಸ್ಟಾರ್ಟ್ ರೇಸ್: ಲಕ್ಷ್ಮೀಶ (ಮೈಸೂರು)–1, ಯಲಗೂರಪ್ಪ ಈರಪ್ಪ ಗದ್ದಿ (ಬಾಗಲಕೋಟೆ)–2, ಬೀರಪ್ಪ ನವಲಿ (ವಿಜಯಪುರ)–3.



ಮಹಿಳೆಯರ ಲಾಂಗ್‌ಜಂಪ್‌ನಲ್ಲಿ ಚಿನ್ನ ಗೆದ್ದ ಮೈಸೂರಿನ ಜಿ. ಪವಿತ್ರಾ ಜಿಗಿತದ ಪರಿ

ಮಹಿಳೆಯರು: ಅಥ್ಲೆಟಿಕ್ಸ್: 200 ಮೀ ಓಟ: ಜ್ಯೋತಿಕಾ (ಬೆಂಗಳೂರು. ಕಾಲ: 24.82 ಸೆ.)–1, ಮೇಘಾ ಮುನವಳ್ಳಿ ಮಠ (ಧಾರವಾಡ)–2, ಎನ್. ಮಮತಾ (ಮೈಸೂರು)–3; 800 ಮೀ ಓಟ: ಶಿಲ್ಪಾ ಹೊಸಮನಿ (ಬೆಳಗಾವಿ. ಕಾಲ: 2 ನಿಮಿಷ, 16.13 ಸೆ.)–1, ಪ್ರತೀಕ್ಷಾ (ಉಡುಪಿ)–2, ರೇಖಾ ಬಸಪ್ಪ (ದಕ್ಷಿಣ ಕನ್ನಡ)–3; 3000 ಮೀ ಓಟ: ಪ್ರಣತಿ (ಬೆಂಗಳೂರು ಗ್ರಾಮೀಣ. ಕಾಲ: 10 ನಿ, 38.20 ಸೆಕೆಂಡ್)–1, ಎನ್.ಎಲ್. ತೇಜಸ್ವಿ (ಬೆಂಗಳೂರು)–2, ಎನ್.ಎಸ್. ರೂಪಶ್ರೀ (ದಕ್ಷಿಣ ಕನ್ನಡ)–3; ಲಾಂಗ್ ಜಂಪ್: ಜಿ. ಪವಿತ್ರಾ (ಉಡುಪಿ. ದೂರ: 5.64 ಮೀ.)–1, ಪ್ರಿಯಾಂಕಾ (ದಕ್ಷಿಣ ಕನ್ನಡ)–2, ವರ್ಷಿತಾ (ಬೆಂಗಳೂರು)–3; ಟ್ರಿಪಲ್ ಜಂಪ್: ಜಿ. ಪವಿತ್ರಾ (ಉಡುಪಿ. ದೂರ: 12.76 ಮೀ.)–1, ವರ್ಷಿತಾ (ಬೆಂಗಳೂರು)–2, ಅಮೂಲ್ಯಾ (ಶಿವಮೊಗ್ಗ)–3.

ಶಾಟ್‌ಪಟ್: ವಿ. ಅಂಬಿಕಾ (ಮೈಸೂರು. ದೂರ: 14.38 ಮೀ.)–1, ನಿವಿತಾ (ಬೆಂಗಳೂರು)–2, ಬೃಂದಾ ಗೌಡ (ಮೈಸೂರು)–3: ಡಿಸ್ಕಸ್ ಥ್ರೋ: ಎಂ.ಎನ್. ಸುಷ್ಮಾ (ಮೈಸೂರು. ದೂರ: 42.17 ಮೀ.)–1, ಬಿ. ಸುಷ್ಮಾ (ದಕ್ಷಿಣ ಕನ್ನಡ)–2, ಕೆ.ವಿ. ಲಿಖಿತಾ (ಬೆಂಗಳೂರು)–3. 100 ಮೀ ಹರ್ಡಲ್ಸ್: ಚಂದ್ರಿಕಾ (ಉಡುಪಿ. ಕಾಲ: 15.45 ಸೆ.)–1, ಚೈತನ್ಯಾ (ಬೆಂಗಳೂರು ಗ್ರಾಮೀಣ)–2, ವಿ. ಹರ್ಷಿತಾ (ಬೆಂಗಳೂರು)–3. 4X400 ಮೀ. ರಿಲೇ: ಮೈಸೂರು–1, ಬೆಳಗಾವಿ–2, ಬೆಂಗಳೂರು ಗ್ರಾಮೀಣ–3.

ವೇಟ್‌ಲಿಫ್ಟಿಂಗ್: 71 ಕೆ.ಜಿ. ವಿಭಾಗ: ಸಾನಿಕಾ (ದಕ್ಷಿಣ ಕನ್ನಡ)– ಮಾನಸಾ (ದಕ್ಷಿಣ ಕನ್ನಡ)–2, ಔರಾ ಸಿಂಗ್‌ರಾಯ್ (ಬೆಂಗಳೂರು)–3; 76 ಕೆ.ಜಿ. ವಿಭಾಗ: ಯಶಸ್ವಿನಿ (ಬೆಂಗಳೂರು)–1, ಅನುಷಾ (ದಕ್ಷಿಣ ಕನ್ನಡ)–2, ಸಂಗೀತಾ (ದಕ್ಷಿಣ ಕನ್ನಡ). ಸೈಕ್ಲಿಂಗ್: 50 ಕಿ.ಮೀ. ರೇಸ್ : ದೀಪಿಕಾ ಫಡತರೆ (ವಿಜಯಪುರ)–1, ಅಂಕಿತಾ ರಾಥೋಡ್ (ವಿಜಯಪುರ)–2, ಕೀರ್ತಿ ವಿಠಲನಾಯಕ್ (ಬಾಗಲಕೋಟೆ)–3.

ಆಸ್ಟ್ರೇಲಿಯಾ ತಂಡ ಶುಭಾರಂಭ

ಶಾರ್ಜಾ (ಪಿಟಿಐ): ‘ಹಾಲಿ ಚಾಂಪಿಯನ್’ ಆಸ್ಟ್ರೇಲಿಯಾ ತಂಡವು ಟಿ20 ಕ್ರಿಕೆಟ್ ಮಹಿಳೆಯರ ವಿಶ್ವಕಪ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಶನಿವಾರ ನಡೆದ ಎ ಗುಂಪಿನ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು 6 ವಿಕೆಟ್‌ಗಳಿಂದ ಶ್ರೀಲಂಕಾ ಎದುರು ಜಯಿಸಿತು. ಆದರೆ ಲಂಕಾ ತಂಡಕ್ಕೆ ಇದು ಸತತ ಎರಡನೇ ಸೋಲು.

ಬೆತ್ ಮೂನಿ

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 93 (ಹರ್ಷಿತಾ ಮಾಧವಿ 23, ನೀಲಾಕ್ಷಿ ಡಿ ಸಿಲ್ವಾ ಔಟಾಗದೆ 29, ಅನೂಷ್ಕಾ ಸಂಜೀವನಿ 16, ಮೆಗನ್ ಶುಟ್ 12ಕ್ಕೆ3, ಮಾಲಿನೆ 20ಕ್ಕೆ2) ಆಸ್ಟ್ರೇಲಿಯಾ: 14.2 ಓವರ್‌ಗಳಲ್ಲಿ 4ಕ್ಕೆ94 (ಬೆತ್ ಮೂನಿ ಔಟಾಗದೆ 43, ಎಲಿಸ್ ಪೆರಿ 17, ಉದೇಶಿಕಾ ಪ್ರಭೋದಿನಿ 19ಕ್ಕೆ1, ಇನೊಕಾ ರಣವೀರಾ 20ಕ್ಕೆ1) **ಫಲಿತಾಂಶ:** ಆಸ್ಟ್ರೇಲಿಯಾ ತಂಡಕ್ಕೆ 6 ವಿಕೆಟ್‌ಗಳ ಜಯ.

ಇಂಗ್ಲೆಂಡ್‌ಗೆ ಮಣಿದ ಬಾಂಗ್ಲಾದೇಶ

ಶಾರ್ಜಾ (ಪಿಟಿಐ): ಡ್ಯಾನಿ ವ್ಯಾಟ್ ಹಾಜ್ (41;40ಎ) ಅವರ ಬ್ಯಾಟಿಂಗ್ ಬಲದಿಂದ ಇಂಗ್ಲೆಂಡ್ ತಂಡವು ಶನಿವಾರ ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು 21 ರನ್‌ಗಳಿಂದ ಮಣಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಆಂಗ್ಲ ಪಡೆ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 118 ರನ್ ಗಳಿಸಿತು. ಡ್ಯಾನಿ ಮತ್ತು ಮೈಯಾ ಬೌಷಿಯರ್ (23) ಮೊದಲ ವಿಕೆಟ್‌ಗೆ 48 ರನ್ ಸೇರಿಸಿದ್ದರು. ಆದರೆ, ನಂತರ ಬಂದವರು ನಿರಾಸೆ ಮೂಡಿಸಿದರು.

ಸಾಧಾರಣ ಮೊತ್ತದ ಗುರಿಯನ್ನು ಬೆನ್ನಟ್ಟಿದ ಬಾಂಗ್ಲಾದೇಶವು ನಿಗದಿತ ಓವರ್‌ಗಳಲ್ಲಿ 7 ವಿಕೆಟ್‌ಗೆ 97 ರನ್ ಗಳಿಸಿ ಹೋರಾಟವನ್ನು ಮುಗಿಸಿತು. ಶೋಭನಾ ಮೊಸ್ತರಿ (44;48ಎ) ಏಕಾಂಗಿ ಹೋರಾಟ ನಡೆಸಿದರೂ ಗೆಲುವಿಗೆ ಸಾಕಾಗಲಿಲ್ಲ. ಟೂರ್ನಿಯಲ್ಲಿ ಇಂಗ್ಲೆಂಡ್‌ಗೆ ಮೊದಲ ಗೆಲುವಾದರೆ, ಬಾಂಗ್ಲಾ ತಂಡಕ್ಕೆ ಸತತ ಎರಡನೇ ಸೋಲಾಗಿದೆ.

ಸಂಕ್ಷಿಪ್ತ ಸ್ಕೋರ್: ಇಂಗ್ಲೆಂಡ್: 20 ಓವರ್‌ಗಳಲ್ಲಿ 7ಕ್ಕೆ 118 (ಮೈಯಾ ಬೌಷಿಯರ್ 23, ಡ್ಯಾನಿ ವ್ಯಾಟ್ ಹಾಜ್ 41; ನಹೀದಾ ಅಕ್ತರ್ 32ಕ್ಕೆ 2, ಫಾಹಿಮಾ ಖಾತುನ್ 18ಕ್ಕೆ 2, ರಿತು ಮೋನಿ 24ಕ್ಕೆ 2). ಬಾಂಗ್ಲಾದೇಶ: 20 ಓವರ್‌ಗಳಲ್ಲಿ 7ಕ್ಕೆ 97 (ಶೋಭನಾ ಮೊಸ್ತರಿ 44; ಲಿನ್ಸೆ ಸ್ಮಿತ್ 11ಕ್ಕೆ 2, ಚಾರ್ಲಿ ಡೀನ್ 22ಕ್ಕೆ 2). ಫಲಿತಾಂಶ: ಇಂಗ್ಲೆಂಡ್‌ಗೆ 21 ರನ್‌ಗಳ ಜಯ.

ಮಹಿಳೆಯರ 200 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಚಿನ್ನ ಗೆದ್ದ ಬೆಂಗಳೂರಿನ ವಿ. ಹಿತೈಷಿ
– ಪ್ರಜಾವಾಣಿ ಚಿತ್ರ: ಅನೂಪ್ ರಾಘ್ ಟಿ.

ಈಜು: ಮಣಿಕಂಠ, ನೈಶಾ ಚಾಂಪಿಯನ್ಸ್

ಮೈಸೂರು: ಇಲ್ಲಿ ನಡೆದಿರುವ ಸಿ.ಎಂ. ದಸರಾ ಕ್ರೀಡಾಕೂಟದ ಈಜು ವಿಭಾಗದಲ್ಲಿ ದಾವಣಗೆರೆಯ ಎಲ್. ಮಣಿಕಂಠ ಹಾಗೂ ಬೆಂಗಳೂರಿನ ನೈಶಾ ಶೆಟ್ಟಿ ಕ್ರಮವಾಗಿ ಪುರುಷ ಹಾಗೂ ಮಹಿಳೆಯರ ವಿಭಾಗದ ವೈಯಕ್ತಿಕ ಪ್ರಶಸ್ತಿ ಎತ್ತಿ ಹಿಡಿದರು.

ಮಣಿಕಂಠ ಒಟ್ಟು 4 ಚಿನ್ನ, 1 ಬೆಳ್ಳಿ ಹಾಗೂ 1 ಕಂಚಿನೊಂದಿಗೆ ಒಟ್ಟು 24 ಅಂಕ ಸಂಪಾದಿಸಿ ಚಾಂಪಿಯನ್ ಆದರೆ, ನೈಶಾ 4 ಚಿನ್ನದೊಂದಿಗೆ 20 ಅಂಕ ಗಳಿಸಿ ಟ್ರೋಫಿ ಪಡೆದರು.

ಫಲಿತಾಂಶ: ಪುರುಷರು: 100 ಮೀ. ಫ್ರೀಸ್ಟೈಲ್: ಎನ್. ಧೋನಿಶ್ (ಬೆಂಗಳೂರು. ಕಾಲ: 56.12 ಸೆಕೆಂಡ್)–1, ದರ್ಶನ್ (ಬೆಂಗಳೂರು)–2, ಚಿನ್ಮಯ್ ಬಾಗೇವಾಡಿ (ಬೆಳಗಾವಿ)–3; 200 ಮೀ ಫ್ರೀಸ್ಟೈಲ್: ಎನ್. ಧೋನಿಶ್ (ಬೆಂಗಳೂರು. ಕಾಲ; 2ನಿಮಿಷ, 03.35 ಸೆಕೆಂಡ್)–1, ಎಲ್. ಮಣಿಕಂಠ (ದಾವಣಗೆರೆ)–2, ದರ್ಶನ್ (ಬೆಂಗಳೂರು)–3; 200 ಮೀ ಬ್ರೆಸ್ಟ್ ಸ್ಟ್ರೋಕ್: ಎಲ್. ಮಣಿಕಂಠ (ದಾವಣಗೆರೆ: 2ನಿಮಿಷ, ಸ್ಮರಣ್ ಮಂಗಳೂರಕರ್ (ಬೆಳಗಾವಿ)–2, ಎಚ್.ಕೆ. ರತನ್ ಗೌಡ (ಹಾಸನ)–3; 100 ಮೀ. ಬ್ಯಾಕ್‌ಸ್ಟ್ರೋಕ್: ವಫಿ ಅಬ್ದುಲ್ ಹಕೀಂ (ದಕ್ಷಿಣ ಕನ್ನಡ. ಕಾಲ: 1ನಿಮಿಷ, 7.03 ಸೆಕೆಂಡ್)–1, ಉಜ್ವಲ್ ರೆಡ್ಡಿ (ಬೆಂಗಳೂರು) ಧವಳ್ ಹನುಮಣ್ಣನವರ್ (ಬೆಳಗಾವಿ): 4X100 ಫ್ರೀಸ್ಟೈಲ್ ರಿಲೇ: ಬೆಂಗಳೂರು ನಗರ (ಕಾಲ: 3ನಿಮಿಷ, 53.81 ಸೆಕೆಂಡ್)–1, ಬೆಳಗಾವಿ–2, ಮೈಸೂರು–3.

ಮಹಿಳೆಯರು: 100 ಮೀ. ಫ್ರೀಸ್ಟೈಲ್: ನೈಶಾ ಶೆಟ್ಟಿ (ಬೆಂಗಳೂರು: 1ನಿಮಿಷ, 03.08 ಸೆಕೆಂಡ್)–1, ಎಂ.ವಿ. ರಿಷಿಕಾ (ಬೆಂಗಳೂರು)–2, ಲಿಪಿಕಾ ದೇವ್ (ಚಿಕ್ಕಬಳ್ಳಾಪುರ)–3; 200 ಮೀ. ಫ್ರೀಸ್ಟೈಲ್; ಶಮನ್ವಿ ಗೌಡ (ಬೆಂಗಳೂರು. ಕಾಲ: 2ನಿಮಿಷ, 18.48 ಸೆಕೆಂಡ್)–1, ಎಂ.ವಿ. ರಿಷಿಕಾ (ಬೆಂಗಳೂರು)–2, ಲಿಪಿಕಾ ದೇವ್ (ಚಿಕ್ಕಬಳ್ಳಾಪುರ)–3; 200 ಮೀ. ಬ್ರೆಸ್ಟ್ ಸ್ಟ್ರೋಕ್: ವಿ. ಹಿತೈಷಿ (ಬೆಂಗಳೂರು. ಕಾಲ: 2 ನಿಮಿಷ, 58 ಸೆಕೆಂಡ್)–1, ಎಂ.ವಿ. ರಿಷಿಕಾ (ಬೆಂಗಳೂರು)–2, ಸಮಿಯಾ (ಬೆಳಗಾವಿ)–3; 100 ಮೀ. ಬ್ಯಾಕ್‌ಸ್ಟ್ರೋಕ್: ನೈಶಾ ಶೆಟ್ಟಿ (ಬೆಂಗಳೂರು: ಕಾಲ: 1ನಿಮಿಷ, 11.11 ಸೆಕೆಂಡ್), ವಿ. ಪ್ರೀತಾ (ಬೆಂಗಳೂರು)–2, ಭೂಮಿ ಭಾಗವತ್ (ಧಾರವಾಡ)–3; 4X100 ಫ್ರೀಸ್ಟೈಲ್ ರಿಲೇ: ಬೆಂಗಳೂರು (4ನಿಮಿಷ, 35.16 ಸೆಕೆಂಡ್), ಬೆಳಗಾವಿ–2, ಬೆಂಗಳೂರು ಗ್ರಾಮೀಣ–3.

ಸಮಾಜ ಕಲ್ಯಾಣ ಇಲಾಖೆ
ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಪರಿಶಿಷ್ಟ ಜಾತಿಯ ಚರ್ಮ ಕುಶಲಕರ್ಮಿಗಳ ಅಭಿವೃದ್ಧಿಗೆ ಸದಾವಕಾಶ - ಕೆಳಕಂಡ ಯೋಜನೆಗಳಿಗೆ ಅರ್ಜಿ ಆಹ್ವಾನ
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 30-10-2024

ಕಾಯಕ ಸ್ಫೂರ್ತಿ (ಮಹಿಳೆಯರಿಗೆ) ಯೋಜನೆ
• ಕೌಶಲ್ಯಾಭಿವೃದ್ಧಿ ತರಬೇತಿ ಪಡೆದಿರುವ ಮಹಿಳೆಯರು (ಕನಿಷ್ಠ10 ಮಂದಿ) ಸ್ವ-ಸಹಾಯ ಸಂಘ ರಚಿಸಿಕೊಂಡಲ್ಲಿ ರೂ.2.50 ಲಕ್ಷ ಅನುದಾನ (ರೂ. 1.50 ಲಕ್ಷ ಸಹಾಯಧನ ಮತ್ತು ರೂ. 1.00 ಲಕ್ಷ ಸಾಲ) - ಉದ್ದಿಮೆ ಮುಂದುವರೆಸಲು ಉತ್ತೇಜನ.
ಪಾದುಕೆ ಕುಟೀರ ಯೋಜನೆ
• ರಸ್ತೆ ಬದಿಯಲ್ಲಿ ಕಾಯಕ ನಿರ್ವಹಿಸುತ್ತಿರುವ ಚರ್ಮ ಕುಶಲಕರ್ಮಿಗಳಿಗೆ ಕುಟೀರದ ಜೊತೆಗೆ ಒಂದು ಉಪಕರಣ ಪೆಟ್ಟಿಗೆಯನ್ನು ರೂ.1.25 ಲಕ್ಷಗಳ ಘಟಕ ವೆಚ್ಚದಲ್ಲಿ ನೀಡಲಾಗುವುದು.
ಮಾರುಕಟ್ಟೆ ಸಹಾಯ ಯೋಜನೆ
• ಕುಶಲಕರ್ಮಿಗಳು ತಯಾರಿಸಿರುವ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವುದು ಮತ್ತು ಅವರ ಉತ್ಪನ್ನಗಳಿಗೆ ರಿಯಾಯಿತಿ ನೀಡುವುದು.
ಕೌಶಲ್ಯ ಉನ್ನತೀಕರಣ ಯೋಜನೆ
• 3 years Diploma in Leather Technology ಕರ್ನಾಟಕ ಚರ್ಮ ತಾಂತ್ರಿಕ ಸಂಸ್ಥೆ ಬೆಂಗಳೂರು (ಕೋರ್ಸ್ ಫೀ, ಊಟ ಮತ್ತು ವಸತಿ ಸೇರಿ).
• ಚರ್ಮ ಕುಶಲಕರ್ಮಿಗಳ ಕುಟುಂಬಗಳ 80 ಯುವಜನರಿಗೆ ಹೊಸ ತಂತ್ರಜ್ಞಾನ, ವಿನ್ಯಾಸಗಳು ಹಾಗೂ ಮಾರುಕಟ್ಟೆ ಬೇಡಿಕೆಗಳ ಬಗ್ಗೆ ದೆಹಲಿ, ತಮಿಳುನಾಡು, ಮಹಾರಾಷ್ಟ್ರ, ಉತ್ತರಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ತರಬೇತಿ ಪಡೆಯಲು ಅಧ್ಯಯನ ಪ್ರವಾಸ ಯೋಜನೆ.
• ಇಂಡೋನೇಷ್ಯಾದ ಚರ್ಮೋದ್ಯಮದ ವ್ಯಾಪ್ತಿ ಹಾಗೂ ವಿನ್ಯಾಸಗಳ ಬಗ್ಗೆ ತಿಳಿವಳಿಕೆ ನೀಡಲು 38 ಮಂದಿ ಆಯ್ಕೆ ಮಾಡಿದ ಚರ್ಮ ಕುಶಲಕರ್ಮಿಗಳನ್ನು ಅಧ್ಯಯನ ಪ್ರವಾಸಕ್ಕೆ ಕರೆದೊಯ್ಯುವುದು. (ಘಟಕ ವೆಚ್ಚ ರೂ.1.00 ಲಕ್ಷ ಪ್ರತಿ ಕುಶಲಕರ್ಮಿಗೆ).

ಡಾ|| ಎಚ್. ಸಿ. ಮಹದೇವಪ್ಪ, ಮಾನ್ಯ ಸಮಾಜ ಕಲ್ಯಾಣ ಇಲಾಖಾ ಸಚಿವರು ಮತ್ತು ಶ್ರೀ ಮುಂಡರಗಿ ನಾಗರಾಜ, ಮಾನ್ಯ ಅಧ್ಯಕ್ಷರು, ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ರವರು ಮೈಸೂರು ದಸರಾ ವಸ್ತುಪ್ರದರ್ಶನ ಮಳಿಗೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು.

ಅರ್ಜಿಗಳನ್ನು- https://sevasindhu.karnataka.gov.in ಪೋರ್ಟಲ್ ಮೂಲಕ ಸಲ್ಲಿಸುವುದು. ಬೆಂಗಳೂರು ಒನ್, ಕರ್ನಾಟಕ ಒನ್ ಮತ್ತು ಗ್ರಾಮ ಒನ್ ಕೇಂದ್ರಗಳಲ್ಲಿ ಸಲ್ಲಿಸಬಹುದು.

ಚರ್ಮಶಿಲ್ಪಿ ಯೋಜನೆ
• ಪರಿಶಿಷ್ಟ ಜಾತಿಗೆ ಸೇರಿದ ಚರ್ಮ ಕುಶಲಕರ್ಮಿಗಳು ಅಥವಾ ಕುಶಲಕರ್ಮಿಗಳ ಸ್ವ-ಸಹಾಯ ಸಂಘಗಳು/ ಸಹಕಾರ ಸಂಘಗಳು ಪಾರಂಪರಿಕ ವಿಧಾನದಲ್ಲಿ (Traditional Method) ಪಾದರಕ್ಷೆಗಳನ್ನು / ಚರ್ಮ ವಸ್ತಗಳನ್ನು ತಯಾರಿಸುತ್ತಿರುವವರು ಮುಂದೆ ಬಂದಲ್ಲಿ ಯಂತ್ರಾಧಾರಿತ ಉತ್ಪಾದನಾ ಘಟಕಗಳನ್ನು ಸ್ಥಾಪಿಸಿಕೊಟ್ಟು ಸ್ವಯಂ ಉದ್ಯೋಗ ಕಲ್ಪಿಸುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ. ಘಟಕ ವೆಚ್ಚ ರೂ. 10.00 ಲಕ್ಷಗಳಲ್ಲಿ ರೂ. 5.00 ಲಕ್ಷಗಳ ಸಹಾಯಧನ, ಉಳಿದ ಮೊತ್ತ ಬ್ಯಾಂಕ್ ಸಾಲ.
ಚರ್ಮಕಾರರ ವಸತಿ ಯೋಜನೆ
• ಚರ್ಮ ಕುಶಲಕರ್ಮಿಗಳು ಖಾಲಿ ನಿವೇಶನ ಹೊಂದಿದ್ದಲ್ಲಿ ಚರ್ಮಕಾರರಿಗೆ ವಾಸಕ್ಕೆ ಮತ್ತು ಉದ್ಯೋಗ ಮುಂದುವರೆಸಲು ಅನುಕೂಲವಾಗುವಂತೆ ವಸತಿ ಕಾರ್ಯಾಗಾರಗಳನ್ನು ನಿರ್ಮಿಸಿಕೊಳ್ಳಲು ನಿಗಮದ ಮೂಲಕ ರೂ.2.20 ಲಕ್ಷ ಧನಸಹಾಯ. (ಮ. ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ಯೋಜನೆಯ ಜಾರಿ).
ಚರ್ಮಕಾರರ ಕಿರು ಆರ್ಥಿಕ ಚಟುವಟಿಕೆಗಳಿಗಾಗಿ ನೇರ ಸಾಲ ಯೋಜನೆ
• ಕಚ್ಚಾ ಮಾಲು ಖರೀದಿ, ಚರ್ಮೋತ್ಪನ್ನಗಳ ಉತ್ಪಾದನೆ, ರಿಪೇರಿ ಮತ್ತು ಮಾರಾಟ ಮಾಡುವ ಅಂಗಡಿ ತೆರೆಯುವುದು/ ಲಘು ವಾಹನದ ಮೂಲಕ ವ್ಯಾಪಾರ ಮಾಡುವವರಿಗೆ ಇತ್ಯಾದಿ. ಘಟಕದ ವೆಚ್ಚ ರೂ.1,00,000/-(ರೂ.50000/- ಸಹಾಯಧನ ಮತ್ತು ರೂ.50000/- ಸಾಲ).
ಸ್ವಾವಲಂಬಿ / ಸಂಚಾರಿ ಮಾರಾಟ ಮಳಿಗೆ ಯೋಜನೆ
• ತಾಲ್ಲೂಕು ಮಟ್ಟದವರೆಗೆ ರೂ. 2.00 ಲಕ್ಷ ಸಹಾಯಧನ.
• ಜಿಲ್ಲಾ ಕೇಂದ್ರಕ್ಕೆ ರೂ. 3.00 ಲಕ್ಷ ಸಹಾಯಧನ.
• ಮಹಾನಗರ ಪಾಲಿಕೆ ವ್ಯಾಪ್ತಿ ರೂ. 4.00 ಲಕ್ಷ ಸಹಾಯಧನ.
• ಬಿ.ಬಿ.ಎಂ.ಪಿ. ವ್ಯಾಪ್ತಿ ರೂ. 5.00 ಲಕ್ಷ (ನಿಗಮವು ನೀಡುವ ಸಹಾಯಧನದ ಮೊತ್ತದಷ್ಟೇ ಬ್ಯಾಂಕಿನಿಂದ ಸಾಲ ಪಡೆಯಬೇಕಾಗಿರುತ್ತದೆ).

ವಿಶೇಷ ಸೂಚನೆ : 2023-24ನೇ ಸಾಲಿನಲ್ಲಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿರುವವರು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.
ಹೆಚ್ಚಿನ ಮಾಹಿತಿಗಾಗಿ ನಿಗಮದ ಎಲ್ಲಾ ಜಿಲ್ಲೆಯ ಜಿಲ್ಲಾ ಸಂಯೋಜಕರುಗಳ ಕಛೇರಿ ಅಥವಾ ಕಲ್ಯಾಣಮಿತ್ರ ಏಕೀಕೃತ ಎಸ್.ಸಿ/ಎಸ್.ಟಿ ಸಹಾಯವಾಣಿ 9482300400 ಸಂಪರ್ಕಿಸುವುದು

Pure Since 1925
ಭೀಮ
ಬೆಳಗಿಸಿ
ನಿಮ್ಮ ಸಂಭ್ರಮಾಚರಣೆಗಳನ್ನು.
- ದಿ ಗ್ರೇಟ್ -
ಭೀಮ
ದೀಪಾವಳಿ
ಫೆಸ್ಟಿವಲ್
ಕೊಡುಗೆಗಳು, 4 ಅಕ್ಟೋಬರ್ ರಿಂದ
10 ನವೆಂಬರ್, 2024 ರವರೆಗೆ
ಲಕ್ಕಿ ಡ್ರಾ
ಪ್ರತಿ 10 ಗ್ರಾಹಕರಲ್ಲಿ
ಒಬ್ಬರಿಗೆ
₹10,000*
ನಗದು ಬಹುಮಾನ.
ಚಿನ್ನ ಮತ್ತು ಬೆಳ್ಳಿ
ಮೇಕಿಂಗ್ ಶುಲ್ಕದ ಮೇಲೆ
70%*
ವರೆಗೆ
ರಿಯಾಯಿತಿ
ವಜ್ರ
ಪ್ರತಿ ಕ್ಯಾರೆಟ್‌ಗೆ ಫ್ಲಾಟ್
₹7000*
ರಿಯಾಯಿತಿ, ಜೊತೆಗೆ ಪ್ರತಿ
ಕ್ಯಾರೆಟ್‌ಗೆ ಒಂದು ಗ್ರಾಂ
ಚಿನ್ನದ ನಾಣ್ಯ ಉಚಿತ
ಹಳೆಯ ಚಿನ್ನದ ವಿನಿಮಯ
ಪ್ರತಿ ಗ್ರಾಂಗೆ
₹100*
ಹೆಚ್ಚುವರಿ ಪಡೆಯಿರಿ
BHIMA
FORMERLY
BHIMA
GOLD • DIAMONDS • SILVER • PLATINUM
ಬೆಂಗಳೂರು • ಉಡುಪಿ • ಹಾಸನ • ಮಂಗಳೂರು • ಶಿವಮೊಗ್ಗ • ವಿಜಯವಾಡ • ಚೆನ್ನೈ • ರಾಜಮಂಡ್ರಿ • ಹೊಸೂರು • ಬೆಳಗಾವಿ • ಹುಬ್ಬಳ್ಳಿ
BHIMA Helpline
1800-121-9076
(10:00 a.m. to 7:00 p.m.)
ಸ್ಥಳ ತಿಳಿಯಲು,
ಸ್ಕ್ಯಾನ್ ಮಾಡಿ

PHILIPS
Home Appliances
ಇಂದೇ ಇಮ್ಮಡಿ ಆನಂದ
ಮನೆಗೆ ಬರಮಾಡಿಕೊಳ್ಳಿ.
#BringHomePhilips
ಪಡೆಯಿರಿ
ಉಚಿತ*
ಆಲಿವ್‌ವೇರ್
3-ಪೀಸ್-ಸೆಟ್
ಗ್ಲಾಸ್ ಟಿಫಿನ್
MRP ₹1699
ಪಡೆಯಿರಿ
ಉಚಿತ*
ಫಿಲಿಪ್ಸ್ ಹ್ಯಾಂಡ್ ಮಿಕ್ಸರ್
MRP ₹2495
ಪಡೆಯಿರಿ
ಉಚಿತ*
ಟ್ರೈಡೆಂಟ್ ಡಬಲ್
ಬೆಡ್‌ಶೀಟ್,
ಪಿಲ್ಲೋ ಕೇಸ್‌ನೊಂದಿಗೆ
MRP ₹1999
*ಆಯ್ದ ಮಾಡೆಲ್‌ಗಳ ಮೇಲೆ ಆಫರ್ ಮಾನ್ಯ. ಸ್ಟಾಕ್ ಇರುವವರೆಗೆ ಆಫರ್ ಮಾನ್ಯ. ಅಕ್ಟೋಬರ್ 1, 2024ರಿಂದ ಅಕ್ಟೋಬರ್ 31, 2024ರವರೆಗೆ ಆಫರ್ ಮಾನ್ಯ. ನಿಬಂಧನೆಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ವಿವರವಾದ ನಿಬಂಧನೆಗಳು ಮತ್ತು ಷರತ್ತುಗಳಿಗಾಗಿ ಭೇಟಿಕೊಡಿ: www.domesticappliances.philips.co.in/festive-offer-2024-terms
@philipshomelivingindia
@philipshomelivingindia
@smartcookingbyphilips
www.domesticappliances.philips.co.in